ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತ ಫೈನಲ್‌ಗೆ ಲಗ್ಗೆ

ಭಾರತದ ಬ್ಯಾಟರ್ ಜೆಮಿಮಾ ರೊಡ್ರಿಗಸ್ ಅಜೇಯ ಶತಕ (127 ರನ್,134 ಬಾಲ್) ಬಲದಿಂದ ಮುಂಬೈಯಲ್ಲಿ ಗುರುವಾರ ನಡೆದ ಮಹಿಳಾ ವಿಶ್ವಕಪ್ ಸೆಮಿ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ನೀಡಿದ 339ರನ್‌ಗಳ ಗುರಿಯನ್ನು ಬೆಂಬತ್ತಿ ಭಾರತ ಫೈನಲ್ ಪ್ರವೇಶಿಸಿದೆ. ಫೈನಲ್‌ನಲ್ಲಿ ಭಾರತ ಭಾನುವಾರ ದ.ಆಫ್ರಿಕಾ ತಂಡವನ್ನು ಎದುರಿಸಲಿದೆ.

ಚಿಕ್ಕಪುಟ್ಟ ರಿಪೇರಿ ಕೊಡುವ ಖುಷಿ, ಕಲಿಸುವ ಪಾಠ
ಶಿಶಿರಕಾಲ
ಶಿಶಿರ್ ಹೆಗಡೆ
6

ಕಾಳಿಂಗ ಮತ್ತು ನಾಗರ ಎರಡನ್ನೂ ಪೂಜಿಸುವ ನಾಡಿದು!
ಶಶಾಂಕಣ
ಶಶಿಧರ ಹಾಲಾಡಿ
7

ದಾರಿದೀಪೋಕ್ತಿ



ನೀವು ಹಣ ಕಳೆದುಕೊಂಡರೆ ದಿವಾಳಿಯಾದಂತಲ್ಲ. ಅದನ್ನು ಪುನಃ ಗಳಿಸಬಹುದು. ಆದರೆ ನೀವು ಉತ್ಸಾಹ ಮತ್ತು ಆತ್ಮವಿಶ್ವಾಸವನ್ನು ಕಳೆದುಕೊಂಡರೆ ನಿಜವಾಗಿಯೂ ದಿವಾಳಿ ಆದಂತೆ. ಏನೇ ಆದರೂ ಆತ್ಮವಿಶ್ವಾಸ ಕಳೆದುಕೊಳ್ಳಬಾರದು.

ವಕ್ರತುಂಡೋಕ್ತಿ

ಕೆಟ್ಟ ನಡತೆಗಳೆಂದರೆ ಫ್ಲಾಟ್ ಟೈಯರ್ ಇದ್ದ ಹಾಗೆ. ನೀವು ಬದಲಿಸದ ಹೊರತು ಮುಂದಕ್ಕೆ ಹೋಗುವುದಿಲ್ಲ.

ಫನ್‌ತರಂಗ
- ರಘುಪತಿ ಶೃಂಗೇರಿ -



ಕೋಣಂದೂರು ಲಿಂಗಪ್ಪ, ವಿಜಯಲಕ್ಷ್ಮೀ ಸಿಂಗ್, ಪ್ರಕಾಶ್ ರಾಜ್, ಮಾಜಿ ಐಎಎಸ್ ಅಧಿಕಾರಿ ಸಿದ್ದಯ್ಯ ಆಯ್ಕೆ

70 ಸಾಧಕರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ ಪ್ರತಿಷ್ಠಿತ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರಕಟವಾಗಿದ್ದು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ 70 ಸಾಧಕರನ್ನು ಆಯ್ಕೆ ಮಾಡಿ ರಾಜ್ಯ ಸರಕಾರ ಅಧಿಕೃತ ಆದೇಶ ಹೊರಡಿಸಿದೆ.

ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಮಂಗಳವಾರ ಹಾಗೂ ಬುಧವಾರ ಸರಣಿ ಸಭೆಯ ಬಳಿಕ ಪ್ರಶಸ್ತಿ ಪುರಸ್ಕೃತರನ್ನು ಅಂತಿಮ ಗೊಳಿಸಲಾಗಿದೆ. ಕಳೆದ ಬಾರಿಯಂತೆ ಈ ಬಾರಿ ಯಾವುದೇ ಸಂಘ ಸಂಸ್ಥೆಗೆ ಪ್ರಶಸ್ತಿ ನೀಡದೇ ಇರುವುದರಿಂದ 70 ಸಾಧಕರನ್ನು ಮಾತ್ರ ಆಯ್ಕೆ ಮಾಡಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಮೊದಲ ಬಾರಿಗೆ ರಾಜ್ಯೋತ್ಸವ ಪ್ರಶಸ್ತಿಗೆ ಅರ್ಜಿ ಕರೆಯದೆ ಒಟ್ಟು 70 ಮಂದಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡ ಲಾಗಿದೆ. ಈ ಪೈಕಿ ಕೆಲವರು ಸ್ವಯಂ ಮನವಿ ನೀಡಿ ದ್ದರು. ಅಂಥವರು ಪ್ರಶಸ್ತಿಗೆ ಅರ್ಹರಿದ್ದ ಕಾರಣ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ಹಂಚಿಕೆ ಯಲ್ಲಿ ಜಿಲ್ಲಾವಾರು, ಸಾಮಾಜಿಕ ಪರಿಪಾಲನೆ ಯಲ್ಲಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಆಯ್ಕೆ ಸಲಹಾ ಸಮಿತಿ ಸದಸ್ಯರು ಶಿಫಾರಸ್ಸು ಮಾಡಿದ್ದ ಬಹುತೇಕರನ್ನು ಆಯ್ಕೆ ಮಾಡಲಾಗಿದ್ದು, ನಾಲ್ಕೈದು ಬಾರಿ ಸಭೆ ನಡೆಸಿದ ಸದಸ್ಯರು ಅರ್ಹರನ್ನು ಆಯ್ಕೆ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಮೊದಲ ಬಾರಿಗೆ ಸಮಗಾರ ಹರಳಯ್ಯ ಸಮುದಾಯಕ್ಕೆ ಸೇರಿದ ಇಬ್ಬರು ಪ್ರತಿಭೆಗಳನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಬಾರಿ ಯಾವುದೇ ಸಂಘ-ಸಂಸ್ಥೆಗಳಿಗೆ ಪ್ರಶಸ್ತಿ ನೀಡಿಲ್ಲ. 12 ಮಂದಿ ಮಹಿಳೆಯರಿಗೆ ಈ ಬಾರಿ ಪ್ರಶಸ್ತಿ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ಐದು ಲಕ್ಷ ರು. ನಗದು ಬಹುಮಾನ ಸೇರಿದಂತೆ 25 ಗ್ರಾಂ ಚಿನ್ನದ ಪದಕವನ್ನು ಹೊಂದಿದೆ. ನ.1ರಂದು ಸಿಎಂ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಾಗಿದ್ದಾರೆ ಎಂದು ವಿವರಿಸಿದರು.

ಪ್ರಮುಖರು

1 ವಿಜಯಲಕ್ಷ್ಮಿ ಸಿಂಗ್, ಸಿನಿಮಾ/ಕಿರುತೆರೆ
2 ಎಚ್. ಸಿದ್ದಯ್ಯ, ಆಡಳಿತ
3 ಸೂಲಗಿತ್ತಿ ಈರಮ್ಮ
4 ಕೃಷ್ಣ ಪರಮೇಶ್ವರ ಹೆಗಡೆ, ಯಕ್ಷಗಾನ
5 ಡಾ.ಎಂ.ಆರ್. ಜಯರಾಂ, ಶಿಕ್ಷಣ
6 ಕೋಣಂದೂರು ಲಿಂಗಪ್ಪ, ಸಮಾಜ ಸೇವೆ

ಉಮಾಶ್ರೀಗೆ ಡಾ.ರಾಜ್ ಪ್ರಶಸ್ತಿ

2019ನೇ ಸಾಲಿನ ಡಾ.ರಾಜಕುಮಾರ್ ಪ್ರಶಸ್ತಿ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಹಾಗೂ ಡಾ.ವಿಷ್ಣುವರ್ಧನ್ ಪ್ರಶಸ್ತಿಗೆ ರಾಜ್ಯ ಸರಕಾರ ಆಯ್ಕೆ ಮಾಡಿ ಆದೇಶ ಹೊರಡಿಸಿದೆ. ಡಾ. ರಾಜಕುಮಾರ್ ಪ್ರಶಸ್ತಿಗೆ ಹಿರಿಯ ನಟಿ ಉಮಾಶ್ರೀ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿಗೆ ಎನ್.ಆರ್ ನಂಜುಂಡೇ ಗೌಡ ಹಾಗೂ ಡಾ.ವಿಷ್ಣುವರ್ಧನ್ ಪ್ರಶಸ್ತಿಗೆ ರಿಚರ್ಡ್ ಕ್ಯಾಸ್ಟಲಿನೋ ಅವರು ಆಯ್ಕೆಯಾಗಿದ್ದಾರೆ. ಈ ಮೂರು ಪ್ರಶಸ್ತಿಗಳು ತಲಾ ಐದು ಲಕ್ಷ ರು.ನಗದು ಹಾಗೂ 50 ಗ್ರಾಂ ಚಿನ್ನದ ಪದಕ ಒಳಗೊಂಡಿದೆ. ಇನ್ನು 2019ರ ಅತ್ಯುತ್ತಮ ಚಲನ ಚಿತ್ರ ಸಾಹಿತ್ಯ ವಾರ್ಷಿಕ ಪ್ರಶಸ್ತಿಗೆ ಹಿರಿಯ ಪತ್ರಕರ್ತ ರಘುನಾಥ ಚ.ಹ.ಅವರು ಬರೆದಿರುವ ಬೆಳ್ಳಿತೊರೆ ಸಿನಿಮಾ ಪ್ರಬಂಧ ಗಳು ಕೃತಿ ಆಯ್ಕೆಯಾಗಿದೆ. ಅಂಕಿತ ಪುಸ್ತಕವು ಈ ಕೃತಿಯನ್ನು ಪ್ರಕಟಿಸಿದೆ. ಈ ಪ್ರಶಸ್ತಿಯು ಕೃತಿಕಾರರಿಗೆ ಹಾಗೂ ಪ್ರಕಾಶಕ ರಿಗೆ ತಲಾ 20 ಸಾವಿರ ರು.ನಗದು ಮತ್ತು 50 ಗ್ರಾಂ ಬೆಳ್ಳಿ ಪದಕ ಒಳಗೊಂಡಿದೆ.

2019 ರ ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಗೆ ಶ್ರೀನಾಥ್ ಹಡಗಲಿ ನಿರ್ದೇಶನದ ಗುಳೆ ಕಿರುಚಿತ್ರವು ಆಯ್ಕೆಯಾಗಿದೆ. ಮನೋಹರ್ ಎಸ್ ಅಯ್ಯರ್ ನಿರ್ಮಿಸಿರುವ ಈ ಚಿತ್ರದ ನಿರ್ದೇಶಕರು ಮತ್ತು ನಿರ್ಮಾಪಕರಿಗೆ ತಲಾ 25 ಸಾವಿರ ರು. ನಗದು ಹಾಗೂ 50 ಗ್ರಾಂ ಬೆಳ್ಳಿ ಪದಕ ನೀಡಿ ಗೌರವಿಸಲಾಗುತ್ತಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಎಂ ಆಪ್ತ ಸಚಿವರಿಂದ ದಲಿತ ಕಾರ್ಡ್, ಡಿಕೆ ಬಣ ಮೌನ

ಅಧಿವೇಶನಕ್ಕೂ ಮುನ್ನವೇ ಸಂಪುಟ ಸರ್ಜರಿಗೆ ಪಟ್ಟು

ಬೆಂಗಳೂರು: ರಾಜ್ಯ ಕಾಂಗ್ರೆಸ್ ರಾಜಕೀಯದಲ್ಲಿ ದಿನಕ್ಕೊಂದು ತಿರುವು ಸಿಗುತ್ತಿದೆ. ಇಷ್ಟು ದಿನ ಬಿಹಾರ ಚುನಾವಣೆ ಮುಗಿದ ಬಳಿಕ ಸಂಪುಟ ಪುನಾರಚನೆ ಪ್ರಕ್ರಿಯೆಗೆ ವೇಗ ಸಿಗಲಿದೆ ಎಂದು ಅನೇಕರು ಭಾವಿಸಿದ್ದರು. ಆದರೀಗ ಚಳಿಗಾಲದ ಅಧಿವೇಶನಕ್ಕೆ ಬೆಳಗಾವಿಗೆ ತೆರಳುವಾಗಲೇ ಹೊಸ ಸಚಿವರ 'ದಂಡ'ನ್ನು ಕರೆದುಕೊಂಡು ಹೋಗಬೇಕು ಎನ್ನುವ ಲೆಕ್ಕಾಚಾರಗಳು ಶುರುವಾಗಿದೆ.

ಹೌದು, ಡಿ.ಕೆ.ಶಿವಕುಮಾರ್ ದೆಹಲಿ ಭೇಟಿಯ ಬಳಿಕ ರಾಜ್ಯ ರಾಜಕೀಯದಲ್ಲಿ ತೀವ್ರ ಚರ್ಚೆಗಳು ಆರಂಭವಾಗಿದೆ. ಅದರಲ್ಲಿಯೂ ಸಿದ್ದರಾಮಯ್ಯ ಆಪ್ತ ಬಣದಲ್ಲಿ ಕಾಣಿಸಿಕೊಂಡಿರುವ ಸಚಿವರು, ಬೆಳಗಾವಿ ಅಧಿವೇಶನಕ್ಕೂ ಮೊದಲೇ ಸಂಪುಟ ವನ್ನು ಪುನಾರಚನೆ ಮಾಡಬೇಕು ಎನ್ನುವ ಒತ್ತಡ ವನ್ನು ಹೈಕಮಾಂಡ್ ಮೇಲೆ ಹೇರಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ಕಾಂಗ್ರೆಸ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಯಕತ್ವ ಬೇಕೇಬೇಕು. ಆದ್ದರಿಂದ ಅವರು ಸಕ್ರಿಯ ರಾಜಕೀಯದಿಂದ ನಿವೃತ್ತರಾಗಬಾರದು.
- ಸಂತೋಷ್ ಲಾಡ್, ಕಾರ್ಮಿಕ ಸಚಿವ

ಸಿದ್ದರಾಮಯ್ಯ ಅವರು 2028ರಲ್ಲಿ ಸ್ಪರ್ಧಿಸುವುದಕ್ಕೆ ಯಾರೂ ವಿರೋಧ ಮಾಡಿಲ್ಲ. ಸಿದ್ದರಾಮಯ್ಯ ಅವರು ಮುಂದಿನ ಬಾರಿಯೂ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ ಎಂಬ ನಂಬಿಕೆ ನಮ್ಮದಾಗಿದೆ.
- ಬೈರತಿ ಸುರೇಶ್, ಸಚಿವ

ನಾವು ಸಭೆ ಸೇರುವುದು ಹೊಸ ದೇನಲ್ಲ. ಅದಕ್ಕೆ ಬೇರೆ ರೀತಿಯ ಅರ್ಥ ಕೊಡಬೇಕು ಎಂದಿಲ್ಲ. ನಾವು ಸಭೆ ಸೇರಿದಾಗಲೆಲ್ಲ, ರಾಜಕೀಯವನ್ನೇ ಚರ್ಚಿಸುತ್ತೇವೆ ಎಂದಿಲ್ಲ.
- ಸತೀಶ್ ಜಾರಕಿಹೊಳಿ, ಸಚಿವ

ನಾಯಕತ್ವದ ಬದಲಾವಣೆಯ ಮಾತುಗಳನ್ನು ಡಿ.ಕೆ.ಶಿವಕುಮಾರ್ ಆಪ್ತರು ಹೇಳುತ್ತಿದ್ದರೂ, ಸದ್ಯಕ್ಕೆ ಸಂಪುಟ ಪುನಾರಚನೆಗೆ ಸೀಮಿತಗೊಳಿಸಬೇಕು ಎನ್ನುವ ಒತ್ತಡವನ್ನು ಸಿದ್ದು ಆಪ್ತರು ಹೇರುತ್ತಿದ್ದಾರೆ. ಇದಕ್ಕೆ ದಲಿತ ಸಮುದಾಯದ ಟ್ರಂಪ್ ಕಾರ್ಡ್ ಬಳಸಿಕೊಳ್ಳಲು ಹಲವು ತಂತ್ರಗಾರಿಕೆ ಮಾಡಿರುವುದು ಸ್ಪಷ್ಟ. ಬುಧವಾರ ರಾತ್ರಿ ಪರಂ, ಮಹದೇವಪ್ಪ, ಸತೀಶ್ ಜಾರಕಿಹೊಳಿ ಸೇರಿದಂತೆ ಇನ್ನು ಕೆಲ ಸಚಿವರು ನಡೆಸಿದ ಸಭೆಯಲ್ಲಿ, ಬಿಹಾರ ಫಲಿತಾಂಶದ ಕೆಲವೇ ದಿನದಲ್ಲಿ ಸಂಪುಟ ವಿಸ್ತರಣೆ ಮಾಡುವಂತೆ ನೋಡಿಕೊಳ್ಳ ಬೇಕು. ಸದ್ಯ ಡಿ.8ಕ್ಕೆ ಬೆಳಗಾವಿಯಲ್ಲಿ ಅಧಿವೇಶನ ನಡೆಸಬೇಕು ಎನ್ನುವ ಲೆಕ್ಕಾಚಾರಗಳಿವೆ. ಅದಕ್ಕೂ ಮೊದಲೇ ಸಂಪುಟ ಪುನಾರಚನೆಯಾಗುವಂತೆ ನೋಡಿಕೊಳ್ಳಬೇಕು ಎನ್ನುವ ಬಗ್ಗೆ ಚರ್ಚೆ ನಡೆಸಿದ್ದಾರೆ.

'ಸಂಪುಟ ಪುನಾರಚನೆಯಾದರೆ ಮುಖ್ಯಮಂತ್ರಿ ಬದಲಾವಣೆಯಿಲ್ಲ'ವೆಂದು ಈಗಾಗಲೇ ಮಾಜಿ ಸಚಿವ ರಾಜಣ್ಣ ಹೇಳಿದ್ದಾರೆ. →10

ಅನುದಾನ: ಜಾರ್ಜ್‌ಗೆ ಎಚ್‌ಸಿಎಂ ಚಾರ್ಜ್

ಸಂಪುಟದಲ್ಲಿ ಸಮರ

ಬೆಂಗಳೂರು: ಗಂಗಾ ಕಲ್ಯಾಣ ಯೋಜನೆ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ಪ್ರಭಾವಿ ಸಚಿವರ ನಡುವೆ ಭಾರೀ ಮಾತಿನ ಸಮರ, ಜಟಾಪಟಿ, ಗದ್ದಲ ನಡೆದಿದೆ.

ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹಾಗೂ ಇಂಧನ ಸಚಿವ ಕೆ.ಜೆ. ಜಾರ್ಜ್ ನಡುವೆ ವಾಕ್ಸಮರ ನಡೆದಿದೆ. ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿತ ವಿಷಯದಲ್ಲಿ ಸಚಿವ ಕೆ.ಜೆ.ಜಾರ್ಜ್ ಮಾತಿಗೆ ತಾಳ್ಮೆ ಕಳೆದುಕೊಂಡ ಎಚ್.ಸಿ.ಮಹದೇವಪ್ಪ ಸಭೆಯಿಂದ ನಾನು ಎದ್ದು ಹೊರಟೇ ಬಿಡುತ್ತೇನೆ ಎಂದು ಕೂಗಾಡಿದ್ದಾರೆ ಎನ್ನಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ಎಸ್‌ಸಿಪಿ ಟಿಎಸ್‌ಪಿ ಅನುದಾನದ ಬಗ್ಗೆ ನಡೆಯುತ್ತಿದ್ದ ಚರ್ಚೆ ವೇಳೆ ಈ ಮಾತಿನ ಸಮರ ನಡೆದಿದೆ. ಗಂಗಾ ಕಲ್ಯಾಣ ಯೋಜನೆಯ ಬಗ್ಗೆ ನಡೆದಿದ್ದ ಚರ್ಚೆಯಲ್ಲಿ ಸಚಿವರು ರೇಗಾಡಿದ್ದಾರೆ. ಗಂಗಾ ಕಲ್ಯಾಣ ಯೋಜನೆಯಡಿ ಆಯ್ಕೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಕೊಳವೆಬಾವಿಗಳನ್ನು ಕೊರೆಯಲು ಪಂಪ್ ಸೆಟ್‌ಗಳನ್ನು ಸರಬರಾಜು ಮಾಡುವ ಯೋಜನೆ ಬಗ್ಗೆ ಚರ್ಚಿಸುವಾಗ ಮಾತಿನ ಸಮರ ನಡೆದಿದೆ.

ಒಪ್ಪಂದದ (ಇಓಐ) ಮೂಲಕ ಎರಡು ವರ್ಷದ ಅವಧಿಗೆ ಗುತ್ತಿಗೆದಾರರನ್ನು ಸರಕಾರ ನೋಂದಣಿ ಮಾಡಿಕೊಂಡಿದ್ದು, ಸದರಿ ಅವಧಿಯನ್ನು ಮುಂದಿನ ಎರಡು ವರ್ಷಗಳಿಗೆ ವಿಸ್ತರಿಸಲು ಅನುಮೋದನೆ ನೀಡುವ ಬಗ್ಗೆ ಚರ್ಚೆ ನಡೆದಿತ್ತು. ಈ ಚರ್ಚೆ ವೇಳೆ ಕೆ.ಜೆ.ಜಾರ್ಜ್ ವಿರುದ್ಧ ಈ ಕ್ರಮ ಸರಿಯಿಲ್ಲ ಎಂದು ಸಚಿವ ಮಹದೇವಪ್ಪ ಆಕ್ರೋಶ ವ್ಯಕ್ತಪಡಿಸಿ ದ್ದಾರೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆಬಾವಿ (ಬೋರ್‌ವೆಲ್) ಹಾಕಲಾಗಿದೆ. ಆದರೆ ಇಲ್ಲಿಯವರೆಗೆ ವಿದ್ಯುತ್ ಸಂಪರ್ಕ ನೀಡಿಲ್ಲ.

ಬಡವರಿಗೆ ಕೊರೆದಿರುವ ಬೋರ್‌ವೆಲ್ ಅದು. ವಿದ್ಯುತ್ ನೀಡದಿದ್ದರೆ ಅವರು ನೀರು ಎತ್ತುವುದು ಹೇಗೆ ಎಂದು ಏರು ದನಿಯಲ್ಲಿ ಸಚಿವ ಜಾರ್ಜ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. →10

ಸಭೆಯಲ್ಲಿ ಸೌಹಾರ್ದಯುತ ಮಾತುಕತೆ ಆಗಿದೆ. ಆ ರೀತಿಯ ಯಾವುದೇ ಮಾತುಕತೆ ಆಗಿಲ್ಲ, ನಿಮಗೆ ಯಾರೋ ತಪ್ಪು ಮಾಹಿತಿ ಕೊಟ್ಟಿದ್ದಾರೆ.
ಎಚ್.ಕೆ.ಪಾಟೀಲ್, ಕಾನೂನು ಸಚಿವ

ಪಿಡಿಒ ಅಮಾನತಿಗೆ ಕೆಎಟಿ ತಡೆ

ಬೆಂಗಳೂರು: ಆರೆಸ್ಸೆಸ್ ಪಥಸಂಚನದಲ್ಲಿ ಭಾಗಿಯಾಗಿದ್ದರು ಎಂಬ ಕಾರಣಕ್ಕಾಗಿ ಸೇವೆಯಿಂದ ಅಮಾನತುಗೊಂಡಿದ್ದ ರಾಯಚೂರು ಜಿಲ್ಲೆ ಪಿಡಿಒ ಅಮಾನತು ಆದೇಶಕ್ಕೆ ಕರ್ನಾಟಕ ಆಡಳಿತ ನ್ಯಾಯಾಧೀಕರಣ ಮಧ್ಯಂತರ ತಡೆಯಾಜ್ಞೆ ನೀಡಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ತಮ್ಮನ್ನು ಸೇವೆಯಿಂದ ಅಮಾನತು ಮಾಡಿರುವುದನ್ನು ಪ್ರಶ್ನಿಸಿ ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಪಿಡಿಒ ಪ್ರವೀಣ್ ಕುಮಾರ್ ಕೆಎಟಿ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ ಕೆಇಟಿ ಸರಕಾರದ ಆದೇಶಕ್ಕೆ ಮಧ್ಯಂತರ ನೀಡಿದೆ.

ಎಚ್‌ಪಿವಿ ಉಚಿತ ಲಸಿಕೆ

ಬೆಂಗಳೂರು: ಗರ್ಭಕಂಠದ ಕ್ಯಾನ್ಸರ್ ನಿಯಂತ್ರಣಕ್ಕಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿಯು ಸರಕಾರಿ ಶಾಲೆಗಳಲ್ಲಿ 13 ರಿಂದ 15 ವರ್ಷದೊಳಗಿನ ಬಾಲಕಿಯರಿಗೆ ಹ್ಯೂಮನ್ ಪ್ಯಾಪಿಲೋಮವೈರಸ್ (HPV) ಲಸಿಕೆಗಳನ್ನು ಒದಗಿಸಲು ಖಾಸಗಿ ಹೂಡಿಕೆದಾರರು ಮತ್ತು ವೈದ್ಯರೊಂದಿಗೆ ಚರ್ಚೆ ನಡೆಸುತ್ತಿದೆ. ಈ ಕುರಿತು ವಾರದೊಳಗೆ ಸುತ್ತೋಲೆ ಬಿಡುಗಡೆ ಆಗಲಿದೆ ಎಂದು ಆರೋಗ್ಯ ರಕ್ಷಣಾ ಪ್ರತಿಷ್ಠಾನದ ನಿರ್ದೇಶಕಿ ಡಾ. ಹೇಮಾ ದಿವಾಕರ್ ತಿಳಿಸಿದ್ದಾರೆ.



ಮತ್ತೆ ಅಣ್ವಸ್ತ್ರ ಪೈಪೋಟಿ

ಸಿಯೋಲ್: ರಷ್ಯಾ ಅತ್ಯಾಧುನಿಕ ಪರಮಾಣು ಪರೀಕ್ಷೆಗೆ ಆದೇಶ ನೀಡಿದ ಬೆನ್ನಿಗೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪರಮಾಣು ಶಸ್ತ್ರಾಸ್ತ್ರಗಳ ಪರೀಕ್ಷೆಯನ್ನು ಪ್ರಾರಂಭಿಸಲು ಆದೇಶ ನೀಡಿದ್ದಾರೆ. ಈ ಪ್ರಕ್ರಿಯೆ ತಕ್ಷಣ ಆರಂಭವಾಗುತ್ತದೆ ಎಂದು ಸಿಯೋಲ್ ಭೇಟಿಯಲ್ಲಿರುವ ಟ್ರಂಪ್ ಹೇಳಿದ್ದಾರೆ. ಇದು 1992ರ ನಂತರ ಅಮೆರಿಕದ ಮೊದಲ ಪರಮಾಣು ಪರೀಕ್ಷೆಯಾಗಿದ್ದು, ಉಭಯ ದೇಶ ಗಳು ಸಮಗ್ರ ಪರಮಾಣು ಪರೀಕ್ಷೆ ನಿಷೇಧ ಒಪ್ಪಂದ ಉಲ್ಲಂಘಿ ಸಲು ಮುಂದಾಗಿವೆ. ಇದೇ ವೇಳೆ ಚೀನಾ ಮೇಲಿನ ಶೇ. 57ರಷ್ಟು ಸುಂಕವನ್ನು ಶೇ. 47ಕ್ಕೆ ಇಳಿಸಲಾಗುವುದೆಂದು ಟ್ರಂಪ್ ಹೇಳಿದ್ದಾರೆ.

ಗೆಹ್ಲೋಥ್ ಆಸ್ಪತ್ರೆಗೆ

ಬೆಂಗಳೂರು: ತೀವ್ರ ಜ್ವರ ಹಿನ್ನೆಲೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರು ನಗರದ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ವೈರಲ್ ಜ್ವರದ ಹಿನ್ನೆಲೆಯಲ್ಲಿ ಎರಡು ದಿನಗಳ ಹಿಂದೇ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮೊದಲಿಗೆ ಬೆಂಗಳೂರಿನ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಖಾಸಗಿ ಆಸ್ಪತ್ರೆಗೆ ರಾಜ್ಯಪಾಲರು ದಾಖಲಾಗಿದ್ದರು. ಬಳಿಕ ಹೆಚ್ಚಿನ ಚಿಕಿತ್ಸೆ ಹಿನ್ನೆಲೆಯಲ್ಲಿ ನಗರದ ಮಣಿಪಾಲ್ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ರಾಜಧಾನಿಗೆ ಪಥ ಶಿಫ್ಟ್

ಬೆಂಗಳೂರು/ಕಲಬುರಗಿ: ರಾಜ್ಯದಲ್ಲಿ ತೀವ್ರ ಕೂತೂಹಲ ಕೆರಳಿಸಿರುವ ಚಿತ್ತಾಪುರ ಆರ್‌ಎಸ್‌ಎಸ್ ಪಥಸಂಚಲನ ಕುರಿತು, ಕಲಬುರಗಿಯ ಹೈಕೋರ್ಟ್ ಪೀಠ ಗುರುವಾರ ಮಹತ್ವದ ಸೂಚನೆ ನೀಡಿದೆ. ನವೆಂಬರ್ 5ಕ್ಕೆ ಬೆಂಗಳೂರಿನಲ್ಲಿ ಶಾಂತಿ ಸಭೆ ನಡೆಸಲು ಸೂಚನೆ ನೀಡಿದ್ದು, ನ.7ಕ್ಕೆ ವಿಚಾರಣೆ ಮುಂದೂಡಿ ಆದೇಶಿಸಿದೆ. ನವೆಂಬರ್ 5ರಂದು ಸಂಜೆ 4 ಗಂಟೆಗೆ ಬೆಂಗಳೂರಿನ ಎಜಿ ಕಚೇರಿಯಲ್ಲಿ ಸಭೆ ನಡೆಯ ಲಿದೆ. ಕೋರ್ಟ್ ಸೂಚನೆ ಮೇರೆಗೆ ಅರ್ಜಿದಾರರು ಮತ್ತು ಎಜಿ ಸಭೆಯಲ್ಲಿ ಪಾಲ್ಗೊಳ್ಳಲಿ ದ್ದಾರೆ. ನ.7ರಂದು ಮತ್ತೆ ವಿಚಾರಣೆ ನಡೆಯಲಿದೆ.

1,545.23 ಕೋಟಿ ರು. ನಷ್ಟ ಭರ್ತಿಗೆ ಮನವಿ: ಸಂಪುಟ ನಿರ್ಧಾರ

ನೆರೆ ಹಾನಿ: ಕೇಂದ್ರಕ್ಕೆ ಮೊರೆ

ಬೆಂಗಳೂರು: ರಾಜ್ಯದಲ್ಲಿ ಭಾರಿ ಮಳೆ, ಪ್ರವಾಹದಿಂದಾಗಿ 5,000 ಕೋಟಿಗೂ ಹೆಚ್ಚು ಮೌಲ್ಯದ ಸಾರ್ವಜನಿಕ ಆಸ್ತಿಗಳು ಹಾನಿಯಾಗಿವೆ. ಹೀಗಾಗಿ ಎನ್‌ಡಿಆರ್‌ಎಫ್ ನಿಯಮದ ಪ್ರಕಾರ ಕೇಂದ್ರ ಸರಕಾರದಿಂದ 1,545.23 ಕೋಟಿ ರು. ಆಸ್ತಿ ನಷ್ಟ ಪರಿಹಾರಕ್ಕೆ ಮನವಿ ಮಾಡಲು ಸಚಿವ ಸಂಪುಟ ಸಭೆ ನಿರ್ಣಯ ಮಾಡಿದೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಮೂಲಸೌಕರ್ಯ ಪುನರ್ ನಿರ್ಮಾಣಕ್ಕೆ ಮೊದಲ ಬಾರಿಗೆ ಪರಿಹಾರ ಕೇಳುತ್ತಿದ್ದೇವೆ. ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಿಗೆ ನೀಡಿದ್ದಾರೆ. ಹೀಗಾಗಿ ಕೇಳಲು ನಿರ್ಧರಿಸಿದ್ದೇವೆ. ರಾಜ್ಯದಲ್ಲಿ ನಾಲ್ಕು ಜಿಲ್ಲೆಗಳಲ್ಲಿ ಸುರಿದ ಭಾರಿ ಮಳೆ ಹಾಗೂ ನದಿಗಳಿಂದ ಉಂಟಾದ ಪ್ರವಾಹದಿಂದ 5 ಸಾವಿರ ಕೋಟಿ ರು.ಗಿಂತ ಹೆಚ್ಚು ಆಸ್ತಿ ಹಾನಿಯಾಗಿದೆ. ಈ ಸಂಬಂಧ ಪರಿಹಾರಕ್ಕಾಗಿ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ ಎಂದರು.

ಕಳೆದ ನ.16ರ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದಲ್ಲಿ ಪ್ರಸಕ್ತ ವರ್ಷದ ನೈರುತ್ಯ ಮುಂಗಾರಿನ ಅವಧಿಯಲ್ಲಿ ಭಾರಿ ಮಳೆ ಹಾಗೂ ಪ್ರವಾಹದಿಂದ ಹಾನಿಯಾಗಿರುವ 12.82 ಲಕ್ಷ ಹೆಕ್ಟೇರ್ ಬೆಳೆಹಾನಿಗೆ ಪ್ರತಿ ಹೆಕ್ಟೇರ್‌ಗೆ 8,500 ರು. ಹೆಚ್ಚುವರಿ ಇನ್‌ಪುಟ್ ಸಬ್ಸಿಡಿ ಸೇರಿಸಿ ಪರಿಹಾರ ನೀಡಲು ನಿರ್ಧಾರ ಮಾಡಲಾಗಿತ್ತು. ಅದರಂತೆ ಪರಿಹಾರ ವಿತರಿಸಲಾಗಿತ್ತು.

ಶಾಲಾ ಕೊಠಡಿಗಳಿಗೆ 360 ಕೋಟಿ ರು.

ಸರಕಾರಿ ಶಾಲೆಗಳಲ್ಲಿ 2200 ಶಾಲಾ ಕೊಠಡಿಗಳನ್ನು 360 ಕೋಟಿ ರು. ವೆಚ್ಚದಲ್ಲಿ ನಿರ್ಮಾಣ ಮಾಡಲು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ. ಕರ್ನಾಟಕ-ಕರಾವಳಿ ಸ್ಥಿತಿಸ್ಥಾಪಕತ್ವ ಮತ್ತು ಆರ್ಥಿಕತೆ ಬಲಪಡಿಸುವ ಕೆ-ಶೋರ್ ಯೋಜನೆಗೆ ತಾಂತ್ರಿಕ ಮತ್ತು ನಿರ್ವಹಣಾ ಸಲಹೆಗಾರರ ಸೇವೆಗಳನ್ನು ಪಡೆಯಲು ರೂ.20.47 ಕೋಟಿ ರು. ನೀಡಲಾಗಿದೆ. →10

ಪ್ರಮುಖ ನಿರ್ಣಯಗಳು

- ಅಭಿವೃದ್ಧಿ, ವರ್ಧನೆ, ನಿರ್ವಹಣೆ ಹಾಗೂ ತಾಂತ್ರಿಕ ಸಹಾಯಕ್ಕಾಗಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಕಾವೇರಿ ಐಟಿ ಸೆಲ್ ಹೆಸರಿನ ಇನ್-ಹೌಸ್ ತಾಂತ್ರಿಕ ಅಭಿವೃದ್ಧಿ ವಿಭಾಗಕ್ಕೆ 69.13 ಕೋಟಿ ರು.
- ಪೊಲೀಸ್ ಇಲಾಖೆಗೆ 241 ವಿವಿಧ ಮಾದರಿಯ ವಾಹನ ಖರೀದಿಸಲು 34.95 ಕೋಟಿ ರು.
- 8 ಕಡೆ ಟೆಕ್ನಾಲಜಿ ಬ್ಯುಸಿನೆಸ್ ಇನ್ಕ್ಯುಬೇಟರ್ಸ್ ಸ್ಥಾಪನೆಗೆ 80 ಕೋಟಿ ರು. (ಮೈಸೂರು, ಬಾಗಲಕೋಟೆ, ಶಿವಮೊಗ್ಗ, ಮಂಗಳೂರು, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.)

ಶವ ಹೂತ ಪ್ರಕರಣ ರದ್ದು ಕೋರಿ ತಿಮರೋಡಿ ತಂಡ ಹೈಕೋರ್ಟ್‌ಗೆ ಅರ್ಜಿ

ಬಿಲ ಹುಡುಕುತ್ತಿರುವ ಬುರುಡೆ ಗ್ಯಾಂಗ್

ಬೆಂಗಳೂರು: ಧರ್ಮಸ್ಥಳದ ವಿರುದ್ಧ 'ಬುರುಡೆ' ಆರೋಪ ಬಿಟ್ಟಿದ್ದ ಗ್ಯಾಂಗ್ ಬುಡಕ್ಕೆ ಪ್ರಕರಣ ಬರುವುದು ಖಚಿತವಾಗುತ್ತಿದ್ದಂತೆ ಇದೀಗ ಮೂಲ ಪ್ರಕರಣವನ್ನೇ ರದ್ದುಪಡಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ವಿಶೇಷ ತನಿಖಾ ತಂಡ ತನ್ನ ಅಂತಿಮ ವರದಿಯನ್ನು ಸಿದ್ಧಪಡಿಸಿದ್ದು ಶುಕ್ರವಾರ ಸರಕಾರಕ್ಕೆ ಸಲ್ಲಿಸುವ ಮಾತುಗಳು ಕೇಳಿಬರುತ್ತಿದೆ. ಈ ನಡುವೆ ಈಗಾಗಲೇ ಇಡೀ ಪ್ರಕರಣದಲ್ಲಿ ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಹಾಗೂ ಅವರ ಕುಟುಂಬದ ವಿರುದ್ಧ ಯಾವುದೇ 'ಸಾಕ್ಷ್ಯ' ಸಿಕ್ಕಿಲ್ಲ. ಬದಲಿಗೆ ಬುರುಡೆ ಗ್ಯಾಂಗ್ ವಿರುದ್ಧವೇ ಹಲವಾರು ಸಾಕ್ಷ್ಯಗಳು ಸಿಕ್ಕಿವೆ. ಆದ್ದರಿಂದ ಇದೀಗ ಇಡೀ ಪ್ರಕರಣವನ್ನು ರದ್ದುಪಡಿಸಬೇಕು ಎಂದು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ಪಾರಾಗುವ ಲೆಕ್ಕಾಚಾರದಲ್ಲಿ ಬುರುಡೆ ಗ್ಯಾಂಗ್ ಇದೆ.

ಈ ಮೂಲಕ ತಾವೇ ತೋಡಿಕೊಂಡ ಗುಂಡಿಯಲ್ಲಿ ಬುರುಡೆ ಗ್ಯಾಂಗ್ ಬಿದ್ದಿದೆ. →10

ಧರ್ಮಸ್ಥಳ ಪ್ರಕರಣದ ಕುರಿತಾಗಿ ವರದಿಯನ್ನು ಶೀಘ್ರದಲ್ಲೇ ನೀಡಬೇಕು ಎಂದು ಗೃಹಸಚಿವರು ನೀಡಿರುವ ಹೇಳಿಕೆಯನ್ನು ಗಮನಿಸಿದ್ದೇನೆ. ಅದರಲ್ಲಿ ಏನಿದೆ ಎಂಬುದು ನನಗೆ ತಿಳಿದಿಲ್ಲ. ತನಿಖೆ ನಡೆಸದಂತೆ ಸಾವಿರಾರು ಅರ್ಜಿಗಳನ್ನು ನ್ಯಾಯಲಯಕ್ಕೆ ಹಾಕಿಕೊಂಡಿರಬಹುದು. ನಾನು, ನೀವು ಅಥವಾ ಬೇರೆಯವರು ಏನಾದರೂ ಅಪರಾಧ ಮಾಡಿದ್ದ ಸಂದರ್ಭದಲ್ಲಿ ತಪ್ಪಾಯಿತು ಎಂದು ಕ್ಷಮಾಪಣೆ ಕೇಳುವ ಅವಕಾಶ ಈ ದೇಶದ ಕಾನೂನಿನಲ್ಲಿ ಇದೆಯೇ?
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ತಿರುಗು ಬಾಣವಾದ ಆರೋಪ

ಧರ್ಮಸ್ಥಳದಲ್ಲಿ ಶವ ಹೂತಿಟ್ಟ ಪ್ರಕರಣ ರದ್ದು ಕೋರಿ ಬುರುಡೆ ಗ್ಯಾಂಗ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. ಧರ್ಮಸ್ಥಳದಲ್ಲಿ ನೂರಾರು ಅನಾಮಧೇಯರ ಶವ ಹೂಳಲಾಗಿದೆ ಎಂಬ ಆರೋಪ ತಿರುಗುಬಾಣವಾಗುತ್ತಿದ್ದಂತೆ ಬುರುಡೆ ಗ್ಯಾಂಗ್ ಯೂಟರ್ನ್ ಹೊಡೆದಿದೆ. ತಾವೇ ಹೋರಾಟ ಮಾಡಿ ಹಾಕಿಸಿದ್ದ ಪ್ರಕರಣ ರದ್ದು ಕೋರಿ ಮಹೇಶ್ ತಿಮರೋಡಿ, ಜಯಂತ್, ಗಿರೀಶ್ ಮಟ್ಟಣ್ಣವರ್, ವಿಠಲ್ ಗೌಡ ಹೈಕೋರ್ಟ್ ಮೊರೆ ಹೋಗಿದ್ದು ಪ್ರಕರಣ ರದ್ದು ಕೋರಿ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಸುಮಾರು 100 ಗಂಟೆಗೂ ಹೆಚ್ಚಿನ ಕಾಲ ನಮ್ಮನ್ನು ವಿಚಾರಣೆ ಮಾಡಿದ್ದಾರೆ. ದೂರಿಗೆ ಸಂಬಂಧಿಸಿದಂತೆ 164 ಹೇಳಿಕೆಗಳಲ್ಲಿ ತಮ್ಮ ವಿರುದ್ಧ ಆರೋಪಗಳಿಲ್ಲ. ಆದರೂ ನೋಟಿಸ್ ನೀಡಿದ್ದಾರೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ಚಿನ್ನಯ್ಯ ದೂರಿನ ನಂತರ ಎಸ್‌ಐಟಿ ಎಫ್‌ಐಆರ್‌ನಲ್ಲಿ ಹೆಚ್ಚುವರಿ ಸೆಕ್ಷನ್ಸ್ ಸೇರಿಸಿತ್ತು. ಬಿಎನ್‌ಎಸ್ ಸೆಕ್ಷನ್ 336 (ನಕಲಿ ದಾಖಲೆ), ಎಲೆಕ್ಟ್ರಾನಿಕ್ಸ್ ದಾಖಲೆ ವಂಚನೆ ಉದ್ದೇಶಕ್ಕೆ ಬಳಕೆ, 211(ಎ) (ಉದ್ದೇಶ ಪೂರ್ವಕ ಮಾಹಿತಿ ನೀಡಲು ವಿಫಲ, 230 (ಸುಳ್ಳು ಸಾಕ್ಷ್ಯ ಸೃಷ್ಟಿ) 229 (ಉದ್ದೇಶ ಪೂರ್ವಕ ಸುಳ್ಳು ಸಾಕ್ಷ್ಯ ಸೃಷ್ಟಿ, 227 (ಉದ್ದೇಶ ಪೂರ್ವಕ ಸುಳ್ಳು ಹೇಳಿಕೆ), 248 (ಸುಳ್ಳು ಕ್ರಿಮಿನಲ್ ಮೊಕದ್ದಮೆ) ಸೆಕ್ಷನ್‌ಗಳನ್ನು ಸೇರಿಸಲಾಗಿತ್ತು. ಆ ಬಳಿಕ ದೂರುದಾರ ಚಿನ್ನಯ್ಯನ ಬಂಧನವಾಗಿತ್ತು. ಅಕ್ಟೋಬರ್ 24 ರಂದು ವಿಚಾರಣೆಗೆ ಬರುವಂತೆ ಎಸ್‌ಐಟಿ ನೋಟಿಸ್ ನೀಡಿತ್ತು. ವಿಚಾರಣೆಗೆ ಹಾಜರಾದಲ್ಲಿ ಬಂಧನ ಸಾಧ್ಯತೆ ಭಯದಿಂದ ಬುರುಡೆ ಗ್ಯಾಂಗ್ ಪ್ರಕರಣವನ್ನೇ ರದ್ದುಪಡಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದೆ.

ಸಮಾಚಾರ ಸಣ್ಣದಲ್ಲ

ಮೊಬೈಲ್ ಬದಲಿಗೆ ಕಲ್ಲು ಡೆಲಿವರಿ

ಬೆಂಗಳೂರು: ಆನ್‌ಲೈನ್‌ನಲ್ಲಿ 1.85 ಲಕ್ಷ ರು. ಮೌಲ್ಯದ ಸ್ಯಾಮ್ಸಂಗ್ ಫೋನ್ ಬುಕ್ ಮಾಡಿದ್ದ ಟೆಕ್ಕಿಗೆ ಡೆಲಿವರಿ ಬಾಕ್ಸ್‌ನಲ್ಲಿ ಕಲ್ಲಿಟ್ಟು ವಂಚಿಸಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಸಾಫ್ಟ್‌ವೇರ್ ಎಂಜಿನಿಯರ್ ಪ್ರೇಮಾನಂದ್ ವಂಚನೆಗೆ ಒಳಗಾದ ವ್ಯಕ್ತಿ. ಇವರು 1.85 ಲಕ್ಷ ರು. ಮೌಲ್ಯದ ಫೋನ್ ಅನ್ನು ಅಮೆಜಾನ್ ಆ್ಯಪ್‌ನಲ್ಲಿ ಬುಕ್ ಮಾಡಿದ್ದರು. ನಿಗದಿ ದಿನಾಂಕದಂತೆ ಆರ್ಡರ್ ಡೆಲಿವರಿಯಾಗಿತ್ತು. ಬಾಕ್ಸ್ ಓಪನ್ ಮಾಡಿ ನೋಡಿದ ಟೆಕ್ಕಿಗೆ ಶಾಕ್ ಆಗಿದೆ. ಮೊಬೈಲ್ ಬಾಕ್ಸ್‌ನಲ್ಲಿ ಚೌಕಾಕಾರದ ಕಲ್ಲನ್ನು ಇಟ್ಟು ವಂಚಿಸಲಾಗಿದೆ. ಫೋನ್‌ಗಾಗಿ ಟೆಕ್ಕಿ ಸಂಪೂರ್ಣ ಹಣ ಪಾವತಿ ಮಾಡಿದ್ದರು. ಡೆಲಿವರಿ ಬಾಯ್‌ಗೆ ಕರೆ ಮಾಡಿದರೆ ಪ್ರತಿಕ್ರಿಯೆ ಸಿಕ್ಕಿಲ್ಲ. ಕೊನೆಗೆ ಎನ್‌ಸಿಆರ್‌ಪಿ ಪೋರ್ಟಲ್‌ನಲ್ಲಿ ದೂರು ದಾಖಲಿಸಲಾಗಿದೆ.

ಗಣತಿಗೆ ಬಂದಿದ್ದ ಶಿಕ್ಷಕಿಯ ಸರ ಕಳ್ಳತನ

ಬೆಂಗಳೂರು: ಜಾತಿಗಣತಿಗೆ ಬಂದಿದ್ದ ಶಿಕ್ಷಕಿಯ ಚೈನ್ ಎಗರಿಸಿರುವ ಘಟನೆ ಬ್ಯಾಡರಹಳ್ಳಿಯ ಭರತ್ ನಗರದಲ್ಲಿ ನಡೆದಿದೆ. ಶಿಕ್ಷಕಿ ಮನೆ ಗೇಟಿನ ಮುಂದೆ ನಿಂತು ವಿಚಾರಿಸುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ಸರಗಳ್ಳರು ಅವರ ಚೈನ್ ಕಿತ್ತು ಪರಾರಿಯಾಗಿದ್ದಾರೆ. ಸರಗಳ್ಳರಿಬ್ಬರೂ ಹೆಲ್ಮೆಟ್ ಧರಿಸಿ ಅದೇ ದಾರಿಯಲ್ಲಿ ಬಂದಿದ್ದರು. ಶಿಕ್ಷಕಿ ಬೇರೆಡೆ ಮಾತನಾಡುತ್ತಿರುವುದನ್ನು ಗಮನಿಸಿ ಹಿಂಬದಿ ಕೂತಿದ್ದ ಸರಗಳ್ಳ ಮೆಲ್ಲಗೆ ಬೈಕ್‌ನಿಂದ ಇಳಿದು ಶಿಕ್ಷಕಿ ಬಳಿ ಬಂದಿದ್ದ. ನೋಡನೋಡುತ್ತಿದ್ದಂತೆಯೇ ಕಳ್ಳ ಶಿಕ್ಷಕಿಯ ಸರ ಎಗರಿಸಿದ್ದಾನೆ. ಈ ಘಟನೆ ಸಂಬಂಧ ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೈಲಲ್ಲಿ ದರ್ಶನ್‌ಗೆ ಯಾತನೆ: ತೂಕ ಇಳಿಕೆ

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್ ಯಾತನೆ ಅನುಭವಿಸುತ್ತಿದ್ದಾರೆ. ಜೈಲು ಸೇರಿದ ಕೆಲವೇ ದಿನಗಳಲ್ಲಿ ದರ್ಶನ್ ಬರೋಬ್ಬರಿ 12 ರಿಂದ 13 ಕೆ.ಜಿ.ಯಷ್ಟು ತೂಕ ಕಳೆದುಕೊಂಡಿದ್ದಾರೆ. ನಟ ದರ್ಶನ್ ಸದಾ ಚಿಂತೆಗೆ ಬಿದ್ದು ತೂಕ ಇಳಿಕೆಯಾಗಿದೆ. ಈಗಾಗಲೇ ಬೆನ್ನು ನೋವು ಮತ್ತು ಸೊಂಟ ನೋವಿನಿಂದ ಬಳಲುತ್ತಿರುವ ಅವರಿಗೆ, ಜೈಲಿನ ವಾತಾವರಣ ಮತ್ತು ಆಹಾರವು ದೇಹಕ್ಕೆ ಹೊಂದಿಕೊಳ್ಳದೇ ಇರುವುದರಿಂದ ತೂಕ ಇಳಿಕೆಯಾಗಿದೆ. ಆದರೂ, ದರ್ಶನ್ ಅವರು ಪರಪ್ಪನ ಅಗ್ರಹಾರದ ಜೈಲಿನ ಪರಿಸರಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಕ್ವಾರಂಟೈನ್ ಸೆಲ್‌ನಲ್ಲಿರುವ ಕಾರಣ ಅವರ ದಿನಚರಿಯೇ ಸಂಪೂರ್ಣವಾಗಿ ಬದಲಾಗಿದೆ. ದರ್ಶನ್ ಮುಂಜಾನೆಯೇ ಎದ್ದು ವಾಕಿಂಗ್ ಸೇರಿದಂತೆ ಹಲವು ಕೆಲಸಗಳಲ್ಲಿ ನಿರತರಾಗಿದ್ದಾರೆ. ಕ್ವಾರಂಟೈನ್ ಸೆಲ್‌ನಲ್ಲಿ ಟಿವಿ ಸೌಲಭ್ಯ ಇಲ್ಲದಿರುವ ಕಾರಣ ದರ್ಶನ್, ಪುಸ್ತಕ ಓದುತ್ತಿದ್ದಾರೆ.

ಒಂದೂವರೆ ಕೋಟಿ ರು. ಮೌಲ್ಯದ ಮನೆ ಬರೆದಿದ್ದರೂ ತನ್ನ ಬುದ್ಧಿ ತೋರಿಸಿದ ಚಾಲಾಕಿ

ಅನ್ನ ಹಾಕಿದ ಮನೆಗೆ ಕನ್ನ: ಕೇರ್‌ಟೇಕರ್ ಸೆರೆ

ಬೆಂಗಳೂರು: ಕೇರ್ ಟೇಕರ್ ಆಗಿ ಬಂದವಳ ಹೆಸರಿಗೆ ಕೋಟ್ಯಂತರ ರು. ಮೌಲ್ಯದ ಆಸ್ತಿ ಬರೆದಿಟ್ಟು ಮಗಳಂತೆ ನೋಡಿಕೊಂಡರೂ ಮಾಲೀಕರ ಮನೆಗೇ ಕನ್ನ ಹಾಕಿದ ಯುವತಿ ಇದೀಗ ಜೈಲು ಪಾಲಾಗಿದ್ದಾಳೆ.

ಮಂಗಳಾ (32) ಬಂಧಿತ ಆರೋಪಿ. ಪಾರ್ಟಿ, ಪ್ರಿಯತಮ, ಆನ್‌ಲೈನ್ ಬೆಟ್ಟಿಂಗ್ ಸಹವಾಸದಿಂದ ಚಿನ್ನ ಕಳ್ಳತನ ಮಾಡಿದ್ದ ಈಕೆಯನ್ನು ಜೆ.ಪಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಜೆ.ಪಿ.ನಗರದ 2ನೇ ಹಂತದಲ್ಲಿ ವಾಸವಿದ್ದ ಆಶಾ ಜಾಧವ್ ಎಂಬವರು ತಮ್ಮ ತಾಯಿಯನ್ನು ನೋಡಿಕೊಳ್ಳಲು 15 ವರ್ಷದ ಹಿಂದೆ ಮಂಗಳಾ ಎಂಬಾಕೆಯನ್ನು ಕೇರ್ ಟೇಕರ್ ಆಗಿ ನೇಮಿಸಿಕೊಂಡಿದ್ದರು. ವಯೋಸಹಜ ಆರೋಗ್ಯ ಸಮಸ್ಯೆಯಿಂದ ಹಾಸಿಗೆ ಹಿಡಿದಿದ್ದ ಆಶಾ ಅವರ ತಾಯಿಯನ್ನು ಮಂಗಳಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು.

58 ವರ್ಷ ವಯಸ್ಸಿನ ಆಶಾ ಜಾಧವ್ ಅವರ ಪತಿ ಮೃತಪಟ್ಟಿದ್ದು, ದಂಪತಿಗೆ ಮಕ್ಕಳಿಲ್ಲ. ಜೆ.ಪಿ ನಗರದಲ್ಲಿ ಕೋಟ್ಯಂತರ ರುಪಾಯಿ ಮೌಲ್ಯದ ಆಸ್ತಿ ಹೊಂದಿದ್ದ ಆಶಾ ಜಾಧವ್, ಮಂಗಳಾ ಅವರನ್ನೇ ತಮ್ಮ ಸ್ವಂತ ಮಗಳಂತೆ ನೋಡಿಕೊಳ್ಳುತ್ತಿದ್ದರು. ಅಲ್ಲದೇ ಒಂದೂವರೆ ಕೋಟಿ ರು. ಮೌಲ್ಯದ ಮನೆಯನ್ನು ಮಂಗಳಾ ಹೆಸರಿಗೆ ಬರೆದಿದ್ದರು. ಮಂಗಳಾ ಹುಟ್ಟುಹಬ್ಬವನ್ನು ವಿದೇಶಕ್ಕೆ ಕರೆದೊಯ್ದು ಅದ್ಧೂರಿಯಾಗಿ ಆಚರಿಸುತ್ತಿದ್ದರು. ಅಲ್ಲದೆ ಒಳ್ಳೆಯ ಹುಡುಗನನ್ನು ನೋಡಿ ತಾನೇ ಮದುವೆ ಮಾಡಿಸುವ ಯೋಜನೆಯನ್ನೂ ಹೊಂದಿದ್ದರು. ಕೆಲ ವರ್ಷಗಳ ಹಿಂದೆ ಆಶಾ ಜಾಧವ್ ಅವರ ತಾಯಿ ಮೃತಪಟ್ಟ ಬಳಿಕ ಇರುವ ಆಸ್ತಿಯನ್ನು ತಾವು ತಾನೇ ಏನು ಮಾಡಬೇಕೆಂದು ಮಂಗಳಾ ಹೆಸರಿಗೇ ಬರೆದಿದ್ದರು.

ಆದರೆ ಆನ್‌ಲೈನ್ ಬೆಟ್ಟಿಂಗ್ ಗೀಳಿಗೆ ಬಿದ್ದಿದ್ದ ಮಂಗಳಾ, ಪ್ರಿಯತಮ ಜತೆ ಪಾರ್ಟಿ, ಪಬ್ ಅಂತ ಸುತ್ತಾಡುತ್ತಾ ಲಕ್ಷಾಂತರ ರು. ಸಾಲ ಮಾಡಿಕೊಂಡಿದ್ದಳು. ಇಷ್ಟಾದರೂ ಸಹ ಮಂಗಳಾ ಮಾಡಿಕೊಂಡಿದ್ದ 40 ಲಕ್ಷ ರು. ಸಾಲವನ್ನು ಆಶಾ ಜಾಧವ್ ಅವರೇ ತೀರಿಸಿದ್ದರು. ಅಲ್ಲದೇ ಐದು ಕೋಟಿ ರು. ಮೌಲ್ಯದ ವಾಸದ ಮನೆಯನ್ನೂ ಸಹ ಮಂಗಳಾಳ ಹೆಸರಿಗೆ ಬರೆದಿದ್ದರು. ಇತ್ತ ಆನ್‌ಲೈನ್ ಬೆಟ್ಟಿಂಗ್ ಸಹವಾಸ ಬಿಡದ ಮಂಗಳಾ ತನ್ನ ಹೆಸರಿಗೆ ಬರೆದಿದ್ದ ಮನೆಯನ್ನೂ ಮಾರಿ ಹಣ ಕಳೆದುಕೊಂಡಿದ್ದಳು. ಆದರೂ ಸಹ ಆಕೆಯನ್ನು ಜತೆಯಲ್ಲಿಟ್ಟುಕೊಂಡು ಆಶಾ ಜಾಧವ್ ಅವರೇ ಸಾಕುತ್ತಿದ್ದರು. ಆದರೆ ಆನ್‌ಲೈನ್ ಬೆಟ್ಟಿಂಗ್ ಮುಂದುವರಿಸಿದ್ದ ಮಂಗಳಾ ಮನೆಯಲ್ಲಿದ್ದ ಚಿನ್ನಾಭರಣ ಕದ್ದು, ಬೀರುವಿನ ಕೀಯನ್ನು ನಿರ್ಜನ ಪ್ರದೇಶದಲ್ಲಿ ಎಸೆದಿದ್ದಳು. ಕೀ ಕಳೆದಿರಬಹುದು ಎಂದು ಕೆಲ ದಿನಗಳ ಕಾಲ ಸುಮ್ಮನಿದ್ದ ಆಶಾ ಅವರು ದೀಪಾವಳಿ ಹಬ್ಬದ ಸಂದರ್ಭದಲ್ಲಿ ನಕಲಿ ಕೀ ಮೂಲಕ ಬೀರು ತೆಗೆಸಿದಾಗ 450 ಗ್ರಾಂ ಚಿನ್ನ ಹಾಗೂ 3 ಕೆ.ಜಿ ಬೆಳ್ಳಿ ಕಳ್ಳತನವಾಗಿರುವುದು ಬೆಳಕಿಗೆ ಬಂದಿತ್ತು.

450 ಗ್ರಾಂ ಚಿನ್ನ ಹಾಗೂ 3 ಕೆ.ಜಿ ಬೆಳ್ಳಿ ವಶಕ್ಕೆ

ಮನೆಯಲ್ಲಿ ಯಾರೋ ಅಪರಿಚಿತರು ಕಳ್ಳತನ ಮಾಡಿರಬಹುದೆಂದು ಜೆ.ಪಿ.ನಗರ ಠಾಣೆಗೆ ಆಶಾ ದೂರು ನೀಡಿದ್ದರು. ತನಿಖೆ ಕೈಗೊಂಡ ಪೊಲೀಸರು ಮಂಗಳಾಳ ಮೇಲೆ ಅನುಮಾನ ವ್ಯಕ್ತಪಡಿಸಿದ್ದರು. ಆದರೆ ಅದನ್ನೂ ಸಹ ಅಲ್ಲಗಳೆದಿದ್ದ ಆಶಾ, ಆಕೆಯ ಮೇಲೆ ಅನುಮಾನ ಪಡಬೇಡಿ, ಆಕೆ ಅಂಥವಳಲ್ಲ ಎಂದಿದ್ದರು. ಆದರೆ ಪೊಲೀಸರು ತಾಂತ್ರಿಕ ಅಂಶಗಳನ್ನು ಆಧರಿಸಿ ತನಿಖೆ ಕೈಗೊಂಡು ಮಂಗಳಾಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡಿದ್ದಾಳೆ. ಸದ್ಯ ಬಂಧಿತಳಿಂದ 450 ಗ್ರಾಂ ಚಿನ್ನ ಹಾಗೂ 3 ಕೆ.ಜಿ ಬೆಳ್ಳಿ ವಶಕ್ಕೆ ಪಡೆಯಲಾಗಿದ್ದು, ಆಕೆಯನ್ನು ನ್ಯಾಯಾಂಗ ಬಂಧನ ಕ್ಕೊಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಾಯಿಯ ಒಡವೆ ಕದ್ದ ಮಗ ಸತ್ಯ ಹೇಳಿದ ಗೆಳೆಯನ ಕೊಲೆ

ಬೆಂಗಳೂರು: ಹೆತ್ತ ತಾಯಿ ಒಡವೆಯನ್ನು ತಾನೇ ಕದ್ದು ಸತ್ಯ ಹೇಳಿದ ಸ್ನೇಹಿತನನ್ನು ಕೊಂದಿರುವ ಘಟನೆ ಕೋಣನಕುಂಟೆಯಲ್ಲಿ ನಡೆದಿದೆ.

ರಾಹುಲ್ ಕೊಲೆಯಾದ ಯುವಕ. ಪ್ರೀತಮ್ ಕೊಲೆ ಆರೋಪಿ. ಇವರಿಬ್ಬರೂ ಸ್ನೇಹಿತರು. ಒಬ್ಬ ಎಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದ. ಮತ್ತೊಬ್ಬ ಪಿಯುಸಿ ಡ್ರಾಪ್‌ಔಟ್ ಆಗಿದ್ದ. ಕೋಣನಕುಂಟೆಯ ಕೃಷ್ಣಪ್ಪ ಲೇಔಟ್‌ನಲ್ಲಿ ಪ್ರೀತಮ್ ಮನೆಯಿದೆ. ಇಲ್ಲಿಗೆ ಪ್ರತಿ ದಿನ ರಾಹುಲ್ ಬರುತ್ತಿದ್ದ. ಇಬ್ಬರೂ ಜತೆಯಲ್ಲಿ ಊಟ ಮಾಡುತ್ತಿದ್ದರು. ಕಾಲ ಕಳೆಯುತ್ತಿದ್ದರು. 25 ರಂದು ಮನೆಯಲ್ಲಿ ಪ್ರೀತಂನ ತಾಯಿಯ ಚಿನ್ನದ ಒಡವೆಗಳು ಕಳ್ಳತನವಾಗಿದೆ. ಮನೆಯಲ್ಲಿ ಎಷ್ಟೇ ಹುಡುಕಿದರೂ ಸಿಕ್ಕಿರಲಿಲ್ಲ. ಇಬ್ಬರು ಕೂಡ ಒಬ್ಬರ ಮೇಲೆ ಒಬ್ಬರು ಹೇಳಿದ್ದಾರೆ. ಆದರೆ, ಪ್ರೀತಮ್‌ನಲ್ಲಿ ಚಿನ್ನದ ಒಡವೆಗಳನ್ನು ನೋಡಿದ ರಾಹುಲ್, ಅವರ ತಾಯಿಯ ಬಳಿ ಹೇಳಿದ್ದಾನೆ. ಇದರಿಂದ ಸಿಟ್ಟಾದ ಪ್ರೀತಮ್ ನಿನ್ನ ಬಳಿ ಮಾತನಾಡಬೇಕು ಎಂದು ರಾಹುಲ್‌ನ ಕರೆಸಿಕೊಂಡು ಜಗಳ ಮಾಡಿ ಚಾಕುವಿನಿಂದ ಇರಿದಿದ್ದಾನೆ. ಜತೆಯಲ್ಲಿ ಬಂದಿದ್ದ ಸ್ನೇಹಿತರು ಗಾಯಾಳುವನ್ನು ಮಣಿಪಾಲ ಆಸ್ಪತ್ರೆಗೆ ಸೇರಿಸಿದ್ದಾರೆ. ಚಿಕಿತ್ಸೆ ಫಲಕಾರಿಯಾಗದೆ ರಾಹುಲ್ ಮೃತಪಟ್ಟಿದ್ದಾನೆ. ಘಟನೆ ಸಂಬಂಧ ಕೋಣನಕುಂಟೆ ಠಾಣೆಯಲ್ಲಿ ದೂರು ದಾಖಲಾಗಿದ್ದು, ಆರೋಪಿಯನ್ನು ವಶಕ್ಕೆ ಪಡದಿದ್ದಾರೆ. ತನ್ನ ಮನೆಯಲ್ಲಿ ತಾನೇ ಒಡವೆಗಳನ್ನು ಕಳ್ಳತನ ಮಾಡಿದ್ದ ಪ್ರೀತಂ ಸಿಕ್ಕಿ ಹಾಕಿಕೊಂಡಿದ್ದಲ್ಲದೇ, ಈ ವಿಚಾರವನ್ನು ಅಮ್ಮನ ಬಳಿ ಮತ್ತು ಸ್ನೇಹಿತರ ಬಳಿ ಹೇಳಿ ಮರ್ಯಾದೆ ತೆಗೆದಿದ್ದಾನೆ ಎಂದು ಕೋಪಗೊಂಡು ರಾಹುಲ್‌ನ ಕೊಲೆ ಮಾಡಿದ್ದಾನೆ

ಎನ್‌ಐಎ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆ

ಸುಹಾಸ್ ಶೆಟ್ಟಿ ಕೊಲೆ ಪೂರ್ವಯೋಜಿತ

ಬೆಂಗಳೂರು/ಮಂಗಳೂರು: ರಾಜ್ಯಾದ್ಯಂತ ತೀವ್ರ ಸಂಚಲನ ಮೂಡಿಸಿದ್ದ ಬಜರಂಗದಳ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ಎನ್‌ಐಎ ಚಾರ್ಜ್‌ಶೀಟ್ ಸಲ್ಲಿಸಿದೆ. ಸುಹಾಸ್ ಶೆಟ್ಟಿ ಹತ್ಯೆ ಪೂರ್ವಯೋಜಿತವಾಗಿದೆ. ಹತ್ಯೆ ದಿನ ಸುಹಾಸ್ ಶೆಟ್ಟಿಯನ್ನು ಅಟ್ಟಾಡಿಸಿಕೊಂಡು ಹತ್ಯೆ ಮಾಡಲಾಗಿದೆ ಎಂಬ ವಿಚಾರಗಳು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ.

ದಕ್ಷಿಣ ಕನ್ನಡದ ಬಜ್ಪೆಯ ಕಿನ್ನಿಪದವು ಜಂಕ್ಷನ್ ಬಳಿ 2025ರ ಮೇ 1ರಂದು ಸುಹಾಸ್ ಶೆಟ್ಟಿ ಹತ್ಯೆಯಾಗಿತ್ತು. ಹಿಂದೂ ಕಾರ್ಯಕರ್ತ, ಬಜರಂಗ ದಳದ ಸದಸ್ಯ ಸುಹಾಸ್ ಶೆಟ್ಟಿ ಕಾರನ್ನು ಪಿಕಪ್ ಟ್ರಕ್‌ನಿಂದ ಹೊಡೆದು ಅಟ್ಟಿಸಿಕೊಂಡು ಹೋದ ದುಷ್ಕರ್ಮಿಗಳು, ಚೂರಿ, ಕತ್ತಿ ಸಹಿತ ಬರ್ಬರವಾಗಿ ಕೊಂದಿದ್ದರು. ಇತರ 5 ಸಹಚರರಲ್ಲಿ ಒಬ್ಬರು ಗಾಯಗೊಂಡಿದ್ದರು.

ಬಜರಂಗ ದಳದ ಜಾತ್ಯತೀತ ಕಾರ್ಯಕರ್ತರಾಗಿ ಗೋರಕ್ಷಣೆ, ಲವ್ ಜಿಹಾದ ವಿರುದ್ಧ ಹೋರಾಟಗಳನ್ನು ಮಾಡಿಕೊಂಡ ಸುಹಾಸ್, 2022ರ ಜುಲೈ 28ರಂದು ಸುರತ್ಕಲ್‌ನಲ್ಲಿ ಮೊಹಮ್ಮದ್ ಫಝಿಲ್ ಕೊಲೆಯ ಮುಖ್ಯ ಆರೋಪಿಯಾಗಿ ಜೈಲಿನಿಂದ ಬೇಲ್ ಮೇಲೆ ಬಿಡುಗಡೆಯಾಗಿದ್ದರು. ಫಝಿಲ್ ಕೊಲೆಯು ಬಿಜೆಪಿ ಯುವ ಮೋರ್ಚಾ ನಾಯಕ ಪ್ರವೀಣ್ ನೆಟ್ಟಾರು ಕೊಲೆಗೆ ಪ್ರತೀಕಾರವಾಗಿತ್ತು. ಈ ಸುದೀರ್ಘ ಸಂಘರ್ಷದಲ್ಲಿ ಸುಹಾಸ್ ಗುರಿಯಾಗಿದ್ದರು. ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಭೀಕರ ಹತ್ಯೆ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ ಮಹತ್ವದ ಹೆಜ್ಜೆ ಇಟ್ಟಿದೆ. ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹನ್ನೊಂದು ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದೆ. 2023ರ ಮೇ 1 ರಂದು ಮಂಗಳೂರು ಬಳಿ ನಡೆದ ಈ ಭೀಕರ ಕೊಲೆ ಪ್ರಕರಣವು ರಾಜ್ಯವ್ಯಾಪಿ ಸಂಚಲನ ಸೃಷ್ಟಿಸಿತ್ತು. ತನಿಖೆ ಪ್ರಕಾರ, ಈ ಕೊಲೆ ಯಾವುದೇ ತುರ್ತು ಕೃತ್ಯವಲ್ಲ, ಬದಲಿಗೆ ಪೂರ್ವಯೋಜಿತ ಸಂಚಾಗಿದ್ದು, ಸಮಾಜದಲ್ಲಿ ಭಯ ಹುಟ್ಟಿಸುವ ಉದ್ದೇಶದಿಂದಲೇ ನಡೆದಿದೆ ಎಂದು ಉಲ್ಲೇಖಿಸಲಾಗಿದೆ.

ಹಲವಾರು ತಿಂಗಳಿನಿಂದ ಸುಹಾಸ್ ಟಾರ್ಗೆಟ್

ತನಿಖೆಯಲ್ಲಿ ಹಂತಕರು ಹಲವಾರು ತಿಂಗಳುಗಳ ಕಾಲ ಸುಹಾಸ್ ಶೆಟ್ಟಿ ನಿಗಾ ಇಟ್ಟಿದ್ದರು. ಬಳಿಕ ಅವರ ಕಾರು ಹಿಂಬಾಲಿಸಿ ಕೊಲೆ ನಡೆಸಿದ್ದ ವಿಚಾರ ಬೆಳಕಿಗೆ ಬಂದಿದೆ. ಹಲ್ಲೆ ನಡೆಸಿದಾಗ ಸುಹಾಸ್ ಶೆಟ್ಟಿ ಪ್ರಾಣ ಉಳಿಸಿಕೊಳ್ಳಲು ಓಡಿದ್ದರು. ಈ ವೇಳೆ ಅವರನ್ನು ಅಟ್ಟಾಡಿಸಿಕೊಂಡರೂ ಕೊಲೆಗಾರರು ಯಾವುದೇ ದಯೆ ತೋರಿಲ್ಲ ಎಂದು ದಾಖಲೆಗಳು ಹೇಳುತ್ತವೆ. ಈ ಸಂಚು ಪಿಎಫ್‌ಐ ಸಂಘಟನೆಯ ಸದಸ್ಯರ ನೇತೃತ್ವದಲ್ಲಿ ಸಂಚು ರೂಪಿಸಲಾಗಿತ್ತು. ಆರೋಪಿಗಳ ಪೈಕಿ ಶಫಿ, ನಾಗ, ಅಪ್ಪು, ರಂಜಿತ್, ರಿಜ್ವಾನ್, ಅಜರ್, ಖಾದರ್ ಹಾಗೂ ಅಬ್ದುಲ್ ರಜಾಕ್ ಸೇರಿ ಹನ್ನೊಂದು ಮಂದಿಯ ಹೆಸರುಗಳು ಉಲ್ಲೇಖಗೊಂಡಿವೆ.

ಬಿಲ್ ಕಟ್ಟುವ ವಿಚಾರಕ್ಕೆ ಗಲಾಟೆ, ಕೊಲೆಯಲ್ಲಿ ಅಂತ್ಯ

ಹುಟ್ಟುಹಬ್ಬ ಆಚರಿಸಲು ಬಂದವ ಕೊಲೆ

ಬೆಂಗಳೂರು: ಹುಟ್ಟುಹಬ್ಬ ಆಚರಿಸಲು ಬಂದ ದಿನವೇ ಪಾರ್ಟಿಯ ಬಿಲ್ ಕಟ್ಟುವ ವಿಚಾರಕ್ಕೆ ಗಲಾಟೆ ನಡೆದು, ಅದೇ ಜಗಳ ಕೊಲೆಯಲ್ಲಿ ಅಂತ್ಯವಾಗಿರುವ ಬೆಂಗಳೂರು ಹೊರವಲಯದ ಜಿಗಣಿ ಪೊಲೀಸ್ ಠಾಣಾ ವ್ಯಾಪ್ತಿಯ ವಡ್ಡರಪಾಳ್ಯದಲ್ಲಿ ನಡೆದಿದೆ.

ಅ.16ರಂದು ಸಂದೀಪ್‌ನ ಹುಟ್ಟುಹಬ್ಬವಿತ್ತು. ಆ ದಿನ ಸ್ನೇಹಿತರ ಜತೆ ಪಾರ್ಟಿ ಮಾಡಲು ಕುಂಬಾರನಹಳ್ಳಿ ಸಮೀಪದ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಹೋಗಿದ್ದರು. ಅಲ್ಲಿ ಕೇಕ್ ಕಟ್ ಮಾಡಿ, ಬಳಿಕ ಸ್ನೇಹಿತರೆಲ್ಲ ಸೇರಿಕೊಂಡು ಎಣ್ಣೆ ಪಾರ್ಟಿ ಮಾಡಿ ಕಂಠಪೂರ್ತಿ ಕುಡಿದಿದ್ದರು. ಕೊನೆಯಲ್ಲಿ ಬಿಲ್ ಕಟ್ಟುವಾಗ ಸಂದೀಪ್ ನನ್ನ ಬಳಿ ಅಷ್ಟೊಂದು ಹಣ ಇಲ್ಲ ಎಂದಿದ್ದ. ಆಗ ಸಂದೀಪ್ ಮತ್ತು ಸಂತೋಷ್ ನಡುವೆ ಗಲಾಟೆ ಆಗಿದೆ.

ಅಲ್ಲಿದ್ದ ಉಳಿದ ಸ್ನೇಹಿತರು ಜಗಳ ಬಿಡಿಸಿ ಇಬ್ಬರನ್ನು ಕಳುಹಿಸಿದ್ದರು. ಆದರೆ ಮನೆಗೆ ಹೋಗದ ಸಂದೀಪ್ ಅಲ್ಲಿಂದ ಊರಿನ ಬಳಿಯಿರುವ ವಾಲಿಬಾಲ್ ಕೋರ್ಟ್‌ಗೆ ಎಣ್ಣೆ ಹಾಕಲು ಹೋಗಿದ್ದ. ವಿಚಾರ ತಿಳಿದ ಸಂತೋಷ್ ಮತ್ತು ಸಾಗರ್ ಅಲ್ಲಿಗೆ ಹೋಗಿ ಏಕಾಏಕಿ ಸಂದೀಪ್ ಮೇಲೆ ಹಲ್ಲೆ ನಡೆಸಿದ್ದರು. ಆಗ ಸಂದೀಪ್ ಅಲ್ಲಿಂದ ಜಿಗಣಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿ, ಮನೆಗೆ ಬಂದಿದ್ದ. ಗಲಾಟೆಯ ಬಳಿಕ ಮನೆಯಲ್ಲಿದ್ದ ಸಂದೀಪ್‌ಗೆ ವಾಂತಿ, ತಲೆನೋವು ಶುರುವಾಗಿದೆ. ತಲೆಯೊಳಗೆ ರಕ್ತ ಹೆಪ್ಪುಗಟ್ಟಿ ಮೆದುಳಿಗೆ ಪೆಟ್ಟು ಬಿದ್ದಿತ್ತು. ಹತ್ತಿರದ ಕ್ಲಿನಿಕ್‌ಗೆ ಹೋಗಿ ಇಂಜೆಕ್ಷನ್ ತೆಗೆದುಕೊಂಡು ಬಂದು ಮನೆಯಲ್ಲಿ ಮಲಗಿದ್ದ. ಮತ್ತೆ ಒಂದು ದಿನದ ಬಳಿಕ ಅದೇ ರೀತಿ ತಲೆ ನೋವು, ವಾಂತಿ ಶುರುವಾಗಿತ್ತು. ಬಳಿಕ ಖಾಸಗಿ ಆಸ್ಪತ್ರೆಗೆ ಬಂದಿದ್ದ ಸಂದೀಪ್‌ಗೆ ಚಿಕಿತ್ಸೆ ನೀಡಿದ ವೈದ್ಯರು, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಸೆಂಟ್ ಜಾನ್ ಆಸ್ಪತ್ರೆಗೆ ಕಳುಹಿಸಿದ್ದರು.

ಅಲ್ಲಿನ ವೈದ್ಯರು ಪರೀಕ್ಷೆ ನಡೆಸಿದಾಗ ಸಂದೀಪ್ ತಲೆಗೆ ಗಂಭೀರ ಗಾಯವಾಗಿರುವುದು ತಿಳಿದಿದೆ. ಅಲ್ಲಿಂದ ಮಡಿವಾಳದ ಕಾವೇರಿ ಆಸ್ಪತ್ರೆಗೆ ಶಿಫ್ಟ್ ಮಾಡಿ, ಚಿಕಿತ್ಸೆ ನೀಡಲಾಗುತ್ತಿತ್ತು. ಸಂಪೂರ್ಣ ಪ್ರಜ್ಞೆ ಕಳೆದುಕೊಂಡು ಕೋಮಾಗೆ ತಲುಪಿದ ಸಂದೀಪ್ ಚಿಕಿತ್ಸೆ ಫಲಕಾರಿಯಾಗದೇ ಅ.28ರಂದು ಸಾವನ್ನಪ್ಪಿದ್ದಾನೆ. ಮಗನ ಸಾವಿನ ವಿಷಯ ತಿಳಿದು ಪೋಷಕರ ಆಕ್ರಂದನ ಮುಗಿಲು ಮುಟ್ಟಿದ್ದು, ಸೂಕ್ತ ತನಿಖೆ ನಡೆಸಿ ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರೆ. ಈ ಕುರಿತು ಮೃತ ಸಂದೀಪ್ ತಂದೆ ಜಿಗಣಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಗಳಾದ ಸಂತೋಷ್ ಮತ್ತು ಸಾಗರ್ ಇಬ್ಬರನ್ನು ಬಂಧಿಸಿ, ಪರಪ್ಪನ ಅಗ್ರಹಾರ ಜೈಲಿಗಟ್ಟಿದ್ದಾರೆ.

ಅಪರಾಧ ಸುದ್ದಿಗಳು

ಅಪರ ಸಾರಿಗೆ ಆಯುಕ್ತರ ದಾಳಿ; 63 ವಾಹನ ಜಪ್ತಿ

ಬೆಂಗಳೂರು: ಬೆಂಗಳೂರು ಮತ್ತು ಹೊರ ವಲಯಗಳಲ್ಲಿ ಅಪರ ಸಾರಿಗೆ ಆಯುಕ್ತರ ನೇತೃತ್ವದಲ್ಲಿ ಒಟ್ಟು 12 ತಂಡಗಳನ್ನು ರಚಿಸಿಕೊಂಡು ವಿಶೇಷ ತಪಾಸಣೆಯನ್ನು ನಡೆಸಿ 63 ವಾಹನಗಳನ್ನು ಜಪ್ತಿ ಮಾಡಲಾಗಿದೆ.

ಅ.24ರಿಂದ 30ರವರೆಗೆ ಅತ್ತಿಬೆಲೆ ಹಾಗೂ ದೇವನಹಳ್ಳಿ ಸಮೀಪದಲ್ಲಿ ಕಾರ್ಯಚರಣೆ ಕೈಗೊಂಡು ಪ್ರಯಾಣಿಕರ ಸುರಕ್ಷತಾ ಅಂಶಗಳಾದ ತುರ್ತು ನಿರ್ಗಮನ ವ್ಯವಸ್ಥೆ, ಬೆಂಕಿ ನಂದಿಸುವ ಸಾಧನ, ಪ್ರಥಮ ಚಿಕಿತ್ಸೆ ಪೆಟ್ಟಿಗೆ ಹಾಗೂ ಪ್ರಯಾಣಿಕರ ವಾಹನಗಳಲ್ಲಿ ಅನಧಿಕೃತವಾಗಿ ಸಾಗಿಸುತ್ತಿದ್ದ ಸರಕುಗಳ ವಿರುದ್ಧ ವಿಶೇಷ ಕಾರ್ಯಚರಣೆ ನಡೆಸಲಾಗಿದೆ. ತೆರಿಗೆ ಪಾವತಿಸದೇ ಮತ್ತು ರಹದಾರಿ ಉಲ್ಲಂಘನೆಗೆ ಸಂಬಂಧಿಸಿದಂತೆ ಒಟ್ಟು ಸುಮಾರು 380ಕ್ಕೂ ಹೆಚ್ಚು ಖಾಸಗಿ ಬಸ್‌ಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಂಡು, ಸುಮಾರು 63 ವಾಹನಗಳನ್ನು ಜಪ್ತಿ ಮಾಡಲಾಗಿದೆ. ಈ ವಿಶೇಷ ಕಾರ್ಯಚರಣೆಯ ಸಂದರ್ಭದಲ್ಲಿ ವಾಹನಗಳನ್ನು ಜಪ್ತಿಗೊಳಿಸುವಾಗ ವಾಹನದಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್‌ಗಳನ್ನು ವ್ಯವಸ್ಥೆಗೊಳಿಸಿ, ಪ್ರಯಾಣಿಕರಿಗೆ ಅನುಕೂಲವನ್ನು ಕಲ್ಪಿಸಲಾಯಿತು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇಲಾಖೆಯ ಆಯುಕ್ತರು ಮಾಹಿತಿ ನೀಡಿದ್ದಾರೆ. ಪ್ರಯಾಣಿಕರ ವಾಹನಗಳಲ್ಲಿ ಸರಕು ಸಾಗಿಸುತ್ತಿರುವ ಬಗ್ಗೆ ವಾಹನದ ಮಾಲೀಕರಿಗೆ ಹಾಗೂ ಸಿಬ್ಬಂದಿಗೆ ಅನಧಿಕೃತ ಸರಕು ಸಾಗಿಸದಂತೆ ಜಾಗೃತಿಯನ್ನೂ ಸಹ ಮೂಡಿಸಲಾಯಿತು. ಕಾರ್ಯಚರಣೆ ವೇಳೆಯ ಸಂದರ್ಭದಲ್ಲಿ ಸರಕುಸಾಗಣಿಕೆ ಹಾಗೂ ರಹದಾರಿ ಉಲ್ಲಂಘನೆ ಪ್ರಕರಣ ದಾಖಲಿಸಿ, ಅರ್ಹತಾ ಪತ್ರ, ನೋಂದಣಿ ಪತ್ರದ ಅಮಾನತ್ತಿನ ಕುರಿತು ಕ್ರಮಕೈಗೊಳ್ಳಲಾಗುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ.

IN THE COURT OF THE SENIOR CIVIL JUDGE AND JMFC AT BAGEPALLI
O.S. No. 386/2023
BETWEEN : I.R. Ibrahim, S/o S.I. Raja Mohamed. Aged about 49 years, R/at No. 201, Richards Apartment, No.21, Kandaswamy Mudaliyar Street, Richards Town, Bengaluru-560005.
...Plaintiff
AND : Sri. Y.N. Narayanachary and others
...Defendants
SUMMONS TO LR's OF DEFENDANT No. 2
D2 (a) Tharishnu, S/o late Y.N. Mahesh Kumar, Aged about 21 years, presently R/at No. 91, Charutha Nilaya, GF-1, Ground Floor, Pratham Rohith Raghavi Apartment, 2nd Main & ISRO Layout, Bengaluru-560111.
Whereas the plaintiff has filed the suit against you and others for relief of specific performance of sale agreement dated 24-01-2022 and for consequential reliefs. You are here by summoned to appear before the Court either in person or by a pleader **on 6th day of December 2025 at 11.00 AM** to defend the above case, failing which the matter will be heard and decided in your absence.
SCHEDULE
All piece and parcel of the house property bearing Municipal Assessment No. 14, PID No. 13-511-5, situated at behind KEB, Ward No. 13, present Ward No. 23, Kasaba Hobli, Bagepalli Town & Taluk, Chikkaballapura Dist., measuring about East to West 24.0 feet and North to South 34.6 totally measuring about 830.4 feet along with two floors RCC building and bounded on:- **East by :** Road, **West by :** Property bearing No. 1846, **North by :** 24 feet X 11.6 feet passage leading to Site No. 1846 belongs to Bharath C., **South by :** House belongs to Smt. Alamelamma.
Given under my hand and seal of the Court. This is the 28th day of October 2025.
By order of the Court, Sheristedar,
Court of Civil Judge & J.M.F.C., Bagepalli.
ABIJITH .M.M, Advocate
JITH'S LAW CHAMBER
#33, 1st Floor, CBI Main Road Opp. More Super Market, R.T. Nagar, Bengaluru-560032.
Mob. 9880172400, 8618462560

ಮಗಳ ಶವಸಂಸ್ಕಾರಕ್ಕೆ ಲಂಚ ಕೇಳಿದ ಇಬ್ಬರ ಅಮಾನತು

ಬೆಂಗಳೂರು: ಮಗಳ ಸಾವಿನ ನೋವಿನಲ್ಲಿದ್ದರೂ ಸಹ ಆಂಬ್ಯುಲೆನ್ಸ್, ಬೆಳ್ಳಂದೂರು ಠಾಣೆಯ ಪೊಲೀಸ್ ಸಿಬ್ಬಂದಿ, ಮರಣ ಪ್ರಮಾಣಪತ್ರ ಪಡೆಯಲು ಪಾಲಿಕೆ ಸಿಬ್ಬಂದಿ ಮತ್ತು ಶವಸಂಸ್ಕಾರದವರೆಗೆ ಪ್ರತೀ ಹಂತದಲ್ಲಿಯೂ ಬೆಂಗಳೂರಿನಲ್ಲಿ ಲಂಚ ನೀಡಬೇಕಾಯಿತು ಎಂದು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್‌ನ (ಬಿಪಿಸಿಎಲ್) ನಿವೃತ್ತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಎಫ್‌ಒ) ಶಿವಕುಮಾರ್ ಕೆ.ಎಂಬುವವರು ಸಾಮಾಜಿಕ ಜಾಲತಾಣ ಲಿಂಕ್ಡ್‌ಇನ್‌ನಲ್ಲಿ ಪೋಸ್ಟ್ ಮಾಡಿ ವಿವರಿಸಿದ್ದಾರೆ.

ಮಾಜಿ ಸಿಎಫ್‌ಒ ಶಿವಕುಮಾರ್ ಅವರ ಪೋಸ್ಟ್: 34 ವರ್ಷದ ತಮ್ಮ ಏಕೈಕ ಪುತ್ರಿ, ಅಕ್ಷಯಾ ಬ್ರೈನ್ ಹ್ಯಾಮರೇಜ್ ಕಾರಣದಿಂದ ಇತ್ತೀಚಿಗೆ ಮೃತಪಟ್ಟಿದ್ದಳು. ಆ ಸಂದರ್ಭದಲ್ಲಿ ಶವ ಸಾಗಿಸಲು ಆಂಬ್ಯುಲೆನ್ಸ್ ವಾಹನಕ್ಕೆ ಲಂಚ ನೀಡಬೇಕಾಯಿತು. ಮಗಳ ಶವದ ಮರಣೋತ್ತರ ಪರೀಕ್ಷೆ ನಡೆಸಿ ವರದಿ ನೀಡಲು ಕೂಡಾ ಲಂಚ ಕೇಳಿದರು. ಎಫ್‌ಐಆರ್ ದಾಖಲಿಸಿಕೊಳ್ಳಲು ಬೆಳ್ಳಂದೂರು ಠಾಣೆಯ ಪೊಲೀಸರು ಲಂಚ ಕೇಳಿದರು. ಬೆಳ್ಳಂದೂರು ಠಾಣೆಯ ಇನ್ಸ್‌ಪೆಕ್ಟರ್ ಅಹಂಕಾರದಿಂದ ವರ್ತಿಸಿದರು. ಶವ ಸಂಸ್ಕಾರ ಮಾಡಲು ಚಿತಾಗಾರಕ್ಕೆ ಹೋದಾಗ ಅಲ್ಲಿಯೂ ಲಂಚ ನೀಡಬೇಕಾಯಿತು. ಮಗಳ ಡೆತ್ ಸರ್ಟಿಫಿಕೇಟ್ ಪಡೆಯಲು ಕೂಡಾ ಪಾಲಿಕೆಯ ಅಧಿಕಾರಿಗಳಿಗೂ ಲಂಚ ಕೊಡಬೇಕಾಯಿತು. ಮಗಳನ್ನು ಕಳೆದುಕೊಂಡ ತಂದೆಯ ಬಗ್ಗೆ ಯಾರೊಬ್ಬರಿಗೂ ಸಹಾನುಭೂತಿ ಇರಲಿಲ್ಲ. ನನ್ನ ಬಳಿ ಕೊಡಲು ಹಣವಿತ್ತು. ಆದರೆ ಬಡವರು ಏನು ಮಾಡುತ್ತಾರೆ? ಎಂದು ಶಿವಕುಮಾರ್ ಬರೆದಿದ್ದಾರೆ.

ಕಾನ್‌ಸ್ಟೆಬಲ್ ಪಿಎಸ್‌ಐ ಅಮಾನತು

ಶಿವಕುಮಾರ್ ಅವರ ಪೋಸ್ಟ್ ವೈರಲ್ ಆಗುತ್ತಿದ್ದಂತೆ ಬೆಳ್ಳಂದೂರು ಠಾಣೆಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ (ಪಿಎಸ್‌ಐ) ಸಂತೋಷ್, ಕಾನ್‌ಸ್ಟೆಬಲ್ ಗೋರಕ್‌ನಾಥ್ ಅವರನ್ನು ಅಮಾನತುಗೊಳಿಸಿ ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಕೆ.ಪರಶುರಾಮ ಆದೇಶಿಸಿದ್ದಾರೆ.

ಆನ್‌ಲೈನ್ ಡೇಟಿಂಗ್ ಹೆಸರಲ್ಲಿ ವಂಚನೆ

ಬೆಂಗಳೂರು: ಆನ್‌ಲೈನ್ ಡೇಟಿಂಗ್ ಹೆಸರಲ್ಲಿ ವಂಚನೆಗೆ ಒಳಗಾಗಿ 63 ವರ್ಷದ ವ್ಯಕ್ತಿಯೊಬ್ಬ ಲಕ್ಷ ಲಕ್ಷ ಹಣ ಕಳೆದುಕೊಂಡಿರುವ ಘಟನೆ ಬೆಳಕಿಗೆ ಬಂದಿದೆ.

ನಗರದ ಹೊರಮಾವು ನಿವಾಸಿಗೆ ಹೈ-ಪ್ರೊಫೈಲ್ ಮಹಿಳೆಯರೊಂದಿಗೆ ಸಂಪರ್ಕ ಮಾಡಿಸುವ ಆಸೆ ತೋರಿಸಿ ವಂಚಕರು ಬರೋಬ್ಬರಿ 32 ಲಕ್ಷಕ್ಕಿಂತ ಅಧಿಕ ಹಣವನ್ನು ದೋಚಿದ್ದಾರೆ. ಅಂತಿಮವಾಗಿ ತಾನು ಮೋಸ ಹೋಗಿದ್ದೇನೆ ಎಂದು ಅರಿತ ವ್ಯಕ್ತಿ ಈ ಬಗ್ಗೆ ದೂರು ದಾಖಲಿಸಿದ್ದಾರೆ. ಸಿಇಎನ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದಾಖಲಾದ ದೂರಿನ ಪ್ರಕಾರ, ಸೆಪ್ಟೆಂಬರ್ 5ರಿಂದ ಅಕ್ಟೋಬರ್ 18ರ ಅವಧಿಯಲ್ಲಿ ಈ ವಂಚನೆ ನಡೆದಿದೆ. ವಂಚನೆಗೊಳಗಾದ ವ್ಯಕ್ತಿಗೆ ಡೇಟಿಂಗ್ ಸೇವೆ ಹೆಸರಲ್ಲಿ ಕರೆ ಬಂದಿದ್ದು, ಮಹಿಳೆಯರ ಜತೆ ಭೇಟಿ ಮಾಡಿಸುವ ಬಗ್ಗೆ ತಿಳಿಸಲಾಗಿದೆ. ಅಲ್ಲದೆ, ನೋಂದಣಿ ಶುಲ್ಕ ಎಂದು 1,950 ರು. ಆನ್‌ಲೈನ್ ಮೂಲಕ ವಂಚಕರು ಪಾವತಿ ಮಾಡಿಸಿಕೊಂಡಿದ್ದಾರೆ. ಬಳಿಕ ವಾಟ್ಸ್‌ಆಪ್‌ನಲ್ಲಿ ಮೂವರು ಮಹಿಳೆಯರ ಫೋಟೋ ಕಳುಹಿಸಲಾಗಿದ್ದು, ಆ ಪೈಕಿ ಒಬ್ಬರನ್ನು ವ್ಯಕ್ತಿ ಆಯ್ಕೆ ಮಾಡಿದ್ದರು. ಅವರು ಆಯ್ಕೆ ಮಾಡಿದ್ದ ರಿತಿಕಾ ಹೆಸರಿನ ಮಹಿಳೆಯ ದೂರವಾಣಿ ಸಂಖ್ಯೆಯನ್ನ ಶೇರ್ ಮಾಡಲಾಗಿತ್ತು. ಬಳಿಕ ರಿತಿಕಾ ಮತ್ತು ವ್ಯಕ್ತಿಯ ನಡುವೆ ಸಂವಹನ ಆರಂಭವಾಗಿದ್ದು, ಆತ್ಮೀಯತೆಯೂ ಬೆಳೆದಿತ್ತು. ನಿಮ್ಮನ್ನು ಬೇಗ ಭೇಟಿಯಾಗುವುದಾಗಿ ರಿತಿಕಾ ಕೂಡ ತಿಳಿಸಿದ್ದಳು ಎನ್ನಲಾಗಿದೆ. ಲಕ್ಷಾಂತರ ರು. ಪಾವತಿ ಬಳಿಕವೂ ಪ್ರೀತಿ ಹೆಸರಿನಲ್ಲಿ ವರಸೆ ತೆಗೆದು ಹಣ ಕೇಳುತ್ತಿದ್ದಳು. ಆಗ ಹಣ ನೀಡಲು ವ್ಯಕ್ತಿ ನಿರಾಕರಿಸಿದ್ದು, ಈ ವೇಳೆ ಕಾನೂನು ಕ್ರಮದ ಬೆದರಿಕೆ ಹಾಕಿದ್ದಾಳೆ. ಹೀಗಾಗಿ ತಾನು ವಂಚನೆಗೆ ಒಳಗಾದ ಬಗ್ಗೆ ವ್ಯಕ್ತಿಗೆ ಜ್ಞಾನೋದಯವಾಗಿದ್ದು, ಅಷ್ಟರಲ್ಲಿ 32.2 ಲಕ್ಷ ರು. ಕಳೆದುಕೊಂಡಿದ್ದರು.

61 ನಿಮಿಷಗಳಲ್ಲಿ ಮೆಟ್ರೋ ಮೂಲಕ ಶ್ವಾಸಕೋಶ ಸಾಗಾಟ

ಬೆಂಗಳೂರು: ನಮ್ಮ ಮೆಟ್ರೋದ ಹಸಿರು ಮತ್ತು ಹಳದಿ ಮಾರ್ಗವನ್ನು ಬಳಸಿಕೊಂಡು ಯಶವಂತಪುರದಿಂದ ನಾರಾಯಣ ಹೆಲ್ತ್ ಸಿಟಿಗೆ ವೈದ್ಯಕೀಯ ತಂಡವು ಕೇವಲ 61 ನಿಮಿಷಗಳಲ್ಲಿ ಶ್ವಾಸಕೋಶ ಸೇರಿದಂತೆ ಅಂಗಾಂಗವನ್ನು ತಲುಪಿಸಿದ್ದು, ವೈದ್ಯರ ತಂಡದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ನಮ್ಮ ಮೆಟ್ರೋ ಮೂಲಕ ಈ ಹಿಂದೆ ಹೃದಯ ಸೇರಿದಂತೆ ಅಂಗಾಂಗ ಸಾಗಾಟ ಮಾಡಲಾಗಿದೆ. ಇದೀಗ ಶ್ವಾಸಕೋಶ ಸಾಗಾಟ ಮಾಡಲಾಗಿದೆ. ಸಂಚಾರ ದಟ್ಟಣೆಯ ಹಿನ್ನೆಲೆ ಮೆಟ್ರೋವನ್ನು ಆಯ್ಕೆ ಮಾಡಿಕೊಂಡ ವೈದ್ಯರು ಯಶವಂತಪುರದಿಂದ ಆರ್.ವಿ ರಸ್ತೆವರೆಗೆ ಹಸಿರು ಮಾರ್ಗ ಹಾಗೂ ಆ ಬಳಿಕ ಆರ್.ವಿ ರೋಡ್ ಟು ಬೊಮ್ಮಸಂದ್ರವರೆಗೆ ಹಳದಿ ಮಾರ್ಗದಲ್ಲಿ ಸಂಚಾರ ನಡೆಸಿದ್ದಾರೆ. ಕೇವಲ 61 ನಿಮಿಷದಲ್ಲಿ ಶ್ವಾಸಕೋಶವನ್ನು ವೈದ್ಯರ ತಂಡ ನಾರಾಯಣ ಹೆಲ್ತ್ ಸಿಟಿಗೆ ರವಾನಿಸುವಲ್ಲಿ ಯಶಸ್ವಿಯಾಗಿದೆ. ಬಿಎಂಆರ್‌ಸಿಎಲ್ ಮತ್ತು ವೈದ್ಯಕೀಯ ತಂಡದ ಸಹಯೋಗದಲ್ಲಿ ನಡೆದ ಕಾರ್ಯಾಚರಣೆ ಯಶಸ್ವಿಯಾಗಿದೆ. ಸದ್ಯ ವೈದ್ಯರ ತಂಡದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಮೆಟ್ರೋ ಮೂಲಕ ಯಶಸ್ವಿಯಾಗಿ ಹಾರ್ಟ್ ಶಿಫ್ಟಿಂಗ್: ನಮ್ಮ ಮೆಟ್ರೋ ರೈಲಿನ ಮೂಲಕ ಇತ್ತೀಚೆಗೆ ಯಶಸ್ವಿಯಾಗಿ ಹೃದಯವನ್ನೂ ಸಾಗಿಸಲಾಗಿದ್ದು, ಶ್ವಾಸಕೋಶದ ಸಾಗಾಟದ ಮೂಲಕ ಇದು ಎರಡನೇ ಬಾರಿ ಯಶಸ್ವಿಯಾಗಿ ಅಂಗಾಂಗ ಸಾಗಾಟ ಮಾಡಿದಂತಾಗಿತ್ತು. ಯಶವಂತಪುರ ಸ್ಪರ್ಶ್ ಆಸ್ಪತ್ರೆಯಿಂದ ಶೇಷಾದ್ರಿಪುರ ಬಳಿಯ ಅಪೋಲೋ ಆಸ್ಪತ್ರೆಗೆ ಹೃದಯವನ್ನು ಸಾಗಿಸಲಾಗಿತ್ತು. ಯಶವಂತಪುರ ಇಂಡಸ್ಟ್ರಿ ಮೆಟ್ರೋ ಸ್ಟೇಷನ್‌ನಿಂದ ಸಂಪಿಗೆ ರೋಡ್ ಸ್ಟೇಷನ್‌ವರೆಗೆ ಮೆಟ್ರೋದಲ್ಲಿ ಹೃದಯ ಸಾಗಿಸಲಾಗಿತ್ತು. ಸ್ಪರ್ಶ್ ಆಸ್ಪತ್ರೆಯಿಂದ ಆಂಬ್ಯುಲೆನ್ಸ್ ಮೂಲಕ ಯಶವಂತಪುರ ಇಂಡಸ್ಟ್ರಿವರೆಗೆ ಹೃದಯವನ್ನು ತೆಗೆದುಕೊಂಡು ಹೋಗಲಾಗಿತ್ತು. ಅಲ್ಲಿಂದ ಮೆಟ್ರೋ ಮೂಲಕ ಸಂಪಿಗೆ ರೋಡ್ ಮೆಟ್ರೋ ಸ್ಟೇಷನ್‌ವರೆಗೆ ಶಿಫ್ಟ್ ಮಾಡಿದರೆ, ಅಲ್ಲಿಂದ ಮತ್ತೆ ಆಂಬ್ಯುಲೆನ್ಸ್ ಮೂಲಕ ಶೇಷಾದ್ರಿಪುರ ಅಪೋಲೋ ಆಸ್ಪತ್ರೆಗೆ ಹೃದಯವನ್ನು ಶಿಫ್ಟ್ ಮಾಡಲಾಗಿತ್ತು. ಎಂದಿನಂತೆ ಪ್ರಯಾಣಿಕರು ಪ್ರಯಾಣ ಮಾಡುವ ಮೆಟ್ರೋ ರೈಲಿನ ಒಂದು ಕೋಚ್‌ನ್ನು ಹೃದಯ ಸಾಗಿಸಲು ಮೀಸಲಿಡಲಾಗಿತ್ತು.

sagility™
Sagility Limited
(formerly known as Sagility India Limited and prior to that Sagility India Private Limited]
CIN - L72900KA2021PLC150054
Registered office: No.23 & 24 AMR Tech Park, Building 2A, First Floor, Hongasandara Village, Off Hosur Road, Bommanahalli, Bangalore Karnataka, 560 068, India. **Telephone .:** 91- 8071251500, **E-mail:** investorservice@sagilityhealth.com; **website:** www.sagilityhealth.com
STATEMENT OF UNAUDITED STANDALONE AND CONSOLIDATED FINANCIALS RESULTS FOR THE QUARTER AND SIX MONTHS ENDED 30 SEPTEMBER 2025
The Standalone and Consolidated financials results of Sagility Limited [formerly known as Sagility India Limited and prior to that Sagility India Private Limited] (**"the Company"**) have been reviewed and recommended by the Audit Committee and approved by the Board of Directors, at their meetings held on 29 October 2025.
The Standalone and Consolidated financials results of the Company along with limited review report of Statutory auditors are available on the BSE Limited website (URL: www.bseindia.com), the National Stock Exchange of India Limited website (URL: www.nseindia.com) and on the Company's website (URL: www.sagilityhealth.com) and can be accessed by scanning the Quick response Code(QR Code) provided below:
Date: 29 October 2025
Place: Bengaluru
Ramesh Gopalan
Managing Director and Group Chief Executive Officer
CONCEPT

ಮರ ಕಡಿಯುವ ಮೆಟ್ರೋ ನಿರ್ಧಾರಕ್ಕೆ ವಿರೋಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಮ್ಮ ಮೆಟ್ರೋದ ಮೂರನೇ ಹಂತದ ಕಾಮಗಾರಿಗಾಗಿ ಬಿಎಂಆರ್‌ಸಿಎಲ್ ಸಾವಿರಾರು ಮರಗಳಿಗೆ ಕೊಡಲಿಯೇಟು ಕೊಡಲು ಹಾಗೂ ಸ್ಥಳಾಂತರಕ್ಕೆ ಮುಂದಾಗಿದ್ದು, ಇದಕ್ಕೆ ಪರಿಸರ ಹೋರಾಟಗಾರರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಉದ್ಯಾನನಗರಿಯಲ್ಲಿ ದಿನದಿಂದ ದಿನಕ್ಕೆ ಅಭಿವೃದ್ಧಿಯ ಹೆಸರಿನಲ್ಲಿ ಮರಗಳ ಮಾರಣ ಹೋಮ ನಡೆಯುತ್ತಿದ್ದು, ನಮ್ಮ ಮೆಟ್ರೋ ಕಾಮಗಾರಿ ಮಾಡುತ್ತೇವೆ ಎಂದು ಸಾವಿರಾರು ಮರಗಳಿಗೆ ಕೊಡಲಿಯೇಟು ಕೊಡಲು ಮುಂದಾಗಿದೆ. ಇರುವ ಮರಗಳನ್ನೆಲ್ಲಾ ಕತ್ತರಿಸಿದರೆ ನಾವು ಉಸಿರಾಡುವುದಾದರೂ ಹೇಗೆ ಎಂದು ಪರಿಸರ ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

1093 ಮರ ಕಡಿಯಲು ಮುಂದಾದ ಬಿಎಂಆರ್‌ಸಿಎಲ್: ಬೆಂಗಳೂರಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಸಾವಿರಾರು ಮರಗಳ ಮಾರಣಹೋಮ ಆಗಿದೆ. ಇದರಿಂದ ಬೆಂಗಳೂರಿಗರು ಬಿಸಿಲ ಬೇಗೆಯಲ್ಲಿ ತತ್ತರಿಸಿ ಹೋಗುತ್ತಿದ್ದು, ಇದೀಗ ಮತ್ತೆ ನಗರದಲ್ಲಿರುವ ಸಾವಿರಾರು ಮರಗಳನ್ನು ಕತ್ತರಿಸಲು ಮೆಟ್ರೋ ಮುಂದಾಗುತ್ತಿದೆ. ಮೂರನೇ ಹಂತದ ಯೋಜನೆಗಾಗಿ ಬರೋಬ್ಬರಿ 1092 ಮರಗಳನ್ನು ಕಡಿಯಲು ಮತ್ತು ಸ್ಥಳಾಂತರಿಸಲು ತೀರ್ಮಾನ ಮಾಡಲಾಗಿದೆ.1ನೇ ಕಾರಿಡಾರ್ ಜೆಪಿ ನಗರ 4ನೇ ಹಂತದಿಂದ ಕೆಂಪಾಪುರವರೆಗೆ 32.15 ಕಿ.ಮೀ ಮಾರ್ಗದಲ್ಲಿ 21 ನಿಲ್ದಾಣಗಳಿರಲಿವೆ. 2ನೇ ಕಾರಿಡಾರ್ ಹೊಸಹಳ್ಳಿಯಿಂದ ಕಡಬಗೆರೆಯವರೆಗೂ ಇಲ್ಲಿ 12.50 ಕಿ.ಮೀ ಇದ್ದು 9 ನಿಲ್ದಾಣಗಳು ಇರಲಿವೆ. ಎರಡು ಮೆಟ್ರೋ ಮಾರ್ಗ ಒಟ್ಟು 44.65 ಕಿ.ಮೀ ಉದ್ದವಿದ್ದು, 15,611 ಕೋಟಿ ರು. ವೆಚ್ಚದಲ್ಲಿ ಕಾಮಗಾರಿ ನಡೆಯಲಿದೆ. ಸ್ಥಳೀಯರು ಈ ಕುರಿತು ಮಾತನಾಡಿ, ಮನೆಯ ಮುಂಭಾಗ ಮೆಟ್ರೋ ಬರುತ್ತಿರುವುದು ಸಂತೋಷದ ವಿಷಯ. ಆದರೆ ಇದಕ್ಕಾಗಿ ಇರುವ ಮರಗಳನ್ನೆಲ್ಲಾ ಕತ್ತರಿಸಿದರೆ ಮುಂದೆ ಶುದ್ಧ ಗಾಳಿಗೆ, ಉಸಿರಾಡುವುದು ಹೇಗೆ, ನಿಮಯಗಳ ಪ್ರಕಾರ ಒಂದು ಮರ ಕತ್ತರಿಸಿದರೆ ಹತ್ತು ಗಿಡಗಳನ್ನು ನೆಡಬೇಕು ಎಂಬುದಾಗಿದೆ. ಇದನ್ನು ಬಿಎಂಆರ್‌ಸಿಎಲ್ ಅಧಿಕಾರಿಗಳು ಪಾಲಿಸಬೇಕು ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ ಕಿತ್ತಳೆ ಮಾರ್ಗದ ಕಾಮಗಾರಿಗಾಗಿ 11 ಸಾವಿರ ಮರಗಳನ್ನು ಕತ್ತರಿಸಿದರೆ ಮಾಡಲು ಸಿದ್ಧತೆ ಮಾಡಿಕೊಂಡಿದ್ದ ಬಿಎಂಆರ್‌ಸಿಎಲ್, ಪರಿಸರ ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದ ಹಿನ್ನೆಲೆ, 6500 ಮರಗಳನ್ನು ಕತ್ತರಿಸಲು ತೀರ್ಮಾನ ಮಾಡಲಾಗಿತ್ತು. ಇದಕ್ಕೂ ಪರಿಸರ ಹೋರಾಟಗಾರು ಒಪ್ಪಲಿಲ್ಲ. ಇದೀಗ ಬಿಎಂಆರರ್‌ಸಿಎಲ್ ಅಧಿಕಾರಿಗಳು 2183 ಮರಗಳನ್ನು ಕಡಿಯಲು ಜಿಬಿಎ ಅಧಿಕಾರಿಗಳನ್ನು ಕೇಳಿದ್ದು, ಇದರಲ್ಲಿ ಮೊದಲ ಹಂತದಲ್ಲಿ 1092 ಮರಗಳನ್ನು ಕುಡಿಯಲು ಮತ್ತು ತೆರವು ಮಾಡಲು ಜಿಬಿಎ ಅರಣ್ಯ ವಿಭಾಗ ಅನುಮತಿ ನೀಡಿದ್ದು, ಇದರಿಂದ ಮೂರನೇ ಹಂತದ ಮೆಟ್ರೋ ಕಾಮಗಾರಿ ವೇಳೆ 10,045 ಮರಗಳಿಗೆ ಮುಕ್ತಿ ಸಿಗಲಿದೆ.

ಒಂದು ಮರ ಕತ್ತರಿಸಿದರೆ ಹತ್ತು ಗಿಡಗಳನ್ನು ನೀಡಬೇಕೆಂಬ ನಿಯಮ ಇದೆ. ಹಾಗಾಗಿ ನೀವು ಕತ್ತರಿಸಲು ಮುಂದಾಗಿರುವ ಒಂದು ಸಾವಿರ ಮರಗಳ ಬದಲಿಗೆ ಹತ್ತು ಸಾವಿರ ಮರಗಳನ್ನು ಯಾವ ಜಾಗದಲ್ಲಿ ನೆಡುತ್ತೀರಿ? ಈ ಹಿಂದೆ ಮೆಟ್ರೋ ಕಾಮಗಾರಿಗಾಗಿ ಕತ್ತರಿಸಿದ ಮರಗಳ ಬದಲಿಗೆ ಸಸಿಗಳನ್ನು ಎಲ್ಲಿ ನೆಟ್ಟಿದ್ದೀರಿ?

- ಅರುಣ್, ಪರಿಸರ ಹೋರಾಟಗಾರ

ಸಮಾಚಾರ ಸಣ್ಣದಲ್ಲ

ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದಿಂದ 2025-26ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ಪಡೆಯಲು ಕ್ರಿಶ್ಚಿಯನ್ ಸಮುದಾಯದವರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ನಿಗಮದಲ್ಲಿ ವೃತ್ತಿ ಪ್ರೋತ್ಸಾಹ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ , ಶ್ರಮ ಶಕ್ತಿ ಸಾಲ ಯೋಜನೆ, ಶ್ರಮಶಕ್ತಿ (ವಿಶೇಷ ಮಹಿಳಾ) ಯೋಜನೆ, ವ್ಯಾಪಾರ / ಉದ್ಯಮಗಳಿಗೆ ನೇರ ಸಾಲ ಯೋಜನೆ, ವಿದೇಶಿ ವಿದ್ಯಾಭ್ಯಾಸ ಸಾಲ ಯೋಜನೆ, ಕ್ರಿಶ್ಚಿಯನ್ ಸಮುದಾಯದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸಹಾಯಧನ ಯೋಜನೆ, ಅರಿವು (ವಿದ್ಯಾಭ್ಯಾಸ ಸಾಲ)ಯೋಜನೆ, ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಯೋಜನೆಗಳಡಿ ಸಾಲ ಸೌಲಭ್ಯ ಪಡೆಯಬಹುದಾಗಿದೆ. ಅರ್ಜಿದಾರರು ಮತೀಯ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿರಬೇಕು, ಅರ್ಜಿದಾರರು ಕರ್ನಾಟಕ ರಾಜ್ಯದಲ್ಲಿ ಖಾಯಂ ನಿವಾಸಿಯಾಗಿರಬೇಕು. ತಮ್ಮ ಅರ್ಜಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣಪತ್ರ, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಗುರುತಿನ ಚೀಟಿ, ಬ್ಯಾಂಕ್ ಖಾತೆ ಪುಸ್ತಕ ಪ್ರತಿ, ಯೋಜನಾ ವರದಿ ಹಾಗೂ ಅರ್ಜಿದಾರರ ಹಾಗೂ ಜಾಮೀನುದಾರರ 2 ಭಾವಚಿತ್ರಗಳು. ಅರ್ಜಿದಾರರು ಕಡ್ಡಾಯವಾಗಿ ಐಎಫ್‌ಎಸ್‌ಸಿ ಕೋಡ್ ಇರುವ ಬ್ಯಾಂಕ್ ಖಾತೆ ಪಾಸ್ ಬುಕ್ ಪ್ರತಿಯನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ನ.30 ಕೊನೆಯ ದಿನಾಂಕ. ಎಲ್ಲಾ ಯೋಜನೆಗಳಿಗೆ ಅರ್ಜಿ ಸಲ್ಲಿಸಬೇಕಾದ ವೆಬ್ ಸೈಟ್ www.kccdclonline.karnataka.gov.in, ಇ-ಮೇಲ್ kccdchelplinegmail.com ಹಾಗೂ ಸಹಾಯವಾಣಿ ಸಂಖ್ಯೆ 63607 53075 ಗೆ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 080-23539786 ಸಂಪರ್ಕಿಸಿ.

ನ.11ರಿಂದ ವಿಶ್ಲೇಷಣೆ ಕಾರ್ಯಾಗಾರ

ಬೆಂಗಳೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ ಸಂಶೋಧನೆ, ಪ್ರಕಟಣೆ ನೀತಿಶಾಸ್ತ್ರ ಮತ್ತು ದತ್ತಾಂಶ ವಿಶ್ಲೇಷಣೆ ವಿಷಯದ ಮೇಲೆ ನ.11 ರಿಂದ 15 ರವರೆಗೆ ಐದು ದಿನಗಳ ಕಾಲ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಲಾಗುತ್ತಿದೆ. ಈ ಕಾರ್ಯಾಗಾರದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಉಪನ್ಯಾಸಗಳನ್ನು ನೀಡಲಿದ್ದು, ವಿಜ್ಞಾನ ಪದವಿ, ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು / ಪ್ರಾಧ್ಯಾಪಕರು ಹಾಗೂ ವಿಜ್ಞಾನಾಸಕ್ತರು ಭಾಗವಹಿಸಬಹುದಾಗಿದೆ. ಆಸಕ್ತ ಪ್ರತಿನಿಧಿಗಳು ನವೆಂಬರ್5 ರ ಒಳಗಾಗಿ ಗೂಗಲ್ ಫಾರಂನಲ್ಲಿ Form: https://forms.gle/UNrBg9wiBxgQBMVD6 ನಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಶ್ರೀನಿವಾಸು 9620767819, ವೆಬ್‌ಸೈಟ್ - https://kstacademy.in ವೀಕ್ಷಿಸಬಹುದು.

ರಿಯಾಯಿತಿಯಲ್ಲಿ ಪುಸ್ತಕಗಳ ಮಾರಾಟ

ಬೆಂಗಳೂರು: ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಎಲ್ಲಾ ಪ್ರಕಟಣೆಗಳನ್ನು ನವೆಂಬರ್ 2025 ರ ಮಾಹೆಯಲ್ಲಿ ನವೆಂಬರ್ 1 ರಿಂದ 30 ರ ವರೆಗೆ ಶೇ.50 ರ ರಿಯಾಯಿತಿಯ ದರದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲಾಗುತ್ತದೆ. ಆನ್‌ಲೈನ್ ವೆಬ್‌ಸೈಟ್ www.kuvempubhashabharathi.karnataka.gov.in ಮೂಲಕವೂ ಶೇ.50 ರ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಖರೀದಿಸಬಹುದು. ಓದುಗರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ದಯಾನಂದ ಸಾಗರ್ ಪದವಿ ಪೂರ್ವ ಕಾಲೇಜು ವತಿಯಿಂದ ನ.05 ರಿಂದ 8ವರೆಗೆ ನಡೆಯಲಿರುವ ನಾಲ್ಕನೇ ಆವೃತ್ತಿಯ ರಾಷ್ಟ್ರೀಯ ಮಟ್ಟದ 'ಸಾಗರ್ ಫಿಯೆಸ್ಟಾ 4.0' ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳನ್ನುಆಹ್ವಾನಿಸಲಾಗಿದೆ. ನ.5, 6ಕ್ಕೆ ಶಾಲಾ ವಿಭಾಗದ 9 ಮತ್ತು 10 ತರಗತಿಯ ಹಾಗೂ ಕಾಲೇಜು ವಿಭಾಗದ 11-12 ತರಗತಿಯ ವಿದ್ಯಾರ್ಥಿಗಳಿಗೆ ವಾಲಿಬಾಲ್ ಮತ್ತು ಥ್ರೋಬಾಲ್ ಸ್ಪರ್ಧೆ, ನ.7ರಂದು 9 ಮತ್ತು 10 ತರಗತಿ ಮಕ್ಕಳಿಗೆ 'ಸಮಾಜವು ಸಾಂಪ್ರದಾಯಿಕ ಮೌಲ್ಯಗಳಿಂದ ದೂರವಾಗುತ್ತಿದ್ದೇವೆ?' ಎನ್ನುವ ಚರ್ಚಾ ಸ್ಪರ್ಧೆ ಆಯೋಜಿಸಲಾಗಿದೆ. 11 ಮತ್ತು 12 ತರಗತಿ ಮಕ್ಕಳಿಗೆ 'ತಂತ್ರಜ್ಞಾನವು ನಮ್ಮ ಚಿಂತನಾ ಶಕ್ತಿಯನ್ನು ಕುಗ್ಗಿಸುತ್ತಿದೆಯೇ?' ಎಂಬ ವಿಷಯದಡಿ ಚರ್ಚಾ ಸ್ಪರ್ಧೆ ಸೇರಿದಂತೆ ಸೃಜನಶೀಲ ಕ್ರಿಯಾಶೀಲ ಅನ್ವೇಷಣೆ ಪ್ರದರ್ಶನ, ಜಾನಪದ ನೃತ್ಯ ಸ್ಪರ್ಧೆಗಳನ್ನು ಆಯೋಜಿಸಿದೆ ಇದರ ಕಾರ್ಯಾಗಾರವನ್ನು ಒರಿಗಾಮಿ ಗಾರುಡಿಗ ಹುಸೇನಿಯವರು ನಡೆಸಿಕೊಡಲಿದ್ದಾರೆ ಎಂದು ತಿಳಿಸಿದೆ. ಹೆಚ್ಚಿನ ಮಾಹಿತಿ 9986300249, 9632103365 ಸಂಪರ್ಕಿಸಿ.

{ ಎಚ್.ಕೆ.ಪಾಟೀಲ } ಕಾನೂನು ಸಚಿವ

ಸಾರ್ವಜನಿಕ ಸ್ಥಳದಲ್ಲಿ 10ಕ್ಕಿಂತ ಹೆಚ್ಚು ಜನ ಸೇರುವುದಕ್ಕೆ ಪೊಲೀಸ್ ಅನುಮತಿ ಪಡೆಯುವುದನ್ನು ಕಡ್ಡಾಯ ಮಾಡಿರುವ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದ್ದು, ಅದನ್ನು ತೆರವುಗೊಳಿಸಲು ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.



ಜಿಬಿಎ ವ್ಯಾಪ್ತಿಯಲ್ಲಿ ವಿನೂತನ ಜಾಗೃತಿ ಕಾರ್ಯಕ್ರಮ ಆರಂಭ

218 ಮನೆಗಳ ಮುಂದೆ ಕಸ ಸುರಿದು 2.80 ಲಕ್ಷ ದಂಡ ಸಂಗ್ರಹ

ನಗರದಲ್ಲಿ ಕಸದ ಹಬ್ಬಕ್ಕೆ ಚಾಲನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ಕಸ ಸುರಿಯುವ ಹಬ್ಬದ ಮೂಲಕ 218 ಮನೆಗಳ ಮುಂದೆ ಕಸ ಸುರಿದು 2.80 ಲಕ್ಷ ರು.ದಂಡ ವಿಧಿಸಲಾಗಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರೀಗೌಡ ಹೇಳಿದರು.

ಈ ಬಗ್ಗೆ ಮಾತನಾಡಿ, ಜಿಬಿಎ ವ್ಯಾಪ್ತಿಯ ಎಲ್ಲ ಐದು ನಗರ ಪಾಲಿಕೆಗಳಲ್ಲಿ ಪ್ರತಿ ಮನೆಗೆ ಬೆಳಗ್ಗೆ ಆಟೋ ಟಿಪ್ಪರ್‌ಗಳಲ್ಲಿ ಹೋಗಿ ಕಸವನ್ನು ಸಂಗ್ರಹಿಸಲಾಗುತ್ತಿದ್ದರೂ ಕೆಲ ಸಾರ್ವಜನಿಕರು ಕಸವನ್ನು ರಸ್ತೆ ಬದಿ, ಪಾದಚಾರಿ ಮಾರ್ಗ ಹಾಗೂ ಖಾಲಿ ಜಾಗಗಳಲ್ಲಿ ಎಸೆಯುತ್ತಿದ್ದಾರೆ. ರಸ್ತೆ ಬದಿ ಕಸ ಸುರಿಯುವುದರಿಂದ ನಗರ ನೈರ್ಮಲ್ಯ ಹಾಳಾಗುತ್ತಿದೆ. ಇಂತಹ ಪ್ರಕರಣಗಳನ್ನು ತಪ್ಪಿಸುವ ಉದ್ದೇಶದಿಂದ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದಿಂದ ರಸ್ತೆ ಬದಿ ಕಸ ಬಿಸಾಡುವವರನ್ನು ಗುರುತಿಸಿ ಅವರ ಮನೆ ಮುಂದೆ ಕಸ ಬಿಸಾಡುವಂತಹ ವಿನೂತನ ಜಾಗೃತಿ ಕಾರ್ಯಕ್ರಮಕ್ಕೆ ಇಂದು ಚಾಲನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಆಟೋ ಟಿಪ್ಪರ್‌ಗಳಿಗೆ ಕಸ ಕೊಡದೆ ರಾತ್ರಿ ವೇಳೆ ರಸ್ತೆ ಬದಿ ಹಾಗೂ ಇನ್ನಿತರೆ ಕಡೆ ಕಸ ಎಸೆಯುತ್ತಾರೆ. ಬೇರೆಯವರ ಮನೆ ಮುಂದೆ/ರಸ್ತೆಗಳಲ್ಲಿ ಕಸ ಬಿದ್ದಾಗ ಹೇಗೆ ಅನ್ನಿಸುತ್ತದೆ ಎಂದು ಮನವರಿಕೆ ಮಾಡಿಕೊಡುವ ಸಲುವಾಗಿ ಅವರ ಮನೆ ಮುಂದೆಯೇ ಕಸ ಸುರಿಯಲಾಗಿದೆ. ರಸ್ತೆಗೆ ಕಸ ಎಸೆದಿರುವಂತಹ 218 ಮನೆಗಳ ಮುಂದೆ ಇಂದು ಕಸ ಸುರಿದು, 2,80,000 ರು.ಗಳ ಮೊತ್ತದ ದಂಡವನ್ನು ವಸೂಲಿ ಮಾಡಲಾಗಿದೆ. ತದನಂತರ ಕಸವನ್ನು ತೆರವುಗೊಳಿಸಲಾಗಿದೆ.

ಬೆಂಗಳೂರು ನಗರದ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡಲು ದಯವಿಟ್ಟು ಸಹಕರಿಸಿ, ಆಟೋ ಟಿಪ್ಪರ್ ಬಂದಾಗ ಹಸಿ ಕಸ ಹಾಗೂ ಒಣ ಕಸ ಬೇರ್ಪಡಿಸಿ ನೀಡುವಂತೆ ತಿಳಿಸಿದ್ದಾರೆ.

ರಸ್ತೆ ಬದಿ ಸೇರಿದಂತೆ ಎಲ್ಲೆಂದರಲ್ಲಿ ಕಸವನ್ನು ಎಸೆಯುವುದನ್ನು ನಿಲ್ಲಿಸಬೇಕಾಗಿದ್ದು, ನಗರ ಪಾಲಿಕೆ ವತಿಯಿಂದ ಮನೆ ಮನೆಗೆ ಬರುವ ಆಟೋ ಟಿಪ್ಪರ್‌ಗಳಿಗೆ ಕಸವನ್ನು ಒಣ ಕಸ ಮತ್ತು ಹಸಿ ಕಸವನ್ನಾಗಿ ಬೇರ್ಪಡಿಸಿ ನೀಡುವ ಕುರಿತಾಗಿ ಹಾಗೂ ನಿಗದಿತ ಸಮಯದಲ್ಲಿ ಕಸವನ್ನು ನೀಡುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ನಗರ ವ್ಯಾಪ್ತಿಯಲ್ಲಿ 65 ಕಸ ಕಿಯೋಸ್ಕ್ ಸ್ಥಾಪನೆ

ನಗರದಲ್ಲಿ ರಸ್ತೆ ಬದಿ ಕಸ ಬಿಸಾಡುವುದನ್ನು ನಿಯಂತ್ರಿಸುವ ಸಲುವಾಗಿ ನಗರದಾದ್ಯಂತ ಸುಮಾರು 65 ಕಸ ಕಿಯೋಸ್ಕ್‌ಗಳನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗಿದ್ದು, ಸ್ವಚ್ಛ ಬೆಂಗಳೂರಿನ ನಿರ್ಮಾಣಕ್ಕೆ ಇದು ಸಹಕಾರಿಯಾಗಲಿದ್ದು, ಈಗಾಗಲೇ ಬಿಟಿಎಂ ವ್ಯಾಪ್ತಿಯಲ್ಲಿ ಕಸ ಕಿಯೋಸ್ಕ್ ತೆರೆದಿದ್ದು, ನಾಗರಿಕರಿಂದ ಅದಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಕಸ ಕಿಯೋಸ್ಕ್‌ನಿಂದ ಸ್ಥಳೀಯವಾಗಿ ಬ್ಲಾಕ್ ಸ್ಪಾಟ್ ಗಳ ನಿರ್ಮೂಲನೆ, ತ್ಯಾಜ್ಯ ದುರ್ವಾಸನೆ ಸೇರಿದಂತೆ ಇತರ ಸಮಸ್ಯೆಗಳನ್ನು ನಿಯಂತ್ರಿಸಬಹುದಾಗಿದೆ. ಪ್ರತಿ ಕಸ ಕಿಯೋಸ್ಕ್‌ನಲ್ಲಿ 100 ಲೀಟರ್ ಸಾಮರ್ಥ್ಯದ ನಾಲ್ಕು ಸಂಗ್ರಹಣಾ ಬಿನ್‌ಗಳನ್ನು ಕಲ್ಪಿಸಲಾಗಿದ್ದು, ಸಾರ್ವಜನಿಕರು ನಿಗದಿಪಡಿಸಿದ ಸಮಯದಲ್ಲಿ ತಮ್ಮ ಬೇರ್ಪಡಿಸಿದ ಕಸವನ್ನು ಯಾವುದೇ ಶುಲ್ಕವಿಲ್ಲದೆ ಈ ಕಿಯೋಸ್ಕ್‌ಗಳಿಗೆ ಉಚಿತವಾಗಿ ನೀಡಬಹುದಾಗಿದೆ. ನಗರದ ಸ್ವಚ್ಛತೆಯ ದೃಷ್ಟಿಯಿಂದ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತವು ದೂರು ಕೇಂದ್ರ ಸ್ಥಾಪಿಸಿದ್ದು, ಅದಕ್ಕಾಗಿ ಪ್ರತ್ಯೇಕ ವ್ಯಾಟ್ ಆ್ಯಪ್ ಸಂಖ್ಯೆಯನ್ನು 9448197197 ನೀಡಿದೆ. ಈ ಸಂಖ್ಯೆಗೆ ಛಾಯಾಚಿತ್ರದೊಂದಿಗೆ ಸಂದೇಶ ಕಳುಹಿಸುವ ಮೂಲಕ ದೂರು ದಾಖಲಿಸಬಹುದು. ಆ ಬಳಿಕ ಸಂಬಂಧಪಟ್ಟ ಅಧಿಕಾರಿಗಳು ನಿಗದಿತ ಅವಧಿಯಲ್ಲಿ ತ್ಯಾಜ್ಯ ಅಥವಾ ಕಸ ವಿಲೇವಾರಿ ಮಾಡಿ ಸಮಸ್ಯೆ ಬಗೆಹರಿಸಲಿದ್ದಾರೆ.

ರಾಜ್ಯೋತ್ಸವ ಆಚರಿಸುತ್ತಿಲ್ಲ ಎಂಬ ಆರೋಪ ಸುಳ್ಳು: ಬಿಎಚ್‌ಇಎಲ್

ಬಿಎಚ್‌ಇಎಲ್ ನಿರ್ಧಾರ ಸ್ವಾಗತಾರ್ಹ: ಬಿಳಿಮಲೆ

ಬೆಂಗಳೂರು: ಕನ್ನಡ ರಾಜ್ಯೋತ್ಸವ ಆಚರಣೆಗೆ ಬಿಎಚ್‌ಇಎಲ್ ಮುಂದಾಗಿರುವ ಕ್ರಮ ಸ್ವಾಗತಾರ್ಹ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಠಿಣ ಆಗ್ರಹಕ್ಕೆ ಸ್ಪಂದಿಸಿ ಸಂಸ್ಥೆಯ ಹಿರಿಯ ಅಧಿಕಾರಿ ಘಗಳು ತಮ್ಮೆಲ್ಲಾ ಸಹೋದ್ಯೋಗಿಗಳು, ಸಂಘ-ಸಂಸ್ಥೆಗಳನ್ನು ರಾಜ್ಯೋತ್ಸವ ಆಚರಣೆಗೆ ಆಹ್ವಾನಿಸಿರುವುದು ಅಭಿನಂದನಾರ್ಹ. ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಯಾವುದೇ ಸಂಸ್ಥೆ ಕನ್ನಡಕ್ಕೆ ಸಲ್ಲಬೇಕಾದ ಸ್ಥಾನಮಾನವನ್ನು ಒದಗಿಸುವುದು ಅದರ ಕರ್ತವ್ಯ. ಬಿಎಚ್‌ಇಎಲ್ ವತಿಯಿಂದ ಪ್ರಾಧಿಕಾರದ ನಿರ್ದೇಶನಕ್ಕೆ ಸಕಾಲದಲ್ಲಿ ಗೌರವ ದೊರಕಿರುವುದು ಅರ್ಥಪೂರ್ಣವಾಗಿದ್ದು, ಇದು ಇತರ ಕೇಂದ್ರೀಯ ಸಂಸ್ಥೆಗಳಿಗೆ ಮಾದರಿಯಾಗಲಿ ಎಂದು ಅವರು ಆಶಿಸಿದ್ದಾರೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಬಿಎಚ್‌ಇಎಲ್, ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುತ್ತಿಲ್ಲ ಎಂಬ ಆರೋಪವನ್ನು ತಿರಸ್ಕರಿಸಿದೆ. ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿಹಿಡಿಯಲು ಬಿಎಚ್‌ಇಎಲ್ ಯಾವಾಗಲೂ ಬದ್ಧವಾಗಿದೆ ಮತ್ತು ಹಲವು ದಶಕಗಳಿಂದ ವರ್ಷಗಳಿಂದ ವರ್ಷಕ್ಕೆ ರಾಜ್ಯದ ಅದ್ಭುತ ಸಂಪ್ರದಾಯಗಳು ಮತ್ತು ಸಾಧನೆಗಳನ್ನು ಗೌರವಿಸುವ ಮತ್ತು ಆಚರಿಸುವಲ್ಲಿ ಯಾವಾಗಲೂ ಮುಂಚೂಣಿಯಲ್ಲಿದೆ. ಈ ವರ್ಷವೂ ಸಂಪ್ರದಾಯದ ಮುಂದುವರಿಕೆಯಾಗಿ, ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ ತನ್ನ ಎಲ್ಲ ಉದ್ಯೋಗಿಗಳು ಮತ್ತು ಪಾಲುದಾರರೊಂದಿಗೆ ನ.1ರಂದು ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುತ್ತಿದೆ ಎಂದು ಸ್ಪಷ್ಟಪಡಿಸಿದೆ.

ಸ್ಥಳೀಯ ಭಾಷೆಗೆ ಮಹತ್ವ ನೀಡಿ

ಐಬಿಪಿಎಸ್ ವತಿಯಿಂದ ನವೆಂಬರ್ 2025 ರಲ್ಲಿ ನಡೆಸಲಾಗುವ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಸಿಬ್ಬಂದಿ ನೇಮಕ ಪರೀಕ್ಷೆಯಲ್ಲಿ ಸ್ಥಳೀಯ ಭಾಷೆ ಬಲ್ಲ ಅಭ್ಯರ್ಥಿಗಳಿಗೆ ಆದ್ಯತೆ ನೀಡಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ. ಈ ವೇಳೆ ಐಬಿಪಿಎಸ್ ಸಂಸ್ಥೆಯ ಅಧ್ಯಕ್ಷ ರಜನೀಶ್ ಕರ್ನಾಟಕ್ ಅವರಿಗೆ ಡಾ.ಪುರುಷೋತ್ತಮ ಬಿಳಿಮಲೆ ಪತ್ರದ ಮೂಲಕ ಆಗ್ರಹಿಸಿದ್ದು, ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಬ್ಯಾಂಕುಗಳಲ್ಲಿ ಪ್ರಾದೇಶಿಕ ಭಾಷೆಯನ್ನು ಬಲ್ಲದ ಅಭ್ಯರ್ಥಿಗಳ ನೇಮಕಾತಿ ಹೆಚ್ಚಾಗುತ್ತಿದ್ದು, ಇದು ಗ್ರಾಮೀಣ ಬ್ಯಾಂಕುಗಳ ಅಸ್ತಿತ್ವದ ಮೂಲ ಪರಿಕಲ್ಪನೆಯನ್ನೇ ಬದಲಾಯಿಸಿದೆ . ಸ್ಥಳೀಯ ಸಂಸ್ಕೃತಿ ಹಾಗೂ ಅಲ್ಲಿನ ಪರಿಸ್ಥಿತಿಗಳನ್ನು ಅರಿತಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವುದು ಅತ್ಯವಶ್ಯಕ. ಇದು ಬ್ಯಾಂಕ್‌ಗಳ ದಕ್ಷತೆ ಹೆಚ್ಚಿಸಿ ಅದರ ಅಸ್ತಿತ್ವವನ್ನು ಅರ್ಥಪೂರ್ಣವಾಗಿಸುತ್ತದೆ ಎಂದು ಉಲ್ಲೇಖಿಸಿ ಮನವಿ ಮಾಡಿದ್ದಾರೆ.

ಬ್ರಿಟಿಷ್ ಕೌನ್ಸಿಲ್‌ನಿಂದ ಕ್ರಿಯೇಟಿವ್ ಕಾಂವರ್ಜೆನ್ಸ್

ಬೆಂಗಳೂರು: ಯುನೈಟೆಡ್ ಕಿಂಗ್ಡಮ್‌ನ ಸಾಂಸ್ಕೃತಿಕ ಸಂಬಂಧಗಳು ಮತ್ತು ಶೈಕ್ಷಣಿಕ ಅವಕಾಶಗಳ ಅಂತಾರರಾಷ್ಟ್ರೀಯ ಸಂಸ್ಥೆಯಾದ ಬ್ರಿಟಿಷ್ ಕೌನ್ಸಿಲ್, ಕ್ರಿಯೇಟಿವ್ ಕಾಂವರ್ಜೆನ್ಸ್: ಗ್ರೋತ್ ರೀ ಇಮ್ಯಾಜಿನ್ಡ್ ಎಂಬ ಎರಡು ದಿನಗಳ ಕಾರ್ಯಕ್ರಮದ ಪ್ರಾರಂಭವನ್ನು ಘೋಷಿಸಿದೆ. ಈ ವೇದಿಕೆ ಭಾರತ ಮತ್ತು ಯುಕೆ ದೇಶಗಳ ಕಲೆ, ಸಂಸ್ಕೃತಿ ಮತ್ತು ಉದ್ಯಮ ಕ್ಷೇತ್ರದ ಪ್ರಮುಖ ಧ್ವನಿಗಳನ್ನು ಒಂದೇ ಸ್ಥಳದಲ್ಲಿ ಸೇರಿಸಿ, ಸೃಜನಾತ್ಮಕ ಆರ್ಥಿಕತೆಯ ಭವಿಷ್ಯವನ್ನು ರೂಪಿಸುವ ಉದ್ದೇಶ ಹೊಂದಿದೆ.

ಈ ಕಾರ್ಯಕ್ರಮ ನ. 5 ಮತ್ತು 6ರಂದು ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ನಡೆಯಲಿದೆ. ಮೊದಲ ಆವೃತ್ತಿಯ ಈ ಸಭೆಯಲ್ಲಿ ಸೃಜನಾತ್ಮಕ ಉದ್ಯಮಿಗಳು, ನೀತಿ ನಿರ್ಮಾಪಕರು ಮತ್ತು ಸಾಂಸ್ಕೃತಿಕ ಪರಿವರ್ತಕರರು ಒಟ್ಟಿಗೆ ಸೇರಿ ವಿಚಾರ ವಿನಿಮಯ, ಒಳನೋಟ ಹಂಚಿಕೆ ಮತ್ತು ಒಗ್ಗಟ್ಟಿನ ಹಾಗೂ ಶಾಶ್ವತ ಬೆಳವಣಿಗೆಯ ಹೊಸ ಸಹಕಾರ ಮಾದರಿಗಳನ್ನು ಅನ್ವೇಷಿಸುವ ಅವಕಾಶ ಪಡೆಯಲಿದ್ದಾರೆ.

ಯುಕೆ-ಇಂಡಿಯಾ ಸಾಂಸ್ಕೃತಿಕ ಸಹಕಾರ ಕಾರ್ಯಕ್ರಮ (2025-2030) ಹಾಗೂ ಜಾಗತಿಕ ಸೃಜನಾತ್ಮಕ ಪರಿಸರವನ್ನು ಬೆಳೆಸುವಲ್ಲಿ ಎರಡು ದಶಕಗಳ ಪರಂಪರೆ ಹೊಂದಿರುವ ಬ್ರಿಟಿಷ್ ಕೌನ್ಸಿಲ್ನ ಕಾರ್ಯಪರಂಪರೆಯನ್ನು ಆಧಾರವನ್ನಾಗಿ ಮಾಡಿಕೊಂಡು, ಕ್ರಿಯೇಟಿವ್ ಕಾಂವರ್ಜೆನ್ಸ್ ಈ ಎರಡು ರಾಷ್ಟ್ರಗಳ ಸಾಂಸ್ಕೃತಿಕ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವುದರೊಂದಿಗೆ, ಸೃಜನಾತ್ಮಕತೆಯು ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ಹೇಗೆ ಮುನ್ನಡೆಸಬಹುದು ಎಂಬುದನ್ನು ಒತ್ತಿ ಹೇಳುತ್ತದೆ. ಕಲೆ, ಸಂಸ್ಕೃತಿ, ವಿನ್ಯಾಸ, ಚಲನಚಿತ್ರ, ಸಂಗೀತ, ಶಿಕ್ಷಣ ಮತ್ತು ಉದ್ಯಮ ಕ್ಷೇತ್ರಗಳ ಪ್ರಮುಖ ಧ್ವನಿಗಳು ಸೇರಿ, ಮುಂದಿನ ದಶಕದಲ್ಲಿ ಭಾರತ-ಯುಕೆ ಸೃಜನಾತ್ಮಕ ಸಹಕಾರದ ದಿಕ್ಕನ್ನು ರೂಪಿಸುವಲ್ಲಿ ತಮ್ಮ ಕೊಡುಗೆಯನ್ನು ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಎಐಗೆ ಬದುಕು ಬದಲಿಸುವ ಶಕ್ತಿ ಇದೆ

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾದ್ಯಾಲಯದ ರಜತ ಮಹೋತ್ಸವ ವರ್ಷಾಚರಣೆಯಲ್ಲಿ ಶಶಿ ಶೇಖರ್ ವೆಂಪತಿ, ನಿಟ್ಟೆ ವಿವಿಯ ಸಹ ಕುಲಾಧಿಪತಿ ಡಾ.ಎಂ.ಶಾಂತಾರಾಮ ಶೆಟ್ಟಿ , ಪ್ರಾಂಶುಪಾಲ ಡಾ.ಎಚ್.ಸಿ.ನಾಗರಾಜ್ ಭಾಗವಹಿಸಿದ್ದರು.

ಬೆಂಗಳೂರು: ಕೃತಕ ಬುದ್ಧಿಮತ್ತೆ ಕೇವಲ ತಂತ್ರಜ್ಞಾನದ ಆವಿಷ್ಕಾರ ಮಾತ್ರವಲ್ಲ. ಅದು ಎಲ್ಲರ ಬದುಕನ್ನು ಬದಲಿಸುವ ಹಾಗೂ ಹೊಸ ಆಯಾಮಗಳಿಂದ ಪುನರ್ ರೂಪಿಸುವ ಮೂಲಭೂತ ಶಕ್ತಿ ಎಂದು ಡೀಪ್ ಟೆಕ್ ಫಾರ್ ಭಾರತ್ ಫೌಂಡೇಷನ್‌ನ ಸಹ ಸಂಸ್ಥಾಪಕ ಹಾಗೂ ಪ್ರಸಾರ ಭಾರತಿ ವಿಶ್ರಾಂತ ಮುಖ್ಯಕಾರ್ಯನಿರ್ವಹಣಾಧಿಕಾರಿ ಶಶಿ ಶೇಖರ್ ವೆಂಪತಿ ನುಡಿದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾದ್ಯಾಲಯದ ರಜತ ಮಹೋತ್ಸವ ವರ್ಷಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ನಾವು ಅಂದುಕೊಂಡದ್ದನ್ನು ತುರ್ತಾಗಿ ಅನ್ವೇಷಿಸಲು ಅದು ವೇಗವರ್ಧಕದ ರೀತಿ ಕೆಲಸ ಮಾಡುತ್ತದೆ ಮತ್ತು ನಮ್ಮನ್ನು ಸೃಜನಾತ್ಮಕವಾಗಿ ಮತ್ತಷ್ಟು ಯೋಚಿಸಲು ಹಾಗೂ ಅನ್ವೇಷಿಸಲು ಪ್ರೇರೇಪಿಸುತ್ತದೆ. ಜನಸಾಮಾನ್ಯರ ದೈನಂದಿನ ಬದುಕಿನ ವೇಗವನ್ನು ಹೆಚ್ಚಿಸುವುದರಲ್ಲಿ ಮಾತ್ರವಲ್ಲ, ಗಂಭೀರ ಅನ್ವೇಷಕರು ತಮ್ಮ ಗುರಿ ಕಡಿಮೆ ಅವಧಿಯಲ್ಲಿ ತಲುಪುವಂತೆ ಮಾಡುವಲ್ಲಿ ಕೃತಕ ಬುದ್ಧಿಮತ್ತೆ ಮಹತ್ವದ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ತಂತ್ರಜ್ಞಾನ ಕಲಿಸುವ ನಮ್ಮ ಶಿಕ್ಷಣ ಸಂಸ್ಥೆಗಳು ಕೃತಕ ಬುದ್ಧಿಮತ್ತೆಯ ನೆರವಿನಿಂದ ತಮ್ಮ ದ್ಯಾರ್ಥಿಗಳನ್ನು ಅನ್ವೇಷಣಾ ಕ್ಷೇತ್ರದಲ್ಲಿ ದಾಪುಗಾಲುಗಳನ್ನಿಡುವಂತೆ ಸಜ್ಜುಗೊಳಿಸಬೇಕು. ಏಕೆಂದರೆ, ತಂತ್ರಜ್ಞಾನ ಕ್ಷೇತ್ರದಲ್ಲಿ ಅನ್ವೇಷಣೆ ಹಾಗೂ ಅಭಿವೃದ್ಧಿಗಳ ಸಲುವಾಗಿ ಸಂಶೋಧನೆಗಳು ತೀವ್ರಗತಿಯಲ್ಲಿ ದೇಶದಾದ್ಯಂತ ನಡೆಯಲೆಂದೇ ನಮ್ಮ ಪ್ರಧಾನಮಂತ್ರಿಗಳು, ಇಷ್ಟರಲ್ಲಿಯೇ ಒಂದು ಲಕ್ಷ ಕೋಟಿ ರು.ಗಳ ಅನುದಾನ ಘೋಷಿಸಲಿದ್ದಾರೆ. ಸ್ವಾತಂತ್ರ್ಯದ ನೂರನೇ ವರ್ಷಾಚರಣೆಯ 2047ರ ಹೊತ್ತಿಗೆ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲಿ ಹಾಗೂ ವಿಶ್ವಗುರುವಾಗಲಿ ಎಂಬುದು ಅವರ ಉದ್ದೇಶ ಎಂದು ಮಾಹಿತಿ ನೀಡಿದರು.

ಗ್ಲೋಬಲ್ ಮೀಡಿಯಾ ಎಜುಕೇಶನ್ ಕೌನ್ಸಿಲ್‌ನ ಅಧ್ಯಕ್ಷ ಡಾ.ಕೆ.ಜಿ.ಸುರೇಶ್ ಮಾತನಾಡಿ, ನಮ್ಮ ಶಿಕ್ಷಣ ಸಂಸ್ಥೆಗಳು ಸಹಸ್ರಾರು ವರ್ಷಗಳಿಂದ ಅಸ್ತಿತ್ವದಲ್ಲಿರುವ ಭಾರತೀಯ ವಿಜ್ಞಾನ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಬೇಕು ಎಂದರು.

ಶೇಷಾದ್ರಿಪುರ ಇನ್ಸಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಮಹಾವಿದ್ಯಾಲಯದ ವತಿಯಿಂದ ಲಿಂಗ ಸಮಾನತೆ ಮತ್ತು ಲಿಂಗ ಸಾಮಾಜಿಕೀಕರಣ ವಿಷಯದ ಕುರಿತಾಗಿ ವಿದ್ಯಾರ್ಥಿ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಈ ವೇಳೆ ಮುಖ್ಯ ಅತಿಥಿಯಾಗಿ ಡಾ.ದು.ಸರಸ್ವತಿ, ಪ್ರತಿಭಾ ರೈ, ನಾಡೋಜ ಡಾ.ವುಡೇ ಪಿ. ಕೃಷ್ಣ ಸೇರಿದಂತೆ ಅನೇಕರಿದ್ದರು.

ಕೆಎಸ್‌ಟಿಡಿಸಿ ಅಂತಾರಾಜ್ಯ ಪ್ಯಾಕೇಜ್ ಹೊಸದಲ್ಲ

ಬೆಂಗಳೂರು: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ತಮ್ಮ ಸಾಮಾಜಿಕ ಜಾಲತಾಣದಲ್ಲಿ ವಯನಾಡಿನ ಪ್ರವಾಸಕ್ಕೆ ಸಂಬಂಧಿಸಿದಂತೆ ಹಾಕಿದ್ದ ಪೋಸ್ಟ್ ವಿವಾದಕ್ಕೆ ಕಾರಣವಾಗಿದೆ. ಆದರೆ ಅಂತಾರಾಜ್ಯ ಪ್ರವಾಸಿ ಪ್ಯಾಕೇಜ್‌ಗಳ ಭಾಗವಾಗಿ ಈ ಪೋಸ್ಟ್ ಮಾಡಲಾಗಿದೆ. ಇದರಲ್ಲಿ ತಪ್ಪು ಹುಡುಕುವ ಅಗತ್ಯವಿಲ್ಲ ಎನ್ನುವ ಮಾತುಗಳು ಕೇಳಿಬಂದಿದೆ.

ಕೆಎಸ್‌ಟಿಡಿಸಿ ಆಯೋಜಿಸಿರುವ ವಯನಾಡು ಟೂರ್ ಪ್ಯಾಕೇಜ್‌ಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ಹಾಕಿರುವ ಪೋಸ್ಟ್‌ಗೆ ಪ್ರತಿಪಕ್ಷ ನಾಯಕ ಆರ್.ಅಶೋಕ ಸೇರಿದಂತೆ ಅನೇಕ ಬಿಜೆಪಿಗರು ವಿರೋಧಿಸಿದರು. ಕರ್ನಾಟಕ ಪ್ರವಾಸೋದ್ಯಮಕ್ಕೆ ಒತ್ತು ನೀಡುವ ಬದಲು ನೆರೆ ರಾಜ್ಯ ವಯನಾಡನ್ನು ಪ್ರಚಾರ ಮಾಡುತ್ತಿದ್ದಾರೆ. ಪ್ರಿಯಾಂಕಾ ಗಾಂಧಿ ಅವರ ಕ್ಷೇತ್ರ ಎನ್ನುವ ಕಾರಣಕ್ಕೆ ವಿಶೇಷ ಮಮಕಾರವೇ ಎಂದು ಪ್ರಶ್ನಿಸಿದ್ದರು.

ಆದರೆ ಇದಕ್ಕೆ ಸ್ಪಷ್ಟನೆ ನೀಡಿರುವ ನಿಗಮ ಅಧ್ಯಕ್ಷ ಎಂ.ಶ್ರೀನಿವಾಸ್ ಅವರು, ಕೆಎಸ್‌ಟಿಡಿಸಿ 2019ರಿಂದಲೂ ಅಂತಾರಾಜ್ಯ ಟೂರ್ ಪ್ಯಾಕೇಜ್ ಅನ್ನು ಮಾಡುತ್ತಿದೆ. ಕೇವಲ ವಯನಾಡು ಮಾತ್ರವಲ್ಲದೇ, ತಿರುಪತಿ, ಊಟಿಗೂ ನಮ್ಮ ನಿಗಮದ ಟೂರ್ ಪ್ಯಾಕೇಜ್‌ಗಳಿವೆ. ಇನ್ನು ಈ ಸೇವೆಯನ್ನು ಆರಂಭಿಸಿದ್ದು ಸಹ ಬಿಜೆಪಿ ಸರಕಾರದ ಅವಧಿಯಲ್ಲಿ. ಸಿ.ಟಿ.ರವಿ ಅವರು ಪ್ರವಾಸೋದ್ಯಮ ಸಚಿವರಾಗಿದ್ದ ಸಮಯದಲ್ಲಿ ಈ ಪ್ಯಾಕೇಜ್‌ಗಳಿಗೆ ಚಾಲನೆ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.



ರಾಜ್ಯದ ಜನರಿಗೆ ಕೈಗೆಟಕುವ ದರದಲ್ಲಿ ಅಂತಾರಾಜ್ಯ ಪ್ರವಾಸವನ್ನು ಮಾಡುವ ಉದ್ದೇಶದಿಂದ ಈ ಮೂರು ಪ್ಯಾಕೇಜ್ ಇಡಲಾಗಿದೆ. ಇದರ ಬಗ್ಗೆ ಮಾಹಿತಿ ನೀಡಬೇಕು ಎನ್ನುವ ಕಾರಣಕ್ಕೆ ಪೋಸ್ಟ್ ಮಾಡಲಾಗಿದೆ. ಇದಕ್ಕೆ ರಾಜಕೀಯ ಬಣ್ಣ ಬಳಿಯುವ ಅವಶ್ಯಕತೆಯಿಲ್ಲ.

-ಎಂ.ಶ್ರೀನಿವಾಸ್
ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಅಧ್ಯಕ್ಷ

ಅನನ್ಯಾ ಭಟ್ ರಂಗಪ್ರವೇಶ ಸಂಪನ್ನ

ಬೆಂಗಳೂರು: ನಗರದ ಮಲ್ಲೇಶ್ವರದಲ್ಲಿ ಅ.25ರ ಶನಿವಾರದಂದು ನೃತ್ಯಗಾತಿ ವಿದುಷಿ ಶಮಾ ಕೃಷ್ಣ ಅವರ ಶಿಷ್ಯೆ ಅನನ್ಯಾ ಭಟ್ ಅವರ ಭರತನಾಟ್ಯ ರಂಗ ಪ್ರವೇಶವು ನಡೆಯಿತು.

ಶನಿವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಕಲಾಶ್ರೀ ವಿದುಷಿ ನಂದಿನಿ.ಕೆ ಮೆಪ್ತಾ ಮತ್ತು ವಿದ್ವಾನ್ ಶೇಷಾದ್ರಿ ಅಯ್ಯಂಗಾರ್ ಸೇರಿದಂತೆ ಭಾರತೀಯ ಶಾಸ್ತ್ರೀಯ ನೃತ್ಯಲೋಕದ ದಿಗ್ಗಜರು ಭಾಗವಹಿಸಿದ್ದರು. ಪುಷ್ಪಾಂಜಲಿಯೊಂದಿಗೆ ಪ್ರಾರಂಭವಾದ ಪ್ರದರ್ಶನವು ಕಲಾಸರಸ್ವತಿ ಶಾರದೆಯ ಕುರಿತು ಕೀರ್ತನೆ, ಸಂಕೀರ್ಣ ಜತಿಸ್ವರದಲ್ಲಿ ಸ್ತ್ರೀಯ 3 ಜೀವನ ಹಂತಗಳು ಹಾಗೂ ಕೊನೆಯದಾಗಿ ಉತ್ಸಾಹಭರಿತ ತಿಲ್ಲಾನವನ್ನು ಭಾವಪೂರ್ಣವಾಗಿ ಪ್ರದರ್ಶಿಸಿದರು. ಸ್ತ್ರೀ ವ್ಯಕ್ತಿತ್ವದ ಗೌರವಸೂಚಕವಾಗಿ ಬಹುಮುಖಿ ವಿಷಯಾಧಾರಿತ ಪ್ರದರ್ಶನವು ಕುಮಾರಿ ಅನನ್ಯಾ ಅವರ ಲಯ, ಅಭಿನಯ ಮತ್ತು ಪ್ರಸ್ತುತಿಯ ಮೇಲಿನ ಹಿಡಿತವನ್ನು ಬಹಿರಂಗಪಡಿಸುವ ಮೂಲಕ ಎರಡೂವರೆ ಗಂಟೆಗಳ ಕಾಲ ನಡೆಯಿತು.

ಹಿಮ್ಮೇಳದಲ್ಲಿ ನೃತ್ಯಗುರು ವಿದುಷಿ ಶಮಾ ಕೃಷ್ಣ ನಟುವಾಂಗ, ಗಾಯನದಲ್ಲಿ ವಿದ್ವಾನ್ ಅಭಿಷೇಕ ಶ್ರೀಧರ್, ಮೃದಂಗದಲ್ಲಿ ವಿದ್ವಾನ್ ಕಾರ್ತಿಕ್ ವೈಧಾತ್ರಿ, ಕೊಳಲಿನಲ್ಲಿ ವಿದ್ವಾನ್ ಮಹೇಶ ಸ್ವಾಮಿ, ವೀಣೆಯಲ್ಲಿ ವಿದ್ವಾನ್ ಶಂಕರರಾಮನ್ ಹಾಗೂ ರಿದಂ ಪ್ಯಾಡ್‌ನಲ್ಲಿ ವಿದ್ವಾನ್ ಭಾರ್ಗವ ಹಾಲಂಬಿ ಇವರು ಪ್ರದರ್ಶನಕ್ಕೆ ಮೆರುಗು ತಂದರು.

ಬುರುಡೆ ಪ್ರಕರಣ: ತಿಮರೋಡಿ ತಂಡಕ್ಕೆ ತಾತ್ಕಾಲಿಕ ರಿಲೀಫ್

ಬೆಂಗಳೂರು: ಧರ್ಮಸ್ಥಳ ತಲೆಬುರುಡೆ ಪ್ರಕರಣ ವಿಚಾರವಾಗಿ ಗಿರೀಶ್ ಮಟ್ಟಣ್ಣನವರ್, ಮಹೇಶ್ ಶೆಟ್ಟಿ ತಿಮರೋಡಿ, ಟಿ.ಜಯಂತ್ ಮತ್ತು ವಿಠಲ್ ಗೌಡಗೆ ಹೈಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ.

ಧರ್ಮಸ್ಥಳದ ಠಾಣೆಯ ಎಫ್‌ಐಆರ್ 39/2025 ರದ್ದು ಕೋರಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಮೊಹಮ್ಮದ್ ನವಾಜ್ ಅವರಿದ್ದ ಪೀಠ, ಪರ-ವಿರೋಧ ವಾದ ಆಲಿಸಿ ಪ್ರಕರಣದ ತನಿಖೆಗೆ ನ.12ರವರೆಗೆ ತಡೆ ನೀಡಿ ಆದೇಶಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಬಾಲನ್, ಈಗಾಲೇ 9 ಬಾರಿ ನೋಟಿಸ್ ನೀಡಿ ವಿಚಾರಣೆ ನಡೆಸಲಾಗಿದೆ. ಎಫ್‌ಐಆರ್‌ನಲ್ಲಿ ನಮ್ಮನ್ನು ಆರೋಪಿಗಳೆಂದು ಉಲ್ಲೇಖಿಸಿಲ್ಲ. ಖುದ್ದಾಗಿ ನೋಟಿಸ್ ಜಾರಿ ಮಾಡದೇ ವಾಟ್ಸ್ಯಾಪ್, ಇಮೇಲ್‌ಗಳಲ್ಲಿ ನೀಡಿದ್ದಾರೆ. ಐಪಿಸಿ ಸೆಕ್ಷನ್ 35(3) ಅಡಿಯಲ್ಲಿ ಸಮನ್ಸ್ ನೀಡಿದ್ದು, ಎಸ್‌ಐಟಿ ಸಮನ್ಸ್ ನೀಡಿರುವುದು ಕಾನೂನು ಬಾಹಿರ. ನಾವು ಆರೋಪಿಗಳೂ ಅಲ್ಲ, ಸಾಕ್ಷಿಯೂ ಅಲ್ಲವೆಂದು ವಾದ ಮಂಡಿಸಿದ್ದರು. ರಾಜಕೀಯ , ಧಾರ್ಮಿಕ ಮತ್ತು ಸಂಘಟನಾತ್ಮಕ ವೈರತ್ವದಿಂದ ನೋಟಿಸ್ ನೀಡಲಾಗಿದೆ. ವಿಚಾರಣೆ ಹೆಸರಲ್ಲಿ ಬೆಳಗ್ಗೆಯಿಂದ ಮಧ್ಯರಾತ್ರಿವರೆಗೆ ಕೂರಿಸಲಾಗುತ್ತದೆ. ಈಗಾಗಲೇ 150 ಗಂಟೆಗೂ ಹೆಚ್ಚು ಕಾಲ ಅರ್ಜಿದಾರರ ವಿಚಾರಣೆ ನಡೆಸಲಾಗಿದೆ. ಆರಂಭದಲ್ಲಿ 211(ಎ) ಅಡಿ ಎಫ್‌ಐಆರ್ ದಾಖಲಿಸಿ ನಂತರ ಬೇರೆ ಸೆಕ್ಷನ್ ಸೇರಿಸಿದ್ದಾರೆ ಎಂದು ಬಾಲನ್ ವಾದಿಸಿದ್ದಾರೆ. ಎಸ್‌ಐಟಿ ಪರ ಎಸ್‌ಪಿಪಿ ಬಿ.ಎನ್. ಜಗದೀಶ್ ವಾದ ಮಂಡಿಸಿದ್ದು, ಅರ್ಜಿದಾರರ ಪ್ರಚೋದನೆ ಮೇಲೆಯೇ ಚಿನ್ನಯ್ಯ ದೂರು ನೀಡಿದ್ದಾನೆ. ನಂತರ 164 ಹೇಳಿಕೆ ನೀಡಿ ಅರ್ಜಿದಾರರ ಮೇಲೆ ಆರೋಪ ಮಾಡಿದ್ದಾನೆ. ಧರ್ಮಸ್ಥಳ ಗ್ರಾಮದ 20 ಕಡೆ ಅಗೆದು ಪರಿಶೀಲನೆ ನಡೆಸಲಾಗಿದ್ದು, ಈಗ ಆರೋಪಿಗಳನ್ನಾಗಿಸಿ ಇವರಿಗೆ ನೋಟಿಸ್ ನೀಡಲಾಗಿದೆ ಎಂದು ನ್ಯಾಯಾಲಕ್ಕೆ ತಿಳಿಸಿದ್ದಾರೆ.

ಜಿಬಿಎ ಮುಖ್ಯ ಆಯುಕ್ತರಿಗೆ ಆಡಳಿತ ಸೌಲಭ್ಯ ವಹಿಸಲು ಮನವಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಅಧಿಕಾರಿ, ನೌಕರರ ಬಡ್ತಿ, ವರ್ಗಾವಣೆ, ನೇಮಕಾತಿ ಪ್ರಾಧಿಕಾರ ಹಾಗೂ ಶಿಸ್ತು ಪ್ರಾಧಿಕಾರ ಸೇರಿ ಇತರ ಆಡಳಿತ ಸೌಲಭ್ಯವನ್ನು ಜಿಬಿಎ ಮುಖ್ಯ ಆಯುಕ್ತರ ಅಧೀನದಲ್ಲಿ ಕಾರ್ಯನಿರ್ವಹಿಸಬೇಕೆಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಪತ್ರ ಬರೆದಿದೆ.

ಅಧಿಕಾರಿ ಮತ್ತು ನೌಕರರ 'ಎ', ಬಿ', ಸಿ', ಡಿ' ವೃಂದದ ಸೇವಾನಿಯಮದ ಜ್ಯೇಷ್ಠತಾ ಪಟ್ಟಿ, ಬಡ್ತಿ, ವರ್ಗಾವಣೆಯನ್ನು ಜಿಬಿಎ ಮುಖ್ಯ ಆಯುಕ್ತರ ವ್ಯಾಪ್ತಿಯ ಆಡಳಿತ ಶಾಖೆ ನಿರ್ವಹಿಸಬೇಕು. ಅಧಿಕಾರಿ, ನೌಕರರು ಆಕಸ್ಮಿಕವಾಗಿ ಮೃತ ಹೊಂದಿದ್ದಲ್ಲಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದಲ್ಲಿ ನೌಕರಿ ನೀಡುವ ಅಧಿಕಾರವನ್ನು ಜಿಬಿಎ ಮುಖ್ಯ ಆಯುಕ್ತರಿಗೆ ನೀಡಬೇಕು ಎಂದು ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ಹೇಳಿದ್ದಾರೆ.

ಅಧಿಕಾರಿ ಮತ್ತು ನೌಕರರ ಆರೋಗ್ಯ ಸೌಲಭ್ಯವಾದ ಚಿಕಿತ್ಸೆ, ಶಸಚಿಕಿತ್ಸೆ ಉಸ್ತುವಾರಿಯನ್ನು ಜಿಬಿಎ ಮುಖ್ಯ ಆಯುಕ್ತರ ವ್ಯಾಪ್ತಿಯ ಮುಖ್ಯ ಆರೋಗ್ಯಾಧಿಕಾರಿ ಕ್ಲಿನಿಕಲ್ ವತಿಯಿಂದ ಆರೋಗ್ಯ ಚಿಕಿತ್ಸೆ ಸೌಲಭ್ಯ ಕಲ್ಪಿಸಬೇಕು. ಅಲ್ಲದೆ, ಆಡಳಿತ ಸೌಲಭ್ಯದ ನಿಯಮ ಅಧಿಕಾರ ಪ್ರತ್ಯೋಜನೆಯನ್ನು ಮುಖ್ಯ ಆಯುಕ್ತರು ವಹಿಸಿಕೊಂಡಲ್ಲಿ ಸುಗಮವಾಗಿ ಪಡೆಯಬಹುದು ಎಂದು ಹೇಳಿದರು.

ಒಳಮೀಸಲಾತಿ ಆದೇಶ ರದ್ದು ಸರಕಾರದ ದುರುದ್ದೇಶ

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಸಂಸದ ಗೋವಿಂದ ಕಾರಜೋಳ ಮಾತನಾಡಿದರು. ಎಚ್.ವೆಂಕಟೇಶ್ ದೊಡ್ಡೇರಿ, ಹೂಡಿ ಮಂಜುನಾಥ, ಅನಿಲ್ ಕುಮಾರ್, ಲಕ್ಷ್ಮೀನಾರಾಯಣ್ ಉಪಸ್ಥಿತರಿದ್ದರು.

ಬೆಂಗಳೂರು: ವೇಳಾಪಟ್ಟಿ ಪ್ರಕಾರ ಡಿಸೆಂಬರ್ 8ಕ್ಕೆ ಬೆಳಗಾವಿ ಅಧಿವೇಶನ ಆರಂಭ ಆಗಲಿದ್ದು, ಅಷ್ಟರೊಳಗೆ ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟಿನಲ್ಲಿ ಕೇಸುಗಳು ದಾಖಲಾಗಿ ಒಳಮೀಸಲಾತಿ ಕುರಿತ ಆದೇಶ ರದ್ದಾಗಬೇಕೆಂಬುದೇ ಸಿದ್ದರಾಮಯ್ಯರ ಸರಕಾರದ ದುರುದ್ದೇಶ ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 30 ವರ್ಷದಿಂದ ರಾಜ್ಯದಲ್ಲಿ ಪರಿಶಿಷ್ಟ ಜನಾಂಗ, ಜಾತಿಯಲ್ಲಿ ಒಳಮೀಸಲಾತಿ ಜಾರಿ ಆಗಬೇಕು. 101 ಜಾತಿಗಳಿಗೆ ಸಾಮಾಜಿಕ ನ್ಯಾಯದಲ್ಲಿ ಎಲ್ಲರಿಗೂ ಮೀಸಲಾತಿ ಸೌಲಭ್ಯ ಸಿಗಬೇಕೆಂದು ನಿರಂತರ ಹೋರಾಟ ಮಾಡಿದ್ದರಿಂದ ಪ್ರಧಾನಿ ಮೋದಿ ಸರಕಾರ ಮುತುವರ್ಜಿ ವಹಿಸಿ ನ್ಯಾಯ ದೊರಕಿಸಿ ಕೊಟ್ಟು ಇಂದಿಗೆ ಒಂದು ವರ್ಷ 3 ತಿಂಗಳಾಗಿದೆ. ಆದರೂ ಕರ್ನಾಟಕದ ಸಿದ್ದರಾಮಯ್ಯರ ನೇತೃತ್ವದ ಕಾಂಗ್ರೆಸ್ ಸರಕಾರವು ವಿಳಂಬ ನೀತಿ ಜೊತೆಗೆ ಗೊಂದಲ ಸೃಷ್ಟಿಸುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಸರಕಾರ ದೋಷಭರಿತ ಆದೇಶಗಳನ್ನು ಮಾಡುತ್ತಿದೆ. ಈ ಮೂಲಕ ಪರಿಶಿಷ್ಟ ಜನಾಂಗದವರಿಗೆ ಅನ್ಯಾಯ ಮಾಡುತ್ತಿದೆ. ಸರಕಾರದ ಆದೇಶ ಪ್ರಶ್ನಿಸಿ ಈಚೆಗೆ ಹೈಕೋರ್ಟ್‌ನಲ್ಲಿ ಕೇಸ್ ಬಂದಾಗ ರಾಜ್ಯ ಸರಕಾರದ ಕಡೆಯಿಂದ ಯಾರೂ ಹಾಜರಾಗಿಲ್ಲ. ಹೀಗಾಗಿ ಆದೇಶ ಭಾಗಶಃ ತಡೆಯಾಗಿದೆ ಎಂದರು.

101 ಜಾತಿಯ ಹಿತ ಕಾಯಲು ಬಯಸುತ್ತಿಲ್ಲ:

ಒಂದು ಜಾತಿಯ ಹಿತಕ್ಕಾಗಿ ಸಿದ್ದರಾಮಯ್ಯನವರು ಈ ದೊಂಬರಾಟ ಮಾಡುತ್ತಿದ್ದಾರೆ. 101 ಜಾತಿಯ ಹಿತ ಕಾಯಲು ಅವರು ಬಯಸುತ್ತಿಲ್ಲ. ಆರ್ಥಿಕ ಸಂಕಷ್ಟ ಇರುವುದರಿಂದ ನೇಮಕಾತಿ ಮುಂದೆ ಹೋದಷ್ಟೂ ಅವರಿಗೆ ಒಳ್ಳೆಯದೆಂಬ ಭಾವನೆ ಇದೆ. ಖಜಾನೆ ಖಾಲಿ ಆಗಿದೆ. ನೇಮಕಾತಿ ಮಾಡಲೂ ಅವರು ತಯಾರಿಲ್ಲ. ಕರಡು ಮಸೂದೆ ಮಂಡಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ನ.5ರೊಳಗೆ ಹೈಕೋರ್ಟ್‌ಗೆ ಸರಕಾರ ತನ್ನ ವಾದ ಮಂಡಿಸಲು ಬೇಕಾದ ವಿವರಣೆ ನೀಡಬೇಕಾಗಿದೆ ಎಂದರು.

ದಲಿತರು, ಅಸ್ಪೃಶ್ಯರು ಉದ್ಧಾರ ಆಗಬಾರದು ಎಂಬುದೇ ರಾಜ್ಯದ ಕಾಂಗ್ರೆಸ್ ಮನಸ್ಥಿತಿ. 79 ವರ್ಷ ಮತಬ್ಯಾಂಕ್ ಆಗಿದ್ದರೂ ಮುಂದೆಯೂ 100 ವರ್ಷ ಮತಬ್ಯಾಂಕ್ ಆಗಿರಬೇಕು ಹಾಗೂ ಅವರು ಉದ್ಧಾರ ಆಗಬಾರದು ಎಂಬುದೇ ಕಾಂಗ್ರೆಸಿನ ನೀಚಬುದ್ಧಿ . ಸಮಾಜಕಲ್ಯಾಣ ಇಲಾಖೆ ಸಮರ್ಪಕವಾಗಿ ವಾದ ಮಂಡನೆಗೆ ಯಾವುದೇ ತಯಾರಿ ಮಾಡುತ್ತಿಲ್ಲ. ಅವರೇ ನೇಮಿಸಿದ ನ್ಯಾ. ನಾಗಮೋಹನದಾಸ್, ನ್ಯಾ.ಸದಾಶಿವ ಅವರ ವರದಿ ಒಪ್ಪಿಲ್ಲ,. ನಮ್ಮ ಸರಕಾರದ ಮಾಧುಸ್ವಾಮಿಯವರ ಸಂಪುಟ ಉಪ ಸಮಿತಿ ವರದಿ ಒಪ್ಪಿಲ್ಲ.

-ಗೋವಿಂದ ಕಾರಜೋಳ ಸಂಸದ

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಯಂಡ್ರಕಾಯಿಲಪಲ್ಲಿ ಬಾಗೇಪಲ್ಲಿ ತಾಲೂಕು
- **ಸಮಸ್ಯೆಯೇನು..?:** ಗ್ರಾಮದಲ್ಲಿ ಚರಂಡಿ ನಿರ್ಮಾಣ ಮಾಡುವ ಕುರಿತು.
- **ಪರಿಹಾರ:** ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲೂಕಿನ ಯಂಡ್ರಿಕಾಯಿಲಪಲ್ಲಿ ಗ್ರಾಮದಲ್ಲಿ ಸೂಕ್ತ ಚರಂಡಿ ಇಲ್ಲದೆ ರಸ್ತೆ ಮೇಲೆ ನೀರು ಹರಿದು ಹೋಗುತ್ತಿರುವ ಬಗ್ಗೆ ಸಾರ್ವಜನಿಕರೊಬ್ಬರು ದೂರು ಸಲ್ಲಿಸಿದ್ದರು. ಸದ್ಯ ಚರಂಡಿ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಗೌರವ ಕೊಟ್ಟು, ಕರೆದು ಮಾತಾಡಿದರೆ ಬಾಯಿಗೆ ಬಂದದ್ದು ಒದರುತ್ತಿದ್ದಾನೆ: ಡಿಕೆಶಿ

ತೇಜಸ್ವಿ ಸೂರ್ಯ ಎಳಸು, ಅನುಭವವಿಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ವಿರುದ್ಧ ವಾಗ್ದಾಳಿ ನಡೆಸಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಏಕವಚನದಲ್ಲಿ ಟೀಕಿಸಿದ್ದಾರೆ. ಸೂರ್ಯ ಇನ್ನೂ ಎಳಸು, ಗೌರವ ಕೊಟ್ಟು ಕರೆದು ಮಾತಾಡಿದರೆ ಬಾಯಿಗೆ ಬಂದಂತೆ ಒದರುತ್ತಿದ್ದಾನೆ ಎಂದು ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟನಲ್ ರಸ್ತೆ ಬೇಡವೆಂದು ಹೇಳುವುದಕ್ಕೆ ಈ ತೇಜಸ್ವಿ ಸೂರ್ಯ ಯಾರು? ಈ ದೇಶದಲ್ಲಿ, ಪ್ರಪಂಚದಲ್ಲಿಯೇ ಟನಲ್ ರಸ್ತೆಗಳೇ ಬೇಡ ಎಂದು ಅವನು ಕೇಂದ್ರ ಸಚಿವನಾದ ಮೇಲೆ ಲೋಕಸಭೆಯಲ್ಲಿ ತೀರ್ಮಾನ ಮಾಡಲಿ. ಏನೋ ಹೋಗಲಿ ಅಂತ ಗೌರವ ಕೊಟ್ಟು ನನ್ನ ಜತೆ ಮಾತನಾಡಲು ಅವಕಾಶ ನೀಡಿದರೆ ಏನೇನೋ ಮಾತನಾಡುತ್ತಿದ್ದಾನೆ. ಆದರೆ ನಾನು ಆತನ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಸಂಸದ ತೇಜಸ್ವಿ ಸೂರ್ಯನಿಗೆ ಪ್ರಪಂಚ ಹೇಗಿದೆ ಎಂದೇ ಗೊತ್ತಿಲ್ಲ ಎಂದರು.

ಈತ ಏಕೆ ಕಾರಲ್ಲಿ ಓಡಾಡುತ್ತಿದ್ದಾನೆ?: ನಾನು ಹುಡುಗನ ಬಳಿ ಕಾರಿಲ್ಲದಿದ್ದರೆ ಹೆಣ್ಣು ನೀಡುವುದಿಲ್ಲ ಎಂದಿದ್ದೆ. ಅದನ್ನೇ ಹಿಡಿದುಕೊಂಡು ಮಾತಾಡುತ್ತಿದ್ದಾನೆ. ಈತ ಏಕೆ ಕಾರಲ್ಲಿ ಓಡಾಡುತ್ತಿದ್ದಾನೆ? ಆತ, ಆತನ ಕುಟುಂಬ ಸದಸ್ಯರು ಮೆಟ್ರೋ, ಸರಕಾರಿ ಬಸ್ ಬಳಸಲಿ. ಅವರ ಪಕ್ಷದ ಶಾಸಕರು ಮೆಟ್ರೋ, ಆಟೋರಿಕ್ಷಾ, ಸಾರ್ವಜನಿಕ ಸಾರಿಗೆಗಳಲ್ಲಿ ಓಡಾಡಲಿ. ಬೇಡ ಎಂದವರಾರು? ಇವರಿಗೆ ಕಾರುಗಳು ಏಕೆ ಬೇಕು? ಬೆಂಗಳೂರಿನಲ್ಲಿ 1.30 ಕೋಟಿಗೂ ಹೆಚ್ಚು ವಾಹನಗಳಿವೆ ಎಂಬುದನ್ನು ಆತ ಅರ್ಥ ಮಾಡಿಕೊಳ್ಳಬೇಕು, ಅವರಿಗೆಲ್ಲ ವಾಹನ ಬಳಸಬೇಡಿ ಎಂದು ಹೇಳಲು ಆಗುತ್ತದೆಯೇ? ಎಂದು ಟೀಕಿಸಿದ್ದಾರೆ.

ಮದುವೆ ಮಾಡಿಸಲು ಈ ಯೋಜನೆ ಕೈಗೆತ್ತಿಕೊಂಡಿದ್ದಾರೆ ಎನ್ನುವ ಟೀಕೆಯ ಬಗ್ಗೆ ಕೇಳಿದಾಗ, ಅದಕ್ಕೆ ನಾನು ಆತನನ್ನು ಎಳಸು ಎಂದು ಕರೆದಿದ್ದು. ನೀವೆಲ್ಲರೂ ಕ್ಯಾಮೆರಾ ಹಿಡಿದುಕೊಂಡು (ಮಾಧ್ಯಮದವರು) ಸಾರ್ವಜನಿಕ ಸಾರಿಗೆಯಲ್ಲಿ ಓಡಾಡಿಕೊಂಡು ಕೆಲಸ ಮಾಡಲು ಆಗುತ್ತದೆಯೇ? ಶಾಲಾ ಮಕ್ಕಳನ್ನು ಶಾಲಾ ವಾಹನದಲ್ಲಿ ಕಳುಹಿಸುತ್ತಾರೆ. ಅವರಿಗೆ ಸಾರ್ವಜನಿಕ ಸಾರಿಗೆಯಲ್ಲಿ ಕಳುಹಿಸಿ ಎಂದು ಹೇಳಲು ಆಗುತ್ತದೆಯೇ? ಎಂದರು.

ಈ ರಾಜ್ಯಕ್ಕೆ ಮೆಟ್ರೋ ತಂದವರು ನಾವು. ಅವರಿಗೆ ಅಧಿಕಾರ ಇದ್ದಾಗ ಏನು ಮಾಡಿದ್ದಾರೆ? ಕೇಂದ್ರದಿಂದ ಏನು ತೆಗೆದುಕೊಂಡು ಬಂದಿದ್ದಾರೆ? ಬೆಂಗಳೂರಲ್ಲಿ ಎಷ್ಟು ಪಿಲ್ಲರ್ ಹಾಕಿದ್ದಾರೆ? ಯೋಜನೆಗೆ ಹಣವೆಷ್ಟು ತಂದಿದ್ದಾರೆ? ಕೇಂದ್ರ ಸರಕಾರ ಮೆಟ್ರೋ ಯೋಜನೆಗೆ ಶೇ.11-12ರಷ್ಟು ಹಣ ನೀಡುತ್ತಿದೆ. ಭೂ ಪರಿಹಾರ ಸೇರಿದಂತೆ ಎಲ್ಲವನ್ನೂ ನಾವೇ ನೀಡುತ್ತಿದ್ದೇವೆ ಎಂದರು.

ಅವನ (ತೇಜಸ್ವಿ ಸೂರ್ಯ) ಬಗ್ಗೆ ನನ್ನ ಬಳಿ ಯಾವ ಪ್ರಶ್ನೆಯನ್ನೂ ಕೇಳಬೇಡಿ. ಹೋಲಿಕೆ ಮಾಡಬೇಡಿ. ಹೀ ಇಸ್ ಎ ವೇಸ್ಟ್ ಮೆಟಿರಿಯಲ್, ಖಾಲಿ ಟ್ರಂಕ್ ಆತ. ಅವರ ಪಕ್ಷದ ಹಿರಿಯ ನಾಯಕರಾದ ಅಶೋಕ, ಅಶ್ವತ್ಥ ನಾರಾಯಣ್, ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್ ಅಂತಹವರು ಮಾತನಾಡಿದರೆ ಉತ್ತರ ನೀಡೋಣ. ಏಕೆಂದರೆ ಅವರಿಗೆ ಇದೆಲ್ಲವೂ ಅರ್ಥವಾಗುತ್ತದೆ. ಬೆಂಗಳೂರಿನಲ್ಲಿ ಬಿಆರ್‌ಟಿಎಸ್ ಮಾಡಲು ಎಲ್ಲಿ ಜಾಗವಿದೆ? ಭೂ ಪರಿಹಾರ ಎಷ್ಟಾಗುತ್ತದೆ ಎನ್ನುವ ಅರಿವು ತೇಜಸ್ವಿ ಸೂರ್ಯನಿಗೆ ತಲೆಯಲ್ಲಿಯೇ ಇಲ್ಲ.

- ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಧರ್ಮಸ್ಥಳ ವಿರುದ್ಧ ದೂರು ನೀಡಿದವರ ಬಣ್ಣ ಬಯಲು

ಮೈಸೂರು: ಧರ್ಮಸ್ಥಳ ವಿಚಾರದಲ್ಲಿ ದೂರು ನೀಡಿದವರ ಬಣ್ಣ ಬಯಲಾಗುತ್ತಿದೆ. ಆ ಕ್ಷೇತ್ರದ ಹೆಸರಿಗೆ ಮಸಿ ಬಳಿಯಲು ಷಡ್ಯಂತ್ರ ನಡೆದಿತ್ತು ಎಂಬುದು ಮೊದಲಿನಿಂದಲೂ ಗೊತ್ತಿತ್ತು. ಈಗ ಕಾನೂನಾತ್ಮಕವಾಗಿ ಅದು ಸಾಬೀತಾಗುತ್ತಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅಲ್ಲಿ ಯಾವ ಅಸ್ಥಿಪಂಜರಗಳೂ ಸಿಗಲಿಲ್ಲ. ಹೀಗಾಗಿ ದೂರುದಾರರೇ ದೂರು ವಾಪಸ್ ಪಡೆಯಲು ಮುಂದಾಗಿದ್ದಾರೆ. ಸೌಜನ್ಯ ಕೇಸ್ ಬಗ್ಗೆಯೂ ಪೂರ್ಣವಾಗಿ ತನಿಖೆಯಾಗಲಿ, ಎಲ್ಲ ಸತ್ಯವೂ ಹೊರ ಬರಲಿ ಎಂದರು. ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಚುನಾವಣಾ ಆಯುಕ್ತರನ್ನು ನಿಂದಿಸಿರುವುದು ಸರಿಯಲ್ಲ. ಸಾಂವಿಧಾನಿಕ ಸಂಸ್ಥೆಗಳಲ್ಲಿ ಇರುವವರ ಬಗ್ಗೆ ಗೌರವದಿಂದ ಮಾತನಾಡಬೇಕು. ಅವರ ಸರಕಾರ ಬಂದಿದ್ದು ಕೂಡ ಇದೇ ಚುನಾವಣೆ ವ್ಯವಸ್ಥೆಯಿಂದಲೇ. ಸರಕಾರ ಬಂದಾಗ ಸರಿ ಎನ್ನುವುದು, ಬಾರದಿದ್ದಾಗ ತಪ್ಪು ಎನ್ನುವುದು ಎಷ್ಟು ಸರಿ ಎಂಬುದನ್ನು ಅವರೇ ಹೇಳಲಿ. ಯಾರೋ ಒಂದಿಬ್ಬರ ಹೇಳಿಕೆಗಳಿಂದ ಈ ವ್ಯವಸ್ಥೆಯ ಬಗ್ಗೆ ಅನುಮಾನಗಳು ಬರುವುದಿಲ್ಲ. ಅಂತಹ ಅಭಿಪ್ರಾಯಗಳಿಗೆ ಬೆಲೆ ಕೊಡಬಾರದು ಎಂದರು.

ಯಾವ ಕಾರಣಕ್ಕೆ ಕೈಗಾರಿಕೆಗಳು ಕರ್ನಾಟಕದ ಕೈತಪ್ಪುತ್ತಿದೆ ಎಂಬುದನ್ನು ರಾಜ್ಯ ಸರಕಾರ ಯೋಚಿಸಬೇಕು. ಈ ನಿಟ್ಟಿನಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು. ಸುಮ್ಮನೆ ರಾಜಕೀಯವಾಗಿ ಕೇಂದ್ರ ಸರಕಾರದ ವಿರುದ್ಧ ಆರೋಪಿಸುವುದು ಸರಿಯಲ್ಲ ಎಂದು ಹೇಳಿದರು.

ಗ್ಯಾರಂಟಿ ಯೋಜನೆ ಕುರಿತು ಬಿಟ್ಟರೆ, ಈ ಸರಕಾರದವರ ಬಾಯಲ್ಲಿ ಬೇರೇನೂ ಬರುತ್ತಿಲ್ಲ. ಅಭಿವೃದ್ಧಿ ಆಗುತ್ತಿಲ್ಲ. ಗುಂಡಿ ಮುಚ್ಚಲು ಕೂಡ ಇವರ ಬಳಿ ಹಣ ಇಲ್ಲದಂತಾಗಿದೆ.

- ಯದುವೀರ್ ಒಡೆಯರ್ ಸಂಸದ

ಗೂಡ್ಸ್ ವಾಹನ ಮರಕ್ಕೆ ಡಿಕ್ಕಿ: ಮೂವರ ಸಾವು

ಶಿವಮೊಗ್ಗ: ನಗರದ ಹೊರವಲಯದ ಗೋಂದಿ ಚಟ್ನಳ್ಳಿ ಗ್ರಾಮದ ಸಮೀಪ ಗುರುವಾರ ಬೆಳ್ಳಂಬೆಳಗ್ಗೆ ಗೂಡ್ಸ್ ವಾಹನವೊಂದು ಮರಕ್ಕೆ ಅಪ್ಪಳಿಸಿದ್ದು, ಸ್ಥಳದಲ್ಲಿಯೇ ಮೂವರು ಮೃತಪಟ್ಟಿದ್ದಾರೆ. ಅಸಾದುಲ್ಲಾ (50), ಸಾದಿಕ್ (30), ಮತ್ತು ಫಿರೋಜ್ (22) ಮೃತರು. ಮೃತರ ಪೈಕಿ ಅಸಾದುಲ್ಲಾ ದಾವಣಗೆರೆ ಜಿಲ್ಲೆಯ ಚನ್ನಗಿರಿ ಮೂಲದವರಾಗಿದ್ದು, ಸಾದಿಕ್ ಮತ್ತು ಫಿರೋಜ್ ಉತ್ತರಪ್ರದೇಶದ ಕಾರ್ಮಿಕರು ಎಂದು ತಿಳಿದು ಬಂದಿದೆ. ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಗ್ರಂಥಪಾಲಕ ಆತ್ಮಹತ್ಯೆ: ಪಿಡಿಒ ಅಮಾನತು

ನೆಲಮಂಗಲ: ಕೆಲಸ ಹಾಗೂ ಸಂಬಳದ ವಿಚಾರದಲ್ಲಿ ಕಿರುಕುಳ ನೀಡಿದ್ದಕ್ಕೆ ಮನನೊಂದು ಗ್ರಾಮ ಪಂಚಾಯಿತಿ ಗ್ರಂಥಪಾಲಕರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪಿಡಿಒ ಗೀತಾಮಣಿ ಅವರನ್ನು ಅಮಾನತು ಮಾಡಲಾಗಿದೆ. ನೆಲಮಂಗಲ ತಾಲೂಕಿನ ಕಳಲುಘಟ್ಟ ಗ್ರಾಮ ಪಂಚಾಯಿತಿ ಗ್ರಂಥಪಾಲಕರಾಗಿದ್ದ ರಾಮಚಂದ್ರಯ್ಯ ಅವರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಸಂಬಂಧ ರಾಮಚಂದ್ರಯ್ಯ ಅವರ ಅಣ್ಣನ ಮಗ ತ್ಯಾಮಗೊಂಡ್ಲು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪಿಡಿಒ ವಿರುದ್ಧ ಎಫ್‌ಐಆರ್ ದಾಖಲಾಗುತ್ತಿದ್ದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಅನುರಾಧ ಕೆ.ಎಸ್ ಅವರು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ. ಕಳೆದ ಮೂರು ತಿಂಗಳಿಂದ ಸಂಬಳ ನೀಡದೆ ಕಿರುಕುಳ ನೀಡುತ್ತಿದ್ದರು. ಜತೆಗೆ ಬಯೋಮೆಟ್ರಿಕ್ ಹಾಜರಾತಿ ಹಾಕದೇ, ಇಲ್ಲಸಲ್ಲದ ಕಾರಣ ಹೇಳಿ ಕಿರುಕುಳಕ್ಕೆ ನೀಡಿದ್ದರು ಎಂದು ಪಿಡಿಒ ಗೀತಾಮಣಿ ವಿರುದ್ಧ ಕಿರುಕುಳ ಆರೋಪ ಕೇಳಿ ಬಂದಿತ್ತು.

ಅನುದಾನ ತಾರತಮ್ಯದ ಧೋರಣೆ ಕೇಂದ್ರದಲ್ಲೂ ಇದೆ: ಸಚಿವ ಡಾ.ಸುಧಾಕರ್

ಹೈಕಮಾಂಡ್ ಸೂಚಿಸಿದರೆ ರಾಜೀನಾಮೆ

ಕೋಲಾರ: ನವೆಂಬರ್ ತಿಂಗಳಲ್ಲಿ ಕ್ರಾಂತಿಯೋ, ಭ್ರಾಂತಿಯೋ ನನಗೆ ಗೊತ್ತಿಲ್ಲ, ಇವೆಲ್ಲಾ ಮಾಧ್ಯಮ ಮತ್ತು ಕೆಲವರ ಸೃಷ್ಟಿ. ಪಕ್ಷದಲ್ಲಿ ಮುಖ್ಯಮಂತ್ರಿ ಹಾಗೂ ಹೈಕಮಾಂಡ್ ಪರಮೋಚ್ಚ ಎಂಬುದನ್ನು ಅರಿತುಗೊಳ್ಳಬೇಕು ಹೈಕಮಾಂಡ್ ನನಗೆ ಸೂಚಿಸಿದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸರಕಾರದಲ್ಲಿ ಏನೇ ತೀರ್ಮಾನವಾಗಬೇಕಾದರೂ ಮುಖ್ಯಮಂತ್ರಿಗೆ ಪರಮೋಚ್ಚ ಅಧಿಕಾರ ಇದೆ. ಜತೆಗೆ ಮುಖ್ಯಮಂತ್ರಿಗೆ ಪಕ್ಷದ ಹೈಕಮಾಂಡ್ ಸೂಚನೆ ನೀಡುತ್ತದೆ. ಇದಕ್ಕೆಲ್ಲ ನಾವು ಬದ್ಧವಾಗಿರುತ್ತೇವೆ. 136 ಶಾಸಕರಿಗೆ ಹಾಗೂ ವಿಧಾನ ಪರಿಷತ್ ಸದಸ್ಯರಾದವರಿಗೆ ಮಂತ್ರಿಯಾಗಬೇಕು ಎಂಬ ಬಯಕೆ ಇರುತ್ತದೆ. ಇದು ರಾಜಕೀಯ ವ್ಯವಸ್ಥೆಯಲ್ಲಿ ಆಗುವ ಬದಲಾವಣೆಗಳು. ಪಕ್ಷ ನಮ್ಮನ್ನು ಗುರುತಿಸಿ ಅವಕಾಶ ಮಾಡಿಕೊಟ್ಟಿದೆ. ಆಡಳಿತಾತ್ಮಕವಾಗಿ ಹಾಗೂ ಪಕ್ಷದ ದೃಷ್ಟಿಯಿಂದ ಹೈಕಮಾಂಡ್ ಬದಲಾವಣೆಯ ತೀರ್ಮಾನ ತೆಗೆದುಕೊಳ್ಳುತ್ತದೆ. ಶಿಸ್ತಿಗೆ ಬದ್ಧರಾಗಿ ನಾವು ಸಹ ಸ್ಪಂದಿಸುತ್ತೇವೆ ಎಂದು ಹೇಳಿದರು. ಸಿದ್ದರಾಮಯ್ಯ ಅವರು 2028ರ ಚುನಾವಣೆಯಲ್ಲಿ ಸ್ಪರ್ಧೆ ಮಾಡುವ ಕುರಿತು ಪ್ರತಿಕ್ರಿಯಿಸಿ, ಅವರ ರಾಜಕೀಯ ಭವಿಷ್ಯದ ಬಗ್ಗೆ ಮಾತನಾಡುವ ಅಧಿಕಾರ ನಮಗಿಲ್ಲ. ಇದೆಲ್ಲ ಅವರ ವೈಯಕ್ತಿಕ ಹಾಗೂ ಪಕ್ಷದ ತೀರ್ಮಾನದ ಒಂದು ಭಾಗವಾಗಿರುತ್ತದೆ ಎಂದರು.

ಅನುದಾನದ ತಾರತಮ್ಯ ವಿಚಾರಕ್ಕಾಗಿ ಶಾಸಕ ಜಿ.ಕೆ.ವೆಂಕಟಶಿವಾರೆಡ್ಡಿ ನ್ಯಾಯಾಲಯದ ಮೊರೆ ಹೋಗಿರುವ ಬಗ್ಗೆ ಪ್ರತಿಕ್ರಿಯಿಸಿ, ವೆಂಕಟಶಿವಾರೆಡ್ಡಿ ಹಿರಿಯ ಶಾಸಕರು. ಅವರು ಸಹ ಆಡಳಿತ ಮತ್ತು ವಿರೋಧ ಪಕ್ಷದಲ್ಲಿ ಶಾಸಕರಾಗಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಅನುದಾನಕ್ಕಾಗಿ ಎಷ್ಟೆಲ್ಲಾ ಕಷ್ಟ ಅನುಭವಿಸಿದ್ದೇವೆ ಎಂಬುದನ್ನು ನೆನಪಿಸಿಕೊಳ್ಳಬೇಕು ಎಂದು ತಿರುಗೇಟು ನೀಡಿದರು. ಅನುದಾನ ತಾರತಮ್ಯದ ಧೋರಣೆ ಕೇಂದ್ರ ಸರಕಾರದಲ್ಲೂ ಇದೆ. ಬಿಜೆಪಿ ಅಧಿಕಾರ ಇರುವ ರಾಜ್ಯಗಳಲ್ಲಿ ಕಾಂಗ್ರೆಸ್ ಶಾಸಕರಿಗೆ ಅನುದಾನ ದೊರೆಯುತ್ತಿಲ್ಲ. ಇದು ನಿನ್ನೆ ಮೊನ್ನೆಯ ವಿಚಾರವಲ್ಲ. ಹಿಂದೆ ಸಾಕಷ್ಟು ತೊಂದರೆ ಅನುಭವಿಸಿದ್ದೇವೆ. ಕಾಂಗ್ರೆಸ್ ಶಾಸಕರಾಗಿದ್ದಾಗ ಶಕ್ತಿ ಮೀರಿ ಅನುದಾನ ತಂದು ಕೆಲಸ ಮಾಡಿಸಿದ್ದೇವೆ ಎಂದು ಹೇಳಿದರು.

ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಸಂಘ ಸಂಸ್ಥೆಗಳು ಕಾರ್ಯಕ್ರಮ ಮಾಡಬಾರದೆಂದು ಎಂದು ಆದೇಶ ಮಾಡಲಾಗಿದೆ. ಈ ಆದೇಶವನ್ನು 2013ರಲ್ಲಿ ಜಗದೀಶ ಶೆಟ್ಟರ್ ಮುಖ್ಯಮಂತ್ರಿ ಆಗಿದ್ದಾಗ ಆದೇಶ ಹೊರಡಿಸಿದ್ದರು. ಇದನ್ನು ಪಾಲನೆ ಮಾಡಲು ಸೂಚಿಸಿದ್ದೇವೆಯೇ ಹೊರತು ಯಾವುದೇ ಉದ್ದೇಶ ಇಟ್ಟುಕೊಂಡು ಮಾಡಿದ್ದಲ್ಲ.

- ಡಾ.ಎಂ.ಸಿ.ಸುಧಾಕರ್ ಉನ್ನತ ಶಿಕ್ಷಣ ಸಚಿವ

ಯಾರಿಗೂ ಬುದ್ಧಿವಾದ ಹೇಳುವವರು ನಾವಲ್ಲ

ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಶಾಸಕ ಪ್ರದೀಪ್ ಈಶ್ವರ್ ಪರಸ್ಪರ ನಿಂದನೆ ಮಾಡುತ್ತಿರುವ ಕುರಿತು ಮಾತನಾಡಿ, ಸಾರ್ವಜನಿಕ ಬದುಕಿನಲ್ಲಿ ಇರುವವರು ಭಾಷೆ ಬಳಕೆ ಮಾಡುವ ವಿಚಾರದಲ್ಲಿ ಎಚ್ಚರಿಕೆಯಿಂದ ಇರಬೇಕು. ಯಾರಿಗೂ ನಾವು ಬುದ್ದಿವಾದ ಹೇಳುವವರಲ್ಲ. ಅವರೇ ಪ್ರಬುದ್ಧರಿದ್ದು ಅರ್ಥ ಮಾಡಿಕೊಳ್ಳಬೇಕು. ಇತಿಮಿತಿಯೊಳಗೆ ಮಾತನಾಡಿದರೆ ಗೌರವ ದೊರೆಯುತ್ತದೆ ಎಂದು ಸಚಿವ ಸುಧಾಕರ್ ಕಿವಿಮಾತು ಹೇಳಿದರು.

ಚಿತ್ತಾಪುರದಲ್ಲಿ ಪಥಸಂಚಲನ ಇನ್ನೊಂದು ಸಭೆಗೆ ಸೂಚನೆ

ಕಲಬುರಗಿ: ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ಕುರಿತ ಕಗ್ಗಂಟು ಪರಿಹಾರಕ್ಕೆ ನ.5ರಂದು ಇನ್ನೊಂದು ಸುತ್ತಿನ ಶಾಂತಿ ಸಭೆ ನಡೆಸುವಂತೆ ಸೂಚಿಸಿದ ಕರ್ನಾಟಕ ಹೈಕೋರ್ಟ್‌ನ ಕಲಬುರಗಿ ಪೀಠ, ವಿಚಾರಣೆಯನ್ನು ನ.7ಕ್ಕೆ ಮುಂದೂಡಿತು.

ಈ ಕುರಿತ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್ ಅವರು ಗುರುವಾರ ಮುಂದುವರಿಸಿದರು. ಶಾಂತಿ ಸಭೆಯಲ್ಲಿ ಅರ್ಜಿದಾರರು ಪಾಲ್ಗೊಂಡಿರಲಿಲ್ಲ ಎಂದು ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ವಾದಿಸಿದರು. ಶಾಂತಿಸಭೆಯಲ್ಲಿ ಅರ್ಜಿದಾರರು ಯಾಕೆ ಪಾಲ್ಗೊಂಡಿರಲಿಲ್ಲ ಎಂದು ನ್ಯಾಯಮೂರ್ತಿ ಕಮಲ್ ಪ್ರಶ್ನಿಸಿದರು. ಇದಕ್ಕೆ ಅರ್ಜಿದಾರ ಪರ ವಕೀಲ ಅರುಣ ಶಾಮ್, ಅರ್ಜಿದಾರರ ಸಂಬಂಧಿಕರು ಅಸುನೀಗಿದ್ದರು. ಹೀಗಾಗಿ ಪಾಲ್ಗೊಂಡಿರಲಿಲ್ಲ ಎಂದರು. ಶಾಂತಿ ಸಭೆಯ ಗಂಭೀರತೆಯನ್ನು ಅರ್ಜಿದಾರರು ಯಾಕೆ ಅರಿಯಲಿಲ್ಲ? ಅರ್ಜಿದಾರರ ಪರ ವಕೀಲರು ಸಭೆಯಲ್ಲಿ ಯಾಕೆ ಹಾಜರಾಗಿರಲಿಲ್ಲ ಎಂದು ಹೈಕೋರ್ಟ್ ಕೇಳಿತು. ಆಗ ಅರ್ಜಿದಾರರ ಪರ ವಕೀಲ ಅರುಣ ಶಾಮ್, ಇನ್ನೊಮ್ಮೆ ಸಭೆ ನಡೆಸಿದರೆ, ಅರ್ಜಿದಾರರು ಪಾಲ್ಗೊಳ್ಳುತ್ತಾರೆ ಎಂದರು. ಅದಕ್ಕೆ ನ್ಯಾಯಾಲಯ ಇನ್ನೊಂದು ಸುತ್ತಿನ ಸಭೆಗೆ ದಿನಾಂಕ ನಿಗದಿಪಡಿಸಲು ಸಾಧ್ಯವೇ ಎಂದು ನ್ಯಾಯಾಲಯ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರನ್ನು ಕೇಳಿತು. ಅದಕ್ಕೆ ಇನ್ನೊಂದು ಸುತ್ತಿನ ಸಭೆ ನಡೆಸಲು ತಮಗೆ ಏನು ಅಭ್ಯಂತರ ಇಲ್ಲ ಎಂದು ಶಶಿಕಿರಣ ಶೆಟ್ಟಿ ಹೇಳಿದರು.

ಆಗ ನ್ಯಾಯಾಲಯ ನವೆಂಬರ್ 5 ರಂದು ಸಂಜೆ 5 ಗಂಟೆಗೆ ಇನ್ನೊಂದು ಶಾಂತಿ ಸಭೆ ನಡೆಸಿ ಸಮಸ್ಯೆಗೆ ಸೌಹಾರ್ದಯುತ ಪರಿಹಾರ ಕಂಡುಕೊಳ್ಳುವಂತೆ ಸಲಹೆ ನೀಡಿತು. ಜತೆಗೆ ಅರ್ಜಿದಾರ ಪರ ಹಿರಿಯ ವಕೀಲರು ಸರಕಾರದ ಪರ ವಕೀಲರು ಹಾಗೂ ಜಿಲ್ಲಾಧಿಕಾರಿ ಸಭೆಯಲ್ಲಿ ಪಾಲ್ಗೊಳ್ಳಲಿ ಎಂದು ನಿರ್ದೇಶನ ನೀಡಿತು. ಎರಡನೇ ಸುತ್ತಿನ ಸಭೆಯನ್ನು ಬೆಂಗಳೂರಿನಲ್ಲಿ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ ಅವರ ಕಚೇರಿಯಲ್ಲಿ ನಡೆಸಲು ನ್ಯಾಯಾಲಯ ಒಪ್ಪಿಗೆ ಸೂಚಿಸಿತು. ಬಳಿಕ ವಿಚಾರಣೆಯನ್ನು ನ.7ಕ್ಕೆ ಮುಂದೂಡಿತು.

ಗುರುಮಠಕಲ್ ಪಥಸಂಚಲನಕ್ಕೆ ಅನುಮತಿ

ಯಾದಗಿರಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ಗುರುಮಠಕಲ್‌ನಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಷರತ್ತು ವಿಧಿಸಿ ಅನುಮತಿ ನೀಡಲಾಗಿದೆ. 3 ದಿನಗಳ ಮೊದಲು ಅರ್ಜಿ ಸಲ್ಲಿಸುವಂತೆ ಸೂಚನೆ ನೀಡಿ ಈ ಹಿಂದೆ ಅನುಮತಿಗೆ ಸಲ್ಲಿಸಲಾಗಿದ್ದ ಅರ್ಜಿಯನ್ನು ಜಿಲ್ಲಾಡಳಿತ ತಿರಸ್ಕರಿಸಿತ್ತು. ಇದೀಗ ಗುರುಮಠಕಲ್ ಪಟ್ಟಣದಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಡಿಸಿ ಹರ್ಷಲ್ ಬೋಯರ್ ಅನುಮತಿ ನೀಡಿದ್ದಾರೆ.

ಪಥಸಂಚಲನದಲ್ಲಿ ಭಾಗಿಯಾಗಿದ್ದ ನಾಲ್ವರು ಶಿಕ್ಷಕರಿಗೆ ನೋಟಿಸ್ ಜಾರಿ

ಬೀದರ್: ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾಗಿದ್ದಕ್ಕೆ ನಾಲ್ವರು ಶಿಕ್ಷಕರನ್ನು ಅಮಾನತು ಮಾಡಲಾಗಿದೆ. ಔರಾದ್ ತಾಲೂಕಿನ ಸರಕಾರಿ ಶಾಲೆಯ ಶಿಕ್ಷಕರಾದ ಮಹಾದೇವ್ ಚಿಟ್ಗೆರೆ, ಶಾಲಿವಾನ್, ಪ್ರಕಾಶ್ ಬರ್ದಾಪುರೆ, ಸತೀಶ್ ಎಂಬುವವರು ಅ.7 ಮತ್ತು ಅ.13ರಂದು ಔರಾದ್‌ನಲ್ಲಿ ನಡೆದಿದ್ದ ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾಗಿದ್ದರು. ದಲಿತ ಸೇನೆ ಮುಖಂಡರು ಶಿಕ್ಷಕರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಅ.27ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದೂರು ಸಲ್ಲಿಸಿದ್ದರು. ದೂರು ಸಲ್ಲಿಸಿದ ಮರುದಿನವೇ ನಾಲ್ಕು ಜನ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ನೋಟಿಸ್ ನೀಡಿದ್ದರು. ಸರಕಾರಿ ನೌಕರರು ರಾಜಕೀಯ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗಿಯಾಗುವಂತಿಲ್ಲ. ನೀವು ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾಗಿರುವ ವಿಡಿಯೊ ಹಾಗೂ ಫೋಟೊ ವೈರಲ್ ಆಗಿವೆ. ಸರಕಾರದ ಸೇವಾ ನಿಬಂಧನೆಗೆ ವಿರುದ್ಧವಾಗಿ ಕರ್ತವ್ಯ ಮಾಡಿದ್ದೀರಿ. ಹೀಗಾಗಿ ಖುದ್ದಾಗಿ ಕಚೇರಿಗೆ ಬಂದು ಹೇಳಿಕೆ ನೀಡಿ, ಇಲ್ಲದಿದ್ದರೆ ಮುಂದಿನ ಕ್ರಮ ಕೈಗೊಳ್ಳುವುದಾಗಿ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಕರ್ನಾಟಕ ಸರಕಾರ
ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ
ಇ ಮೇಲ್:pa196bagalkot@gmail.com ಹಳೇ SBI ಕಟ್ಟಡ, ಹಳೇ ತಹಶೀಲ್ದಾರರ ಕಚೇರಿ ಹತ್ತಿರ, ಬಾಗಲಕೋಟೆ-587101
ಸಂ:ಬಾನಪ್ರಾ/ಬ್ಯಾಂಕ ಬಡ್ಡಿದರ/ 2025-26/882 ದಿನಾಂಕ: 29.10.2025
ಇ-ಹರಾಜು ಪ್ರಕಟಣೆ E-Proceurement portal ಮುಖಾಂತರ

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ನಗರಾಭಿವೃದ್ಧಿ ಪ್ರಧಿಕಾರ ಬಾಗಲಕೋಟೆ ವ್ಯಾಪ್ತಿಯಲ್ಲಿ ಸನ್ 2025-26 ನೇ ಸಾಲಿಗೆ ಬಾಗಲಕೋಟ ನಗರಾಭಿವೃದ್ಧಿ ಪ್ರಧಿಕಾರದ ಕೆರೆ ಅಭಿವೃದ್ಧಿ ನಿಧಿ ಹಾಗೂ ಸಾಮಾನ್ಯ ನಿಧಿ ಅನುದಾನದಡಿಯಲ್ಲಿ ಠೇವಣಿ ಇಡಲು ಬಾಗಲಕೋಟೆ ನಗರದ ರಾಷ್ಟ್ರೀಕೃತ ಬ್ಯಾಂಕಗಳಿಯಿಂದ ಸ್ಪರ್ಧಾತ್ಮಕ ಬಡ್ಡಿ ದರಗಳನ್ನು ಪಡೆಯಲು KPPP portal ನಲ್ಲಿ ನೋಂದಾಯಿತ ಬ್ಯಾಂಕಗಳಿಂದ Standard Tender Documents-Auction ರಂತೆ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತವುಳ್ಳ ಸ್ಥಳೀಯ ಬ್ಯಾಂಕಗಳು ಬಾಗವಹಿಸಹಿಬಹುದು.

ಹೆಚ್ಚಿನ ಮಾಹಿತಿಗಾಗಿ http://kppp.karnataka.gov.in ದಲ್ಲಿ ಅಥವಾ ಈ ಕಛೇರಿಯ ಲೆಕ್ಕ ಶಾಖೆ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.

1) Documents can be download and submission:30.10.2025 at 10.00 AM to 31-10-2025 At 05.00 PM
2) Auction Start Date Auction End Date: 11.11.2025 10.00 AM to 11-11-2025 05.00 PM

ಸಹಿ/-ಆಯುಕ್ತರು
ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ
DIPR/BGM/RO-NO-361/KSMCA/2025-26

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಎಂ. ಪಿ. ವಿಭಾಗ, ಬೆಂಗಳೂರು ದಕ್ಷಿಣ ಜಿಲ್ಲೆ. ರಾಮನಗರ.
ದೂ. : 080-2978 2259. ಇ-ಮೇಲ್ : eempdrmgm@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 11/2025-26 ದಿನಾಂಕ : 30-10-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ 4701 ಲೆಕ್ಕ ಶೀರ್ಷಿಕೆಯಡಿಯಲ್ಲಿ ಕನಕಪುರ ಮತ್ತು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಡಿ ಸೇತುವೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.

ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ, ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ, ಪ್ರೀ-ಬಿಡ್ ಸಭೆಯ ದಿನಾಂಕ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು https://kppp.karnataka.gov.in ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕಾ.ನೀ.ನಿ.ನಿ., ಎಂ. ಪಿ. ವಿಭಾಗ,
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.
ಡಿಐಪಿಆರ್/ರಾಮನಗರ/412/ಮಣಿಪಾಲ್/2025-26

ನೆಫ್ರೋ-ಯುರಾಲಜಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ ನೋಂ. ಸಂ.1052/03-04)
(ಉನ್ನತ ವೈದ್ಯಕೀಯ ವಿಜ್ಞಾನದ ಒಂದು ಸ್ನಾತಕೋತ್ತರ ಸಂಸ್ಥೆ, ರಾಜೀವ್‌ಗಾಂಧಿ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇದರ ಅಂಗಸಂಸ್ಥೆಯಾಗಿದ್ದು ಭಾರತೀಯ ವೈದ್ಯಕೀಯ ಪರಿಷತ್ತಿನೊಂದಿಗೆ ಗುರುತಿಸಿಕೊಂಡಿದೆ) ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು-560 002.
ಇ-ಮೇಲ್: nephrourology.institute@gmail.com ವೆಬ್‌ಸೈಟ್ www.nephrourology.in
ದೂರವಾಣಿ: 080-26700527 ಫ್ಯಾಕ್ಸ್: 080-26706777
ಸಂಖ್ಯೆ: ನೆಯುಸಂ/ಟೆಂಡರ್/ಡಿಡಿಎಸ್/09/2025-26 ದಿನಾಂಕ: 30.10.2025

ಟೆಂಡರ್ ಪ್ರಕಟಣೆ

ನೆಫ್ರೋ-ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು-560 002. ಇಲ್ಲಿಗೆ ಈ ಕೆಳಗೆ ನಮೂದಿಸಿರುವ ವಿಷಯಗಳಿಗೆ ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ.

1. Procurement of Drugs, Disposables, Sutures and Misc., Items RC-I.
2. Procurement of Peritoneal Dialysis Fluids.
3. Procurement of Semi Regid Ureteroscope –Mysore Unit.
4. Procurment of Ultrasound Machine – Mysore Unit (Call-II).

Last Date For Online Submission of Tender is **01.12.2025 at 5.30 P.M**

1. Pest Control Service.
2. Procurement of Computerized Radiography Films (Call-II).

Last Date For Online Submission of Tender is **15.11.2025 at 5.30 P.M**

ಟೆಂಡರ್‌ಗೆ ಸಂಬಂಧಪಟ್ಟಂತೆ, ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ https://kppp.karnataka.gov.in/ ದಲ್ಲಿ ಪಡೆದುಕೊಳ್ಳಬಹುದು.

ಸೂಚನೆ: ಈ ಟೆಂಡರ್‌ಗೆ ಸಂಬಂಧಪಟ್ಟಂತೆ, ಮುಂದಿನ ಪ್ರಕ್ರಿಯೆಗಳ ಬಗ್ಗೆ (further information and announcements) ತಿಳಿದುಕೊಳ್ಳಲು ನಮ್ಮ ಸಂಸ್ಥೆಯ ಅಂತರ್ಜಾಲ https://nephrourology.karnataka.gov.in/ ದಲ್ಲಿ ವೀಕ್ಷಿಸಬಹುದು.

ಸಹಿ/- ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹೇಮಾವತಿ ನಾಲಾ ವಿಭಾಗ, ಎಡಿಯೂರು-572 142
ಫೋನ್ ನಂ: 7338590199
ಇ-ಮೇಲ್: eeyediyur1@gmail.com
ಅಲ್ಪಾವಧಿ ಪ್ರಕಟಣೆ ಸಂಖ್ಯೆ: 15/2025-26
ದಿನಾಂಕ : 27.10.2025

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 04 ಕಾಮಗಾರಿಗಳಿಗಾಗಿ ಐಟಂವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ. 322.45 ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.120.18 ಲಕ್ಷ ರೂಪಾಯಿಗಳು.

ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 05 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 03.11.2025 ಮಧ್ಯಾಹ್ನ 5.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 07.11.2025 ಮಧ್ಯಾಹ್ನ 4:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.11.2025 ಬೆಳಿಗ್ಗೆ 11:00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ,
ಎಡೆಯೂರು
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/526/2025-26

ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಬೆಂಗಳೂರು.

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು KW-2 STD ಷರತ್ತುಗೊಳ್ಳಪಟ್ಟಂತೆ ಎರಡನೇ ಅಲ್ಪಾವಧಿ ಟೆಂಡರ್ ಕರೆಯನ್ನು ಕೆ.ಪಿ.ಪಿ.ಪಿ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಕೆಳಕಂಡಂತಿವೆ.

Sl. No.	Work Indents	Work Value (Rs. in Lakhs)
1	PWD/2025-26/OW/WORK_INDENT28301/Call-2	22.30

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ ಸಂ: https://kppp.karnataka.gov.in ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: 28.10.2025 ರಿಂದ 05.11.2025, 16:00 ಗಂಟೆಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ: 05.11.2025 ರಂದೆ 16:00 ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು Karnataka Public Procurement Portal ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ).
ವಾಸಾಸಂಇ/ಉನಿ-ಸಿ.ಪಿ/3501/ಕೆಎಸ್‌ಎಂಸಿಎ/2025-26

ಕರ್ನಾಟಕ ಸರಕಾರ
(ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆ)
ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ
ತಾಲೂಕು ಪಂಚಾಯತಿ ದೇವರಹಿಪ್ಪರಗಿ, ವಿಜಯಪುರ
ದೂರವಾಣಿ:08424-200114, ಇ-ಮೇಲ್:eotpdhp@gmail.com
ಸಂಖ್ಯೆ:ಕಾ.ನಿ.ಅ/ತಾ.ಪಂ.ದೇ.ಹಿ/ಹೊ.ಗು.ಸಿ/ಟೆಂಡರ್/2025-26/2391
ದಿನಾಂಕ: 28.10.2025
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ ಪ್ರಕಟಣೆ

ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತಿ ದೇವರ ಹಿಪ್ಪರಗಿ ಇವರು 2025-26ನೇ ಸಾಲಿನ ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: RDPR/2025-26/SE3104 ದಿನಾಂಕ: 28.10.2025 ರಂತೆ ರೂ. 8.26 ಲಕ್ಷಗಳಿಗೆ ಸರ್ವಿಸಸ್‌ನಲ್ಲಿ ಇ-ಟೆಂಡರ್‌ನ್ನು ಆಹ್ವಾನಿಸಿದ್ದು, ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov.in ನಲ್ಲಿ ಅಥವಾ ಕಚೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕು ಪಂಚಾಯತಿ, ದೇವರ ಹಿಪ್ಪರಗಿ
ವಾಸಾಸಂಇ/ವಿಜಯಪುರ/419/ಕೆಎಸ್‌ಎಂಸಿಎ/2025-26

capitalmind Mutual Fund

Capitalmind Asset Management Private Limited
1st Floor, 2323, Prakash Arcade, 17th Cross Rd
1st Sector HSR Layout
Bengaluru, Karnataka 560102

CIN: U66301KA2024PTC194639
SEBI Reg. No. : MF/084/25/10
Toll Free: 1800 570 5001

NOTICE

Disclosure of Unaudited Half Yearly Financial Results of schemes of Capitalmind Mutual Fund

NOTICE is hereby given to the Investor / Unit holders of all the schemes of Capitalmind Mutual Fund ('the Fund') that in accordance with Regulation 59 of the SEBI (Mutual Funds) Regulations, 1996, a soft copy of Unaudited Half Yearly Financial Results of schemes of the Fund for the half year ended September 30, 2025 is hosted on our website www.capitalmindmf.com.

Unit holders can access the Unaudited Half Yearly Financial Results of the Scheme using the link provided below: https://cm.fund/UnAuditedResults

For Capitalmind Mutual Fund Pvt. Ltd.
Investment Manager (AMC)
Sd/-
Deepak Shenoy
Chief Executive Officer

Date: October 30, 2025

Mutual Fund investments are subject to market risks, read all scheme related documents carefully.

ಕಾವೇರಿ ನೀರಾವರಿ ನಿಗಮ ನಿಯುತ
(ಕರ್ನಾಟಕ ಸರ್ಕಾರದ ಉದ್ಯಮ)
ಸಂ:ಕಾ.ಇಂ/ಕಾ.ನೀ.ನಿ.ನಿ/ಹಾಪು/ಪಿಬಿಸಿ/ಟೆಂಡರ್ ಪ್ರಕಟಣೆ
ಸಂಖ್ಯೆ: 12/2025-26 / ದಿ: 29-10-2025
(ಕರ್ನಾ ಸರ್ಕಾರದ ಒಂದು ಉದ್ಯಮ) ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವಧಿ)
(ಐಟಂವಾರು : ಕೆಪಿಪಿಪಿ ಪೋರ್ಟ್‌ಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯುತ, ಬೆಂಗಳೂರು ರವರ ಪರವಾಗಿ ಸೂಚಿತ ದರ್ಜೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮುಖಾಂತರ ಐಟಂವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಈ ಭಾಗ ವ್ಯಾಪ್ತಿಯಲ್ಲಿ ಬರುವ ಗಾಡಿ ಸೇತುವೆ ದುರಸ್ತಿ ಕಾಮಗಾರಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಯ ಅಂದಾಜು ಮೊತ್ತ ರೂ 83.75 ಲಕ್ಷಗಳಿದ್ದು, ಈ ಕಾಮಗಾರಿಗೆ ನಿಗದಿತ ದರ್ಜೆ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಟೆಂಡರ್ ಕರೆಯಲಾಗಿದೆ.

ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟ್‌ಲ್ ಮುಖಾಂತರ ದಿನಾಂಕ: 06-11-2025 ಅಪರಾಹ್ನ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ಆರ್ಥಿಕ ಬಿಡ್ಡನ್ನು ದಿನಾಂಕ: 07-11-2025 ರ ಅಪರಾಹ್ನ 4.30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವರಗಳಿಗೆ ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ ಳಾಸ: http://kppp.Karnataka.gov.in. ರಲ್ಲಿ ಪಡೆಯಬಹುದಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟ್‌ಲ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗದಿಯಾಗಿದ್ದು, ಹೆಚ್ಚಿನ ಮಾತಿಯನ್ನು ಕಛೇರಿ ವೇಳೆಯಲ್ಲಿ ಕೆಳಸದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಕಾರ್ಯಪಾಲಕ ಇಂಜಿನಿಯರ್, ಹಾರಂಗಿ
ಪುನರ್ವಸತಿ ಭಾಗ,
ಕಾವೇರಿ ನೀರಾವರಿ ನಿಗಮ ನಿಯುತ
ಕುಶಾಲನಗರ, ಸೋಮವಾರಪೇಟೆ ತಾ.,
ಕೊಡಗು ಜಿಲ್ಲೆ - 571234

2025ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು



ಡಾ.ಎಸ್.ವಿ.ಹಿತ್ತಲಮನಿ
ಹಾವೇರಿ (ಕೃಷಿ)

ಅಂಶಿ ಪ್ರಸನ್ನಕುಮಾರ್
ಮೈಸೂರು (ಮಾಧ್ಯಮ)

ಆರಬೈಲ್ ಆನಂದ ಶೆಟ್ಟಿ
(ಯಕ್ಷಗಾನ)

ಬಿ.ಎಂ ಹನೀಫ್
ದಕ್ಷಿಣ ಕನ್ನಡ (ಮಾಧ್ಯಮ)

ಬಿ.ಮಾರುತಿ
ಬಳ್ಳಾರಿ (ಚಿತ್ರಕಲೆ)

ಬಸವಣ್ಣ ಮೌನಪ್ಪ ಬಡಿಗೇರ,
ಯಾದಗಿರಿ (ಶಿಲ್ಪಕಲೆ)

ಆಲಮ್ಮ ಮಾರಣ್ಣ
ತುಮಕೂರು (ವೈದ್ಯಕೀಯ)

ಡಾ.ಎಚ್.ಎಲ್ ಪುಷ್ಪ
ತುಮಕೂರು (ಸಾಹಿತ್ಯ)

ಡಾ.ಎಂ.ಆರ್.ಜಯರಾಮ
(ಶಿಕ್ಷಣ)

ಎನ್.ಎಸ್.ರಾಮೇಗೌಡ
ಮಂಡ್ಯ (ಶಿಕ್ಷಣ)

ಎಚ್.ಎಂ.ಪರಮಶಿವಯ್ಯ
ಬೆಂಗಳೂರು (ರಂಗಭೂಮಿ)

ಎಚ್.ಸಿದ್ದಯ್ಯ ಐಎಎಸ್
ಬೆಂಗಳೂರು ದಕ್ಷಿಣ (ಆಡಳಿತ)

ಹ.ಮ.ಪೂಜಾರ
ವಿಜಯಪುರ (ಸಾಹಿತ್ಯ)

ಜಕರಿಯ ಬಜಪೆ, ಸೌದಿ
(ಹೊರದೇಶ)

ಕೆ ಪಿ ಹೆಗಡೆ, ಸಿದ್ದಾಪುರ
(ಯಕ್ಷಗಾನ)

ಕೋಣಂದೂರು ಲಿಂಗಪ್ಪ
ಶಿವಮೊಗ್ಗ (ಸಮಾಜ ಸೇವೆ)

ಬಿ.ಟಾಕಪ್ಪ ಕಣ್ಣೂರು
ಶಿವಮೊಗ್ಗ (ಜಾನಪದ)

ಎಲ್.ಬಿ.ಶೇಖ್ ಮಾಸ್ತರ್
ಮುದ್ದೇಬಿಹಾಳ, (ರಂಗಭೂಮಿ)

ತುಂಬಾಡಿ ರಾಮಯ್ಯ
ತುಮಕೂರು (ಸಾಹಿತ್ಯ)

ಎಂ.ತೋಪಣ್ಣ
ಕೋಲಾರ (ಜಾನಪದ)

ಎಂ.ಯೋಗೇಂದ್ರ
ಮೈಸೂರು (ಕ್ರೀಡೆ)

ವಿಜಯಲಕ್ಷ್ಮೀ ಸಿಂಗ್
ಕೊಡಗು (ಚಲನಚಿತ್ರ)

ಮಲ್ಲಿಕಾರ್ಜುನ ನಿಂಗಪ್ಪ
ಯಾದಗಿರಿ (ಪರಿಸರ)

ನಾಗಲಿಂಗಪ್ಪ ಜಿ, ಗಂಗೂರು,
ಬಾಗಲಕೋಟೆ (ಶಿಲ್ಪಕಲೆ)

ರಾಜಶ್ರೀ ನಾಗರಾಜ್
ಬೆಳಗಾವಿ (ಶಿಕ್ಷಣ)

ರಹಮತ್ ತರೀಕೆರೆ
ಚಿಕ್ಕಮಗಳೂರು (ಸಾಹಿತ್ಯ)

ಪ್ರೊ.ಕೆ.ರಾಮಮೂರ್ತಿ ರಾವ್
ಮೈಸೂರು (ಸಂಗೀತ)

ಪ್ರಕಾಶ್ ರಾಜ್
ದಕ್ಷಿಣ ಕನ್ನಡ (ಚಲನಚಿತ್ರ)

ಫಿಲೀಫ್ ರಾಜಕುಮಾರ್
ದಾವಣಗೆರೆ (ತಂತ್ರಜ್ಞಾನ)

ಪ್ರೊ.ರಾಜೇಂದ್ರ ಚೆನ್ನಿ
ಶಿವಮೊಗ್ಗ (ಸಾಹಿತ್ಯ)

ಪಿ.ಬಿ. ಭಜಂತ್ರಿ
ಬಾಗಲಕೋಟೆ (ನ್ಯಾಯಾಂಗ)

ದೇವೇಂದ್ರಕುಮಾರ ಪತ್ತಾರ್
ಕೊಪ್ಪಳ (ಸಂಗೀತ)

ಉಮೇಶ ಪಂಬದ
ದಕ್ಷಿಣ ಕನ್ನಡ (ಸಮಾಜ ಸೇವೆ)

ರಾಮೇಗೌಡ
ಚಾಮರಾಜನಗರ (ಪರಿಸರ)

ಶಾಂತರಾಜು
ತುಮಕೂರು (ಸಮಾಜ ಸೇವೆ)

ಶೇಖರಗೌಡ
ಕೊಪ್ಪಳ (ಸಹಕಾರ)

ಸಿಂಧು ಗುಜರನ್
ದಕ್ಷಿಣ ಕನ್ನಡ (ಜಾನಪದ)

ಸೋಮಣ್ಣ ದುಂಡಪ್ಪ
ವಿಜಯಪುರ (ಜಾನಪದ)

ಸೂಲಗಿತ್ತಿ ಈರಮ್ಮ ವಿಜಯನಗರ
(ಸಮಾಜ ಸೇವೆ)

ಕೆ.ದಿನೇಶ್
ಬೆಂಗಳೂರು (ಸಮಾಜ ಸೇವೆ)

ಬಸಪ್ಪ ಭರಮಪ್ಪ ಚೌಡ್ಕಿ
ಕೊಪ್ಪಳ (ಜಾನಪದ)

ಸನ್ನಿಂಗಪ್ಪ ಸತ್ತೆಪ್ಪ
ಬೆಳಗಾವಿ (ಜಾನಪದ)

ಹನುಮಂತಪ್ಪ
ಚಿತ್ರದುರ್ಗ (ಜಾನಪದ)

ಎಲ್.ಮಹದೇವಪ್ಪ
ಮೈಸೂರು (ಜಾನಪದ)

ಫಕ್ಕೀರಿ, ಬೆಂಗಳೂರು ಗ್ರಾಮಾಂತರ
(ಸಮಾಜ ಸೇವೆ)

ಕೋರಿನ್ ಆಂಟೊನಿಯಟ್
ರಸ್ಕೀನಾ, ದಕ (ಸಮಾಜ ಸೇವೆ)

ಡಾ.ಎನ್.ಸೀತಾರಾಮ ಶೆಟ್ಟಿ ಉಡುಪಿ
(ಸಮಾಜ ಸೇವೆ)

ಡಾ.ರವೀಂದ್ರ ಕೋರಿಶೆಟ್ಟರ್
ಧಾರವಾಡ (ಸಮಾಜ ಸೇವೆ)



ಪ್ರೊ.ಆರ್.ಸುನಂದಮ್ಮ
ಚಿಕ್ಕಬಳ್ಳಾಪುರ (ಸಾಹಿತ್ಯ)

ಜಾಫರ್ ಮೊಹಿಯುದ್ದೀನ್,
ರಾಯಚೂರು (ಸಮಾಜ ಸೇವೆ)

ಪೆನ್ನ ಓಬಳಯ್ಯ, ಬೆಂಗಳೂರು
ಗ್ರಾಮಾಂತರ (ಸಮಾಜ ಸೇವೆ)

ಬಾಯಿ ಬಳ್ಳಾರಿ
(ಸಮಾಜ ಸೇವೆ)

ಪುಂಡಲೀಕ ಶಾಸ್ತ್ರಿ
ಬೆಳಗಾವಿ (ಸಮಾಜ ಸೇವೆ)

ರಾಮಯ್ಯ
ಚಿಕ್ಕಬಳ್ಳಾಪುರ (ತಂತ್ರಜ್ಞಾನ)

ಡಾ.ಆರ್.ವಿ ನಾಡಗೌಡ
ಗದಗ (ತಂತ್ರಜ್ಞಾನ)

ಬಂಗಾರಪ್ಪ ಖುದಾನಪುರ
ವಿಜಯಪುರ (ರಂಗಭೂಮಿ)

ಮೈಮ ರಮೇಶ್
ದಕ್ಷಿಣ ಕನ್ನಡ (ರಂಗಭೂಮಿ)

ಡಿ.ರತ್ನಮ್ಮ ದೇಸಾಯಿ
ರಾಯಚೂರು (ರಂಗಭೂಮಿ)

ಕೋಟ ಸುರೇಶ್ ಬಂಗೇರ
(ಯಕ್ಷಗಾನ)

ಗುಂಡೂರಾಜ್
ಹಾಸನ (ಬಯಲಾಟ)

ಮಡಿವಾಳಯ್ಯ ಸಾಲಿ
ಬೀದರ್ (ಸಂಗೀತ)

ಕೆ.ಸುಬ್ರಮಣ್ಯ
ಬೆಂಗಳೂರು (ಮಾಧ್ಯಮ)

ಎಂ. ಸಿದ್ದರಾಜು
ಮಂಡ್ಯ (ಮಾಧ್ಯಮ)

ಎಂ.ಸಿ.ರಂಗಸ್ವಾಮಿ
ಹಾಸನ (ಕೃಷಿ)

ಡಾ.ಜಯರಂಗನಾಥ್
ಬೆಂಗಳೂರು (ವೈದ್ಯಕೀಯ)

ಕೆ. ರಾಮಮೂರ್ತಿ ರಾವ್
ಮೈಸೂರು (ನೃತ್ಯ)

ಆಶೀಶ್ ಕುಮಾರ್ ಬಲ್ಲಾಳ್
ಬೆಂಗಳೂರು (ಕ್ರೀಡೆ)

ಡಾ.ಬಬಿನಾ ಎನ್.ಎಂ
ಕೊಡಗು (ಯೋಗ)

ಎಸ್.ಬಿ.ಹೊಸಮನಿ
ವಿಜಯಪುರ (ಶಿಕ್ಷಣ)

ಎಲ್.ಹೇಮಾಶೇಖರ್
ಮೈಸೂರು (ಕರಕುಶಲ)

ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ

ಸಂಪಾದಕೀಯ

ಕ್ಷಣಚಿತ್ತ ಕ್ಷಣಪಿತ್ತದ ಟ್ರಂಪ್

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮತ್ತೊಮ್ಮೆ ವಿಲಕ್ಷಣ ನಡೆಯನ್ನು ಮೆರೆದಿದ್ದಾರೆ. ಭಾರತದಿಂದ ಅಮೆರಿಕಕ್ಕೆ ಆಮದಾಗುವ ವಸ್ತುಗಳಿಗೆ ಅತಿರೇಕದ ಸುಂಕ ಹೇರಿದ್ದರ ಜತೆಗೆ, ಎಚ್-1ಬಿ ವೀಸಾದ ವಾರ್ಷಿಕ ಶುಲ್ಕವನ್ನು ಗಗನಮುಖಿಯಾಗಿಸಿ ಭಾರತದೆಡೆಗೆ ಕೆಂಗಣ್ಣು ಬೀರಿದ್ದ ಟ್ರಂಪ್ ಮಹಾಶಯರು, 'ಭಾರತದೊಂದಿಗಿನ ಸಂಬಂಧ ಅಮೆರಿಕಕ್ಕೆ ಅತ್ಯಂತ ಮುಖ್ಯ. ಹೀಗಾಗಿ ಶೀಘ್ರವೇ ಅದರೊಂದಿಗೆ ವ್ಯಾಪಾರ ಒಪ್ಪಂದವನ್ನು ಅಮೆರಿಕ ಜಾರಿಗೊಳಿಸಲಿದೆ; ಮೋದಿ ಟಫ್ ಮ್ಯಾನ್' ಎಂದು ದಕ್ಷಿಣ ಕೊರಿಯಾ ಪ್ರವಾಸದ ವೇಳೆ ಆಣಿಮುತ್ತು ಉದುರಿಸಿದ್ದಾರೆ. 'ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಶರಣಾರ್ಥಿ' ಎಂಬಂತೆ ಕಾಣುವ ಟ್ರಂಪ್‌ರ ಇಂಥ ವರ್ತನೆಯು ರಾಜತಾಂತ್ರಿಕ ನೆಲೆಯಲ್ಲಿ ಗೇಲಿಗೆ ಒಳಗಾಗಿರುವುದಂತೂ ಖರೆ. ಪರಸ್ಪರ ಅವಲಂಬನೆಯೇ ಮೂಲಮಂತ್ರವಾಗಿರುವ ಪ್ರಸಕ್ತ ಸನ್ನಿವೇಶದಲ್ಲಿ ಯಾವ ದೇಶವೂ ಮತ್ತೊಂದು ದೇಶವನ್ನು ಸಾರಾಸಗಟಾಗಿ ತಿರಸ್ಕರಿಸಿ ಅಥವಾ ಅದರ ಮೇಲೆ ವಿಲಕ್ಷಣ ನಿರ್ಬಂಧಗಳನ್ನು ಹೇರಿ ಕೂರಲಾಗದು. ಟ್ರಂಪ್ ಅವರಿಗೂ ಭಾರತದ ವಿಷಯದಲ್ಲಿ ತಾವು ಕೆಲವೊಮ್ಮೆ ದುಡುಕಿರುವುದು ಅರಿವಿಗೆ ಬಂದಿರಲಿಕ್ಕೂ ಸಾಕು. ಆದರೆ, ಪಾರಸ್ಪರಿಕ ಅವಲಂಬನೆಯ ಮಂತ್ರಕ್ಕೆ ಕಟಿಬದ್ಧರಾಗದೆ, 'ಕ್ಷಣ ಚಿತ್ತ, ಕ್ಷಣ ಪಿತ್ತ' ಎನ್ನುವ ರೀತಿಯಲ್ಲಿ ಅವರು ಮತ್ತೆ ಮತ್ತೆ ನಿಷ್ಠೆಯನ್ನು ಬದಲಿಸುತ್ತಿದ್ದರೆ, ಅವರ ಮನೋಧರ್ಮವನ್ನು ಒಪ್ಪಿಕೊಳ್ಳುವುದು ಯಾವುದೇ ದೇಶಕ್ಕೂ ಕಷ್ಟವಾಗುತ್ತದೆ. ಹಾಗೆಂದ ಮಾತ್ರಕ್ಕೆ, ಅಮೆರಿಕದ ಈ ಹಿಂದಿನ ಅಧ್ಯಕ್ಷರುಗಳು ಭಾರತದೊಂದಿಗೆ ಅವಿನಾಭಾವ ಸಂಬಂಧದ ಮಂತ್ರವನ್ನು ಜಪಿಸುತ್ತಿದ್ದರು ಎಂದೇನಲ್ಲ; ಆದರೆ ಅವರಲ್ಲಿ ಒಂದು ಮಟ್ಟಿಗಿನ ಮಾನಸಿಕ ಸ್ಥಿರತೆಯಾದರೂ ಇರುತ್ತಿತ್ತು. ಅಂಥ ಸ್ಥಿರತೆ ಟ್ರಂಪ್‌ರಲ್ಲಿ ಕಾಣಬರುತ್ತಿಲ್ಲ. ಇದರಿಂದಾಗಿ ಅವರು 'ವಿಶ್ವದ ದೊಡ್ಡಣ್ಣ' ಎಂದು ಕರೆಸಿಕೊಳ್ಳುವ ಅಮೆರಿಕದ ಅಧ್ಯಕ್ಷ ಪದವಿಯ ಘನತೆಯನ್ನು ಆಗಾಗ ತಗ್ಗಿಸುತ್ತಿರುವಂತೆ ಕಂಡುಬರುತ್ತದೆ. ಈ ತಪ್ಪನ್ನು ಅವರು ಆದಷ್ಟು ಬೇಗ ತಿದ್ದಿಕೊಂಡರೆ ಒಳಿತು.

ಸೊಂಪಾದಕೀಯ

ಲೈಫ್ ಬೆಟರ್ ಗುರೂ

ನಟ ದರ್ಶನ್ ಜೈಲುವಾಸದ ನಂತರ ಅವರ ದೈನಿಕ ಅಪ್ಡೇಟ್‌ಗಳನ್ನು ನೋಡಿದರೆ ಅವರ ಯಾವ ಸಿನಿಮಾಗೂ ಕಮ್ಮಿ ಇಲ್ಲ ಎನಿಸುತ್ತದೆ. ಅವರ ಈ ಪರಿಸ್ಥಿತಿ ನೋಡಿದ ಜನರಂತೂ ಅವರ ಸಿನಿಮಾದಷ್ಟೇ ಇಂಟರೆಸ್ಟಿಂಗ್ ಆಗಿ ಡೈಲಾಗ್ ಬಿಡುತ್ತಿದ್ದಾರೆ. ಮೊನ್ನೆ ತಾನೇ ಅವರ ಜೈಲುವಾಸಕ್ಕೆ 75 ದಿನ ಆಯ್ತು ಅಂತ 'ಅಮೋಘ 75ನೇ ದಿನ, ಸಕ್ಸಸ್‌ಫುಲಿ ರನ್ನಿಂಗ್' ಅಂತ ಒಂದು ಪೋಸ್ಟರ್ ಬಿಟ್ಟು ಲೇವಡಿ ಮಾಡಲಾಗಿತ್ತು. ಇದರ ಜತೆಗೆ ಪ್ರತಿದಿನ ಸುದ್ದಿ ಆಗ್ತಾ ಇರೋ ವಿಷಯ ಅಂದ್ರೆ, ಜೈಲಿನಲ್ಲಿ ದರ್ಶನ್

ಅವರು ಇಡ್ತಾ ಇರೋ ಬೇಡಿಕೆಗಳು ಮತ್ತು ಅವರ ಪ್ರಲಾಪಗಳು. ಕೆಲವು ದಿನಗಳ ಹಿಂದೆ 'ವಿಷ ಕೊಟ್ಟುಬಿಡಿ, ಸಾಯ್ತೀನಿ' ಅಂತ ಡೈಲಾಗ್ ಬಿಟ್ಟಿದ್ದರು ದರ್ಶನ್ ಪರ ವಕೀಲರು ನಂತರ ಬೇಗ ವಿಚಾರಣೆ ನಡೆಸುತ್ತಿಲ್ಲ ಅಂತ ಆರೋಪಿಸಿ ನಾಳೆಯೇ ತೀರ್ಮಾನ ಮಾಡಿ ಮರಣದಂಡನೆ ಕೊಟ್ಟುಬಿಡಿ ಅಂತ ಇನ್ನೊಂದು ವರಾತ ತೆಗೆದಿದ್ದರು. ಇನ್ನು ದರ್ಶನ್ ಅವರ ದಿಂಬು ಹಾಸಿಗೆ ಹೊದಿಕೆ ವಿಷಯವಂತೂ ಮುಗಿಯೋ ಹಾಗೆ ಕಾಣುತ್ತಿಲ್ಲ. ಅದೆಷ್ಟನೇ ಬಾರಿಯೋ ದರ್ಶನ್ ತಮಗೆ ಮೂಲಸೌಕರ್ಯ ಕೊಡ್ತಾ ಇಲ್ಲ ಅಂತ ಒಂದೇ ಕಣ್ಣಲ್ಲಿ ಅಳುತ್ತಿದ್ದಾರೆ. ಈಗ ಕೋರ್ಟಿನ ಮೂಲಕ ಜೈಲಿಗೆ ಭೇಟಿ ನೀಡಿದ ಅಧಿಕಾರಿಗಳು ಸೌಕರ್ಯ ಎಲ್ಲ ಇದೆ, ಆದರೆ ತಿಂಗಳಿಗೊಮ್ಮೆ ಹಾಸಿಗೆ, ಹೊದಿಕೆ ನೀಡಿ ಅಂತ ತಾಕೀತು ಮಾಡಿದ್ದಾರೆ. ದರ್ಶನ್‌ಗೆ ಈಗ ಸಿಕ್ಕಿರುವ ಜಯ ಅಂದ್ರೆ ಇದೊಂದೇ. ಹಾಗಾಗಿ ಅವರು ಜೈಲಿನಲ್ಲಿಯೇ ಸಕ್ಸಸ್ ಮೀಟ್ ಮಾಡ್ತಾರಾ ಅನ್ನೋದ್ರ ಬಗ್ಗೆ ವಿವರಗಳು ಬಂದಿಲ್ಲ. ಆದರೆ ಜನ ಅಂತೂ ಈಗೀಗ ದರ್ಶನ್ ಬಗ್ಗೆ ಉಡಾಫೆಯಿಂದಲೇ 'ಅನುಭವಿಸಲಿ ಬಿಡಿ' ಅಂತ ಸುಮ್ಮನಾಗುತ್ತಿದ್ದಾರೆ. ಅವರ ಕೆಲವು ಪೊರ್ಕಿ ಅಭಿಮಾನಿಗಳು ಈಗ ರಮ್ಯಾ ವಿಷಯದಲ್ಲಿ ಪೊಲೀಸ್ ಟ್ರೀಟ್‌ಮೆಂಟ್ ಸಿಕ್ಕಮೇಲೆ ಕೋರ್ಟ್ ನಲ್ಲಿ ಬಿಡುಗಡೆಗೆ ಜಾಮೀನು ಶೂರಿಟಿ ಕೊಡಲಾಗದೇ ಅನುಭವಿಸುತ್ತಿ ರೋದನ್ನು ನೋಡಿ, ಇತರರೂ ಅಷ್ಟಾಗಿ ಬಾಲ ಬಿಚ್ಚುತ್ತಿಲ್ಲ. ಇದೆಲ್ಲ ನೋಡಿದ ಸಾಮಾನ್ಯರ ವಲಯದಲ್ಲಿ ಮಾತ್ರ, ಯಾರಾದ್ರೂ ಕ್ಯಾಶುವಲ್ಲಾಗಿ 'ಹೆಂಗಿದೆಯಪ್ಪಾ ಲೈಫು?' ಅಂತ ಕೇಳಿದ್ರೆ, ಕಷ್ಟದಲ್ಲಿ ಇರೋರು ಕೂಡಾ, 'ದರ್ಶನ್‌ಗಿಂತ ಬೆಟರ್ ಅನ್ನೋದ್ ಬಿಟ್ರೆ, ವಿಶೇಷ ಏನಿಲ್ಲ' ಅಂತಿದ್ದಾರೆ.

ಸಂಪಾದಕರ ಸದ್ಯಶೋಧನೆ

ವಿಮಾನದ ಇಂಧನ ಟ್ಯಾಂಕ್

ವಿಶ್ವದ ಅತಿ ದೊಡ್ಡ ವಿಮಾನವಾದ ಏರ್‌ಬಸ್ 'ಎ-380'ನ ಇಂಧನ ಟ್ಯಾಂಕ್ ಹೇಗಿರಬಹುದು, ಅದರ ವಿನ್ಯಾಸ ಹೇಗಿರಬಹುದು ಎಂಬ ಬಗ್ಗೆ ಯೋಚಿಸಿದ್ದೀರಾ? ಎ-380 ಇಂಧನ ಟ್ಯಾಂಕ್ ಅನ್ನು ವಿನ್ಯಾಸ ಸಮತೋಲನ ಮತ್ತು ವ್ಯಾಪ್ತಿಯಲ್ಲಿ ಒಂದು 'ಮಾಸ್ಟರ್‌ಕ್ಲಾಸ್' ಎಂದು ಪರಿಗಣಿಸಲಾಗಿದೆ. ಪ್ರಪಂಚದ ಅತಿದೊಡ್ಡ ಪ್ರಯಾಣಿಕ ವಿಮಾನವಾದ ಏರ್‌ಬಸ್ ಎ-380, ಖಂಡಾಂತರದ ದೀರ್ಘ-ಶ್ರೇಣಿಯ ವಿಮಾನಗಳ ಹಾರಾಟಕ್ಕೆ ಬೆಂಬಲ ನೀಡಲು, 82,000 ಗ್ಯಾಲನ್‌ಗಳಿಗಿಂತ ಹೆಚ್ಚು (310,000 ಲೀಟರ್) ಇಂಧನವನ್ನು ಅನೇಕ ಟ್ಯಾಂಕ್‌ಗಳ ಮೂಲಕ ಒಯ್ಯುತ್ತದೆ. ಎ-380 ವಿಮಾನವು ಒಟ್ಟು ಹನ್ನೊಂದು ಇಂಧನ ಟ್ಯಾಂಕ್‌ಗಳನ್ನು ಹೊಂದಿದೆ. ಇವುಗಳನ್ನು ರೆಕ್ಕೆಗಳು ಮತ್ತು ವಿಮಾನದ fuselage ತನಕ ವ್ಯಾಪಿಸಿದೆ. ವಿಮಾನದ ಸಮತೋಲನ ಮತ್ತು ರಚನಾತ್ಮಕ ದಕ್ಷತೆಗಾಗಿ (structural efficiency) ಇವು ಎರಡೂ ರೆಕ್ಕೆಗಳಲ್ಲಿ ಇರುತ್ತವೆ. ಒಳ ಮತ್ತು ಹೊರ ರೆಕ್ಕೆ ಟ್ಯಾಂಕ್‌ಗಳು ರೆಕ್ಕೆಗಳ ಒಳಗೆ ಇರುವ ಮುಖ್ಯ ಶೇಖರಣಾ ಟ್ಯಾಂಕ್‌ಗಳಾಗಿವೆ. ಟ್ರಿಮ್ ಟ್ಯಾಂಕ್‌ಗಳು ವಿಮಾನದ ಹಿಂಭಾಗದಲ್ಲಿರುವ ಸಮತಲ ಸ್ಟೆಬಿಲೈಜರ್‌ನಲ್ಲಿ (horizontal stabilizer) ನೆಲೆಗೊಂಡಿವೆ. ವಿಮಾನದ ಹಾರಾಟದ ಸಮಯದಲ್ಲಿ ಗುರುತ್ವ ಕೇಂದ್ರವನ್ನು (Center of Gravity- CG) ಸರಿಹೊಂದಿಸಲು ಇವುಗಳನ್ನು ಬಳಸಲಾಗುತ್ತದೆ. ಫೀಡ್ ಟ್ಯಾಂಕ್‌ಗಳು ಇಂಧನವನ್ನು ನೇರವಾಗಿ ಎಂಜಿನ್‌ಗಳಿಗೆ ಪೂರೈಸುತ್ತವೆ. ಸರ್ಜ್ ಟ್ಯಾಂಕ್‌ಗಳು ಇಂಧನ ತುಂಬಿಸುವ/ಖಾಲಿ ಮಾಡುವ ಸಮಯದಲ್ಲಿ ಅಧಿಕ ಒತ್ತಡವನ್ನು ತಡೆಯಲು ಇವು ಸಹಾಯ ಮಾಡುತ್ತವೆ. ಎ-380ನಲ್ಲಿರುವ ಇಂಧನ ನಿರ್ವಹಣಾ ವ್ಯವಸ್ಥೆಯು ಬಹಳ ಸಂಕೀರ್ಣ ಮತ್ತು ಸ್ವಯಂಚಾಲಿತವಾಗಿರುತ್ತದೆ. ವಿಮಾನದ ಸಮತೋಲನ, ದಕ್ಷತೆ ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳಲು ಟ್ಯಾಂಕ್‌ಗಳ ನಡುವೆ ಸ್ವಯಂಚಾಲಿತವಾಗಿ ಇಂಧನವನ್ನು ವರ್ಗಾಯಿಸುತ್ತದೆ. ಇದು ಕಂಪ್ಯೂಟರ್-ನಿಯಂತ್ರಿತ ಪಂಪ್‌ಗಳು ಮತ್ತು ಕವಾಟಗಳನ್ನು ಬಳಸುತ್ತದೆ. ಎ-380 ವಿಮಾನದ ಇಡೀ ಟ್ಯಾಂಕ್ ತುಂಬಿದಾಗ ಅದರ ಇಂಧನದ ತೂಕವು 250 ಮೆಟ್ರಿಕ್ ಟನ್‌ಗಳಿಗಿಂತಲೂ ಹೆಚ್ಚು ಇರುತ್ತದೆ- ಅಂದರೆ, ಇದು ಸುಮಾರು 50 ಆನೆಗಳ ತೂಕಕ್ಕೆ ಸಮಾನವಾಗಿರುತ್ತದೆ! ಏರ್‌ಬಸ್ ಎ-380 ಇಂಧನ ವ್ಯವಸ್ಥೆಯು ಕೇವಲ ಟ್ಯಾಂಕ್‌ಗಳ ಜೋಡಣೆಯಲ್ಲ. ಇದು ವಿಮಾನಯಾನ ಎಂಜಿನಿಯರಿಂಗ್‌ನ ಒಂದು ಸಂಕೀರ್ಣ ಸಾಧನೆಯಾಗಿದೆ. ಇಂಧನವನ್ನು ರೆಕ್ಕೆಗಳಲ್ಲಿ ತುಂಬಿಸುವುದರಿಂದ ಕೇವಲ ಸ್ಥಳಾವಕಾಶ ಸಿಗುವುದಲ್ಲ, ಅದರಿಂದ ಎಂಜಿನಿಯರಿಂಗ್ ಲಾಭವೂ ಇದೆ. ವಿಮಾನವು ಹಾರುವಾಗ, ರೆಕ್ಕೆಗಳು ಮೇಲಕ್ಕೆತ್ತಲು ಪ್ರಯತ್ನಿಸುತ್ತವೆ. ವಿಮಾನದ ರೆಕ್ಕೆಗಳೊಳಗೆ ಇಂಧನವನ್ನು ತುಂಬಿದಾಗ, ಇಂಧನದ ಭಾರವು ಈ ಮೇಲಕ್ಕೆ ಎತ್ತುವ ಬಲಕ್ಕೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತದೆ. ಇದು ರೆಕ್ಕೆಗಳ ಬುಡದಲ್ಲಿನ ಒತ್ತಡ ಮತ್ತು ಬಾಗುವಿಕೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಎ-380 ವಿಮಾನದ ರೆಕ್ಕೆಗಳು ಹಾರಾಟದ ಸಮಯದಲ್ಲಿ ಸುಮಾರು 4 ಮೀಟರ್‌ಗಳಷ್ಟು ಮೇಲಕ್ಕೆ ಬಾಗಬಹುದು. ಭಾರವಾದ ಇಂಧನವನ್ನು (ವಿಶೇಷವಾಗಿ ಹೊರಗಿನ ಟ್ಯಾಂಕ್‌ಗಳಲ್ಲಿ) ತುಂಬುವುದರಿಂದ ಈ ಬಾಗುವಿಕೆಯ ಪ್ರಮಾಣ ನಿಯಂತ್ರಣಕ್ಕೆ ಬರುತ್ತದೆ. ವಿಮಾನದ ಹಿಂಭಾಗದ ಸಮತಲ ಸ್ಟೆಬಿಲೈಜರ್‌ನಲ್ಲಿ (Horizontal Stabilizer) ಇರಿಸಲಾದ ಟ್ರಿಮ್ ಟ್ಯಾಂಕ್‌ಗಳು ದಕ್ಷತೆಗೆ ಅತ್ಯಂತ ನಿರ್ಣಾಯಕವಾಗಿವೆ. ವಿಮಾನವು ಹೆಚ್ಚಿನ ವೇಗದಲ್ಲಿ (Cruise Speed) ಹಾರುವಾಗ, ವಿಮಾನದ ಗುರುತ್ವಕೇಂದ್ರ (Center of Gravity) ವು ಸ್ವಲ್ಪ ಹಿಂಭಾಗಕ್ಕೆ ಚಲಿಸಿದರೆ, ವಾಯುಬಲವಿಜ್ಞಾನದ ಎಳೆತ ಕಡಿಮೆಯಾಗುತ್ತದೆ. ಫೀಡ್ ಟ್ಯಾಂಕ್‌ಗಳ ಒಳಗೆ ಒಂದು ಸಣ್ಣ ಸಂಗ್ರಾಹಕ ಕೋಶ (Collector Cell) ಇರುತ್ತದೆ. ವಿಮಾನವು ತೀವ್ರವಾಗಿ ತಿರುಗಿದರೂ ಅಥವಾ ಪಕ್ಕಕ್ಕೆ ವಾಲಿದರೂ, ಎಂಜಿನ್ ಪಂಪ್‌ಗಳಿಗೆ ನಿರಂತರವಾಗಿ ಇಂಧನ ಪೂರೈಕೆಯಾಗುವುದನ್ನು ಇದು ಖಚಿತಪಡಿಸುತ್ತದೆ. ಯಾವುದೇ ಒಂದು ಎಂಜಿನ್‌ನ ಫೀಡ್ ಟ್ಯಾಂಕ್‌ನಲ್ಲಿ ಸಮಸ್ಯೆ ಎದುರಾದರೆ, ಇತರ ಟ್ಯಾಂಕ್‌ಗಳಿಂದ ಇಂಧನವನ್ನು ಸರಬರಾಜು ಮಾಡಲು ಕ್ರಾಸ್‌ಫೀಡ್ ವ್ಯವಸ್ಥೆ ಇದೆ. ಇದರಿಂದ ಒಂದು ಎಂಜಿನ್, ತನ್ನ ಪಕ್ಕದ ರೆಕ್ಕೆಯ ಟ್ಯಾಂಕ್‌ನಿಂದಲೂ ಇಂಧನ ಪಡೆಯಬಹುದು.

ಚಿಕ್ಕಪುಟ್ಟ ರಿಪೇರಿ ಕೊಡುವ ಖುಷಿ, ಕಲಿಸುವ ಪಾಠ

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ನಮ್ಮ ಮನೆಯ ಡೈನಿಂಗ್ ಟೇಬಲ್ ಸೆಟ್‌ನ ಒಂದು ಕುರ್ಚಿಯ ಕಾಲು ಸ್ವಲ್ಪ ಸಡಿಲಗೊಂಡಿತ್ತು. ತುರ್ತಾಗಿ ಆ ಕುರ್ಚಿಯನ್ನು ಹೆಚ್ಚಿಗೆ ಬಳಸದ ಜಾಗದಲ್ಲಿಟ್ಟು ಅಲ್ಲಿದ್ದ ಗಟ್ಟಿ ಕುರ್ಚಿಯನ್ನು ಆಚೀಚೆ ಮಾಡಿಟ್ಟಿದ್ದೆ. ಇರುತ್ತದೆಯಲ್ಲ, ಡೈನಿಂಗ್ ಟೇಬಲ್ಲಿನ ಒಂದು ಮೂಲೆಯ ಒಂದು ಕುರ್ಚಿ- ಸಾಮಾನ್ಯವಾಗಿ ಬಳಕೆಯಾಗದ, ಯಾರಾದರೂ ನೆಂಟರು ಬಂದಾಗ ಮಾತ್ರ ಬಳಕೆಯಾಗುವ ಕುರ್ಚಿ. ಅದಾದಮೇಲೆ ನನಗೆ ಈ ಸಡಿಲಗೊಂಡ ಕುರ್ಚಿ ಮರೆತೇ ಹೋಗಿತ್ತು. ಮೊನ್ನೆ ಸ್ನೇಹಿತರೊಬ್ಬರು ಮನೆಗೆ ಬಂದಾಗ ಆ ಕುರ್ಚಿಯನ್ನು ಎಳೆದು ಕೂತ ರಭಸಕ್ಕೆ ಕುರ್ಚಿಯು ರಿಕ್ಟರ್ ಮಾಪಕದ 8ರ ಭೂಕಂಪದಷ್ಟು ಅಲುಗಾಡಿದಾಗಲೇ ನಮಗೆ ನೆನಪಾದದ್ದು- ನಾವೆಲ್ಲರೂ ಒಮ್ಮೆ ಹೆದರಿದ್ದು. ಬಂದ ಸ್ನೇಹಿತರು ಹೊರಟುಹೋದ ಮರುಕ್ಷಣವೇ ಮನೆಯಲ್ಲಿ 'ಡಿಪಾರ್ಟ್ಮೆಂಟಲ್ ಎನ್‌ಕ್ವೈರಿ'. ತಕ್ಷಣ ಈ ಕುರ್ಚಿಯನ್ನು ಎಸೆಯಬೇಕು, ಹೊಸತೊಂದು ಕುರ್ಚಿ ಆರ್ಡರ್ ಮಾಡಬೇಕು ಎಂದು ಹೆಂಡತಿಯ ಫರ್ಮಾನು. ಮಗಳು ಇನ್ನೊಂದು ಹೆಜ್ಜೆ ಮುಂದೆ ಹೋಗಿ- 'ಈ ಡೈನಿಂಗ್ ಟೇಬಲ್ ನಾನು ಹುಟ್ಟಿದಾಗಿನಿಂದ ಇದೆ, ಇದನ್ನೇ ಬದಲಿಸಬೇಕು' ಎಂದಳು. ಇದರ ಮೇಲೆ ಕೂತಾಗ ಮುರಿದುಬಿದ್ದು, ಯಾರಾದರೂ ಕೈಕಾಲು ನೋವು ಮಾಡಿಕೊಂಡರೆ ಯಾರು ಜವಾಬ್ದಾರಿ ಎಂಬ ಪ್ರಶ್ನೆ. ಕೊನೆಯಲ್ಲಿ ಹೊಂದುವ ಒಂದು ಕುರ್ಚಿ ಸಿಗುವುದಿಲ್ಲ, ಹಾಗಾಗಿ ಹೊಸತೊಂದು ಡೈನಿಂಗ್ ಸೆಟ್ ಅನ್ನೇ ಖರೀದಿಸಬೇಕೆಂದು ಮೀಟಿಂಗ್‌ನಲ್ಲಿ ತೀರ್ಮಾನ ಕೈಗೊಳ್ಳಲಾಯಿತು. .

ಈ ಡೈನಿಂಗ್ ಟೇಬಲ್ ಅನ್ನು ಮನೆಗೆ ತಂದು 8-10 ವರ್ಷವಾಗಿತ್ತು. ಅಷ್ಟು ದೀರ್ಘಕಾಲ ಅದು ಜತೆಯಲ್ಲಿತ್ತು. ನಮ್ಮ ಮನೆಯಲ್ಲಿ ಬಂದ ನೆಂಟರು, ಸ್ನೇಹಿತರು ಎಲ್ಲರೂ ಈ ಕುರ್ಚಿಗಳ ಮೇಲೆ, ಟೇಬಲ್ಲಿನ ಮುಂದೆ ಕೂತು ಹರಟಿದ್ದು, ಜತೆಯಲ್ಲಿ ಕೂತು ಊಟ ಮಾಡಿದ ತರಹೇವಾರಿ ನೆನಪುಗಳಲ್ಲಿ ಈ ಡೈನಿಂಗ್ ಟೇಬಲ್ ಸೆಟ್ ಇದೆ. ನಾವು ಮನೆಯವರೂ ಪ್ರತಿನಿತ್ಯ ಮಾತನಾಡುತ್ತ ಊಟಮಾಡುವ ಟೇಬಲ್ ಇದು. ಆ ಟೇಬಲ್ಲಿನ ಮೇಲೆ ವಿಶೇಷ ಸೆಳೆತವಿಲ್ಲದಿದ್ದರೂ ಆ ನೆನಪುಗಳ ಭಾಗವಾಗಿ ಟೇಬಲ್ ಇದ್ದದ್ದರಿಂದ ಇದೆಲ್ಲವನ್ನೂ ಬದಲಿಸಿ ಊಟದ ಮನೆಯ ದೆಶೆಯನ್ನು ಬದಲಿಸಲು ಮನಸ್ಸು ಒಪ್ಪುತ್ತಿರಲಿಲ್ಲ. ಮೋಹಕ್ಕಿಂತ ಆಚೆ, ಒಂದೇ ಕುರ್ಚಿಯ ಒಂದು ಕಾಲು ಸರಿಯಿಲ್ಲವೆಂದು ಇಡೀ ಟೇಬಲ್ ಮತ್ತು ಆರು ಕುರ್ಚಿಯನ್ನು ಬದಲಿಸುವುದೇ? ತಾತ್ವಿಕವಾಗಿ ಒಪ್ಪಲಾಗಲಿಲ್ಲ.

ಇಂಥದ್ದೊಂದು 'ಹಾಳಾದರೆ ಎಸೆದು ಹೊಸತನ್ನು ಖರೀದಿಸಬೇಕಾದ' ವ್ಯವಸ್ಥೆಯ ಮೇಲೆ ನನಗೆ ಮೊದಲಿನಿಂದಲೂ ಪ್ರತಿರೋಧವಿದೆ. ನಾನು ಆಗೀಗ ಆ ವ್ಯವಸ್ಥೆಯ ವಿರುದ್ಧ ಬಂಡಾಯವೇಳುವುದಿದೆ. ಅದರಂತೆ ಈ ಕುರ್ಚಿಯನ್ನು ಹೇಗಾದರೂ ಮಾಡಿ ರಿಪೇರಿ ಮಾಡಬೇಕೆಂದು ನಿರ್ಧರಿಸಿದೆ. ಚಿಕ್ಕಪುಟ್ಟ ಮರಗೆಲಸ ಮಾಡಿ ಅಭ್ಯಾಸವಿದೆ ನನಗೆ; ಚಿಕ್ಕ ಗರಗಸ, ಇಲೆಕ್ಟ್ರಿಕ್ ಸಾ, ಫೆವಿಕಾಲ್, ಸ್ಯಾಂಡ್ ಪೇಪರ್ ಎಲ್ಲವೂ ಮನೆಯಲ್ಲಿಯೇ ಇದ್ದವು. ಅದರ ಕಾಲು ಬಿಚ್ಚಿ, ಸೇರುವ ಜಾಗದಲ್ಲಿ ಮುರಿದಿದ್ದ ಮರದ ತುಂಡನ್ನು ಕತ್ತರಿಸಿ, ಅಲ್ಲೊಂದು ತೂತು (ಡ್ರಿಲ್) ಮಾಡಿ, ಅದಕ್ಕೊಂದು ಕಬ್ಬಿಣದ ಮೊಳೆ ಹೊಡೆದ್ದಾಯಿತು. ಅಷ್ಟು ಚಿಕ್ಕ ಕೆಲಸಕ್ಕೆ ಮೂರು ಬಾರಿ ಸಾಮಾನಿಗೆಂದು ಹಾರ್ಡ್‌ವೇರ್ ಅಂಗಡಿಗೆ ಹೋಗಿಬರಬೇಕಾಯ್ತು. ರಿಪೇರಿ ಮಾಡಿದ ಮೇಲೆ ರಿಪೇರಿ ಕಾಣಿಸಬಾರದು. ಮುಗಿಸುವಾಗ ಎರಡು ಒಪ್ಪತ್ತು ಬೇಕಾಯ್ತು. ಮನೆಯಲ್ಲಿ ಹೆಂಡತಿ-ಮಗಳು 'ಇದು ಆಗುವ ಕೆಲಸವಲ್ಲ' ಎಂದು ಉದ್ದಕ್ಕೂ ಮುಸಿಮುಸಿ ನಗುತ್ತಿದ್ದರು. ಆದರೆ ಇದು ಬಂಡಾಯ, ಕೈ ಬಿಡುವಂತಿಲ್ಲ, ಕೊನೆಗೂ ಕುರ್ಚಿ ರಿಪೇರಿಯಾಯ್ತು, ಮೊದಲಿನಂತಾಯಿತು. ಆಗಲೇ ಆ ಅವಮಾನ, ಕುಹಕಗಳು ನಿಂತದ್ದು. ಇಷ್ಟು ಮಾಡಿ ಮುಗಿಸುವಾಗ ನನ್ನ ಮೈಕೈ ಬೆವರಿತ್ತು, ಬಗ್ಗಿ ಬೆನ್ನು ಸಣ್ಣಗೆ ನೋಯುತ್ತಿತ್ತು; ಬಟ್ಟೆಗೆ, ಮುಖಕ್ಕೆಲ್ಲ ಆ ಹಳೆಯ ಮರದ ಪುಡಿಗಳು, ಒಣಮರದ ವಾಸನೆ. ಕೈ ಬೆರಳುಗಳಿಗೆಲ್ಲ ಫೆವಿಕಾಲ್ ಅಂಟಿದ್ದವು. ಅಷ್ಟೆಲ್ಲಾ ರಗಳೆಗಳ ನಂತರ, ಕೆಲಸ ಮುಗಿಸಿದ ನನ್ನಲ್ಲಿ ಏನೋ ಒಂದು ಸಮಾಧಾನ, ಸಂತೃಪ್ತಿ ಇತ್ತು. ರಿಪೇರಿ ಮಾಡಿದ ಹಣ ಉಳಿತಾಯಕ್ಕೋ? ಅಲ್ಲ, ಅಥವಾ ಆ ಕುರ್ಚಿಯ ಮೇಲಿದ್ದ ಮೋಹಕ್ಕೋ? ಅದೂ ಅಲ್ಲ. ಅದರಾಚೆ ಏನೋ ಒಂದನ್ನು ಸರಿಮಾಡಿದೆನೆಂಬ ತೃಪ್ತಭಾವ. ಈ ಭಾವದ ಅನುಭವ ಎಲ್ಲರಿಗೂ ಆಗಿರುತ್ತದೆ. ಏನೋ ಒಂದು ರಿಪೇರಿ ಮಾಡಿದಾಗ ಸಿಗುವ ಖುಷಿ.

ಇಂದು ಯಾವುದೇ ವಸ್ತು ಹಾಳಾದರೆ ನಮಗೆಲ್ಲ ಹೊಸತಕ್ಕೆಷ್ಟು ರೇಟು ಎಂದೇ ಮೊದಲು ಪ್ರಶ್ನೆ ಮೂಡುವುದು. ಇದೆಲ್ಲ ಹೀಗಿರಲಿಲ್ಲ, ಕೆಲವೇ ವರ್ಷಗಳ ಹಿಂದೆ ರಿಪೇರಿ ಎನ್ನುವುದು ತೀರಾ ಸಾಮಾನ್ಯವಾಗಿತ್ತು. ಈಗ ಹಾಗಲ್ಲ. ಯಾವುದನ್ನೂ ರಿಪೇರಿ ಮಾಡುವುದು ಈಗೀಗ ಅಷ್ಟು ಸುಲಭವಲ್ಲ, ರಿಪೇರಿ ಎಂಬ ಪರಿಕಲ್ಪನೆಯೇ ಈಗೀಗ ಕಡಿಮೆಯಾಗುತ್ತಿದೆ. ಇತ್ತೀಚಿನ ಹೆಚ್ಚಿನ ವಸ್ತುಗಳನ್ನು ರಿಪೇರಿ ಮಾಡಲಿಕ್ಕೇ ಸಾಧ್ಯವಾಗುವುದಿಲ್ಲ, ಅವುಗಳ ರಚನೆಯನ್ನೇ ಆ ರೀತಿ

ಮಾಡಿರುತ್ತಾರೆ. ಇಲೆಕ್ಟ್ರಾನಿಕ್ ವಸ್ತುಗಳಂತೂ ಹೆಚ್ಚು ಕಡಿಮೆ ಹೋದರೆ ಹೊಯ್ತೇ. ಮೊದಲೆಲ್ಲ ಮೊಬೈಲ್ ಫೋನ್‌ನ ಬ್ಯಾಟರಿ ಬದಲಿಸಬಹುದಿತ್ತು, ನೆನಪಿದೆಯಾ? ಆಮೇಲೆ 'ಬ್ಯಾಟರಿ ತೆಗೆಯಲು ಬರುವುದಿಲ್ಲವಂತೆ' ಎಂಬ ಹೊಸ ಫೋನುಗಳು ಬಂದವು. ಈಗ? ಮೊದಲು ಲ್ಯಾಪ್‌ಟಾಪ್‌ನ ಹಾರ್ಡ್ ಡಿಸ್ಕ್, ರ್‍ಯಾಮ್ ಇತ್ಯಾದಿ ಎಲ್ಲವನ್ನೂ ಬದಲಿಸಬಹುದಿತ್ತು. ಎಂಜಿನಿಯರಿಂಗ್ ಹುಡುಗರು ಕಂಪ್ಯೂಟರಿನ ಬಿಡಿಭಾಗಗಳನ್ನೆಲ್ಲ ಒಟ್ಟು ಹಾಕಿ ಹೊಸತೊಂದು ಕಂಪ್ಯೂಟರ್ ಅನ್ನು ತಯಾರಿಸಿಕೊಳ್ಳುವುದು ಮೊದಲೆಲ್ಲ ಸಾಮಾನ್ಯವಾಗಿತ್ತು. ಅದರಲ್ಲಿ ಯಾವುದೇ ಭಾಗ ಹೋದರೆ ರಿಪೇರಿ ಸುಲಭ, ಅಥವಾ ಹೊಸ ಬಿಡಿಭಾಗ ತಂದು ಸಿಕ್ಕಿಕೊಂಡರಾಗಿತ್ತು. ಆದರೆ ಈಗೀಗ ಬರುತ್ತಿರುವ ಹೊಸ ತಲೆಮಾರಿನ ಮ್ಯಾಕ್, ವಿಂಡೋಸ್ ಲ್ಯಾಪ್‌ಟಾಪ್‌ಗಳಲ್ಲಿ ಎಲ್ಲವನ್ನೂ ಒಂದೇ ಸರ್ಕಿಟ್ ಬೋರ್ಡಿಗೆ ಬೆಸುಗೆ ಹಾಕಲಾಗುತ್ತದೆ. ಬ್ಯಾಟರಿ, ಹಾರ್ಡ್ ಡಿಸ್ಕ್ ಯಾವುದನ್ನೂ ಬದಲಿಸಲಿಕ್ಕೆ ಸಾಧ್ಯವೇ ಇಲ್ಲ, ಈ ಕಂಪನಿಗಳ ಸರ್ವೀಸ್ ಸೆಂಟರಿಗೆ ಹೋದರೆ ಸರಿ ಮಾಡಲಿಕ್ಕಾಗುವುದಿಲ್ಲ ಎಂದುಬಿಡುತ್ತಾರೆ ಅಥವಾ ಬಲುತುಟ್ಟಿ. ಅಮೆರಿಕದಲ್ಲಂತೂ ಯಾವುದನ್ನೂ ರಿಪೇರಿ ಮಾಡುವ ವ್ಯವಹಾರವೇ ಇಲ್ಲ, ಹೆಚ್ಚಿನ ವಸ್ತುಗಳು ಹಾಳಾದರೆ ಎಸೆಯುವುದು, ಹೊಸತು ಖರೀದಿಸುವುದು. ನಿತ್ಯಬಳಕೆಯ ಮಿಕ್ಸಿ, ಗ್ರೈಂಡರ್, ಟಿವಿ, ಮೊಬೈಲ್ ಎಲ್ಲವೂ. ತಮಾಷೆಗಲ್ಲ, ಇತ್ತೀಚೆಗೆ ನನ್ನ ಸೈಕಲ್ ಪಂಕ್ಚರ್ ಆಗಿತ್ತು ಮತ್ತು ಚೈನನ್ನು ಕೂಡ ಬದಲಿಸಬೇಕಿತ್ತು. ಆದರೆ ಚೈನು, ಟ್ಯೂಬ್, ಹೊಸ ಟೈರ್ ಮತ್ತು ಬ್ರೇಕ್‌ಪ್ಯಾಡ್ ಇದಷ್ಟನ್ನು ಖರೀದಿಸಿದರೆ; ಅದರ ಮೇಲೆ ಇನ್ನೊಂದು ಸ್ವಲ್ಪ ಹಣ ಹಾಕಿದರೆ ಹೊಸ ಸೈಕಲ್ ಬರುತ್ತದೆ. ಅಮೆರಿಕದಂಥ ದೇಶಗಳಲ್ಲಿ ರಿಪೇರಿ ಎನ್ನುವ ವಿಷಯವೇ ಮರೆಯಾಗಿಹೋಗಿದೆ. ನಮ್ಮ ದೇಶವೂ ಹಾಗೆಯೇ ಬದಲಾಗುತ್ತಿದೆ. Use and throw!

ಒಂದು ಕಡೆ ಗ್ಲೋಬಲ್ ವಾರ್ಮಿಂಗ್ ಇತ್ಯಾದಿಯ ಸರಕಾರಿ ಡೊಂಬರಾಟಗಳು, ಇನ್ನೊಂದು ಕಡೆ ರಿಪೇರಿ ಮಾಡಲು ಆಗಬಾರದು, ವಾರಂಟಿ-ಗ್ಯಾರಂಟಿ ಮುಗಿದ ಮೇಲೆ ಹೆಚ್ಚಿಗೆ ಬಾಳಿಕೆ ಬರಬಾರದು. ಆ ರೀತಿ ವಸ್ತು ವಿನ್ಯಾಸದಲ್ಲಿ ಕಂಪನಿಗಳು ತೊಡಗಿವೆ. ಹಾಳಾಗಲಿ ಎಂಬ ವಿನ್ಯಾಸವಲ್ಲ, ಬದಲಿಗೆ ನಿಗದಿತ ಬಾಳಿಕೆ ಬರಬೇಕು, ಗ್ರಾಹಕ ಅದಾದ ಮೇಲೆ ಇನ್ನೊಂದು ಖರೀದಿಸಬೇಕು. ಅಥವಾ ಇತ್ತೀಚೆಗೆ ಹೆಚ್ಚಿನವು ಚಂದಾ- Subscription Model. ಇದೆಲ್ಲದರ ನಡುವೆ, ರಿಪೇರಿಯಿಂದ ಸಿಗುವ ಖುಷಿಯಿಂದ ಈಗಿನ ತಲೆಮಾರು ವಂಚಿತವಾಗುತ್ತಿದೆಯೇ? ರೊಬೊಟಿಕ್ಸ್ ಕಲಿಯುವ ಇಂದಿನ ಮಕ್ಕಳಿಗೆ ಒಂದು ಸ್ವಿಚ್, ಪ್ಲಗ್, ಬಲ್ಬು ಬದಲಿಸಲು ಬಾರದಿದ್ದರೆ ಆಶ್ಚರ್ಯಪಡಬೇಕಿಲ್ಲ. .

ಒಂದು ವಸ್ತುವಿನ ರಿಪೇರಿಗೆ ಏಕಾಗ್ರತೆ ಬೇಕು. ತಾಳ್ಮೆ ಬೇಕು. ಅದಕ್ಕಿಂತ ಮೊದಲು ಆ ನಿಸ್ತೇಜ ವಸ್ತುವಿನೊಂದಿಗೆ ಮೊದಲು ಒಂದು ಸಂಬಂಧ ಏರ್ಪಡಬೇಕು. ಸಾಮಾನ್ಯವಾಗಿ ರಿಪೇರಿ ಅತ್ಯಂತ ರಗಳೆಯ ಕೆಲಸ ಎನ್ನುವ ಭಾವನೆ ಸುಳ್ಳಲ್ಲ, ಹೆಚ್ಚಿನವರಿಗೆ ರಿಪೇರಿ ಮಾಡುವ ವ್ಯವಧಾನವಿರುವುದಿಲ್ಲ. ಅದೆಷ್ಟೋ ಜನರಿಗೆ ಹಾಳಾದ ವಸ್ತುಗಳನ್ನು ರಿಪೇರಿ ಮಾಡಬೇಕೆಂದು ಉದ್ದೇಶವೇನೋ ಇರುತ್ತದೆ. ಆದರೆ ರಿಪೇರಿ ಮಾಡಬೇಕೆಂದು ಬದಿಗಿಟ್ಟ ವಸ್ತು ಹಾಗೆಯೇ ಹರಗಣವಾಗಿ ಮನೆಯ ಒಂದಿಷ್ಟು ಜಾಗವನ್ನು ಆವರಿಸಿರುತ್ತದೆ. ಆದರೆ ರಿಪೇರಿಗೆ ಮುಹೂರ್ತವೇ ಬರುವುದಿಲ್ಲ. ರಿಪೇರಿ ಎಂದರೆ ಅದೊಂದು ರಗಳೆಯ ಕೆಲಸವಾದದ್ದರಿಂದ ಆ ಕೆಲಸವನ್ನು ಮುಂದೂಡುತ್ತಲೇ ಇರುತ್ತಾರೆ. ಕೊನೆಗೊಂದು ದಿನ- ಹೋಗ್ಲಿ ಬಿಡು ಎಂದು ಆ ವಸ್ತುವನ್ನು ಎಸೆಯಲು ಮುಂದಾಗಿರುತ್ತಾರೆ. ರಿಪೇರಿಗೆ ಕೂರುವ ಪ್ರಕ್ರಿಯೆಯೇ ಅತ್ಯಂತ ಕಷ್ಟದ್ದು. ಒಮ್ಮೆ ಕೂತರೆ ರಿಪೇರಿ ಕಷ್ಟವಾಗುವುದಿಲ್ಲ.

ರಿಪೇರಿಗೆ ಸಲಕರಣೆಗಳು ಬೇಕು, ರಿಪೇರಿ ಕಲಿತಿರಬೇಕು ಎಂಬುದೆಲ್ಲ ನಿಜ. ಆದರೆ ಮನೆಯ ಹೆಚ್ಚಿನ ಚಿಕ್ಕಪುಟ್ಟ ವಸ್ತುಗಳ ರಿಪೇರಿಗೆ ಅವು ಯಾವುವೂ ಬೇಕಿರುವುದಿಲ್ಲ. ಬೇಕಿರುವುದು ರಿಪೇರಿ ಮಾಡಬೇಕೆಂಬ ಮನಸ್ಸು ಮಾತ್ರ. ಕೆಲವರಿರುತ್ತಾರೆ, ಅವರಿಗೆ ರಿಪೇರಿ ಒಂದು ಪ್ಯಾಷನ್-ಹವ್ಯಾಸ ಇತ್ಯಾದಿ. ಅವರ ಬಳಿ ನಾನಾ ರೀತಿಯ ಸಲಕರಣೆಗಳು, ಶೋಲ್ಡರ್ ಗನ್ ಎಲ್ಲವೂ ಇರುತ್ತವೆ. ಕೆಲವೊಬ್ಬರು ಒಂದು ಕೋಣೆಯನ್ನೇ ಸಲಕರಣೆಗಳಿಂದ ತುಂಬಿಸಿಡುತ್ತಾರೆ. ಕೆಲವರು ಅವರು ರಿಪೇರಿ ಮಾಡುವುದಕ್ಕಿಂತ ಹೆಚ್ಚಿನ ಬೆಲೆಯ ಸಲಕರಣೆ ಖರೀದಿಸಿರುತ್ತಾರೆ. ಅದು ಇನ್ನೊಂದು ಹಂತದ ಹವ್ಯಾಸ. ನಾನು ಅಂಥ ಗಂಭೀರ ಹವ್ಯಾಸಿ ರಿಪೇರಿ ಭೂಪರ ಬಗ್ಗೆ ಹೇಳುತ್ತಿಲ್ಲ. ನಾನಿಲ್ಲಿ ಹೇಳುತ್ತಿರುವುದು ಚಿಕ್ಕಪುಟ್ಟ ರಿಪೇರಿಗಳು ಮತ್ತು ರಿಪೇರಿ ಕೊಡುವ ಖುಷಿಯ ಬಗ್ಗೆ. ರಿಪೇರಿಗೆ ಬೇಕಿರುವುದು ಮನಸ್ಸು ಮತ್ತು ತಾಳ್ಮೆ. ನೂರಕ್ಕೆ ತೊಂಬತ್ತು ಇಂಥ ರಿಪೇರಿಗಳಿಗೆ ಕೌಶಲ- ಸ್ಕಿಲ್ ನಗಣ್ಯ. ನಿಜ, ಅದೆಷ್ಟೋ ರಿಪೇರಿ ಮಾಡುವುದೇ ಒಂದು ಸ್ಕಿಲ್. ಶರವೇಗದ, ಪುರುಸೊತ್ತಿಲ್ಲದ ಜಗತ್ತಿನಲ್ಲಿ ಕೂತು ರಿಪೇರಿ ಮಾಡುವುದು ಇನ್ನಷ್ಟು ತಾಳ್ಮೆ ಕಲಿಸುತ್ತದೆ. ವಸ್ತು ರಿಪೇರಿಯಾದರೆ ಆಗ ಸಿಗುವ ಸಮಾಧಾನ ಅನನ್ಯ. ತಂದ ಹೊಸತರಲ್ಲಿ ವಸ್ತುಗಳಿಗೆ ಹೆಚ್ಚಿನ ಬೆಲೆ. ನಾವು ಅದನ್ನು ಮಕ್ಕಳಿಗೆ ಮುಟ್ಟಲು ಬಿಡುವುದಿಲ್ಲ, ಉಳಿದವರು ಬಳಸುವಾಗ 'ಜಾಗ್ರತೆ' ಎಂದು ಎಚ್ಚರಿಸುತ್ತೇವೆ ಇತ್ಯಾದಿ. ಕ್ರಮೇಣ ಅವು ದೂರವಾಗುತ್ತವೆ, ಮೂಲೆ ಸೇರುತ್ತವೆ, ಕೊನೆಗೊಂದು ದಿನ ಹಾಳಾದರೆ ಅಲ್ಲಿಗೆ ಸಂಬಂಧವೇ ಮುಗಿದುಹೋಯಿತು. ಆದರೆ ರಿಪೇರಿ ಮಾಡಿದಿರೋ, ಆ ವಸ್ತುವಿನ ಮೇಲೆ ವಿಚಿತ್ರವಾದ ಹೊಸ ಪ್ರೀತಿ ಹುಟ್ಟಿಬಿಡುತ್ತದೆ. ಭೌತಿಕ ಆದರೆ ಹೌದು, ರಿಪೇರಿ ಮಾಡಿದ ವಸ್ತು ಇನ್ನಷ್ಟು ಹತ್ತಿರವಾಗುತ್ತದೆ. ಇನ್ನು ರಿಪೇರಿ ಮಾಡಲು ಮುಂದಾಗಲು ಕೇವಲ ಮನಸ್ಸಿದ್ದರಷ್ಟೇ ಮುಗಿಯಲಿಲ್ಲ, ಅಸಾಮಾನ್ಯ ತಾಳ್ಮೆ ಬೇಕು. ರಿಪೇರಿ ನಮ್ಮ ಸಂಪೂರ್ಣ ಗಮನವನ್ನು ಬಯಸುತ್ತದೆ. Attention to detail- ಅತಿ ಸೂಕ್ಷ್ಮ ಗಮನ, ಏಕಾಗ್ರತೆ. ಒಂದು ಮಜವೆಂದರೆ, ಈ ಗುಣಗಳ ಕೊರತೆ ಇದ್ದರೆ, ಇನ್ನಷ್ಟು ಏಕಾಗ್ರತೆಯನ್ನು ಪಡೆಯಲು ಕೂಡ ರಿಪೇರಿ ಸಹಾಯಕಾರಿ. ರಿಪೇರಿಯೆಂದರೆ ಅದು ಅಷ್ಟು ಕಾಲ ಮಿದುಳಿನ ಜಾಗೃತ ಸ್ಥಿತಿ, ಮನಸ್ಸಿನ ನಿರಂತರ ಹರಿವಿನ ಸ್ಥಿತಿ. ಹಾಗಾಗಿಯೇ ಅದು ಕೂಡ ಒಂದು ಧ್ಯಾನವೆನಿಸುವುದು.

Repair repays us, also repairs us. ರಿಪೇರಿ ನಮ್ಮನ್ನೂ ರಿಪೇರಿ ಮಾಡುತ್ತದೆ ಎಂಬ ಮಾತಿದೆ. ರಿಪೇರಿ ಕೇವಲ ವಸ್ತುಗಳದ್ದಷ್ಟೇ ಅಲ್ಲ, ನಮ್ಮ ಆಂತರ್ಯದಲ್ಲೂ ಆಗೀಗ ರಿಪೇರಿಗಳಾಗುತ್ತಲೇ ಇರಬೇಕು. ಅಂತೆಯೇ ನಮ್ಮ ಸ್ನೇಹ, ಕುಟುಂಬ ಸಂಬಂಧಗಳು, ಉಳಿದ ಮಾನವೀಯ ಸಂಬಂಧಗಳು ಕೂಡ ಆಗೀಗ ರಿಪೇರಿಗೆ ಬಂದು ನಿಲ್ಲುತ್ತವೆ. ಆಗ ಆಯ್ಕೆಯಿರುವುದು ಹೊಸತೋ? ಅಥವಾ ಇದರದ್ದೇ ರಿಪೇರಿಯೋ? ಜಪಾನಿನ ಒಂದು ವಿಚಿತ್ರ ಹಳೆಯ ಹವ್ಯಾಸ ಈಗೀಗ ಅಮೆರಿಕದಲ್ಲೂ ಜನಪ್ರಿಯವಾಗುತ್ತಿದೆ. ಅದರ ಹೆಸರು ಕಿಂತ್ಸುಗಿ- Kintsugi. ಒಡೆದುಹೋದ ಪಿಂಗಾಣಿ ಪಾತ್ರೆಯ ಎಲ್ಲಾ ಚೂರುಗಳನ್ನು ಅಂಟು ಹಾಕಿ ಜತೆಯಲ್ಲಿ ಜೋಡಿಸುವುದು, ಪೂರ್ಣಗೊಳಿಸುವುದು. ಸರಳ ಆದರೆ ಅತ್ಯಂತ ತಾಳ್ಮೆಯ ಕೆಲಸ. ಪುನಃ ಜೋಡಿಸುವುದಷ್ಟೇ ಅಲ್ಲ, ಜತೆಯಲ್ಲಿ ಆ ಬಿರುಕುಗಳಲ್ಲಿ ಹಾಕಿದ ಅಂಟಿನ ಮೇಲೆ ಚಿನ್ನದ ಪುಡಿ ಉದುರಿಸುತ್ತಾರೆ. ಇಷ್ಟಾಗುವಾಗ ಆ ಪುನರ್ಜನ್ಮ ತಾಳಿದ ಪಿಂಗಾಣಿ ಪಾತ್ರೆಯ ಮೌಲಿಕ, ಮತ್ತು ಭೌತಿಕ ಬೆಲೆ ಕೂಡ ನಾಲ್ಕು ಪಟ್ಟು ಹೆಚ್ಚಿರುತ್ತದೆ. ಹಾಳಾದ ಸಂಬಂಧ ರಿಪೇರಿ ಮಾಡಿಕೊಂಡಾಗ ಸಮಾಜ ಆ ರಿಪೇರಿಯನ್ನೇ ಕುಹಕದಿಂದ ಪ್ರಶ್ನಿಸುತ್ತದೆ. ಹಾಗಾಗಿ ಸಂಬಂಧವನ್ನು ನಾವೇ ರಿಪೇರಿ ಮಾಡಿಕೊಂಡರೂ ಆ ರಿಪೇರಿಯನ್ನು ಮರೆಮಾಚುತ್ತೇವೆ, ಬಿರುಕನ್ನು ಮುಚ್ಚಿಡುತ್ತೇವೆ. ರಿಪೇರಿಯಾದದ್ದು ಎಂದರೆ ಕಡಿಮೆ ಬೆಲೆಯದು ಅಲ್ಲವೇ? ಹಾಳಾದದ್ದನ್ನು ಹಾಗಾಗಿರಲೇ ಇಲ್ಲ ಇಂದು ತೋರಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಆದರೆ ಕಿಂತ್ಸುಗಿ ಹಾಗಲ್ಲ, ಆ ಬಿರುಕು, ರಿಪೇರಿ ಕೂಡ ಇಲ್ಲಿ ಸಂಭ್ರಮ. ಮುರುಕೇ ವಿಶೇಷಣ. ಸಾಮಾನ್ಯ ಪಿಂಗಾಣಿಗಿಂತ, ಬಳಸಿ, ಒಡೆದು, ನಾಶವಾಗಿ, ರಿಪೇರಿಯಾದ ಕಿಂತ್ಸುಗಿ ಪಿಂಗಾಣಿಗೆ ಹತ್ತುಪಟ್ಟು ಬೆಲೆ. ಸಂಬಂಧವನ್ನು ಕಿಂತ್ಸುಗಿಯಾಗಿಸಲೂ ಅದೇ ತಾಳ್ಮೆ, ಏಕಾಗ್ರತೆ, ಇಚ್ಛಾಶಕ್ತಿ ಎಲ್ಲವೂ ಬೇಕು. ಅಂತೆಯೇ ವೈಯಕ್ತಿಕ ರಿಪೇರಿ. ನಾವೆಲ್ಲರೂ ಆಗೀಗ ಮಾನಸಿಕ ರಿಪೇರಿಗೆ ಬಂದು ನಿಲ್ಲುತ್ತಿರುತ್ತೇವೆ. ಕೆಲವರು ಅದನ್ನು ಅಲಕ್ಷಿಸುತ್ತಾರೆ, ಇನ್ನು ಕೆಲವರು ಅದರ ರಿಪೇರಿಗಿಳಿಯುತ್ತಾರೆ. ಈ ಸ್ವಂತದ ರಿಪೇರಿ ಸುಲಭದ್ದಲ್ಲ, ಅದಕ್ಕೆ ಮತ್ತದೇ ತಾಳ್ಮೆ ಇತ್ಯಾದಿ ಬೇಕೇಬೇಕು. ಅದು ಮನೆಯೊಳಗಿನ ಒಣಗಿ ಸಾಯುತ್ತಿರುವ ಗಿಡವನ್ನು ಬದುಕಿಸಿದಷ್ಟು.

ಯಾವುದೇ ರಿಪೇರಿಗೆ ಬೇಕಿರುವುದು ಜೀವನಪ್ರೀತಿ. ವಸ್ತು ಮತ್ತು ಸಂಬಂಧಗಳಲ್ಲಿ ಎಲ್ಲವನ್ನೂ ರಿಪೇರಿ ಮಾಡಲು ಸಾಧ್ಯವಿರುವುದಿಲ್ಲ. ಕೆಲವೊಂದು ಶಾಶ್ವತ. ಅಂಥದ್ದನ್ನು ಪಕ್ಕಕ್ಕಿಡಲೇಬೇಕು. ಪಕ್ಕಕ್ಕಿಟ್ಟರೂ ಅದೊಂದು ಹರಗಣ. ಹಾಗಾಗಿ ಎಸೆಯಲೇಬೇಕು. ಆದರೆ ಎಸೆಯುವುದಕ್ಕಿಂತ ಮೊದಲು ರಿಪೇರಿ ಯಾಕಾಗುವುದಿಲ್ಲ, ಹಾಳಾದದ್ದು ಎಲ್ಲಿ ಎಂದು ಒಮ್ಮೆ ಬಿಚ್ಚಿ ನೋಡಬೇಕು, ಪರೀಕ್ಷೆಯಾಗಲೇಬೇಕು. ಹೇಗೆ ಹಾಳಾಯಿತು ಎಂಬ ಅರಿವು, ಸ್ಪಷ್ಟತೆ ನಮಗೆ ಇರಬೇಕು. ಕೆಲವು ಸಂಬಂಧಗಳನ್ನು ಸರಿಮಾಡಿಕೊಳ್ಳಲು ಸಾಧ್ಯವೇ ಇರುವುದಿಲ್ಲ. ಅಂಥವು ನೀರು ಹಾಕಿದರೆ ಕೊಳೆಯುತ್ತವೆ, ಹಾಕದಿದ್ದರೆ ಬಾಡುತ್ತವೆ. ಆದರೆ ವಿಷಯ ಸ್ವಂತದ ರಿಪೇರಿಯಾದಾದರೆ ಅಲ್ಲಿ ಮಾತ್ರ ಬದಲಿ ವ್ಯವಸ್ಥೆ ಇಲ್ಲ. ರಿಪೇರಿ ಅನಿವಾರ್ಯ. ಅನಿವಾರ್ಯವೆಂದಾದಾಗ ರಿಪೇರಿಗೆ ಬೇಕಾಗುವ ಸಲಕರಣೆಯನ್ನು ಒಟ್ಟುಹಾಕಲೇಬೇಕು, ರಿಪೇರಿಗೆ ನಾವು ಕೂರಲೇಬೇಕು !

Repair Repairs us.

ಚೀನಾದಲ್ಲಿ ಡಿಗ್ರಿ ಇಲ್ಲದಿದ್ದರೆ ದುಡ್ಡಿನ ಬಗ್ಗೆ ರೀಲ್ಸ್ ಮಾಡುವಂತಿಲ್ಲ!

ಭಾರತದಲ್ಲಿ ಹಣಕಾಸು ವಿಚಾರಗಳ ಬಗ್ಗೆ ಕಂಟೆಂಟ್ ಕ್ರಿಯೇಟರ್‌ಗಳು, ಇನ್‌ಫ್ಲುಯೆನ್ಸರ್‌ಗಳಿಗೆ ನಿಯಮವಿದೆ. ಆದರೆ ಡಿಗ್ರಿ ಮಾಡಿರಲೇಬೇಕು ಎಂಬ ಚೀನಾ ಮಾದರಿಯ ನಿಯಮ ಇಲ್ಲ. ಹೀಗಿದ್ದರೂ ಷೇರು ಮಾರುಕಟ್ಟೆಯ ನಿಯಂತ್ರಕ 'ಸೆಬಿ' ಕೆಲವು ನಿಯಮಾವಳಿಗಳನ್ನು ಜಾರಿಗೊಳಿಸಿದೆ. ಅದರ ಪ್ರಕಾರ ಸೆಬಿಯ ನೋಂದಾಯಿತ ಸಂಸ್ಥೆಗಳು/ಸಲಹೆಗಾರರು ಮಾತ್ರ ಸಲಹೆಗಳನ್ನು ನೀಡಬಹುದು.

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
keshavaprasadbk@gmail.com

ಚೀನಾದಲ್ಲೊಂದು ಗಮನ ಸೆಳೆಯುವ ಕಾನೂನು ಬಂದಿದೆ. ಇನ್ನು ಮುಂದೆ ಅಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸಿಕ್ಕಸಿಕ್ಕವರೆಲ್ಲ ಹಣಕಾಸು ವಿಚಾರಗಳ ಬಗ್ಗೆ ರೀಲ್ಸ್, ವಿಡಿಯೋ, ಪಾಡ್‌ಕಾಸ್ಟ್ ಮಾಡುವ ಹಾಗಿಲ್ಲ. ಫೈನಾನ್ಸ್, ಆರೋಗ್ಯ, ಶಿಕ್ಷಣ, ಕಾನೂನು ವಿಷಯದ ಬಗ್ಗೆ ರೀಲ್ಸ್ ಅಥವಾ ವಿಡಿಯೋ ಮಾಡುವವರು ಸ್ವತಃ ಆಯಾ ವಿಷಯಗಳಲ್ಲಿ ಕನಿಷ್ಠ ಪದವಿಯನ್ನು ಗಳಿಸಿರಬೇಕು. ಇತರರು ಅಪ್ಪಿತಪ್ಪಿ ಏನಾದರೂ ಕಂಟೆಂಟ್ ಮಾಡಿದರೆ ಭಾರಿ ದಂಡ ಕಟ್ಟಬೇಕಾಗುತ್ತದೆ! ಭಾರತದಲ್ಲೇನಾದರೂ ಇಂಥ ಕಾನೂನು ಜಾರಿಯಾದರೆ? ಪರಿಸ್ಥಿತಿಯನ್ನು ಆಲೋಚಿಸುವುದೂ ಕಷ್ಟವಾದೀತು. ಏಕೆಂದರೆ ನಮ್ಮಲ್ಲಿ ಜ್ಯೋತಿಷಿಗಳು, ಗುರುಗಳ ಸೋಗಿನಲ್ಲಿ ಯಾರ್‍ಯಾರೋ, ಹಣಕಾಸು-ಸಂಪತ್ತು-ಆರೋಗ್ಯ-ರಾಜಕೀಯ ಭವಿಷ್ಯದ ತನಕ ಬ್ರಹ್ಮಾಂಡವನ್ನೂ ಗಂಟೆಗಟ್ಟಲೆ ಹೇಳಿಬಿಡುತ್ತಾರೆ. ಸಕಲ ಸಮಸ್ಯೆಗಳಿಗೂ ಪರಿಹಾರಗಳನ್ನು ಚಿಟಿಕೆ ಹೊಡೆದಂತೆ ಕೊಟ್ಟುಬಿಡುತ್ತಾರೆ. ಆದರೆ ಅವರಿಗೆ ಆಯಾ ವಿಷಯಗಳಲ್ಲಿ ಪದವಿ ಇದೆಯೇ? ಡಿಗ್ರಿ ಕಾಲೇಜು ಮೆಟ್ಟಿಲು ಹತ್ತಿದ್ದಾರೆಯೇ? ಯಾರಿಗೂ ಗೊತ್ತಿಲ್ಲ! ನಕಲಿ ಆಹಾರ ತಜ್ಞರು ಯುಟ್ಯೂಬ್ ಮೂಲಕ ಸಮಸ್ತ ಕಾಯಿಲೆಗಳಿಗೂ ಪರಿಹಾರ ಹೇಳುತ್ತಾರೆ. ಇವರು ಹೇಳುವುದರಲ್ಲಿ ಅಸಲಿ ಯಾವುದು-ನಕಲಿ ಯಾವುದು? ಸತ್ಯ-ಸುಳ್ಳು ಯಾವುದು ಎಂದು ಜಾಲಾಡಬೇಕಾಗುತ್ತದೆ. ನಕಲಿಗಳ ಹಾವಳಿ ತಡೆಗೆ ಕಠಿಣ ಕಾನೂನು ಅವಶ್ಯಕ ಎನ್ನಿಸುತ್ತದೆ. ಆದರೆ ಇದಕ್ಕೆ ಇನ್ನೂ ವಿಭಿನ್ನ ಆಯಾಮಗಳೂ ಇವೆ.

ಸಾಮಾಜಿಕ ಜಾಲತಾಣಗಳಲ್ಲಿ ವಿಷಯ-ವಸ್ತುಗಳ ನಿಖರತೆ, ವಿಶ್ವಾಸಾರ್ಹತೆ ಹೆಚ್ಚಿಸಲು ಈ ಕ್ರಮ ಅಗತ್ಯ ಎಂದು ಚೀನಾ ಈ ನಿಯಮವನ್ನು ತಂದಿದೆ. ಆದರೆ ಇದರಿಂದಾಗಿ ವಾಕ್ ಸ್ವಾತಂತ್ರ್ಯಕ್ಕೆ ಸೆನ್ಸಾರ್‌ಶಿಪ್‌ನ ಕಡಿವಾಣವಾಗಲಿದೆ ಎಂಬ ಟೀಕೆಯೂ ಕೇಳಿಬಂದಿದೆ. ಆದರೆ ಭಾರತ ಮತ್ತು ಚೀನಾದ ಸರಕಾರಗಳ ವ್ಯವಸ್ಥೆ ವಿಭಿನ್ನ. ಅಲ್ಲಿ ಸರ್ವಾಧಿಕಾರಿ ಅಧ್ಯಕ್ಷರ ಆಡಳಿತ. ನಮ್ಮಲ್ಲಿ ಸಂಪೂರ್ಣ ಪ್ರಜಾಪ್ರಭುತ್ವ. ಇಲ್ಲಿ ಸ್ವಾತಂತ್ರ್ಯದ ತಂಗಾಳಿ ಹೆಚ್ಚು, ಅಲ್ಲಿನ ಪರಿಸ್ಥಿತಿ ಹಾಗಿಲ್ಲ. ಅಮೆರಿಕ ಮೂಲದ ಯುಟ್ಯೂಬ್, ಫೇಸ್‌ಬುಕ್, ಎಕ್ಸ್, ಇನ್ ಸ್ಟಾಗ್ರಾಮ್ ಯಾವುದಕ್ಕೂ ಚೀನಾದಲ್ಲಿ ಅವಕಾಶ ಇಲ್ಲ. ಈ ಭರ್ಜರಿ ನಿಷೇಧಕ್ಕೆ 'ಗ್ರೇಟ್ ಫೈರ್‌ವಾಲ್' ಎಂಬ ಹೆಸರಿದೆ. ಅಮೆರಿಕ ಮಾತ್ರವಲ್ಲ, ಯಾವುದೇ ವಿದೇಶದ ಜಾಲತಾಣಗಳಿಗೆ ಚೀನಾದಲ್ಲಿ ಬಾಗಿಲು ಮುಚ್ಚಲಾಗಿದೆ.

ಚೀನಾದ್ದೇ ಸೋಷಿಯಲ್ ಮೀಡಿಯಾಗಳು ಇವೆ. ಜತೆಗೆ ಅದರಲ್ಲಿಯೂ ಇದೀಗ ಹೊಸ ನಿಯಮಗಳು ಜಾರಿಯಾಗುತ್ತಿವೆ. ಸೂಕ್ಷ್ಮ ವಿಚಾರಗಳನ್ನು ಜಾಲತಾಣಗಳಲ್ಲಿ ಚರ್ಚಿಸುವವರು ಡಿಗ್ರಿಗಳನ್ನು ಹೊಂದಿರಲೇಬೇಕು. 2025ರ ಅಕ್ಟೋಬರ್ 25ರಿಂದ ಈ ಹೊಸ ಕಾನೂನು ಜಾರಿಯಾಗಿದೆ. ಚೀನಾದ ಡುಯಿನ್, ವೈಬು, ಬಿಲಿಬಿಲಿ ಜಾಲತಾಣಗಳಿಗೆ ಈ ಸಂಬಂಧವಾಗಿ ಸೂಚಿಸಲಾಗಿದೆ. ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಈ ಕಾನೂನು ತರಲಾಗಿದೆ ಎಂದು ಚೀನಾದ ಸೈಬರ್ ಸ್ಪೇಸ್ ಆಡಳಿತ ತಿಳಿಸಿದೆ.

ಇನ್‌ಫ್ಲುಯೆನ್ಸರ್‌ಗಳು ಇನ್ನು ಮುಂದೆ ಚೀನಾದಲ್ಲಿ ತಾವು ಮಂಡಿಸುವ ವಿಷಯಕ್ಕೆ ಸಂಬಂಧಿಸಿ, ತಮ್ಮ ಅನುಭವ, ಡಿಗ್ರಿ, ಸರ್ಟಿಫಿಕೇಶನ್, ಪ್ರೊಫೆಷನಲ್ ಲೈಸೆನ್ಸ್ ಬಗ್ಗೆ ದೃಢಪಡಿಸಬೇಕಾಗುತ್ತದೆ. ತಪ್ಪಿದರೆ 14,000 ಡಾಲರ್ ತನಕ ದಂಡ ಕಟ್ಟಬೇಕಾಗುತ್ತದೆ. ರುಪಾಯಿ ಲೆಕ್ಕದಲ್ಲಿ ಇದು ಸುಮಾರು 12.50 ಲಕ್ಷವಾಗುತ್ತದೆ. ಸೋಷಿಯಲ್ ಮೀಡಿಯಾದಲ್ಲಿ ನೀಡುವ ಜಾಹೀರಾತು ಮತ್ತು ಪ್ರಮೋಷನ್‌ಗಳಿಗೂ ಕಾನೂನಿನ ಅಂಕುಶ ಬಿದ್ದಿದೆ. ವೈದ್ಯಕೀಯ ಉತ್ಪನ್ನಗಳು, ಸಪ್ಲಿಮೆಂಟ್ಸ್ ಮತ್ತು ಹೆಲ್ತ್ ಫುಡ್‌ಗಳನ್ನು 'ಶೈಕ್ಷಣಿಕ ಉದ್ದೇಶ'ದ ಹೆಸರಿನಲ್ಲಿ ಪ್ರಚಾರ ಮಾಡುವಂತಿಲ್ಲ. ಇದು ದಿಕ್ಕುತಪ್ಪಿಸುವ ಜಾಹೀರಾತಾಗುತ್ತದೆ ಎಂದು ಚೀನಾ ಸರಕಾರ ತಿಳಿಸಿದೆ.

ಹೀಗಿದ್ದರೂ, ಚೀನಿ ಸರಕಾರದ ನೀತಿಯನ್ನು ವಿರೋಧಿಸುವವರೂ ಇದ್ದಾರೆ. ಇದರಿಂದ ಡಿಗ್ರಿ ಆದವರಿಗೆ ಮಾತ್ರ ಸೆನ್ಸಿಟಿವ್ ವಿಷಯಗಳ ಬಗ್ಗೆ ಜಾಲತಾಣಗಳಲ್ಲಿ ಚರ್ಚಿಸುವ ಹಕ್ಕು ಸಿಗುತ್ತದೆ. ಉಳಿದವರ ಮಾತಿಗೆ ಬೆಲೆ ಸಿಗದಂತಾಗುತ್ತದೆ. ಇದು ಸರಿಯಲ್ಲ ಎಂಬ ವಾದವಿದೆ. ಈ ಮಾತಿನಲ್ಲೂ

ಸತ್ಯಾಂಶ ಇದೆ. ಉದಾಹರಣೆಗೆ ಒಬ್ಬ ವ್ಯಕ್ತಿ ಡಿಗ್ರಿ ಪಡೆಯದಿದ್ದರೂ, ಅನುಭವದ ಆಧಾರದಲ್ಲಿ ಯಾವುದಾದರೂ ಕ್ಷೇತ್ರದಲ್ಲಿ ಮೇಲೆ ಬಂದಿರುತ್ತಾನೆ. ಆತನಿಗೆ ಡಿಗ್ರಿ ಸರ್ಟಿಫಿಕೇಟ್ ಇಲ್ಲ ಎಂಬ ಕಾರಣ ಕೊಟ್ಟು, ಅದರ ಬಗ್ಗೆ ಮಾತನಾಡುವಂತಿಲ್ಲ ಎಂಬ ಕಾನೂನು ಹೇರಿದರೆ ಒಪ್ಪಲಾದೀತೆ? ನಮ್ಮಲ್ಲಿ ಅನೇಕ ಮಂದಿಯ ಡಿಗ್ರಿಗೂ, ಅವರು ಮಾಡುವ ಕೆಲಸಕ್ಕೂ ಯಾವುದೇ ಸಂಬಂಧವೇ ಇರುವುದಿಲ್ಲ. ಉದಾಹರಣೆಗೆ ಎಂಜಿನಿಯರಿಂಗ್ ಓದಿದವರೂ ಪತ್ರಕರ್ತರಾಗುತ್ತಾರೆ. ಯಾವುದೋ ಕಂಪನಿಯಲ್ಲಿ ಟೆಕ್ನಿಶಿಯನ್ ಆಗಿರುತ್ತಾರೆ. ಇನ್ನು ಬಿಎ, ಕಾಮರ್ಸ್ ಕಲಿತವರೂ ಸಂಬಂಧವೇ ಇರದ ಯಾವುದೋ ಕೆಲಸಗಳನ್ನು ಮಾಡುತ್ತಿರುತ್ತಾರೆ. ಅವರಿಗೆಲ್ಲ 'ಇದು ನಿಮ್ಮ ಕೆಲಸವಲ್ಲ' ಎಂದು ನಿರಾಕರಿಸಲು ಸಾಧ್ಯವೇ?

ಇವತ್ತು ಯಾವುದೋ ಕೋರ್ಸ್ ಮಾಡಿದವರು ಯಾವುದೋ ಕೆಲಸದಲ್ಲಿ ಇದ್ದುಕೊಂಡು, ಮತ್ಯಾವುದೋ ಕಂಟೆಂಟ್‌ಗಳನ್ನು ಕ್ರಿಯೇಟ್ ಮಾಡುತ್ತಾರೆ. ಐಟಿ ಕೆಲಸದಲ್ಲಿದ್ದವರು ಇದ್ದಕ್ಕಿದ್ದಂತೆ, ಉದ್ಯೋಗಕ್ಕೆ ರಾಜೀನಾಮೆ ಕೊಟ್ಟು ಕಂಟೆಂಟ್ ಕ್ರಿಯೇಟರ್ ಆಗಿ ಯಶಸ್ಸು ಗಳಿಸುತ್ತಾರೆ. ಅವರಿಗೆ ನಿರ್ಬಂಧ ವಿಧಿಸುವುದು ಸರಿಯೇ? ಡಿಗ್ರಿ ಓದಿದವರೂ ಜನರನ್ನು ದಾರಿ ತಪ್ಪಿಸುವುದಿಲ್ಲವೇ? ವಂಚಿಸುವುದಿಲ್ಲವೇ? ಎಂಬ ಪ್ರಶ್ನೆಗಳು ಸ್ವಾಭಾವಿಕ.

ಹಾಗಂತ ಈ ಡಿಬೇಟ್ ಅಷ್ಟು ಸುಲಭವಾಗಿ ಮುಗಿಯುವಂಥದ್ದಲ್ಲ. ಏಕೆಂದರೆ ಇವತ್ತು ಇನ್‌ಫ್ಲುಯೆನ್ಸರ್‌ಗಳು ಒಂದಕ್ಕೆ ಎರಡು ವೈಭವೀಕರಿಸಿ ಹೇಳುತ್ತಾರೆ. ಲೈಕ್ಸ್, ಕಮೆಂಟ್, ಶೇರ್‌ಗಳ ಬೆನ್ನು ಬಿದ್ದು, ಸಾಂಪ್ರದಾಯಿಕ ವಿಷಯ ತಜ್ಞರೇ ಬೆಚ್ಚಿಬೀಳುವಂತೆ ಪರ್ಯಾಯ ತಜ್ಞರಾಗುತ್ತಿದ್ದಾರೆ. ಆದರೆ ಇಂಥ ಕಂಟೆಂಟ್ ಕ್ರಿಯೇಟರ್‌ಗಳು ಯಾವುದೇ ಔಪಚಾರಿಕ ಶೈಕ್ಷಣಿಕ ಅರ್ಹತೆ ಇಲ್ಲದೆಯೇ ಕೊಡುವ ಹಣಕಾಸು, ಆರೋಗ್ಯ, ಶಿಕ್ಷಣ, ಕಾನೂನು ವಿಚಾರಗಳ ವಿಶ್ವಾಸಾರ್ಹತೆ ಎಷ್ಟಿರುತ್ತದೆ? ಇದೆಷ್ಟು ಸರಿ ಎಂಬುದು ಚರ್ಚೆಯಾಗಬೇಕಾದ್ದೇ. ಸಂಕೀರ್ಣವಾದ ವಿಷಯಗಳನ್ನು ಅತಿಯಾಗಿ ಸರಳಗೊಳಿಸಿದಾಗ, ಅದು ಜನರ ದಿಕ್ಕು ತಪ್ಪಿಸುವಂತೆ ವೇಗವಾಗಿ ಹರಡುವ ಅಪಾಯ ಜಾಲತಾಣಗಳಲ್ಲಿ ಇದ್ದೇ ಇರುತ್ತದೆ.

ಇನ್‌ಫ್ಲುಯೆನ್ಸರ್‌ಗಳು ಮಾರುಕಟ್ಟೆಯ ಮೇಲೆ ಗಣನೀಯ ಪ್ರಭಾವ ಬೀರುತ್ತಾರೆ. ಈ ಕಾರಣಕ್ಕಾಗಿಯೇ ಕಾರ್ಪೊರೇಟ್ ವಲಯದ ಕಂಪನಿಗಳು ಜಾಲತಾಣಗಳಿಗೆ ಜಾಹೀರಾತು ನೀಡುತ್ತಿವೆ. ಗ್ರಾಹಕರ ವರ್ತನೆ, ಶಾಪಿಂಗ್ ನಿರ್ಧಾರಗಳ ಮೇಲೆ ಕಂಟೆಂಟ್ ಕ್ರಿಯೇಟರ್‌ಗಳು ಪ್ರಭಾವ ಬೀರುತ್ತಿರುವುದು ಸುಳ್ಳಲ್ಲ. ಆದ್ದರಿಂದ ಬ್ರ್ಯಾಂಡ್ ಸ್ಟ್ರಾಟಜಿಗಳು, ಸೋಷಿಯಲ್ ಟ್ರೆಂಡ್‌ಗಳನ್ನು ಸೃಷ್ಟಿಸುವಲ್ಲಿ ಇವರ ಪಾತ್ರ ಕಂಡುಬರುತ್ತಿದೆ. ಕಂಟೆಂಟ್ ಕ್ರಿಯೇಷನ್ ಇವತ್ತು ಅನೇಕ ಮಂದಿಗೆ ಪೂರ್ಣ ಪ್ರಮಾಣದ ಉದ್ಯೋಗವಾಗಿದೆ. ಹವ್ಯಾಸಿಗಳಿಗೆ ಆದಾಯದ ಮೂಲವಾಗಿದೆ. ಇನ್‌ಫ್ಲುಯೆನ್ಸರ್ ಮಾರ್ಕೆಟಿಂಗ್ ಟ್ರೆಂಡ್ ಕಾಣಿಸಿದೆ. ಅಂದರೆ ನಾನಾ ಬ್ರ್ಯಾಂಡ್‌ಗಳು ಭಾರಿ ಸಂಖ್ಯೆಯಲ್ಲಿ ಫಾಲೋವರ್‌ಗಳನ್ನು ಹೊಂದಿರುವ ಕಂಟೆಂಟ್ ಕ್ರಿಯೇಟರ್ಸ್ ಜತೆಗೆ ವೈಯಕ್ತಿಕವಾಗಿ ಒಪ್ಪಂದ ಮಾಡಿಕೊಂಡು ತಮ್ಮ ಉತ್ಪನ್ನಗಳ ಪ್ರಚಾರ ಮಾಡುತ್ತವೆ. ಈ ಇನ್‌ಫ್ಲುಯೆನ್ಸರ್‌ಗಳು ತಜ್ಞರಂತೆ ಉತ್ಪನ್ನಗಳ ಬಗ್ಗೆ ಮಾತನಾಡುತ್ತಾರೆ, ಖರೀದಿಸುವಂತೆ ಜನರನ್ನು ಉತ್ತೇಜಿಸುತ್ತಾರೆ. ಅವರ ಶಿಫಾರಸುಗಳು ಮಾರುಕಟ್ಟೆಯಲ್ಲಿ ಗ್ರಾಹಕರ ಮೇಲೆ ಪ್ರಭಾವ ಬೀರುತ್ತವೆ.

ಭಾರತದಲ್ಲಿಯೂ ಇನ್‌ಫ್ಲುಯೆನ್ಸರ್ ಮಾರ್ಕೆಟ್ ವೇಗವಾಗಿ ಬೆಳೆಯುತ್ತಿದೆ. ನಮ್ಮಲ್ಲಂತೂ ಚೀನಾ ಮಾದರಿಯಲ್ಲಿ ವಿದೇಶಿ ಜಾಲತಾಣಗಳಿಗೆ ಅಂಥ ಬ್ಯಾನ್ ಇಲ್ಲ. ಯುಟ್ಯೂಬ್, ಇನ್ಸ್ಟಾಗ್ರಾಮ್, ಲಿಂಕ್ಡ್ ಇನ್, ಎಕ್ಸ್ ಎಲ್ಲವೂ ಮುಕ್ತ ಮುಕ್ತ. ಇಲ್ಲಿ ದಂಡಿಯಾಗಿ ಫೈನಾನ್ಸ್, ಹೆಲ್ತ್ ಇನ್‌ಫ್ಲುಯೆನ್ಸರ್‌ಗಳು ಸಿಗುತ್ತಾರೆ. ಇವರು ಸಂಕೀರ್ಣ ವಿಷಯಗಳನ್ನು ಸರಳವಾಗಿ ಜನರಿಗೆ ತಿಳಿಸುವ ಶೈಕ್ಷಣಿಕ ಉದ್ದೇಶಕ್ಕಾಗಿ ಹಣಕಾಸು ಸಲಹೆಗಳನ್ನು ಕೊಡುತ್ತಾರೆ. ಇದರಿಂದ ರಿಟೇಲ್ ಹೂಡಿಕೆದಾರರಿಗೆ ಹೂಡಿಕೆಯ ತಿಳಿವಳಿಕೆ ಹೆಚ್ಚುತ್ತದೆ. ಶಾಲೆ-ಕಾಲೇಜುಗಳಲ್ಲಿ ಇಂಥ ಶಿಕ್ಷಣದ ಕೊರತೆ ಇರುವುದರಿಂದ ಯುಟ್ಯೂಬ್, ಫೇಸ್ ಬುಕ್, ವಾಟ್ಸ್ ಆ್ಯಪ್‌ಗಳೇ ಅಘೋಷಿತ ವಿಶ್ವ ವಿದ್ಯಾಲಯಗಳಾಗಿವೆ. ಇಲ್ಲಿ ಪಾಮರರೇ ಪಂಡಿತರ ಪೋಸು ಕೊಟ್ಟರೆ ಮಾತ್ರ ಕಷ್ಟ. ಅದಕ್ಕಾಗಿ 'ಸೆಬಿ'ಯ ಮಾರ್ಗದರ್ಶನ ಅಗತ್ಯವಾಗಿದೆ. ಕೆಲವು ಅಂದಾಜಿನ ಪ್ರಕಾರ ಇದು ವಾರ್ಷಿಕ 18 ಪರ್ಸೆಂಟ್ ಲೆಕ್ಕದಲ್ಲಿ ವೃದ್ಧಿಸುತ್ತಿದ್ದು, ಮಾರ್ಕೆಟ್ ಗಾತ್ರ 3,000 ಕೋಟಿ ರುಪಾಯಿಗಳಾಗಿದೆ. ಆಟೊಮೇಟಿವ್, ಕನ್ಸ್ಯೂಮರ್ ಗೂಡ್ಸ್ ಕೆಟಗರಿಯಲ್ಲಿರುವ ಕಂಪನಿಗಳು ಹೆಚ್ಚು ಫಾಲೋವರ್‌ಗಳನ್ನು ಹೊಂದಿರುವ ಮೈಕ್ರೊ ಮತ್ತು ನ್ಯಾನೊ-ಇನ್‌ಫ್ಲುಯೆನ್ಸರ್‌ಗಳ ಜತೆಗೆ ಒಪ್ಪಂದ ಮಾಡಿಕೊಳ್ಳುತ್ತಿವೆ.

ಹಾಗಾದರೆ ಭಾರತದಲ್ಲಿ ಹಣಕಾಸು ವಿಚಾರಗಳ ಬಗ್ಗೆ ಕಂಟೆಂಟ್ ಕ್ರಿಯೇಟರ್‌ಗಳು, ಇನ್‌ಫ್ಲುಯೆನ್ಸರ್‌ಗಳಿಗೆ ಏನಾದರೂ ನಿಯಮ ಇದೆಯೇ? ಖಂಡಿತಾ ಇದೆ. ಆದರೆ ಡಿಗ್ರಿ ಮಾಡಿರಲೇಬೇಕು ಎಂಬ ಚೀನಾ ಮಾದರಿಯ ನಿಯಮ ಇಲ್ಲ. ಹೀಗಿದ್ದರೂ ಷೇರು ಮಾರುಕಟ್ಟೆಯ ನಿಯಂತ್ರಕ 'ಸೆಬಿ' ಕೆಲವು ನಿಯಮಾವಳಿಗಳನ್ನು ಜಾರಿಗೊಳಿಸಿದೆ. ಅದರ ಪ್ರಕಾರ ಸೆಬಿಯ ನೋಂದಾಯಿತ ಸಂಸ್ಥೆಗಳು ಮತ್ತು ಸಲಹೆಗಾರರು ಮಾತ್ರ ಹೂಡಿಕೆಯ ಸಲಹೆಗಳನ್ನು ನೀಡಬಹುದು. ಉಳಿದವರು ಇಂಥ ಷೇರು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿರಿ ಎಂದು ಯಾರಿಗೂ ಸಲಹೆಯನ್ನು ನೀಡುವಂತಿಲ್ಲ. ಯುಟ್ಯೂಬ್, ಫೇಸ್‌ಬುಕ್, ಇನ್ಸ್ಟಾಗ್ರಾಮ್ ಮೊದಲಾದವುಗಳಲ್ಲಿ ಷೇರುಗಳ ಖರೀದಿಗೆ ರೆಕಮಂಡೇಶನ್ ಕೊಡುವಂತಿಲ್ಲ. ಮಾತ್ರವಲ್ಲದೆ ಎಜುಕೇಷನಲ್ ಕಂಟೆಂಟ್ ಮಲ್ಲಿ ಲೈವ್ ಮಾರ್ಕೆಟ್ ಡೇಟಾಗಳನ್ನು ನೀಡುವಂತಿಲ್ಲ. ಮೂರು ತಿಂಗಳು ಹಳೆಯ ಡೇಟಾಗಳನ್ನು ಮಾತ್ರ ಕೊಡಬಹುದು. ಇದು ಹೂಡಿಕೆದಾರರನ್ನು ದಿಕ್ಕು ತಪ್ಪಿಸಬಹುದು. ಒಂದು ವೇಳೆ ಈ ನಿಯಮವನ್ನು ತಪ್ಪಿದರೆ ಅಂಥ ಕಂಟೆಂಟ್‌ಗಳನ್ನು ನಿಷೇಧಿಸಬಹುದು. ದಂಡವನ್ನು ಕೂಡ 'ಸೆಬಿ'ಯು ವಿಧಿಸಬಹುದು. ಆಸ್ತಿಗಳನ್ನೂ ಮುಟ್ಟುಗೋಲು ಹಾಕಿಕೊಳ್ಳುವ ಸಾಧ್ಯತೆ ಇರುತ್ತದೆ. ಹೂಡಿಕೆದಾರರ ಹಿತಾಸಕ್ತಿಯನ್ನು ರಕ್ಷಿಸುವುದು ಇದರ ಉದ್ದೇಶವಾಗಿದೆ.

''ಭಾರತದಲ್ಲೂ ಹಣಕಾಸು ವಿಚಾರಗಳ ಇನ್‌ಫ್ಲುಯೆನ್ಸರ್‌ಗಳು ದೊಡ್ಡ ದನಿಯಾಗುತ್ತಿದ್ದಾರೆ. ಆದ್ದರಿಂದ ಸೆಬಿಯ ನಿರ್ದೇಶನದಿಂದ ಒಂದು ಕಡೆ ಹೂಡಿಕೆದಾರರ ಹಿತಾಸಕ್ತಿ ರಕ್ಷಣೆಯಾದರೆ, ಮತ್ತೊಂದು ಕಡೆ ಇನ್‌ಫ್ಲುಯೆನ್ಸರ್‌ಗಳ ವಿಶ್ವಾಸಾರ್ಹತೆ, ವೃತ್ತಿಪರತೆ ಹೆಚ್ಚಲೂ ಸಹಕಾರಿಯಾಗಲಿದೆ. ಒಂದು ಪಾರದರ್ಶಕ ಚೌಕಟ್ಟು, ಉತ್ತರದಾಯಿತ್ವ ಇರುವುದು ಉತ್ತಮ'' ಎನ್ನುತ್ತಾರೆ ಕಂಟೆಂಟ್ ಕ್ರಿಯೇಟರ್ ನೇಹಾ ನಗರ್.

ಸೆಬಿಯ 2025ರ ಇನ್ವೆಸ್ಟರ್ಸ್ ಸರ್ವೆ ಪ್ರಕಾರ 62 ಪರ್ಸೆಂಟ್ ರಿಟೇಲ್ ಹೂಡಿಕೆದಾರರು ಸೋಷಿಯಲ್ ಮೀಡಿಯಾದಲ್ಲಿ ಇನ್‌ಫ್ಲುಯೆನ್ಸರ್‌ಗಳ ರೆಕಮಂಡೇಷನ್‌ಗಳನ್ನು ಕೇಳಿಕೊಂಡು ಹೂಡಿಕೆ ಮಾಡಿದ್ದಾರೆ! ಸೆಬಿಯ ಪ್ರಕಾರ ಇನ್‌ಫ್ಲುಯೆನ್ಸರ್‌ಗಳು ತಾವು ಪ್ರಮೋಟ್ ಮಾಡುವ ಉತ್ಪನ್ನಗಳು ಮತ್ತು ಅವುಗಳ ಕಂಪನಿಗಳ ಜತೆಗೆ ವ್ಯಾವಹಾರಿಕ ಸಂಬಂಧ ಇದ್ದರೆ, ಅದನ್ನು ಬಹಿರಂಗಪಡಿಸಬೇಕು. ಅವುಗಳನ್ನು ಗೌಪ್ಯವಾಗಿಟ್ಟು ಹಣಕಾಸು ವಿಚಾರಗಳನ್ನು ಹೇಳುವಂತಿಲ್ಲ. ಉತ್ಪನ್ನಗಳ ಪ್ರಚಾರ ಮಾಡುವಂತಿಲ್ಲ. ಷೇರು ಹೂಡಿಕೆಯ ಶಿಫಾರಸು ದೂರದ ಮಾತು.

ಸೋಶಿಯಲ್ ಇನ್‌ಫ್ಲುಯೆನ್ಸರ್‌ಗಳಿಗೆ ಸ್ವಯಂ ನಿಯಂತ್ರಣವೂ ಅಗತ್ಯ. ಇದು ಹೆಚ್ಚು ಪರಿಣಾಮಕಾರಿ. ಭಾರತದಲ್ಲಿ ಸಾಂಪ್ರದಾಯಿಕ ಮಾಧ್ಯಮಗಳು ಈ ಹಿಂದಿನಿಂದಲೂ ಇದನ್ನು ಪಾಲಿಸುತ್ತಾ ಬಂದಿವೆ. ಆದರೆ ಜಾಲತಾಣಗಳಲ್ಲಿ ಕಂಟೆಂಟ್ ಕ್ರಿಯೇಟರ್‌ಗಳೂ ಇದೇ ಹಾದಿಯಲ್ಲಿದ್ದರೆ, ಅವರ ವಿಶ್ವಾಸಾರ್ಹತೆಯೂ ವೃದ್ಧಿಸುತ್ತದೆ. ಇಲ್ಲದಿದ್ದರೆ ಕಠಿಣ ಕಾಯಿದೆಗಳು ಭವಿಷ್ಯದ ದಿನಗಳಲ್ಲಿ ಅನಿವಾರ್ಯವಾಗಬಹುದು.

ಭಟ್ಟರ್ ಸ್ಕಾಚ್

- ರುಕ್ಮಿಣಿ, ಚಾಮರಾಜಪೇಟೆ
ಭಟ್ರೇ, ಪ್ರಿಯಾಂಕ್ ಖರ್ಗೆ ಅವರನ್ನು ಕೆರಳಿಸಲು ಯಾವ ಸ್ಲೋಗನ್ ಕೂಗಬೇಕು?
- 'ಸಂಘಂ' ಶರಣಂ ಗಚ್ಛಾಮಿ!

- ಪ್ರತಿಭಾ, ಡಾಲರ್ಸ್ ಕಾಲೋನಿ
ಭಟ್ರೇ, ಕಬ್ಬನ್ ಪಾರ್ಕಿನಲ್ಲಿ ಪ್ರತಿಭಟನೆ ಹುಡುಗನ ಕಾಟ ತಾಳಲಾರದೆ ಕ್ಷಣಕಾಲ ಮರೆಯಾದರೆ ಅವನೇನು ಮಾಡಬಹುದು?
- 'ಪ್ರತಿಭಾ'ನ್ವೇಷಣೆ!

- ಶಂಕರ ರಾಮಾಚಾರ್ಯ, ಮೈಸೂರು
ಭಟ್ರೇ, ಈ ಶತಮಾನದ ಸಾಹಸಿ ಹೆಣ್ಣು ಯಾರು?
- ಇರುಮುಡಿ ಸೀರೆಯಿಂದ ರಫೇಲ್ ಜೆಟ್‌ನ ಬದಲಾಗಿ ಸಾವಿರಾರು ಅಡಿ ಎತ್ತರದಲ್ಲಿ ಹಾರಿದ ದ್ರೌಪದಿ ಮುರ್ಮು!

- ರಾಘಣ್ಣ, ಮೈಸೂರು
ಭಟ್ರೇ, ಗೀತಾ ಜಯಂತಿಯಂದು ಪ್ರಧಾನಿ ಮೋದಿ ಉಡುಪಿಗೆ ಬರಲು ಪ್ರೇರಣೆ ಕೊಟ್ಟವರಾರು?
- ಕೃಷ್ಣನ ಕೊಳಲಿನ ಕರೆ!

- ಪೂಣಯ್ಯ, ಮೈಸೂರು
ಭಟ್ರೇ, ಇಸ್ರೇಲ್ ಹಮಾಸ್ ಮೇಲೆ ಆಗಾಗ ಮುಗಿಬೀಳುತ್ತೆ. ಸಂಸಾರ ಯುದ್ಧದಲ್ಲಿ ಹೆಂಡತಿ ಗಂಡನಮೇಲೆ?
- ಹಮೇಶಾ ಮುಗಿಬೀಳುತ್ತಾಳೆ!

- ಕಲ್ಪನಾ, (ಇಮೇಲ್ ಮೂಲಕ)
ಭಟ್ರೇ, ಮುಂದೊಂದು ದಿನ ನಾನು ನೆಗೆದುಬಿದ್ದಾಗ ಸುತ್ತಮುತ್ತಲಿನ ಜನ ಏನೆಂದು ಸಮಾಧಾನ ಮಾಡಿಕೊಳ್ಳುತ್ತಾರೆ?
- ಕಲ್ಪನಾ ಲೋಕಕ್ಕೆ ಹೋಗಿದ್ದಾಳೆ ಅಷ್ಟೇ!

- ಶ್ಯಾಮ ಭಟ್, ಸಕ್ಲೆರ ಬೈಲು
ಭಟ್ಟರ ವಿದೇಶದಿಂದ ಡ್ರೈವರ್ ಲೆಸ್ ಕಾರು ತಂದ ದಿನವೇ ಸಂಜೆ ಎಲ್ಲಿ ವಿಹರಿಸುತ್ತಾರೆ?
- ಅವೆನ್ಯೂ ರೋಡ್!

- ಸಂಗೀತಾ ವಿ., ಶಿರಸಿ
ಭಟ್ರೇ, ಈ ಸಲದ ರಾಜ್ಯೋತ್ಸವ ಪ್ರಶಸ್ತಿ ಪಟ್ಟಿಯಲ್ಲಿ ಸಾಹಿತ್ಯ ಕ್ಷೇತ್ರದ ಪ್ರಶಸ್ತಿ ಪಡೆದವರ ಬಗ್ಗೆ ನಿಮ್ಮ ಅಭಿಪ್ರಾಯ?
- ಅರ್ಹರಿಗೆ ಮುಂದಿನ ಸಲ ಪ್ರಶಸ್ತಿ ನೀಡಲು ಸರಕಾರ ನಿರ್ಧರಿಸಿದೆಯಂತೆ!

- ರಾಮಕೃಷ್ಣ ಹೆಗಡೆ, ಸಿದ್ದಾಪುರ
ಭಟ್ರೇ, ರಾಜ್ಯೋತ್ಸವ ಪ್ರಶಸ್ತಿ ಪಡೆಯಲು ಅರ್ಹತೆಯೊಂದೇ ಮಾನದಂಡವಾ?
- ಅರ್ಹತೆ ಜತೆ ಅದೃಷ್ಟವೂ ಬೇಕು!

- ಕೆ.ಸಿ.ಗೋಪಿ, ಕುಣಿಗಲ್
ಭಟ್ರೇ, ರಾಜ್ಯೋತ್ಸವ ಪ್ರಶಸ್ತಿ ಸಿಗದವರು ಏನು ಯೋಚಿಸುತ್ತಿರಬಹುದು?
- ಮುಂದಿನ ಸಲದ ಪ್ರಶಸ್ತಿಗೆ ಲಾಬಿ ಮಾಡಲು ಒಂದು ವರ್ಷ ಸಿಕ್ಕಿತಲ್ಲ ಎಂದು ಅಂದುಕೊಳ್ಳಬಹುದು!

ಕಾಳಿಂಗ ಮತ್ತು ನಾಗರ ಎರಡನ್ನೂ ಪೂಜಿಸುವ ನಾಡಿದು!

ನಮ್ಮ ಹಳ್ಳಿಯಲ್ಲಿ ಕಾಳಿಂಗ ಸರ್ಪವನ್ನು ನಾನು ಕಂಡದ್ದೇ ಇಲ್ಲ; ನಮ್ಮ ಹಳ್ಳಿಯವರೂ ಕಂಡಿರಲಿಲ್ಲ. ಆದರೆ ಈಚಿನ ದಶಕದಲ್ಲಿ ಅಲ್ಲಲ್ಲಿ ಅಪರೂಪಕ್ಕೆ ಕಾಣಿಸುತ್ತಿದೆ ಎಂದು ವರದಿಯಾಗಿದೆ. ಇದಕ್ಕೆ ಸಂವಾದಿಯಾಗಿ, ನಾಗರಹಾವು ನಮ್ಮ ಹಳ್ಳಿಗಳಲ್ಲಿ ಹೇರಳ! ಮತ್ತು ಸಾಕಷ್ಟು ಕಡೆ ಕಾಣಿಸುತ್ತವೆ.

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಮಲೆನಾಡಿನಲ್ಲಿ, ಅದರಲ್ಲೂ ಮುಖ್ಯವಾಗಿ ಆಗುಂಬೆಯ ಸರಹದ್ದಿನಲ್ಲಿ, ಈಗ ಕೆಲವು ವಾರಗಳಿಂದ ಕಾಳಿಂಗ ಸರ್ಪದ ಸುದ್ದಿ ಹರಿದಾಡುತ್ತಿದೆ. ಕಾಳಿಂಗ ಸರ್ಪವು ಅತ್ಯಪರೂಪದ ಉರಗಪ್ರಭೇದವಾಗಿದ್ದು, ಅದನ್ನು ರಕ್ಷಿಸಲು, ಪ್ರಯೋಗಕ್ಕೆ ಒಳಪಡಿಸಲು ಸರಕಾರದ ಅನುಮತಿ ಬೇಕು; ಆದರೆ, ಅಂಥ ಸರ್ಕಾರದ ಅನುಮತಿ ಇಲ್ಲದೇ ಕೆಲವರು ಇದನ್ನು ಫೋಟೋ ಶೂಟ್‌ನಂಥ ಚಟುವಟಿಕೆಗಳಿಗೆ ಬಳಸುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಅದರಲ್ಲೂ ಮುಖ್ಯವಾಗಿ, ಅಧ್ಯಯನ ಮತ್ತು ಚಾರಣದ ಸೋಗಿನಲ್ಲಿ, ರಕ್ಷಿತ ಜೀವಿ ಎಂದೇ ಗುರುತಿಸಲ್ಪಟ್ಟಿರುವ ಕಾಳಿಂಗ ಸರ್ಪದ ಫೋಟೋ ತೆಗೆಯುವ ಚಟುವಟಿಕೆಗೆ ಪ್ರಚಾರ ನೀಡಿ, ಫೋಟೋ ತೆಗೆದು, ಅವುಗಳಿಗೆ ತೊಂದರೆ ನೀಡಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದ್ದು, ಇದು ನಿಜವಾದರೆ ಖಂಡನಾರ್ಹ.

ಕಾಳಿಂಗ ಸರ್ಪವು ಅತಿ ಅಪರೂಪದ ಒಂದು ಉರಗ. ಕರ್ನಾಟಕದ ಕೆಲವೇ ಪ್ರದೇಶಗಳಲ್ಲಿ ಕಂಡು ಬರುವ ಇವುಗಳನ್ನು, ಅವುಗಳ ಸಹಜ ವಾಸಸ್ಥಳದಲ್ಲಿ ನೋಡುವುದೇ ಕಷ್ಟ! ನಮ್ಮ ಹಳ್ಳಿಯಲ್ಲಿ, ಅಂದರೆ ಉಡುಪಿ ಜಿಲ್ಲೆಯ ಆ ಮಲೆನಾಡು ಮತ್ತು ಮಲೆನಾಡು ಪ್ರದೇಶದಲ್ಲಿ ನಾಗರಹಾವನ್ನು ಸಾಕಷ್ಟು ಸಂಖ್ಯೆಯಲ್ಲಿ ಕಾಣಬಹುದು; ಆದರೆ, ಕಾಳಿಂಗ ಸರ್ಪ ಅಪರೂಪ. ನಮ್ಮ ಹಳ್ಳಿಯ ಸರಹದ್ದಿನಲ್ಲಿ ಅವು ಇವೆ ಎಂಬುದು ನಿಜ; ಅಥವಾ ಹಿಂದಿನ ದಿನಗಳಲ್ಲಿ ಅಲ್ಲಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವಾಸಿಸಿರಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಬಹು ಅಪರೂಪ. ಆಗುಂಬೆ, ಹೆಬ್ರಿ, ಸಸಿದ ಕಬ್ಬಿನಾಲೆ, ಸೋಮೇಶ್ವರ ಮೊದಲಾದ ಕಾಡು ಪ್ರದೇಶಗಳಲ್ಲಿ ಅವುಗಳಿಗಾಗಿಯೇ ಅವು ವಾಸಿಸುತ್ತಿವೆ ಎಂಬುದು ಜನರ ಕಣ್ಣಿಗೆ ಬೀಳುವುದು ಕಡಿಮೆ.

ಆದರೆ, ಹಿಂದೆ ಅವು ಸಾಕಷ್ಟು ಸಂಖ್ಯೆಯಲ್ಲಿ ಇದ್ದಿರಬೇಕೇನೋ. ಅದಕ್ಕೆ ಪುರಾವೆಯೋ, ಉಡುಪಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ 'ಕಾಡ್ಯ' ಅಥವಾ 'ಕಾಡ್ಯ' ಎಂದು ಅವುಗಳನ್ನು ಗುರುತಿಸಿ, ಗೌರವಿಸಿ, ಪೂಜಿಸುವ ಪದ್ಧತಿ ಇಂದಿಗೂ ಇದೆ. ಇವನ್ನು ಪೂಜಿಸುವ ಪರಂಪರೆಯ ಭಾಗವಾಗಿ, 'ಕಾಡ್ಯನಾಟ' ಎಂಬ ನೃತ್ಯಸಹಿತ ಪೂಜಾ ಪದ್ಧತಿಯೂ ಚಾಲ್ತಿಯಲ್ಲಿದ್ದು, ಇದರ ಕುರಿತು ಪ್ರೊ. ಎ.ವಿ.ನಾವಡ ಅವರು ಮೊದಲಿಗೆ ವ್ಯಾಪಕವಾಗಿ ಸಂಶೋಧನೆ ಮಾಡಿ, ಗ್ರಂಥವನ್ನೂ (1980 ದಶಕದಲ್ಲಿ) ಹೊರತಂದಿದ್ದಾರೆ. ನಾಗಮಂಡಲ ಎಂಬ ಪ್ರಸಿದ್ಧ ಪೂಜಾಪದ್ಧತಿಯಲ್ಲಿ ನಾಗರಹಾವನ್ನು ಆರಾಧಿಸಿದರೆ, ಕಾಡ್ಯನಾಟ ಪದ್ಧತಿಯಲ್ಲಿ ಕಾಳಿಂಗ ಸರ್ಪವನ್ನು ಆರಾಧಿಸುವ ಕ್ರಮವಿದೆ. ಈಗಲೂ ಕಾಡ್ಯನಾಟ ಅಲ್ಲಲ್ಲಿ ನಡೆಯುತ್ತಿದ್ದರೂ, ನಾಗಮಂಡಲಕ್ಕೆ ಹೋಲಿಸಿದರೆ ಪ್ರಚಾರ ತುಸು ಕಡಿಮೆ. ಕುಂದಾಪುರ ತಾಲೂಕಿನ ಕಾಳಾವರ ಎಂಬಲ್ಲಿನ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಕಾಳಿಂಗ ಸರ್ಪದ ಆರಾಧನೆಯ ಪದ್ಧತಿ ಇದೆ ಎಂದು ಗುರುತಿಸಲಾಗಿದೆ. ಅಂದರೆ, ಕರ್ನಾಟಕದ ಕರಾವಳಿ ಮತ್ತು ಮಲೆನಾಡಿನಲ್ಲಿ, ನಾಗರಹಾವಿನ ಜತೆಯಲ್ಲೇ, ಕಾಳಿಂಗ ಸರ್ಪವನ್ನೂ ಪೂಜಿಸುವ ಪದ್ಧತಿ ಇದೆ ಎಂಬುದು ಸ್ಪಷ್ಟ.

ನಮ್ಮ ಹಳ್ಳಿಯಲ್ಲಿ ಕಾಳಿಂಗ ಸರ್ಪವನ್ನು ನಾನು ಕಂಡದ್ದೇ ಇಲ್ಲ; ನಮ್ಮ ಹಳ್ಳಿಯವರೂ ಕಂಡಿರಲಿಲ್ಲ. ಆದರೆ ಈಚಿನ ದಶಕದಲ್ಲಿ ಅಲ್ಲಲ್ಲಿ ಅಪರೂಪಕ್ಕೆ ಕಾಣಿಸುತ್ತಿದೆ ಎಂದು ವರದಿಯಾಗಿದೆ. ಇದಕ್ಕೆ ಸಂವಾದಿಯಾಗಿ, ನಾಗರಹಾವು ನಮ್ಮ ಹಳ್ಳಿಗಳಲ್ಲಿ ಹೇರಳ! ಮತ್ತು ಸಾಕಷ್ಟು ಕಡೆ ಕಾಣಿಸುತ್ತವೆ. ಕಾಳಿಂಗ ಸರ್ಪ ಮತ್ತು ನಾಗರಹಾವುಗಳೆರಡನ್ನೂ ಕರಾವಳಿ ಮತ್ತು ಮಲೆನಾಡಿನ ಜನರು ಆರಾಧಿಸುತ್ತಾರೆ; ಎಷ್ಟರ ಮಟ್ಟಿಗೆ ಎಂದರೆ, ಇವುಗಳನ್ನು ಸಾಮಾನ್ಯವಾಗಿ ಸಾಯಿಸುವುದಿಲ್ಲ, ಅಸಲು ಅವುಗಳಿಗೆ ಗಾಯವನ್ನೂ ಮಾಡುವುದಿಲ್ಲ! ಬಯಲು ಸೀಮೆಯಲ್ಲಿ ಅಲ್ಲಲ್ಲಿ ಹಾವು ಎಂದಾಕ್ಷಣ, ಅದು ನಾಗರಹಾವೇ ಆಗಿರಲಿ, ಬಡಿದು ಸಾಯಿಸುವುದುಂಟು. ಆದರೆ, ಕರಾವಳಿಯಲ್ಲಿ ನಾಗರಹಾವನ್ನು ಕೊಲ್ಲುವ ಕ್ರಮವೇ ಇಲ್ಲ, ಅದೆಷ್ಟೋ ತೊಂದರೆ ಕೊಟ್ಟಿದ್ದರೂ! ಅದು ದೇವರ ಹಾವು ಅಂದರೆ ದೇವರ ಸ್ವರೂಪ ಎಂದು ಆರಾಧಿಸುವ ಪದ್ಧತಿ ಅಲ್ಲುಂಟು, ಕಾಳಿಂಗ ಸರ್ಪಕ್ಕೂ ಸಹ.

ಬಾಲ್ಯದಲ್ಲಿ ನಮ್ಮ ಹಳ್ಳಿಯಲ್ಲಿ ಜನರೊಡನೆ ನಾಗರಹಾವಿನ ಮುಖಾಮುಖಿಯಾಗಿದ್ದನ್ನು ಹಲವು ಬಾರಿ ನಾನು ಕಂಡಿದ್ದೆ. ಬೇಸಗೆಯ ಬಿಸಿಲು ಕಾಡತೊಡಗಿತು ಎಂದರೆ, ಎಲ್ಲೆಡೆ ಸೆಕೆ, ತಾಪ. ಅತ್ತ ಭೂಮಿಯೂ ಬಿಸಿಯಾಗುತ್ತದೆ, ಭೂಮಿಯ ಒಳಗೂ ತಾಪಮಾನ ಏರುತ್ತದೆ. ನಮ್ಮ ಹಳ್ಳಿಯಲ್ಲಿ ಇಂಥ ದಿನಗಳಲ್ಲಿ ತಲೆದೋರುವ ಸಮಸ್ಯೆ ಎಂದರೆ,

ನೆಲದಿಂದ ಹೊರಬರುವ ಉರಗಗಳು! ಬಿಸಿಲಿನಿಂದ ನೆಲ ಕಾದಂತೆಲ್ಲಾ, ನೆಲದೊಳಗೆ ಶಿಶಿರ ನಿದ್ರೆ ಮಾಡುತ್ತಿರುವ ಅಥವಾ ತಮ್ಮ ತಾಣದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವ ಹಾವುಗಳು, ಚೇಳುಗಳು ಮೇಲಕ್ಕೆ ಬರುವುದುಂಟು. ಹೀಗೆ ಬೇಸಗೆಯಲ್ಲಿ ಹೊರಬರುವ ಹಾವುಗಳಿಂದಾಗಿ, ಸಾಕಷ್ಟು ಅಪಾಯಕಾರಿ ಸನ್ನಿವೇಶಗಳೂ ಎದುರಾಗುತ್ತಿದ್ದುದುಂಟು. ಪಾಪ, ಆ ಹಾವುಗಳಿಗೆ ತಾವು ಸಂಚರಿಸುವ ದಾರಿಯು ಮನುಷ್ಯನ ದಾರಿ ಎಂದು ಹೇಗಾದರೂ ಗೊತ್ತಾಗಬೇಕು? ತಮ್ಮ ಪಾಡಿಗೆ ತೆವಳಿಕೊಂಡು ಹೋಗುತ್ತಿರುವಾಗ, ಅವನ್ನು ನೋಡದ ಮನುಷ್ಯನು ಅವುಗಳ ಮೇಲೆ ಕಾಲಿಟ್ಟರೆ, ಅವು ಕಚ್ಚುತ್ತಿದ್ದುದುಂಟು.

ಆ ದಾರಿಯಲ್ಲಿ ನಡೆಯುತ್ತಿದ್ದವನ ಗ್ರಹಚಾರ ನೆಟ್ಟಗಿದ್ದರೆ, ಆ ಹಾವು ವಿಷರಹಿತ ಹಾವು ಆಗಿರಬಹುದು; ಆದರೆ, ವಿಷಕಾರಿ ಹಾವು ಕಚ್ಚಿದರೆ, ಪ್ರಾಣಾಪಾಯದ ಸಂದರ್ಭ ಇದ್ದದ್ದೇ. ಇಂಥದೊಂದು ದುರಂತಕ್ಕೆ ಒಮ್ಮೆ ಸಾಕ್ಷಿಯಾಗಿದ್ದೆ. ನಾವು ಆರೆಂಟು ಮಕ್ಕಳು, ಶಾಲೆ ಮುಗಿಸಿಕೊಂಡು ಬಂದು, ಸಂಜೆಯ ಹೊತ್ತಿನಲ್ಲಿ ಮನೆಯ ಮುಂದಿನ ಅಗೇಡಿಯಲ್ಲಿ ಚಿನ್ನಿದಾಂಡು ಆಡುತ್ತಿದ್ದೆವು. ಇನ್ನೇನು ಕತ್ತಲಾಗುವ ಸಮಯ; ಯಾರೋ ಹೊಡೆದ ಚಿನ್ನಿಯು, ಅಗೇಡಿಯ ಅಂಚಿನ ಸಣ್ಣ ತೋಡಿನತ್ತ ಹೋಗಿ ಬಿತ್ತು. ಅದು ಬೇಸಗೆಯ ಸಮಯ; ಅಗೇಡಿಯಲ್ಲಾಗಲೀ, ತೋಡಿನಲ್ಲಾಗಲೀ ನೀರಿರಲಿಲ್ಲ. ತೋಡಿನ ಉದ್ದಕ್ಕೂ ಹಳು, ಮುಂಡುಕನ ಗಿಡ, ಕುಸುಬನ ಗಿಡ ಎಲ್ಲವೂ ಬೆಳೆದಿದ್ದವು. ನಮ್ಮ ಜತೆಯಲ್ಲಿ ಆಡುತ್ತಿದ್ದ, ಪಕ್ಕದ ಮನೆಯ ಸುಬ್ಬಣ್ಣ ಆ ಚಿನ್ನಿಯನ್ನು ಹುಡುಕುತ್ತಾ ಆ ತೋಡಿನಂಚಿಗೆ ಹೋದ. 'ಹಾವು ಕಚ್ಚಿತೋ' ಎಂದು ಕೂಗುತ್ತಾ ಅವನು ವಾಪಸು ಬಂದಿದ್ದಷ್ಟೇ ಗೊತ್ತು; ನಾವೆಲ್ಲರೂ ಮನೆಗೆ ಓಡಿದೆವು. ಪಂಡಿತರನ್ನು ಕರೆಸಿದರು. ಸುಬ್ಬಣ್ಣನನ್ನು ಕಾಲಿನ ಮೇಲೆ ಮಲಗಿಸಿಕೊಂಡು, ನಾರು-ಬೇರಿನ ರಸವನ್ನು ಅವರು ಕುಡಿಸುತ್ತಿದ್ದ ದೃಶ್ಯ ನೆನಪಿದೆ; ಚಿಮಿಣಿ ಬೆಳಕಿನಲ್ಲೇ ಸುಬ್ಬಣ್ಣ ಮಲಗಿದ್ದು, ಆ ನಂತರ ಆತ ನಮ್ಮನ್ನು ಅಗಲಿದ್ದು ಎಲ್ಲವೂ ಮಸುಕಾಗಿ ನೆನಪಿದೆ. ಹಳ್ಳಿಯ ಜೀವನವು ಸುಂದರ ಎಂಬುದರಲ್ಲಿ ಅನುಮಾನವಿಲ್ಲವಾದರೂ, ದೂರದ ಗ್ರಾಮೀಣ ಪ್ರದೇಶದ ಜನರು ಇಂಥ ರಿಸ್ಕ್‌ಗಳನ್ನು ಎದುರಿಸುತ್ತಲೇ ಜೀವನ ಸಾಗಿಸಬೇಕಾದ ಅನಿವಾರ್ಯತೆ ಇತ್ತು; ಈಚಿನ ದಶಕಗಳಲ್ಲಿ ನಮ್ಮೂರಿನಲ್ಲಿ ಆಸ್ಪತ್ರೆಯಾಗಿರುವುದರಿಂದ, ಅಷ್ಟರ ಮಟ್ಟಿಗೆ ಪರವಾಗಿಲ್ಲ. ಬೇಸಗೆಯ ಸಮಯದಲ್ಲಿ, ನೆಲದ ತಾಪಮಾನ ಏರುವುದರಿಂದಾಗಿ, ಹಾವು ಮೊದಲಾದವುಗಳು ನೆಲದ ಮೇಲೆ ಓಡಾಡುವಾಗ, ಇಂಥದೊಂದು ರಿಸ್ಕ್ ಈಗಲೂ ಇದೆ.

ಒಂದು ರೀತಿಯಲ್ಲಿ ನೋಡಿದರೆ, ನಮ್ಮ ಮನೆ ಅಂಗಳವು ಹಾವು ಮತ್ತು ಕಪ್ಪೆಗಳ ಪ್ಲೇಗ್ರೌಂಡ್ ಎನ್ನಬಹುದು! ಇಲ್ಲಿ 'ಪ್ಲೇ' ಎಂದರೆ, ಕಪ್ಪೆಯು ಹಾವಿನೊಂದಿಗೆ ಆಡಲೇಬೇಕಾದ ಜೀವನ್ಮರಣದ ಆಟ. ಅಂಗಳದ ಒಂದು ತುದಿಯಲ್ಲಿ ಬಗ್ಗುಬಾವಿ; ಒರಟು ಕಲ್ಲುಗಳನ್ನೇ ಜೋಡಿಸಿ ಅದಕ್ಕೆ ಕಟ್ಟಣೆ ಮಾಡಲಾಗಿದ್ದರಿಂದ, ಆ ಕಲ್ಲುಗಳ ಸಂದಿಯಲ್ಲಿ ಹತ್ತಿಪ್ಪತ್ತು ಒಳ್ಳೆ ಹಾವುಗಳು (ವಿಷರಹಿತ) ವಾಸಿಸುತ್ತಿದ್ದವು! ಬಡಪಾಯಿ ಕಪ್ಪೆಗಳು ಅಲ್ಲೆಲ್ಲಾದರೂ ಸುಳಿದರೆ, ಅವುಗಳನ್ನು ಹಿಡಿದು ತಿನ್ನಲು ಕಾಯುತ್ತಿದ್ದವು. ಅಂಗಳದ ಒಂದು ತುದಿಯಿಂದ ಕುಪ್ಪಳಿಸುತ್ತಾ ಬರುವ ಕಪ್ಪೆಯು, ಇನ್ನೊಂದು ತುದಿಗೆ, ಅಂದರೆ ನಮ್ಮ ಮನೆಯತ್ತ ಬರುವುದು ರೂಢಿ; ಅದನ್ನು ಅಟ್ಟಿಸಿಕೊಂಡು ಬರುವ ಹಾವು, ಕಪ್ಪೆಯನ್ನು ಗಬಕ್ಕನೆ ಕಚ್ಚಿಕೊಂಡು, ವಾಪಸು ತನ್ನ ತಾವಾದ ಬಗ್ಗು ಬಾವಿಯ ಕಲ್ಲುಗಳ ಸಂದಿಗೆ ಓಡುವುದುಂಟು. ಆಗ, ಅದರ ಬಾಯಲ್ಲಿ ಸಿಕ್ಕಿಕೊಂಡ ಕಪ್ಪೆಯ 'ಓಂಕ್ ವಾಂಕ್' ಎಂದು ಆರ್ತನಾದ ಮಾಡುವಾಗ ಅದನ್ನು ನೋಡಿದ ನಮ್ಮಂಥ ಮಕ್ಕಳಿಗೆ ಕನಿಕರ ಮೂಡುತ್ತಿತ್ತು. ಹಾವು ಅಟ್ಟಿಸಿಕೊಂಡು ಬಂದಾಗ, ಕಪ್ಪೆಯು ನಮ್ಮ ಅಡುಗೆ ಮನೆಯತ್ತ ಧಾವಿಸಿ ಬರುತ್ತಿದ್ದವು ಎಂದೆನಲ್ಲ, ಅದು ಇಂದಿಗೂ ನನಗೆ ಒಂದು ಪುಟ್ಟ ವಿಸ್ಮಯವಾಗಿಯೇ ಕಾಣಿಸುತ್ತದೆ.

ಬೇಸಗೆಯಲ್ಲಿ ನಾಗರಹಾವುಗಳು ಸಹ ನಮ್ಮ ಮನೆಯೊಳಗೆ ಬರುತ್ತಿದ್ದುದು ಮಾಮೂಲು. ಪರೀಕ್ಷೆಗೆಂದು ಓದಲು ನಮಗೆ ಒಂದು ತಿಂಗಳು ರಜೆ ಕೊಡುತ್ತಿದ್ದರಲ್ಲ, ಆಗ ಉಪ್ಪರಿಗೆಯಲ್ಲಿ ಕುರ್ಚಿ ಹಾಕಿಕೊಂಡು ಓದುತ್ತಾ ಕೂರುವುದು ನನ್ನ ಅಭ್ಯಾಸ. ಆ ಜಾಗದ ಪಕ್ಕದಲ್ಲಿ ಒಂದು ಪುಟ್ಟ ಕಿಟಕಿ. ಅಲ್ಲೇನೋ ಸರಿದಂತಾಯಿತು. ಏನೆಂದು ಅತ್ತ ನೋಡಿದರೆ, ನಾಗರಹಾವು! 'ಅಯ್ಯೋ ಇಲ್ಲಿಗೆ ಹಾವು ಬಂದಿದೆ' ಎಂದು ಕೂಗಿದರೆ, 'ಅದು ನಿನಗೇನೂ ಮಾಡೊಲ್ಲ, ನಿನ್ನ ಪಾಡಿಗೆ ನೀನು ಓದಿಕೊ' ಎನ್ನುತ್ತಿದ್ದರು ನಮ್ಮ ಅಮ್ಮಮ್ಮ. ನಮ್ಮ ಉಪ್ಪರಿಗೆ ಮಾಡಿನ ಜಂತಿಯ ಸಂದಿಯಲ್ಲಿ ಮನೆ ಮಾಡಿಕೊಂಡಿದ್ದ ಇಲಿಗಳನ್ನು ಹಿಡಿದು ತಿನ್ನಲು ಆ ನಾಗರಹಾವು ಬಂದಿತ್ತು; ಈ ರೀತಿ ಅವು ಓಡಾಡುವುದು ಮಾಮೂಲು ಎಂಬುದೇ ನಮ್ಮ ಹಿರಿಯರ ಅಭಿಪ್ರಾಯ. ಹೀಗೆ ಹಲವು ಸಂದರ್ಭಗಳಲ್ಲಿ ಮನೆಯೊಳಗೆ, ಮನೆಯ ಸರಹದ್ದಿನಲ್ಲಿ ನಾಗರಹಾವುಗಳು ಓಡಾಡುವುದು ನಮ್ಮ ಬಾಲ್ಯದ ದಿನಚರಿಯ ಭಾಗವೇ ಆಗಿತ್ತು.

ಒಂದು ಬಾರಿ, ಚಾವಣಿಯ ಮೇಲೆ ಬಂದಿದ್ದ ನಾಗರಹಾವು ನಿಧಾನವಾಗಿ ಅತ್ತಿತ್ತ ಸರಿದು, ಅಲ್ಲೇ ಒಂದು ವಯರಿನ ಮೇಲೆ ಇದ್ದ ಸೂರಕ್ಕಿಯ ಗೂಡಿನತ್ತ ಧಾವಿಸಿತು! ಪಾಪ, ಮೊಟ್ಟೆ ಇಟ್ಟಿದ್ದವೋ ಏನೋ, ಎರಡು ಸೂರಕ್ಕಿಗಳು ಆ ಹಾವನ್ನು ನೋಡುತ್ತಾ, ಗೂಡಿನ ಬಳಿ ಆರ್ತನಾದ ಮಾಡುವಂತೆ ಕೂಗುತ್ತಿದ್ದವು. ಸೂರಕ್ಕಿ ಗೂಡಿನ ಬಳಿ ಬಂದ ಆ ಹಾವಿನ ವರ್ತನೆ, ಅದಕ್ಕೆ ಪ್ರತಿಯಾಗಿ ಸೂರಕ್ಕಿಗಳು ಕೂಗಿದ ರೀತಿ, ನಂತರ ಆ ಗೂಡನ್ನೇ ಅವು ಬಿಟ್ಟು ಹೋದ ಪರಿ, ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ಈ ರೀತಿ ಒಂದು ನಾಗರಹಾವು, ಆಗಾಗ ನಮ್ಮ ಮನೆಯ ಮೇಲಕ್ಕೇರಿ, ಇಲಿಗಳನ್ನು ಹುಡುಕುತ್ತಾ ಓಡಾಡುತ್ತಿತ್ತು. ಪ್ರತಿ ಬೇಸಗೆಯಲ್ಲಿ 2-3 ಬಾರಿಯಾದರೂ ಹಾವಿನ ಗೃಹಸಂಚಾರ ಇರುತ್ತಿತ್ತು. ಊರಿನವರು ಯಾವುದೇ ಕಾರಣಕ್ಕೂ ನಾಗರ ಹಾವನ್ನು ಹೊಡೆಯುತ್ತಿರಲಿಲ್ಲವಾದ್ದರಿಂದ, ನಮ್ಮ ಹಳ್ಳಿ ಅವುಗಳ ಸಾಮ್ರಾಜ್ಯವಾಗಿತ್ತು ಎನ್ನಬಹುದು. ಆ ಹಾವುಗಳನ್ನು ಪೂಜಿಸುತ್ತಿದ್ದ ಹಳ್ಳಿಯವರು, ಅವುಗಳಿಗೆ ರಾಜಮರ್ಯಾದೆ ನೀಡುತ್ತಿದ್ದುದಂತೂ ನಿಜ. ಮನೆಯ ಬಳಿ ಸುಳಿಯುವ ನಾಗರಹಾವನ್ನು, ಮನುಷ್ಯರ ರೀತಿ ಮಾತನಾಡಿಸುತ್ತಾ, 'ನೀನು ಎಂತಕೆ ಇಲ್ಲಿಗೆಲ್ಲಾ ಬರುವುದು? ಮಕ್ಕಳು-ಮರಿ ಓಡಾಡುವ ಜಾಗ ಇದು. ನಿನ್ನ ದಾರಿ ಹಿಡಿದುಕೊಂಡು ಹೋಗು' ಎಂದು ಕೈ ತೋರಿಸಿ, ಕೆಲವು ಬಾರಿ ನಮಸ್ಕರಿಸುತ್ತಿದ್ದರು. ಸ್ವಲ್ಪ ಸಮಯದ ಬಳಿಕ ನಾಗರಹಾವು ತನ್ನ ದಾರಿ ಹಿಡಿದು ಹೋಗುತ್ತಿತ್ತು! ಅದಕ್ಕೆ ಮನುಷ್ಯರ ದನಿ ಅರ್ಥವಾಗುವ ಸಾಧ್ಯತೆ ಇಲ್ಲವಾದರೂ, ಅಮಾಯಕ ಹಳ್ಳಿಗರು, ಅಂಥ ತಮ್ಮ ಮಾತಿನಿಂದ ಅದನ್ನು ದೂರ ಕಳಿಸಬಹುದು ಎಂದು ನಿಜಕ್ಕೂ ನಂಬಿದ್ದರು. ಮನೆಯ ತುಸು ದೂರದಲ್ಲಿರುವ ನಾಗರ ಬನದಲ್ಲಿ, ನಾಗನ ಕಲ್ಲನ್ನು ಪೂಜಿಸಿ, ತನು ಹಾಕುವ ಪದ್ಧತಿಯೂ ನಮ್ಮ ಹಳ್ಳಿಯಲ್ಲಿತ್ತು.

ನಮ್ಮ ಮನೆಗೆ ತುಸು ದೂರದಲ್ಲಿದ್ದ ಒಂದು ನಾಗರ ಬನದಲ್ಲಿ ಇಂಥ ಪೂಜೆ ಇತ್ತು. ಅದರಾಚೆ ಹಕ್ಕಲು, ಕಾಡು; ಅಲ್ಲೊಂದು 'ಕಾಡ್ಯನ ಮನೆ' ಇತ್ತು. ಅದಕ್ಕೆ ನಿಯತವಾಗಿ ಪೂಜೆ ಇಲ್ಲದಿದ್ದರೂ, ಅದಕ್ಕೆ ಸಂಬಂಧಿಸಿದ 'ಒಕ್ಕಲು', ವರ್ಷಕ್ಕೊಮ್ಮೆಯೋ, ಬೇರಾವುದೋ ಸಂದರ್ಭದಲ್ಲೋ ಬಂದು ಅಲ್ಲಿ ಪೂಜೆ ಮಾಡುತ್ತಿದ್ದುದನ್ನು ಕಾಣಬಹುದಿತ್ತು. ನಾಗರಹಾವು ಮತ್ತು ಕಾಳಿಂಗ ಸರ್ಪ ಎರಡೂ ಪೂಜ್ಯ ಎಂಬ ಭಾವನೆ ಇರುವ ಮಲೆನಾಡು ಮತ್ತು ಕರಾವಳಿಯ ಬದುಕಿನಲ್ಲಿ, ಆ ಉರಗಗಳಿಗೆ ವಿಶಿಷ್ಟ ಸ್ಥಾನ ಇರುವುದಂತೂ ಖಚಿತ.

ಇಂಥ ಸಂದರ್ಭದಲ್ಲಿ, ಯಾರಾದರೂ ಕಾಳಿಂಗ ಸರ್ಪಗಳನ್ನು ವಾಣಿಜ್ಯಕ ಉದ್ದೇಶಕ್ಕೆ ಬಳಸುತ್ತಿದ್ದಾರೆಂದರೆ, ಅಥವಾ ಕಾನೂನುಬಾಹಿರವಾಗಿ ಫೋಟೋ ಶೂಟ್‌ಗೆ ಬಳಸುತ್ತಿದ್ದಾರೆ ಎಂಬ ವಿಚಾರ ನಿಜವಾಗಿದ್ದಲ್ಲಿ, ಅದು ನಿಜಕ್ಕೂ ಖಂಡನಾರ್ಹ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಯಮಪಾಶವಾದ ರಸ್ತೆಗಳು

ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿನ ಜನಜೀವನ ಹೇಗಾಗಿದೆ ಅಂದರೆ, ಒಂದು ಸಮಸ್ಯೆ ಬಗೆಹರಿಸಿಕೊಂಡು ನಿಟ್ಟುಸಿರು ಬಿಡುವಷ್ಟರಲ್ಲಿ ಮತ್ತೆ ಹತ್ತು ಸಮಸ್ಯೆಗಳು ಶುರುವಾಗಿ ಉಸಿರುಗಟ್ಟಿಸುತ್ತವೆ. ಅದೆಷ್ಟೇ ಯೋಜನೆಗಳು ಬಂದರೂ ಸಮಸ್ಯೆಗೆ ಮಾತ್ರ ಅಂತ್ಯ ಸಿಗುವಂತೆ ಕಾಣುತ್ತಿಲ್ಲ.

ಹೌದು, 'ಸ್ಮಾರ್ಟ್ ಸಿಟಿ' ಹಣೆಪಟ್ಟಿಯ ಹುಬ್ಬಳ್ಳಿ ನಗರದಲ್ಲಿ ರಸ್ತೆಗಳು ಮಾತ್ರ ಸರಿಯಾಗುತ್ತಿಲ್ಲ. ಇದೀಗ ನಿರಂತರವಾಗಿ ಸುರಿಯುತ್ತಿರುವ ಮಳೆಗೆ, ರಸ್ತೆ ಯಾವುದು? ಗುಂಡಿ ಯಾವುದು? ಎಂದು ತೋಚದೆ ವಾಹನ ಸವಾರರು ಆತಂಕಪಡುವಂತಾಗಿದೆ. ಹುಬ್ಬಳ್ಳಿಯು ರಾಜ್ಯದ ಎರಡನೇ ರಾಜಧಾನಿ ಎಂದೇ ಬಿಂಬಿತವಾಗಿದ್ದರೂ, ಗುಂಡಿಬಿದ್ದಿರುವ ರಸ್ತೆಗಳಿಂದಾಗಿ ಸಾರ್ವಜನಿಕರು ನಿತ್ಯವೂ ರೋದಿಸುವಂಥ ದುಸ್ಥಿತಿ ಎದುರಾಗಿದೆ. ನಗರದ ಹೃದಯಭಾಗವಾದ 'ಬಸವ ವನ' ಹತ್ತಿರದ ರಸ್ತೆ ಸೇರಿದಂತೆ ವಿವಿಧೆಡೆ ರಸ್ತೆಗಳು ಅಧ್ವಾನವಾಗಿರುವುದರಿಂದ ವಾಹನ ಸವಾರರು ಕೈಯಲ್ಲಿ ಜೀವ ಹಿಡಿದುಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ದ್ವಿಚಕ್ರ ವಾಹನ ಸವಾರರ ಪಾಡಂತೂ ಹೇಳತೀರದಾಗಿದೆ. ಈ ರಸ್ತೆಯು ಹಲವು ಆಸ್ಪತ್ರೆಗಳಿಗೂ ಸಂಪರ್ಕ ಕಲ್ಪಿಸುವುದರಿಂದ ರೋಗಿಗಳಾಗಲೀ ಗರ್ಭಿಣಿಯರಾಗಲೀ ಓಡಾಡಲಿಕ್ಕೆ ಆಗುತ್ತಿಲ್ಲ.

ಇನ್ನು, ನಗರದ ಹಲವು ಜನನಿಬಿಡ ರಸ್ತೆಗಳ ಮಧ್ಯೆ ಮ್ಯಾನ್‌ಹೋಲ್‌ಗಳ ಮುಚ್ಚಳ ಕಿತ್ತುಹೋಗಿ ತಿಂಗಳುಗಳೇ ಕಳೆದರೂ ದುರಸ್ತಿಗೆ ಯಾರೂ ಮುಂದಾಗಿಲ್ಲ. ರಸ್ತೆಗಳ ನಡುವೆ ಇರುವ ಗುಂಡಿಗಳು ಗೋಚರಿಸದೆ ಬೈಕ್ ಸವಾರರು ಸಂಕಷ್ಟಕ್ಕೆ ಸಿಲುಕುವ ಘಟನೆಗಳು ವಾಡಿಕೆಯಾಗಿಬಿಟ್ಟಿವೆ. ಇಂಥ ಘಟನೆ ನಡೆದಾಗೆಲ್ಲಾ ಅಕ್ಕಪಕ್ಕದ ಮಳಿಗೆಗಳ ವ್ಯಾಪಾರಿಗಳು, ಮಹಾನಗರಪಾಲಿಕೆಯ ಅಧಿಕಾರಿಗಳಿಗೆ ಮತ್ತು ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕುತ್ತಲೇ ಸಹಾಯಕ್ಕೆ ಧಾವಿಸುತ್ತಾರೆ. ಯಮಪಾಶದಂತಿರುವ ಇಂಥ ರಸ್ತೆ ಗುಂಡಿಗಳನ್ನು ಜನರು ದೂರದಿಂದಲೇ ಗಮನಿಸಲಿ ಎಂದು ಅದರಲ್ಲಿ ಮರದ ಟೊಂಗೆ ಸಿಕ್ಕಿಸುವ, ಸುತ್ತಲೂ ಕಲ್ಲುಗಳನ್ನು ಇಡುವ ಕ್ರಮಕ್ಕೆ ಮುಂದಾಗುತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳನ್ನೂ ಸಂಬಂಧಪಟ್ಟವರು ಮನವರಿಕೆ ಮಾಡಿಕೊಂಡು, ದುರಸ್ತಿ ಮಾಡಿಸುವತ್ತ ಗಮನಹರಿಸಲಿ.

- ಚಂದ್ರಶೇಖರ ಬೆಳವಾಡಿ, ಹುಬ್ಬಳ್ಳಿ

ನೂರೆಂಟು ಪ್ರಶ್ನೆಗಳು

ಕರ್ನಾಟಕದಲ್ಲಿ ಕನ್ನಡವೇ ಸತ್ಯ, ನಿತ್ಯ...' ಶೀರ್ಷಿಕೆಯ 'ನೂರೆಂಟು ವಿಶ್ವ' ಅಂಕಣವು (ಅ.30) ನೂರೆಂಟು ಪ್ರಶ್ನೆಗಳಿಗೆ ಅವಕಾಶ ಕಲ್ಪಿಸಿದಂತಿದೆ. ನವೆಂಬರ್ 1ರ ಕನ್ನಡಪ್ರೇಮವು ವರ್ಷದ ಉಳಿದ ದಿನಗಳಲ್ಲಿ ಇಲ್ಲವೇಕೆ ಎಂಬುದು ಕಳಕಳಿಯ ವಿಷಯವೇ. ವರ್ಷಕ್ಕೊಮ್ಮೆ ಬರುವ ಕನ್ನಡ ರಾಜ್ಯೋತ್ಸವ 'ನಿತ್ಯೋತ್ಸವ' ಆಗುತ್ತಿಲ್ಲವೇಕೆ? ಎಂಬುದೂ ಸಹಜ ಪ್ರಶ್ನೆಯೇ.

ಕೆಲವರಿಗೆ ಒಂಥರಾ ಚಾಳಿ ಇರುತ್ತದೆ; ಇವರು ಏನೋ ಹೇಳಿಕೊಂಡು ಇನ್ನೇನೋ ಆಗಬೇಕೆಂದು ಬಯಸುವವರು. ಇಂಥವರು ಕರ್ನಾಟಕದಲ್ಲೇ ಹುಟ್ಟಿ, ಇಲ್ಲಿಯೇ ಬೆಳೆದು, ನಂತರದ ಕೆಲ ವರ್ಷಗಳು ಈ ನಾಡಿನ ಹೊರಗಿದ್ದು, 'ನನಗೆ ಕನ್ನಡ ಅರ್ಥವಾಗುತ್ತದೆ, ಆದರೆ ಮಾತನಾಡುವುದು ಕಷ್ಟ' ಅಂತಲೋ, 'ಕನ್ನಡದಲ್ಲಿ ಭಾವನೆಗಳನ್ನು ಸಮರ್ಥವಾಗಿ ವ್ಯಕ್ತಪಡಿಸುವುದು ಸಾಧ್ಯವಿಲ್ಲ' ಅಂತಲೋ ಅನ್ನುವುದು ವಾಡಿಕೆ. ಇವೆಲ್ಲಾ ಬರೀ ಬೊಗಳೆ ಅಷ್ಟೇ. ಮಾತೃಭಾಷೆಯನ್ನು ಎಂದಾದರೂ ಮರೆಯಲು ಸಾಧ್ಯವೇ? ಬಹಳಷ್ಟು ವರ್ಷಗಳಿಂದ ಅಮೆರಿಕ ಅಥವಾ ಇನ್ನಿತರ ರಾಷ್ಟ್ರಗಳಲ್ಲಿದ್ದೂ ಇಂದು ಕನ್ನಡ ಪತ್ರಿಕೆಗಳಿಗೆ ನಿಯತವಾಗಿ ಅಂಕಣಗಳನ್ನು ಬರೆಯುವವರೂ ಇದ್ದಾರೆ ಅಂದಮೇಲೆ, ಕನ್ನಡವನ್ನು ಮರೆಯಲು ಸಾಧ್ಯವಿಲ್ಲ ಮತ್ತು ಅದು ನಶಿಸಿಹೋಗುವುದಂತೂ ಸಾಧ್ಯವೇ ಇಲ್ಲ ಎಂದಾಯಿತು. ಇನ್ನು ನಮ್ಮ ಕೆಲ ತಥಾಕಥಿತ ಸೆಲೆಬ್ರಿಟಿಗಳು ಅಥವಾ ಹಾಗೆಂದು ಕರೆಸಿಕೊಳ್ಳುವ ಹುಚ್ಚು ಇದ್ದವರು, 'ಕನ್ನಡ ಅಷ್ಟೊಂದು ಚೆನ್ನಾಗಿ ಬರುವುದಿಲ್ಲ' ಅಂತ ಹೇಳುವುದೂ ಇದೆ. ಇದು ಕೂಡ ಇಂಥವರ ನಟನೆಯ ಒಂದು ಭಾಗವೇ ಹೊರತು ವಾಸ್ತವವಲ್ಲ.

ಕನ್ನಡದ ಶಾಲೆಗಳು ಮುಚ್ಚುತ್ತಿರುವುದು, ಇಂಗ್ಲಿಷ್ ವ್ಯಾಮೋಹ ಹೆಚ್ಚುತ್ತಿರುವುದು ಎಲ್ಲಾ ನಡೆಯುತ್ತಿದ್ದರೂ, ಅತ್ಯಂತ ಬಲಿಷ್ಠ ತಳಪಾಯ ಹೊಂದಿರುವ ಕನ್ನಡ ಭಾಷೆಯು ತನ್ನ ಸತ್ವವನ್ನು ಎಂದಿಗೂ ಕಳೆದುಕೊಳ್ಳದು. ಅಂಥ ಆತಂಕವೂ ಅನಗತ್ಯ ಎಂದು ನನ್ನ ಭಾವನೆ.

- ಶಂಕರನಾರಾಯಣ ಭಟ್, ಮಾಡಗೇರಿ

ರಾಷ್ಟ್ರೀಯ ಏಕತೆಯ ಸರದಾರನ 150ನೇ ವರ್ಧಂತಿಯ ಸಂಭ್ರಮ

ಸ್ವಾತಂತ್ರ್ಯೋತ್ತರ ಭಾರತದ ಮೊದಲ ಉಪಪ್ರಧಾನಿ ಎನಿಸಿಕೊಂಡು, ಕೇಂದ್ರ ಗೃಹ ಸಚಿವರಾಗಿ ಅಧಿಕಾರ ವಹಿಸಿಕೊಂಡು ಆಧುನಿಕ ಭಾರತವನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವರು ಸರ್ದಾರ್ ವಲ್ಲಭಭಾಯಿ ಪಟೇಲರು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ತುಂಡುಗಳಾಗಿ ಹರಡಿಕೊಂಡಿದ್ದ, ಬಹುಮುಖಿ ಆಚಾರ-ವಿಚಾರಗಳ ರಾಜಸಂಸ್ಥಾನಗಳನ್ನು ಮತ್ತು ನವಾಬರ ಪ್ರಾಂತ್ಯಗಳನ್ನು ಭಾರತ ದೇಶದ 'ಒಕ್ಕೂಟ ವ್ಯವಸ್ಥೆ'ಯೊಳಗೆ ಸೇರಿಸುವಲ್ಲಿ ಪಟೇಲರು ವಹಿಸಿದ ಪಾತ್ರ ನಿರ್ಣಾಯಕವಾದುದು. ಇಂದು (ಅಕ್ಟೋಬರ್ 31) ಈ ಯುಗಪುರುಷನ ಜನ್ಮದಿನ. 2014ರಿಂದ ಈ ದಿನವನ್ನು ಸಂದರ್ಭೋಚಿತವಾಗಿ 'ರಾಷ್ಟ್ರೀಯ ಏಕತಾ ದಿನ'ವನ್ನಾಗಿ ದೇಶಾದ್ಯಂತ ಸಡಗರ-ಸಂಭ್ರಮದಿಂದ ಆಚರಿಸಲಾಗುತ್ತದೆ. ಈ ವರ್ಷ ಪಟೇಲರ 150ನೆಯ ಜನ್ಮದಿನ, ತನ್ನಿಮಿತ್ತ ಈ ನುಡಿನಮನ.

ಗುಜರಾತಿನ ನಡಿಯಾದ್ ಎಂಬಲ್ಲಿ, ಝೂವೇರ್ ಭಾಯಿ ಪಟೇಲ್ ಮತ್ತು ಲಾಡ್ಬಾ ದಂಪತಿಯ ಆರು ಮಕ್ಕಳಲ್ಲಿ ಒಬ್ಬರಾಗಿ 1875ರಲ್ಲಿ ಜನಿಸಿದ ಪಟೇಲರು, ಆರಂಭಿಕ ಶಾಲಾ ಶಿಕ್ಷಣದ ನಂತರ ಉನ್ನತ ಶಿಕ್ಷಣಕ್ಕೆ ತೆರಳಿದ್ದು ಲಂಡನ್‌ಗೆ. ಅಲ್ಲಿ ಬ್ಯಾರಿಸ್ಟರ್ ಪದವಿಯನ್ನು ಪೂರ್ಣಗೊಳಿಸಿ ಭಾರತಕ್ಕೆ ವಾಪಸಾಗಿ ವಕೀಲಿ ವೃತ್ತಿಯನ್ನು ಆರಂಭಿಸಿದರು. 1928-29ರ ಕಾಲಘಟ್ಟದಲ್ಲಿ ಗುಜರಾತಿನ ಖೇಡಾ, ಬೊರ್ಸಾದ್, ಬರ್ಡೋಲಿ ಮುಂತಾದ ಪ್ರದೇಶಗಳ ರೈತರನ್ನು ಸಂಘಟಿಸಿ, ಅವರ ಮೇಲೆ ಹೇರಲಾಗಿದ್ದ ಕರಭಾರವನ್ನು ಹಿಂತೆಗೆದುಕೊಳ್ಳುವುದಕ್ಕೆ ಬ್ರಿಟಿಷರ ಮೇಲೆ ಒತ್ತಡ ಹೇರಲು ಅಹಿಂಸಾತ್ಮಕ ಚಳವಳಿಗೆ ಚಾಲನೆ ನೀಡಿದರು ಪಟೇಲರು. ಈ ಚಳವಳಿ ಯಶಸ್ವಿಯಾದ ಪರಿಣಾಮ 'ರೈತ ನಾಯಕ'ನಾಗಿಯೂ ಗುರುತಿಸಿಕೊಂಡರು ಮತ್ತು ಈ ನಾಯಕತ್ವ ಗುಣಕ್ಕೆ ಮನ್ನಣೆಯಾಗಿ 'ಸರ್ದಾರ್' ಎಂಬ ಬಿರುದು ಪಟೇಲರ ಹೆಸರಿನ ಜತೆಗೆ ಸೇರಿಕೊಂಡಿತು!

ಮುಂದೆ ಕಾಂಗ್ರೆಸ್ ಪಕ್ಷವನ್ನು ಸೇರಿ ಅಲ್ಲಿನ ಹಿರಿಯ, ಅನುಭವಿ ನಾಯಕ ಎನಿಸಿಕೊಂಡ ಪಟೇಲರು 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮುಂಚೂಣಿ ನಾಯಕರಾಗಿ ಹೊರಹೊಮ್ಮಿದರು. ಸ್ವಾತಂತ್ರ್ಯಾನಂತರದ ಆಡಳಿತಾತ್ಮಕ ಚೌಕಟ್ಟು ರೂಪಣೆ, ರಾಜಕೀಯ-ಸಾಮಾಜಿಕ ಏಕೀಕರಣ, ಸಂವಿಧಾನ ಕರಡು ರಚನೆ ಮುಂತಾದ ದಿಕ್ಸೂಚಿ ಯೋಜನೆಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿ, ದೇಶವನ್ನು ಸರ್ವರೀತಿಯಲ್ಲೂ ಒಗ್ಗೂಡಿಸಿದ ಧೀಮಂತ ಎಂದೇ ಚರಿತ್ರೆಯ ಪುಟಗಳಲ್ಲಿ ದಾಖಲಾದವರು ಸರ್ದಾರ್ ಪಟೇಲರು. ಅವರ ಈ ಕಾರ್ಯಯೋಜನೆಗಳ ವಿವರಗಳು ಕುತೂಹಲಕಾರಿಯಾಗಿಯೂ ರೋಮಾಂಚಕಾರಿಯಾಗಿಯೂ ಇವೆ:

- ಭಾರತವು ಸ್ವತಂತ್ರಗೊಂಡ ಸಂದರ್ಭದಲ್ಲಿ ದೇಶದ ಅರ್ಧದಷ್ಟು ಭೂಭಾಗವು 562 ವಿವಿಧ ರಾಜಪ್ರಭುತ್ವದ ಸಂಸ್ಥಾನಗಳಾಗಿ, ಇನ್ನುಳಿದ ಅರ್ಧಭಾಗವು ಬ್ರಿಟಿಷರ ಆಡಳಿತದಲ್ಲಿತ್ತು. ದೇಶ ಬಿಡುವ ಸಂದರ್ಭದಲ್ಲಿ ಬ್ರಿಟಿಷರು ಭಾರತ ಮತ್ತು ಪಾಕಿಸ್ತಾನದ ಮಧ್ಯೆ ರಕ್ತಸಿಕ್ತ ಗೆರೆಯನ್ನು ಅದಾಗಲೇ ಹಾಕಿಯಾಗಿತ್ತು! ಭಾರತವನ್ನು ವಿಭಜಿಸಿ, ಮುಸ್ಲಿಮರಿಗೆ ಪ್ರತ್ಯೇಕ ಪಶ್ಚಿಮ ಮತ್ತು ಪೂರ್ವ ಪಾಕಿಸ್ತಾನ ಸೃಷ್ಟಿಸಿ, ರಾಜರುಗಳಿಗೆ ತಮ್ಮ ಸಂಸ್ಥಾನವನ್ನು ಭಾರತ ಅಥವಾ ಪಾಕಿಸ್ತಾನದೊಂದಿಗೆ ಸೇರಿಸಿಕೊಳ್ಳುವ ಅಥವಾ ಸ್ವತಂತ್ರವಾಗಿರುವ ಆಯ್ಕೆಯನ್ನು ಕೊಡಲಾಯಿತು. ಇಂಥ ಬಹುತೇಕರು, ಬ್ರಿಟಿಷ್ ಆಳ್ವಿಕೆಗೂ ಮುಂಚೆ ಇದ್ದ ರೀತಿಯಲ್ಲಿ ತಂತಮ್ಮ ಸಂಸ್ಥಾನಗಳ ಆಳ್ವಿಕೆಯನ್ನು ಸ್ವತಂತ್ರವಾಗಿ ಮುಂದುವರಿಸಲು ತಯಾರಾಗಿದ್ದರು. ಭಾರತವು ಮತ್ತೊಮ್ಮೆ ಆಂತರಿಕ ಕಲಹಗಳಿಗೆ ಗುರಿಯಾಗುವಂಥ ಸಂದಿಗ್ಧ ಪರಿಸ್ಥಿತಿಯಲ್ಲಿತ್ತು. ಇದನ್ನು ನಿಭಾಯಿಸಲು ಪಟೇಲರು ಕಟಿಬದ್ಧರಾದರು; ದೇಶದ ಗೃಹಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು, ಕನಸಿನ ಅಖಂಡ ಭಾರತವನ್ನು ಕಟ್ಟುವ ಮಹತ್ಕಾರ್ಯದಲ್ಲಿ ತೊಡಗಿಸಿಕೊಂಡರು. ಆದರೆ, ಹರಿದು ಹಂಚಿಹೋಗಿದ್ದ ಈ ಪ್ರಾಂತ್ಯಗಳನ್ನು ಒಗ್ಗೂಡಿಸುವುದು ಸುಲಭವಾಗಿರಲಿಲ್ಲ. ಈ ಕಷ್ಟಸಾಧ್ಯ ಹೊಣೆಯನ್ನು ಕಾರ್ಯಗತಗೊಳಿಸಲು ವಿ.ಪಿ.ಮೆನನ್ ಎಂಬ ದಕ್ಷ ಅಧಿಕಾರಿಯ ನೇತೃತ್ವದಲ್ಲಿ ಸಮರ್ಥ ಸಮಿತಿಯನ್ನು ರಚಿಸಿದರು. ದೇಶದ ಎಲ್ಲ ಸಂಸ್ಥಾನಗಳಿಗೂ ಅನ್ವಯವಾಗುವಂಥ 'ವಿಲೀನ ಪತ್ರ'ವನ್ನು ಸಿದ್ಧಪಡಿಸಿದ ಪಟೇಲರು, ದೇಶದ ಉದ್ದಗಲಕ್ಕೂ ಪರಿಕ್ರಮಿಸಲು ಶುರುವಿಟ್ಟುಕೊಂಡರು.
- ಬ್ರಿಟಿಷರು ದೇಶವನ್ನು ಬಿಟ್ಟುಹೋದ ಮೇಲೆ ತಂತಮ್ಮ ಪ್ರಾಂತ್ಯವನ್ನು ಸ್ವತಂತ್ರವಾಗಿ ಆಳಿಕೊಂಡಿರಬಹುದು ಎಂಬ ಮನಸ್ಥಿತಿಯಲ್ಲಿದ್ದ ಅನೇಕ ರಾಜವಂಶಸ್ಥರಿಗೆ, ಪಟೇಲರ ಶಾಂತಿಸಂಧಾನ ಮತ್ತು ದೇಶವನ್ನು ಒಗ್ಗೂಡಿಸುವ ಪ್ರಯತ್ನಗಳು ಅಸಮಾಧಾನವನ್ನು ತಂದವು. ಇಂಥವರನ್ನು ದಾರಿಗೆ ತರಲು ಪಟೇಲರು ರಣತಂತ್ರವನ್ನು ಹೆಣೆದರು. ಅದರ ಭಾಗವಾಗಿ, 'ಮೊದಲು ಜೋಧಪುರ, ಜುನಾಗಢ, ತಿರುವಾಂಕೂರು, ಹೈದರಾಬಾದ್ ಮುಂತಾದ ಬೃಹತ್ ಸಂಸ್ಥಾನಗಳನ್ನು ಭಾರತ ಒಕ್ಕೂಟಕ್ಕೆ ಸೇರಿಕೊಳ್ಳುವುದಕ್ಕೆ ಒಪ್ಪಿಸಿದರೆ, ಮಿಕ್ಕ ಸಣ್ಣ ಸಂಸ್ಥಾನಗಳು ತಾವಾಗೇ ದಾರಿಗೆ ಬರುತ್ತವೆ' ಎಂಬ ನಿಲುವಿನೊಂದಿಗೆ ಅಖಾಡಕ್ಕಿಳಿದರು, ಈ ಕಾರ್ಯದಲ್ಲಿ ಸಾಮ, ದಾನ, ಭೇದ, ದಂಡ ಹೀಗೆ ಚತುರೋಪಾಯಗಳನ್ನು ಪಟೇಲರು ಚಾಣಾಕ್ಷತೆಯಿಂದ ಬಳಸಿದರು.
- ಪಟೇಲರು ಸಿದ್ಧಪಡಿಸಿದ್ದ ವಿಲೀನ ಪತ್ರಕ್ಕೆ ಮೊದಲಿಗೆ ಸಹಿಹಾಕಿದ್ದು ಅಂದಿನ ಪಟವರ್ಧನ್ ರಾಜವಂಶದ ಜಮಖಂಡಿ ಸಂಸ್ಥಾನದ ರಾಜರು. ಚಿತ್ಪಾವನ ಬ್ರಾಹ್ಮಣ ವಂಶಾವಳಿಯ ಈ ರಾಜಮನೆತನವು 'ನಾವು ಭಾರತದೊಂದಿಗೆ ಹೆಮ್ಮೆಯಿಂದ ವಿಲೀನವಾಗಿದ್ದೇವೆ' ಎಂಬ ಘೋಷಣೆಯೊಂದಿಗೆ ಇಡೀ ಭಾರತವನ್ನು ಒಗ್ಗೂಡಿಸುವ ಕಾರ್ಯಕ್ಕೆ ಚಾಲನೆ ನೀಡಿ ಬಲ ತುಂಬಿತು.
- ಮೈಸೂರು ಸಂಸ್ಥಾನದ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರು ಈ ನಿಟ್ಟಿನಲ್ಲಿ ಎರಡನೆಯವರಾದರು. ದೇಶವನ್ನು ಒಗ್ಗೂಡಿಸಲು ನಿರಂತರ ಪರ್ಯಟನೆ ಮಾಡುತ್ತಿದ್ದ ಪಟೇಲರ ಬಳಕೆಗೆಂದು ತಮ್ಮ ಖಾಸಗಿ ವಿಮಾನವನ್ನು ಪೈಲಟ್ ಸಹಿತವಾಗಿ ಅವರು ಪಟೇಲರಿಗೆ ಒದಗಿಸಿದರು. ಈ ನೆರವನ್ನು ಪಟೇಲರು ಗೌರವಾದರದಿಂದ ಸ್ಮರಿಸಿದ್ದಾರೆ.



ನುಡಿನಮನ
ರವೀ ಸಜಂಗದ್ದೆ
vveditoped@gmail.com

- ಆದರೆ, ದಕ್ಷಿಣ ಭಾರತದಲ್ಲಿ ಬಹುಸಂಖ್ಯಾತ ಹಿಂದೂ ಜನಸಂಖ್ಯೆಯನ್ನು ಹೊಂದಿದ್ದ ಹೈದರಾಬಾದ್ ನವಾಬ ಮೀರ್ ಉಸ್ಮಾನ್ ಅಲಿಖಾನ್, ಭಾರತ ಒಕ್ಕೂಟವನ್ನು ಸೇರದೆ ಸ್ವತಂತ್ರವಾಗಿರಲು ನಿರ್ಧರಿಸಿದ್ದ. ಪರಿಸ್ಥಿತಿಯ ಗಂಭೀರತೆ ಅರಿತ ಪಟೇಲರು ನವಾಬನೊಂದಿಗೆ ಖುದ್ದಾಗಿ ಸಂಧಾನಕ್ಕಿಳಿದರು; ಅದಕ್ಕೆ ಆತ ಒಪ್ಪದಿದ್ದಾಗ ಮೇಜರ್ ಜನರಲ್ ಚೌಧರಿಯವರ ನೇತೃತ್ವದಲ್ಲಿ 'ಆಪರೇಷನ್ ಪೋಲೋ' ಹೆಸರಿನಲ್ಲಿ ಮಿಲಿಟರಿ ಕಾರ್ಯಾಚರಣೆಗೆ ಮುಂದಾದರು. ಭಾರತೀಯ ಸೇನೆಯು ಹೈದರಾಬಾದನ್ನು ಎಲ್ಲಾ ಕಡೆಗಳಿಂದ ಸುತ್ತುವರಿಯಿತು. ಮೊದಲು ಪ್ರತಿರೋಧ ತೋರಿದ ಅಲಿಖಾನ್, 1948ರ ಸೆಪ್ಟೆಂಬರ್‌ನಲ್ಲಿ ಸೇನೆಗೆ ಶರಣಾಗಿ, ವಿಧಿಯಿಲ್ಲದೆ ವಿಲೀನ ಪತ್ರಕ್ಕೆ ಸಹಿಹಾಕಿದ.



- ಶ್ರೀ ಪದ್ಮನಾಭ ಸ್ವಾಮಿಯ ಹೆಸರಿನಲ್ಲಿ ರಾಜ್ಯಭಾರ ನಡೆಸುತ್ತಿದ್ದ ಸಂಪದ್ಭರಿತ ತಿರುವಾಂಕೂರು ಸಂಸ್ಥಾನವೂ ಸ್ವತಂತ್ರವಾಗಿರಲು ನಿರ್ಧರಿಸಿತು. ಇದನ್ನು ವಿರೋಧಿಸಿದ ಪಟೇಲರು ಹೋರಾಟ ನಡೆಸುವಂತೆ ಅಲ್ಲಿನ ದೇಶಪ್ರೇಮಿ ಕಾರ್ಯಕರ್ತರಿಗೆ ಕರೆ ನೀಡಿದರು. ಹೋರಾಟ ಹಿಂಸಾತ್ಮಕ ಸ್ವರೂಪವನ್ನು ಪಡೆದುಕೊಂಡು ಮಹಾರಾಜರು ಅನ್ಯಮಾರ್ಗವಿಲ್ಲದೆ ಭಾರತದೊಂದಿಗೆ ವಿಲೀನಕ್ಕೆ ಸಮ್ಮತಿಸಿದರು.
- ಉತ್ತರ ಭಾರತದಲ್ಲೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿರಲಿಲ್ಲ! ಜೋಧಪುರದ ಮಹಾರಾಜ ಹನ್ವಂತ್ ಸಿಂಗ್‌ಗೆ ಪಾಕಿಸ್ತಾನದ ಮುಖ್ಯಸ್ಥ ಜಿನ್ನಾರಿಂದ 'ನಮ್ಮ ದೇಶ ಸೇರಿಕೊಂಡರೆ ಕೇಳಿದ್ದು ಕೊಡುತ್ತೇವೆ' ಎಂಬ ಆಮಿಷವಿತ್ತು. ಭೌಗೋಳಿಕವಾಗಿ ಪಾಕಿಸ್ತಾನಕ್ಕೆ ಸನಿಹದಲ್ಲಿದ್ದ ಜೋಧ್‌ಪುರದ ರಾಜನಿಗೆ ಸಂದಿಗ್ಧ ಪರಿಸ್ಥಿತಿ ಎದುರಾಯಿತು. ಪಾಕಿಸ್ತಾನಕ್ಕೆ ಸೇರಿಕೊಳ್ಳುವುದನ್ನು ಅಲ್ಲಿನ ಜಾಗೀರ್‌ದಾರ್ ಸಮುದಾಯದವರು ವಿರೋಧಿಸಿದ್ದರಿಂದ ಗಲಭೆಗಳಾದವು. ಆ ವೇಳೆ ಸಂಧಾನಕ್ಕೆ ತೆರಳಿದ ವಿ.ಪಿ.ಮೆನನ್ ಮತ್ತು ಹನ್ವಂತ್ ಸಿಂಗ್ ನಡುವೆ ಮಾತಿನ ಚಕಮಕಿಯಾಗಿ ಪರಿಸ್ಥಿತಿ ಬಿಗಡಾಯಿಸಿತು; ಆದರೆ ಪಟೇಲರ ಸಮಯೋಚಿತ ಮಧ್ಯಸ್ಥಿಕೆಯಿಂದಾಗಿ ಪರಿಸ್ಥಿತಿ ತಣ್ಣಗಾಯಿತು, ವಿಲೀನ ಪತ್ರಕ್ಕೆ ಹನ್ವಂತ್ ಸಿಂಗ್ ಸಹಿಹಾಕಿದರು. ಆ ವೇಳೆ ನೀಡಿದ ಆಶ್ವಾಸನೆಯಂತೆ, ಜೋಧ್‌ಪುರದಿಂದ ಕಾಥಿಯಾವಾಡಕ್ಕೆ ಆದ್ಯತೆಯ ಮೇರೆಗೆ ರೈಲು ಸಂಪರ್ಕವನ್ನೂ, ಯಥೇಚ್ಛವಾಗಿ ದವಸ-ಧಾನ್ಯಗಳನ್ನೂ ಒದಗಿಸಲಾಯಿತು.
- ಗುಜರಾತಿನ ಜುನಾಘಡದ ನವಾಬ ಮೊಹಮ್ಮದ್ ಮಹಬತ್ ಖಾನ್ 'ಪಾಕಿಸ್ತಾನಕ್ಕೆ ಸೇರಿಕೊಳ್ಳುತ್ತೇನೆ' ಎಂದು ಘೋಷಿಸಿ, ಆ ನಿಟ್ಟಿನಲ್ಲಿ ಮುಂದಾದ. ಶೇ.80ಕ್ಕಿಂತ ಅಧಿಕ ಹಿಂದೂಗಳಿದ್ದ ಸಂಸ್ಥಾನವದು. ಅದು ಪಾಕಿಸ್ತಾನಕ್ಕೆ ಸೇರುವುದು ಅಲ್ಲಿನ ಬಹುಸಂಖ್ಯಾತರಿಗೆ ಇಷ್ಟವಿರಲಿಲ್ಲ. ಪಟೇಲರು ಜುನಾಘಡಕ್ಕೆ ಸೇನೆಯನ್ನು ಕಳಿಸುವ ಸಿದ್ಧತೆ ನಡೆಸುತ್ತಿದ್ದಾರೆ ಎಂಬ ಮಾಹಿತಿ ದೂತರಿಂದ ಸಿಕ್ಕಿದ್ದೇ ತಡ, ನವಾಬನು ತನ್ನೆಲ್ಲ ಸಾಮಾನು-ಸರಂಜಾಮನ್ನು ಇಲ್ಲೇ ಬಿಟ್ಟು ಪಾಕಿಸ್ತಾನಕ್ಕೆ ಓಡಿದ. ಪಟೇಲರ ನೇತೃತ್ವ ಮತ್ತು ಸೇನೆಯ ಸಹಾಯದಿಂದ ಜುನಾಘಡದಲ್ಲಿ ಹಂಗಾಮಿ ಸರಕಾರ ಅಧಿಕಾರ ವಹಿಸಿಕೊಂಡಿತು. 1948ರ ಫೆಬ್ರವರಿಯಲ್ಲಿ ನಡೆದ ಜನಮತ ಸಂಗ್ರಹದಲ್ಲಿ ಅಲ್ಲಿನ ಶೇ.90ಕ್ಕೂ ಹೆಚ್ಚು ಜನರು ಭಾರತವನ್ನು ಸೇರುವ ಇಂಗಿತ ವ್ಯಕ್ತಪಡಿಸಿದರು. ಜೂನ್ ವೇಳೆ ಆ ಸಂಸ್ಥಾನವೂ ಭಾರತದ ಭಾಗವಾಯಿತು. ನಂತರ, ಪಟೇಲರ ನಿರಂತರ ಪ್ರಯತ್ನದ ಫಲವಾಗಿ ಮಣಿಪುರ, ಬರೋಡಾ, ಭೋಪಾಲ್ ಸಂಸ್ಥಾನಗಳೂ ಒಂದೊಂದಾಗಿ ಭಾರತದ ಒಕ್ಕೂಟವನ್ನು ಸೇರಿಕೊಂಡವು.
- ಕಾಶ್ಮೀರದ ರಾಜಾ ಹರಿಸಿಂಗ್ ಯಾವುದೇ ಖಚಿತ ನಿರ್ಧಾರವನ್ನು ತೆಗೆದುಕೊಳ್ಳದ ಕಾರಣ ಅಲ್ಲಿ ಅನಿಶ್ಚಿತತೆ ಮುಂದುವರಿಯಿತು. ಕಾಶ್ಮೀರವನ್ನು ಕಬಳಿಸುವ ಹುನ್ನಾರವನ್ನು ಮೊದಲ ದಿನದಿಂದಲೇ ನಡೆಸಿದ್ದ ಪಾಕಿಸ್ತಾನ, ತನ್ನಲ್ಲಿ ಸೇರಿಕೊಳ್ಳುವಂತೆ ಹರಿಸಿಂಗ್ ಮೇಲೆ ರಾಜಕೀಯ ಒತ್ತಡವನ್ನು ತಂದಿತು. ಹರಿಸಿಂಗ್ ನಿರ್ಧಾರ ಪ್ರಕಟವಾಗುವುದಕ್ಕೂ ಮೊದಲೇ ಕಾಶ್ಮೀರ ಪ್ರದೇಶಕ್ಕೆ ಪಾಕಿಸ್ತಾನದ ಸೈನ್ಯ ನುಗ್ಗಿತು. ಇನ್ನು ತಡಮಾಡಿದರೆ ಅದು ಶ್ರೀನಗರವನ್ನೂ ಆಕ್ರಮಿಸಿಕೊಂಡುಬಿಡುತ್ತದೆ ಎಂದರಿವಾಗಿ ರಾಜಾ ಹರಿಸಿಂಗ್ ವಿಲೀನ ಪತ್ರಕ್ಕೆ ಸಹಿಹಾಕುವುದಾಗಿ ಪಟೇಲರಿಗೆ ತಿಳಿಸಿದ. ನಾಲ್ಕೇ ದಿನದೊಳಗೆ ಪತ್ರಕ್ಕೆ ಸಹಿ ಬಿತ್ತು! ಸೈನಿಕರಿಂದ ತುಂಬಿದ್ದ ಭಾರತೀಯ ವಾಯುಪಡೆಯ ವಿಮಾನಗಳು ಶ್ರೀನಗರದ ವಾಯುನಿಲ್ದಾಣಕ್ಕೆ ಬಂದಿಳಿದವು. ಇದು ಕಾಶ್ಮೀರ ವಿಷಯದಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ನಡೆದ ಮೊದಲ ಯುದ್ಧ!

ಕೆಲ ದಿನಗಳಲ್ಲೇ ಪಾಕಿಸ್ತಾನದ ಪಡೆಗಳನ್ನು ಹಿಮ್ಮೆಟ್ಟಿಸಿದ ಭಾರತೀಯ ಸೇನೆಯು ಬಹುತೇಕ ಕಾಶ್ಮೀರವನ್ನು ಮರುವಶಪಡಿಸಿಕೊಂಡಿತು. ಆಗ ನಮ್ಮ ಸೇನೆಗೆ ಮುಕ್ತ ಅವಕಾಶವನ್ನು ಕೊಟ್ಟಿದ್ದಿದ್ದರೆ, ಪಾಕಿಸ್ತಾನದಿಂದ ಸಂಪೂರ್ಣ ಕಾಶ್ಮೀರವನ್ನು ಬಿಡಿಸಿಕೊಳ್ಳಬಹುದಿತ್ತೇನೋ! ಆದರೆ ಅಚ್ಚರಿಯೆಂಬಂತೆ ಅಂದಿನ ಪ್ರಧಾನಿ ನೆಹರು ಅವರು ಈ ಸಮಸ್ಯೆಯನ್ನು ಬಗೆಹರಿಸುವಂತೆ ವಿಶ್ವಸಂಸ್ಥೆಯ ಮೊರೆಹೋದರು. ವಿಶ್ವಸಂಸ್ಥೆಯ ಅಸಂಬದ್ಧ ಆದೇಶದನ್ವಯ ಸೇನಾ ಕಾರ್ಯಾಚರಣೆ ಅಂದು ತಟಸ್ಥಗೊಂಡು ಕಾಶ್ಮೀರವು ಇನ್ನೂ 'ಸಮಸ್ಯೆ'ಯಾಗಿಯೇ ಉಳಿದಿದೆ. ನೆಹರು ಅವರ ಹಸ್ತಕ್ಷೇಪವಾಗದೆ ಇದ್ದಿದ್ದರೆ, ಇತರೆ ಪ್ರಾಂತ್ಯಗಳ ಸಮಸ್ಯೆಯನ್ನು ಬಗೆಹರಿಸಿದಂತೆ ಪಟೇಲರು ಕಾಶ್ಮೀರ ಸಮಸ್ಯೆಯನ್ನೂ ಬಗೆಹರಿಸುತ್ತಿದ್ದರು. ಈಗ ಪಾಕ್ ವಶದಲ್ಲಿರುವ ಪ್ರದೇಶವೂ ಸೇರಿದಂತೆ ಒಂದಿಡೀ ಕಾಶ್ಮೀರವು ಭಾರತದ ಭಾಗವಾಗಿರುತ್ತಿತ್ತು. ಆದರೆ ಹಾಗಾಗಲಿಲ್ಲ...

ದೇಶದ ಇತಿಹಾಸದಲ್ಲಿ ಆಗಿಹೋಗಿರುವ ಕೆಲವೊಂದು ವ್ಯಕ್ತಿತ್ವಗಳನ್ನು ಹಗುರವಾಗಿ ಪರಿಗಣಿಸಲು ಸಾಧ್ಯವೇ ಇಲ್ಲ. ಅಂಥ ಮೇರು ವ್ಯಕ್ತಿತ್ವಗಳಲ್ಲಿ ಮುಂಚೂಣಿಯಲ್ಲಿರುವವರು ಸರ್ದಾರ್ ವಲ್ಲಭಭಾಯಿ ಪಟೇಲರು. 1991ರಲ್ಲಿ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ'ವನ್ನು ಮರಣೋತ್ತರವಾಗಿ ನೀಡಿ ಗೌರವಿಸಲಾಯಿತು. ಭಾರತದ ಏಕತೆ ಮತ್ತು ಸಮಗ್ರತೆಯನ್ನು ದೇಶಪ್ರೇಮದ ಚೌಕಟ್ಟಿನ ಅಡಿಯಲ್ಲಿ ತಂದು, 'ಅಖಂಡ ಭಾರತ'ದ ಪರಿಕಲ್ಪನೆಯನ್ನು ಸಾಕಾರವಾಗಿಸಿದ ಶ್ರೇಯಸ್ಸು ಪಟೇಲರಿಗೆ ಅರ್ಹವಾಗಿಯೇ ಸಲ್ಲುತ್ತದೆ. ಏಕೆಂದರೆ, ಅವರು ನವಭಾರತದ ನಿರ್ಮಾಣದ ರಾಯಭಾರಿ ಮತ್ತು ರೂವಾರಿ. ಇಂಥ ಚಾಣಾಕ್ಷ 'ಲೋಹಮಾನವ'ನನ್ನು ಪಡೆದ ಭಾರತಮಾತೆಯೇ ಧನ್ಯಳು!

ಈಗಿರುವ ನಮ್ಮೆಲ್ಲರ 'ಸದೃಢ ಅಸ್ತಿತ್ವ'ವೇ ಪಟೇಲರು 'ಉಕ್ಕಿನ ಮನುಷ್ಯ' ಎಂಬುದಕ್ಕೆ ಪ್ರಬಲ ಸಾಕ್ಷಿ. ನರ್ಮದಾ ನದಿಯ ತಟದಲ್ಲಿ 182 ಮೀಟರ್ ಎತ್ತರದ ಪಟೇಲರ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಮುಗುಳ್ನಗೆಯ ತಮ್ಮದೇ ಪ್ರತಿಮೆಗಿಂತ ಎತ್ತರದ ಹಾಗೂ ಜನಮಾನಸಕ್ಕೆ ಹತ್ತಿರವಿರುವ ವಲ್ಲಭಭಾಯಿ ಪಟೇಲರು ನಿಜಾರ್ಥದಲ್ಲಿ ಸರದಾರರು!

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10,Issue:289

ಸಮಾಚಾರ ಸಣ್ಣದಲ್ಲ

ತೆಲಂಗಾಣ ಸಂಪುಟಕ್ಕೆ ಅಜರುದ್ದೀನ್ ಸೇರ್ಪಡೆ

ಹೈದರಾಬಾದ್: ಅಚ್ಚರಿ ಎಂಬಂತೆ, ಭಾರತೀಯ ಕ್ರಿಕೆಟ್ ತಂಡದ ಮಾಜಿ ನಾಯಕ, ಕಾಂಗ್ರೆಸ್ ಎಂಎಲ್‌ಸಿ ಮೊಹಮ್ಮದ್ ಅಜರುದ್ದೀನ್ ತೆಲಂಗಾಣದಲ್ಲಿನ ಮುಖ್ಯಮಂತ್ರಿ ರೇವಂತ್ ರೆಡ್ಡಿ ನೇತೃತ್ವದ ಸಚಿವ ಸಂಪುಟಕ್ಕೆ ಸೇರ್ಪಡೆಯಾಗಲಿದ್ದಾರೆ. ಟೆಸ್ಟ್ ಕ್ರಿಕೆಟ್ ಪ್ರವೇಶದಲ್ಲೇ ಸರಣಿಯೋಪಾದಿ 3

ಶತಕಗಳನ್ನು ಸಿಡಿಸಿ ಹೊಸ ದಾಖಲೆ ರಚಿಸಿದ್ದ ಅಜರುದ್ದೀನ್, ನೂತನ ಸಚಿವರಾಗಿ ಶುಕ್ರವಾರ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಆದರೆ, ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬೊಮ್ಮ ಮಹೇಶ್ ಕುಮಾರ್ ಗೌಡ್ ಅವರು, ವಿಧಾನಪರಿಷತ್ ಸದಸ್ಯರಾಗಿರುವ ಅಜರುದ್ದೀನ್ ಅವರು ಸಚಿವರಾಗಬಹುದು. ಆದರೆ ಈಗಲೇ ಖಚಿತವಾಗಿ ಹೇಳಲು ಸಾಧ್ಯವಿಲ್ಲ ಎಂದು ಗುರುವಾರ ಪ್ರತಿಕ್ರಿಯಿಸಿದ್ದಾರೆ. ಈ ವಿಚಾರವಾಗಿ ಅಜರುದ್ದೀನ್ ಅವರ ಕಡೆಯಿಂದಲೂ ಯಾವುದೇ ಮಾಹಿತಿ ಹೊರಬಿದ್ದಿಲ್ಲ. 2023ರ ವಿಧಾನಸಭಾ ಚುನಾವಣೆಯಲ್ಲಿ ಜುಬಿಲಿ ಹಿಲ್ಸ್ ಕ್ಷೇತ್ರದಲ್ಲಿ ಸೋಲು ಅನುಭವಿಸಿದ ಅಜರುದ್ದೀನ್‌ರನ್ನು ಪಕ್ಷ ನಂತರ ವಿಧಾನ ಪರಿಷತ್ ಸದಸ್ಯರಾಗಿಸಿದೆ. ಪ್ರಸ್ತುತ ಸಚಿವ ಸಂಪುಟದಲ್ಲಿ 15 ಸಚಿವರಿದ್ದಾರೆ. ಆದರೆ, ಮುಸ್ಲಿಮರಿಗೆ ಪ್ರಾತಿನಿಧ್ಯ ನೀಡಿಲ್ಲ ಎಂಬ ಮಾತಿದೆ. ಸಂಪುಟದಲ್ಲಿನ್ನೂ 3 ಸಚಿವ ಸ್ಥಾನ ಖಾಲಿ ಇವೆ.

ವಾಯುಮಾಲಿನ್ಯಕ್ಕೆ 2022ರಲ್ಲಿ 17 ಲಕ್ಷ ಸಾವು

ದೆಹಲಿ: ಭಾರತದಲ್ಲಿ ವಾಯುಮಾಲಿನ್ಯದಿಂದಾಗಿ ಸಾವಿಗೀಡಾಗುವವರ ಸಂಖ್ಯೆ ವರ್ಷಂಪ್ರತಿ ಹೆಚ್ಚುತ್ತಲೇ ಇದೆ. 2022 ರಲ್ಲಿ ವಾಯುಮಾಲಿನ್ಯದಿಂದಾಗಿ 17 ಲಕ್ಷಕ್ಕೂ ಹೆಚ್ಚು ಸಾವು ಉಂಟಾಗಿವೆ. ಮಾನವರಿಂದ ಉಂಟಾಗುವ ಪಿಎಂ2.5 ಮಾಲಿನ್ಯವೇ ಜೀವಬಲಿಗೆ ಕಾರಣವಾಗಿದೆ. 2010ರಿಂದ ಇಲ್ಲಿಯವರೆಗೆ ವಾಯುಮಾಲಿನ್ಯ ಪ್ರಮಾಣದಲ್ಲಿ ಶೇ.38ರಷ್ಟು ಹೆಚ್ಚಳ ಕಂಡುಬಂದಿದೆ. ಪಳೆಯುಳಿಕೆ ಆಧರಿಸಿದ ಇಂಧನಗಳ ಬಳಕೆಯಿಂದಲೇ ಶೇ.44ರಷ್ಟು ಸಾವು ಉಂಟಾಗುತ್ತಿದೆ. ರಸ್ತೆ ಸಾರಿಗೆಗೆ ಪೆಟ್ರೋಲ್ ಬಳಕೆಯಾಗುತ್ತಿರುವುದರಿಂದಲೇ ಭಾರತದಲ್ಲಿ ವರ್ಷಕ್ಕೆ 2.69 ಲಕ್ಷ ಸಾವು ಉಂಟಾಗುತ್ತಿವೆ. ವಾಯುಮಾಲಿನ್ಯದಿಂದಾಗಿ 2022ರಲ್ಲಿ ಅಕಾಲಿಕ ಮರಣಗಳಿಂದಾಗಿ 33940 ಕೋಟಿ ಡಾಲರ್ ಆರ್ಥಿಕ ನಷ್ಟಕ್ಕೂ ಕಾರಣವಾಗಿದೆ. ಇದು ದೇಶದ ಜಿಡಿಪಿಯ ಶೇ.9.5ರಷ್ಟಿದೆ ಎಂದು 'ದಿ ಲ್ಯಾನ್ಸೆಟ್ ಜರ್ನಲ್' ವರದಿ ಪ್ರಕಟಿಸಿದೆ. ಯೂನಿವರ್ಸಿಟಿ ಕಾಲೇಜ್ ಲಂಡನ್ ನೇತೃತ್ವದಲ್ಲಿ 71 ಶೈಕ್ಷಣಿಕ ಸಂಸ್ಥೆಗಳು ಮತ್ತು ವಿಶ್ವಸಂಸ್ಥೆಯ ವಿವಿಧ ಸಂಸ್ಥೆಗಳ 128 ತಜ್ಞರನ್ನು ಒಳಗೊಂಡ ಅಂತಾರಾಷ್ಟ್ರೀಯ ತಂಡ ವರದಿಯ 9ನೇ ಆವೃತ್ತಿ ಸಿದ್ಧಪಡಿಸುವುದರಲ್ಲಿ ಭಾಗಿಯಾಗಿದೆ.

ತೆಲಂಗಾಣದಲ್ಲಿ ಭಾರೀ ಬೆಳೆ ಹಾನಿ

ಹೈದರಾಬಾದ್: ಮೊಂಥಾ ಚಂಡಮಾರುತದ ಅಬ್ಬರಕ್ಕೆ ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ತತ್ತರಿಸಿವೆ. ಅದರ ಪ್ರಭಾವದಿಂದಾಗಿ ಬುಧವಾರ ತೆಲಂಗಾಣದ ವಿವಿಧ ಭಾಗಗಳಲ್ಲಿ ಭಾರಿ ಮಳೆಯಾಗಿದೆ. 12 ಜಿಲ್ಲೆಗಳಲ್ಲಿ 4.47 ಲಕ್ಷ ಎಕರೆ ಬೆಳೆ ಹಾನಿಯಾಗಿದೆ ಎಂದು ಪ್ರಾಥಮಿಕ ಅಂದಾಜು ಮಾಡಲಾಗಿದೆ ಎಂದು ಕೃಷಿ ಸಚಿವ ತುಮ್ಮಲ ನಾಗೇಶ್ವರ್ ರಾವ್ ಹೇಳಿದ್ದಾರೆ. ಪ್ರಾಥಮಿಕ ವರದಿಯನ್ನು ಸಿದ್ಧಪಡಿಸಿರುವ ಕೃಷಿ ಇಲಾಖೆ, 12 ಜಿಲ್ಲೆಗಳನ್ನು ಒಳಗೊಂಡ 179 ಮಂಡಲಗಳಲ್ಲಿ 2,53,033 ರೈತರಿಗೆ ಸೇರಿದ 4,47,864 ಎಕರೆ ಬೆಳೆ ಹಾನಿಯಾಗಿದೆ ಎಂದು ತಿಳಿಸಿದೆ. ಸಮೀಕ್ಷೆ ಪೂರ್ಣಗೊಂಡ ನಂತರ ಬೆಳೆ ನಷ್ಟ ಹೆಚ್ಚಾಗಬಹುದು ಎಂದು ಸಚಿವರು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶದ್ರೋಹ: ಕಾಶ್ಮೀರ ಸರ್ಕಾರಿ ನೌಕರರ ವಜಾ

ಶ್ರೀನಗರ: ದೇಶ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆಂಬ ಆರೋಪದಡಿ ಇಬ್ಬರು ರಾಜ್ಯ ಸರಕಾರದ ನೌಕರರನ್ನು ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಸೇವೆಯಿಂದಲೇ ವಜಾಗೊಳಿಸಿದ್ದಾರೆ. ಶಾಲಾ ಶಿಕ್ಷಕರಾಗಿದ್ದ ಗುಲಾಮ್ ಹುಸೇನ್ ಮತ್ತು ಮಾಜ್ದ್ ಇಕ್ಬಾಲ್ ದರ ಎಂಬವರನ್ನು ಸಂವಿಧಾನದ 311ನೇ ವಿಧಿಯನ್ವಯ ನೌಕರಿಯಿಂದಲೇ ವಜಾಗೊಳಿಸಲಾಗಿದೆ. ಶಿಕ್ಷಕರಿಬ್ಬರ ವಜಾ ಪ್ರಕ್ರಿಯೆಗೆ ಸಿಎಂ ಒಮರ್ ಅಬ್ದುಲ್ಲಾ ನೇತೃತ್ವದ ಚುನಾಯಿತ ಸರಕಾರ ವಿರೋಧಿಸಿತು. ಆದರೆ, ಲೆ.ಗವರ್ನರ್ ತಕ್ಷಣವೇ ವಜಾ ಆದೇಶ ಜಾರಿಗೊಳ್ಳುವಂತೆ ಮಾಡಿದ್ದಾರೆ. ದೇಶ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪದಡಿ ಜಮ್ಮು-ಕಾಶ್ಮೀರದಲ್ಲಿ ಇತ್ತೀಚೆಗೆ 80 ಸರಕಾರಿ ನೌಕರರನ್ನು ಲೆಫ್ಟಿನೆಂಟ್ ಗವರ್ನರ್ ವಜಾಗೊಳಿಸಿದಂತಾಗಿದೆ.

{ **ಶೇಖ್ ಹಸೀನಾ** } ಬಾಂಗ್ಲಾ ಮಾಜಿ ಪಿಎಂ

ಭಾರತದಲ್ಲಿ ಸ್ವತಂತ್ರವಾಗಿ, ಧೈರ್ಯದಿಂದ ಬದುಕುತ್ತಿದ್ದೇನೆ. ಎಚ್ಚರಿಕೆಯಿಂದಲೂ ಇದ್ದೇನೆ. ಸದ್ಯಕ್ಕೆ ಭಾರತ ತೊರೆಯುವ, ಬಾಂಗ್ಲಾದೇಶಕ್ಕೆ ವಾಪಸ್ ಆಗುವ ಉದ್ದೇಶ ಇಲ್ಲ. ಬಾಂಗ್ಲಾದಲ್ಲಿನ ಸರಕಾರವೇನಾದರೂ ಕಾನೂನುಬದ್ಧವಾಗಿದ್ದರೆ, ಸಂವಿಧಾನ ಎತ್ತಿಹಿಡಿಯುತ್ತಿದ್ದರೆ, ಕಾನೂನು-ಸುವ್ಯವಸ್ಥೆ ಉತ್ತಮವಾಗಿದ್ದರೆ ಆಗ ಢಾಕಾಗೆ ಖಂಡಿತಾ ಹಿಂದಿರುಗುವೆ.

ಚೀನಾ ವಿರುದ್ಧ ಸುಂಕದಲ್ಲಿ ಕಡಿತ, ಅಪರೂಪದ ಖನಿಜ ರಫ್ತಿಗೆ ಚೀನಾ ಒಪ್ಪಿಗೆ

ಆರು ವರ್ಷಗಳ ಬಳಿಕ ದ.ಕೊರಿಯದಲ್ಲಿ ಅಮೆರಿಕ-ಚೀನಾ ಅಧ್ಯಕ್ಷರ ಭೇಟಿ

ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಬಹಳ ಶ್ರೇಷ್ಠ ನಾಯಕ: ಟ್ರಂಪ್ ಪ್ರಶಂಸೆ

ಚೀನಾ ಜತೆಗಿನ ವ್ಯಾಪಾರ ಮಾತುಕತೆ ಯಶಸ್ವಿ: ಟ್ರಂಪ್

ಸಿಯೋಲ್: ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಬ್ಬ ಬಹಳ ಶ್ರೇಷ್ಠ ನಾಯಕ ಎಂದು ಪ್ರಶಂಸೆ ಮಾಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಆದರೆ, ವ್ಯಾಪಾರದ ಮಾತುಕತೆ, ಕೊಡು- ಕೊಳ್ಳುವ ವಿಚಾರದಲ್ಲಿ ಜಿನ್‌ಪಿಂಗ್ ಬಲು ಕಠಿಣ ಎಂದೂ ವಿಶ್ಲೇಷಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಆರು ವರ್ಷಗಳ ಬಳಿಕ ದಕ್ಷಿಣ ಕೊರಿಯಾದಲ್ಲಿ ಮುಖಾಮುಖಿಯಾಗಿದ್ದಾರೆ. ಗುರುವಾರ ಬೆಳಗ್ಗೆಯೇ 2 ತಾಸುಗಳ ಕಾಲ ಇಬ್ಬರ ನಡುವೆ ಮಹತ್ವದ ಮಾತುಕತೆ ನಡೆದಿದೆ. ಅದರಲ್ಲಿ ಹೆಚ್ಚಿನಂಶ ವ್ಯಾಪಾರ ಒಪ್ಪಂದ, ಕೊಡು-ಕೊಳ್ಳುವಿಕೆ ವಿಚಾರಕ್ಕೆ ಆದ್ಯತೆ ಸಿಕ್ಕಿದೆ ಎಂದು ಮೂಲಗಳು ತಿಳಿಸಿವೆ.

ವಿಶ್ವದ ಎರಡು ದೊಡ್ಡ ಆರ್ಥಿಕತೆ ಗಳಾದ ಅಮೆರಿಕ-ಚೀನಾ ಮಧ್ಯೆ ಸುಂಕ ಸಮರ ನಡೆದಿರುವಾಗಲೇ ಟ್ರಂಪ್-ಜಿನ್‌ಪಿಂಗ್ ಭೇಟಿ ಉಭಯ ದೇಶಗಳ ನಡುವೆ ವ್ಯಾಪಾರ ಒಪ್ಪಂದ ನೆರವೇರುವ ವಿಶ್ವಾಸವನ್ನು ಉಂಟು ಮಾಡಿದೆ.

ದ್ವಿಪಕ್ಷೀಯ ಸಭೆ ಅತ್ಯಂತ ಯಶಸ್ವಿಯಾಗಿದೆ. ವ್ಯಾಪಾರ ಒಪ್ಪಂದ ವಿಚಾರದಲ್ಲಿ ಜಿನ್‌ಪಿಂಗ್ ಬಹಳ ಕಠಿಣ ನಿಲುವಿನವರು. ಆದರೆ ಚೀನಾದ ಶ್ರೇಷ್ಠ ನಾಯಕ. ನಾವು ಪರಸ್ಪರರನ್ನು ಚೆನ್ನಾಗಿ ಅರಿತುಕೊಂಡಿದ್ದೇವೆ. ಎರಡೂ ದೇಶಗಳ ಮಧ್ಯೆ ಉತ್ತಮ ಸಂಬಂಧವಿದೆ. ಅದು ಬಹಳ ಸಮಯದವರೆಗೆ ಮುಂದುವರಿ ಯಲಿದೆ ಎಂದು ಟ್ರಂಪ್ ಸುದ್ದಿಗಾರರ ಬಳಿ ಹೇಳಿದ್ದಾರೆ.

ಚೀನಾದ ಅಭಿವೃದ್ಧಿಯು ಅಮೆರಿಕ ವನ್ನು ಮತ್ತೊಮ್ಮೆ ಶ್ರೇಷ್ಠವಾಗಿಸುವ ನಿಮ್ಮ ಕನಸಿನೊಂದಿಗೆ ಕೈಜೋಡಿಸುತ್ತದೆ ಎಂದು ಭಾವಿಸಿದ್ದೇನೆ. ಎರಡೂ ದೇಶಗಳು ಯಶಸ್ಸು ಕಾಣಲು ಮತ್ತು ಒಟ್ಟಿಗೇ ಸಮೃದ್ಧಿಯಾಗಲು ಪೂರ್ಣ ಸಮರ್ಥ ವಾಗಿವೆ. ಚೀನಾ-ಅಮೆರಿಕ ತಮ ಪಾಲುದಾರ ದೇಶಗಳಾಗಬೇಕು, ಉತ್ತಮ ಮಿತ್ರದೇಶಗಳಾಗಿರಬೇಕು ಎಂದು ನಾನು ಹಲವು ಬಾರಿ ಹೇಳಿದ್ದೇನೆ ಎಂದು ಜಿನ್‌ಪಿಂಗ್ ಹೇಳಿದ್ದಾರೆ.

ದಕ್ಷಿಣ ಕೊರಿಯಾದ ಬಂದರು ನಗರ ಬುಸಾನ್‌ನಲ್ಲಿ ಇಬ್ಬರೂ ನಾಯಕರು ದ್ವಿಪಕ್ಷೀಯ ಸಭೆ ನಡೆಸಿದ ಬಳಿಕ ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ಏಷ್ಯಾ ಪ್ರವಾಸ ಕೊನೆಗೊಂಡಿದೆ. ಟ್ರಂಪ್ ವಾಷಿಂಗ್ಟನ್‌ಗೆ ಮರಳಿದ್ದಾರೆ.

ದಕ್ಷಿಣ ಕೊರಿಯದಲ್ಲಿ ಗುರುವಾರ ಬೆಳಗ್ಗೆ ಭೇಟಿ ವೇಳೆ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಕಿವಿಯಲ್ಲಿ ಪಿಸುಗುಟ್ಟುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್.

ರೇರ್‌ಅರ್ಥ್ ಮಿನರಲ್ಸ್

ಅಮೆರಿಕದ ಕೈಗಾರಿಕೋದ್ಯಮಗಳಿಗೆ, ಅದರಲ್ಲೂ ಮುಖ್ಯವಾಗಿ ವಾಹನ ತಯಾರಿಕಾ ಉದ್ಯಮ ಕ್ಷೇತ್ರಕ್ಕೆ ಚೀನಾದಿಂದ ಆಮದಾಗುವ ಮ್ಯಾಗ್ನೆಟ್ ಮತ್ತು

ರೇರ್‌ಅರ್ಥ್ ಮಿನರಲ್ಸ್ (ಅಪರೂಪದ ಭೂಗರ್ಭ ಖನಿಜಗಳು) ಬಹಳ ಮುಖ್ಯವಾಗಿವೆ. ಡೊನಾಲ್ಡ್ ಟ್ರಂಪ್ ಜ.20ರಂದು 2ನೇ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಚೀನಾದಿಂದ ಆಮದಾಗುವ ಸರಕುಗಳ ಮೇಲೆ ನಿಯಂತ್ರಣ ಹೇರಲು ಮುಂದಾದರು. ಅದೇ ಕಾರಣವಾಗಿ ಮಿತಿಮೀರಿದ ಪ್ರಮಾಣದಲ್ಲಿ ಪ್ರತಿಸುಂಕ ವಿಧಿಸುವುದನ್ನು ಆರಂಭಿಸಿದರು. ಅದಕ್ಕೆ ತಿರುಗೇಟು ನೀಡುವಂತೆ ಚೀನಾ ಕೂಡಾ ಅಮೆರಿಕದ ಕೈಗಾರಿಕೋದ್ಯಮಕ್ಕೆ ಅತ್ಯಗತ್ಯವಾಗಿದ್ದ ಖನಿಜ ಪದಾರ್ಥಗಳು ಮತ್ತು ಮ್ಯಾಗ್ನೆಟ್ ರಫ್ತು ಮಾಡುವುದನ್ನು ತಡೆ ಹಿಡಿಯಿತು. ಇದರಿಂದ ಅಮೆರಿಕದ ಉದ್ಯಮ ವಲಯ ಚಿಂತೆಗೀಡಾಗಿತ್ತು. ಹಾಗಾಗಿಯೇ ಟ್ರಂಪ್ ಅವರಿಗೆ ಜಿನ್ ಪಿಂಗ್ ಜತೆಗಿನ ಮಾತುಕತೆಯಲ್ಲಿ ರೇರ್‌ಅರ್ಥ್ ಮಿನರಲ್ಸ್ ಚೀನಾದಿಂದ ಮತ್ತೆ ಅಮೆರಿಕಕ್ಕೆ ರಫ್ತಾಗುವ ವಿಚಾರ ಬಹಳ ಮಹತ್ವದ್ದಾಗಿತ್ತು.

ಏರ್‌ಫೋರ್ಸ್ 1 ವಿಮಾನದಲ್ಲಿ ಸುದ್ದಿಗಾರರಿಗೆ ಟ್ರಂಪ್ ಹೇಳಿದ್ದು

- ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಜತೆ ಅದ್ಭುತವಾದ ಮಾತುಕತೆಯಾಯಿತು. ಎರಡೂ ದೇಶಗಳ ಮಧ್ಯೆ ಪರಸ್ಪರ ಭಾರೀ ಗೌರವವಿದೆ.
- ಚೀನಾ ಸರಕುಗಳ ಮೇಲೆ ಅಮೆರಿಕ ವಿಧಿಸಿರುವ ಪ್ರತಿಸುಂಕ ಪ್ರಮಾಣವನ್ನು ಶೇ.47ಕ್ಕೆ ತಗ್ಗಿಸಲು ನಾನು ಒಪ್ಪಿರುವೆ. ಅಲ್ಲದೇ ಫೆಂಟಾನಿಲ್ ಸರಬರಾಜಿನಲ್ಲಿ ಶೇ.10ರಷ್ಟು ಸುಂಕ ಕಡಿತಕ್ಕೂ ಸಮ್ಮತಿಸಿರುವೆ.
- ರೇರ್ ಅರ್ಥ್ ಮಿನರಲ್ಸ್ (ಅಪರೂಪದ ಭೂಗರ್ಭ ಖನಿಜಗಳು), ಮ್ಯಾಗ್ನೆಟ್, ಬಲು ಬೇಡಿಕೆಯ ರಾಸಾಯನಿಕಗಳನ್ನು ಅಮೆರಿಕಕ್ಕೆ ರಫ್ತು ಮಾಡಲು ಚೀನಾ ಒಪ್ಪಿದೆ.
- ಅಮೆರಿಕದಿಂದ ಸೋಯಾಬೀನ್, ಸೋರ್ಘಮ್ ಮತ್ತಿತರ ಕೃಷಿ ಉತ್ಪನ್ನಗಳನ್ನು ಖರೀದಿಸಲು ಚೀನಾ ಸಮ್ಮತಿಸಿದೆ. ಇದರಿಂದ ಅಮೆರಿಕದ ಕೃಷಿಕರಿಗೆ ಖುಷಿಯಾಗಲಿದೆ.
- ಅಮೆರಿಕದಿಂದ ಇಂಧನ ಸಂಪನ್ಮೂಲಗಳನ್ನು ಖರೀದಿಸುವುದಕ್ಕೂ ಚೀನಾ ಒಪ್ಪಿಕೊಂಡಿದೆ. ಅಲಾಸ್ಕಾದಿಂದ ಕಚ್ಚಾತೈಲ ಮತ್ತು ಅನಿಲವನ್ನು ಅತ್ಯಂತ ದೊಡ್ಡ ಪ್ರಮಾಣದಲ್ಲಿ ಚೀನಾ ಖರೀದಿಸಲಿದೆ.
- ಅಮೆರಿಕದ ಎನ್‌ವಿಡಿಯ ಕಂಪನಿಯ ಅತ್ಯಾಧುನಿಕ 'ಎಐ' ಆಧರಿಸಿದ ಬ್ಲಾಕ್‌ವೆಲ್ ಚಿಪ್ ತಯಾರಿಕಾ ಘಟಕದ ವಿಚಾರ ಚರ್ಚೆಗೆ ಬರಲಿಲ್ಲ.
- ದ್ವಿಪಕ್ಷೀಯ ಸಭೆಯಲ್ಲಿ ತೈವಾನ್‌ನಲ್ಲಿನ ಉದ್ವಿಗ್ನತೆ ವಿಚಾರ ಚರ್ಚೆಗೆ ಬರಲಿಲ್ಲ.

ಚೀನಾ ವಾಣಿಜ್ಯ ಸಚಿವಾಲಯ ದೃಢೀಕರಣ

- ಅಮೆರಿಕಕ್ಕೆ 'ರಫ್ತು ನಿಯಂತ್ರಣ' ಕ್ರಮಗಳಿಗೆ ಸಂಬಂಧಿಸಿದ ಅ.9ರ ಅಧಿಸೂಚನೆಯನ್ನು ಚೀನಾ 1 ವರ್ಷ ಕಾಲ ತಡೆಹಿಡಿಯಲಿದೆ.
- ವಾಷಿಂಗ್ಟನ್ ಹೊರಡಿಸಿದ್ದ 301 ತನಿಖೆಗಳ ವಿರುದ್ಧದ ಚೀನಾದ ಪ್ರತಿಕ್ರಿಯಾತ್ಮಕ ತನಿಖಾ ಕ್ರಮಗಳಿಗೂ 1 ವರ್ಷ ನಿಲುಗಡೆ
- ಫೆಂಟಾನಿಲ್ ಮಾರಾಟ ಮತ್ತು ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಮುಕ್ತಗೊಳಿಸುವ ವಿಚಾರದಲ್ಲಿ ಅಮೆರಿಕ-ಚೀನಾ ಮಧ್ಯೆ ಒಪ್ಪಂದ.
- ಅಮೆರಿಕಕ್ಕೆ ವಿರುದ್ಧವಾಗಿ ನಡೆಸಲಿದ್ದ ನೌಕೆಗಳ ನಿರ್ಮಾಣ ಚಟುವಟಿಕೆಗಳೂ 1 ವರ್ಷ ಸ್ಥಗಿತ.

ಸೂರ್ಯಘರ್‌ಗೆ 50 ದೇಶಗಳಲ್ಲಿ ಬೇಡಿಕೆ

ಭಾರತದ ಸೌರಶಕ್ತಿ ಯೋಜನೆಗೆ 125 ದೇಶಗಳ ಮೆಚ್ಚುಗೆ | ಕುಸುಮ್ ಯೋಜನೆ ಜಾರಿಗೆ ನೆರವು ಕೋರಿದ ದೇಶಗಳು

ದೆಹಲಿ: 'ಸೂರ್ಯಘರ್' ಮತ್ತು 'ಪಿಎಂ ಕುಸುಮ್' ಸೇರಿದಂತೆ ಭಾರತದಲ್ಲಿನ ಸೌರಶಕ್ತಿ ಯೋಜನೆಗಳ ಯಶಸ್ಸು ಅಂತಾರಾಷ್ಟ್ರೀಯ ಸೌರ ಒಕ್ಕೂಟದ ಸದಸ್ಯ ರಾಷ್ಟ್ರಗಳನ್ನು ಬಹಳವಾಗಿ ಆಕರ್ಷಿಸಿದೆ. ತಮ್ಮಲ್ಲೂ ಭಾರತದ ಸೌರಶಕ್ತಿ ಯೋಜನೆಗಳ ಮಾದರಿಯನ್ನೇ ಅಳವಡಿಸಿಕೊಳ್ಳಲು 50ಕ್ಕೂ ಅಧಿಕ ದೇಶಗಳು ಇಚ್ಛಿಸಿವೆ.

ದೆಹಲಿಯ 'ಭಾರತ್ ಮಂಟಪಂ'ನಲ್ಲಿ 2 ದಿನಗಳ ಕಾಲ ಜರುಗಿದ ಅಂತಾರಾಷ್ಟ್ರೀಯ ಸೌರಶಕ್ತಿ ಒಕ್ಕೂಟದ 8ನೇ ಅಧಿವೇಶನದಲ್ಲಿ ಒಕ್ಕೂಟದ ಸದಸ್ಯ ರಾಷ್ಟ್ರಗಳಿಂದ ಭಾರತದ ಸೌರಶಕ್ತಿ ಯೋಜನೆಗಳ ಪ್ರಗತಿಗೆ ಮೆಚ್ಚುಗೆ ವ್ಯಕ್ತವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ಸೌರಶಕ್ತಿ ಯೋಜನೆಗಳ ಮಾದರಿಗಳ ಕುರಿತು 125 ದೇಶಗಳ ಪ್ರತಿನಿಧಿಗಳು ಮಾಹಿತಿ ಪಡೆದುಕೊಂಡರು.

ಇದೇ ವೇಳೆ, ಪ್ರಧಾನಿ ಮೋದಿ ಅವರ ಮಹತ್ವಾಕಾಂಕ್ಷೆಯ 'ಒಂದು ಜಗತ್ತು, ಒಂದು ಸೂರ್ಯ, ಒಂದು ಗ್ರಿಡ್' ಪರಿಕಲ್ಪನೆಯನ್ನು ಬೆಂಬಲಿಸಿ 125 ದೇಶಗಳ ಪ್ರತಿನಿಧಿಗಳು 'ಸೌರಶಕ್ತಿಯಲ್ಲಿ ಜಾಗತಿಕ ಸಹಕಾರ-ಹೂಡಿಕೆ ವೇಗಗೊಳಿಸುವ ಒಪ್ಪಂದ'ಕ್ಕೆ ಸಹಿ ಹಾಕಿದರು. 125 ರಾಷ್ಟ್ರಗಳ 550 ಪ್ರತಿನಿಧಿಗಳು ಮತ್ತು 30 ಸಚಿವರು, ಸಹಾಯಕ ಸಚಿವರು ಸೌರಶಕ್ತಿ ಅಧಿವೇಶನದಲ್ಲಿ ಭಾಗವಹಿಸಿದ್ದರು. ಬಳಿಕ ಬ್ಯಾಟರಿ ಸ್ಟೋರೇಜ್ ಘಟಕ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ನವೀಕರಿಸಬಹುದಾದ ಇಂಧನಗಳ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ಭೇಟಿ ಮಾಡಿ ಸೌರಶಕ್ತಿ ಯೋಜನೆಗಳ ಅನುಷ್ಠಾನ, ಪ್ರಗತಿ ಬಗ್ಗೆ ಚರ್ಚಿಸಿದರು.

ಅಂತಾರಾಷ್ಟ್ರೀಯ ಸೌರಶಕ್ತಿ ಒಕ್ಕೂಟದ ಸಹ-ಅಧ್ಯಕ್ಷರಾದ ಫ್ರೆಂಚ್‌ನ ಸಚಿವೆ ಡೆಲೆಗುಯಿ, ಎಲಿಯೊನೋರ್ ಕ್ಯಾರೊಯಿಟ್ ಅವರು ವಿಡಿಯೊ ಭಾಷಣ ಮಾಡಿದರು.

ಆಂಟಿಗುವಾ ಮತ್ತು ಬಾರ್ಬುಡಾ, ಬೆಲೀಜ್, ಕಾಮನ್ವೆಲ್ತ್ ಆಫ್ ಡೊಮಿನಿಕ, ಡೊಮಿನಿಕನ್ ರಿಪಬ್ಲಿಕ್, ಪಪುವಾ ನ್ಯೂಗಿನಿಯ, ಕಿರಿಬಾಟಿ, ನೌರು, ಸುರಿನಾಮ್, ಸೇಂಟ್ ಕೀಟ್ಸ್ ಮತ್ತು ನೆವಿಸ್, ಸಾಲೊಮನ್ ದ್ವೀಪಗಳು, ಮಾಲ್ಡೀವ್ಸ್, ಸೀಶೆಲ್ಸ್, ಶ್ರೀಲಂಕಾ, ಮಾರಿಷಸ್, ಫಿಜಿ, ಮಾರ್ಷಲ್ ದ್ವೀಪಗಳು ಸೌರಶಕ್ತಿ ಯೋಜನೆಗಳಿಗೆ ಬದ್ಧವಾಗಿರುವುದಾಗಿ ಘೋಷಿಸಿದವು.

ದೆಹಲಿಯಲ್ಲಿ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ವಿವಿಧ ದೇಶಗಳ ಪ್ರತಿನಿಧಿಗಳು ಭೇಟಿ ಮಾಡಿ ಸೌರಶಕ್ತಿ ಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ಭಾರತದ ನೆರವು ಕೋರಿದ ದೇಶಗಳು

ಸೂರ್ಯಘರ್ ಯೋಜನೆ ದೇಶದ ಗ್ರಾಮೀಣ ಭಾಗಗಳಲ್ಲಿ ಲಕ್ಷಾಂತರ ಮನೆಗಳಲ್ಲಿ ಬೆಳಕು ಮೂಡಿಸಿದೆ. ಪಿಎಂ ಕುಸುಮ್ ಯೋಜನೆ ಕೃಷಿ ಪಂಪ್‌ಸೆಟ್‌ಗಳಿಗೆ ಪರ್ಯಾಯವಾಗಿ ವಿದ್ಯುಚ್ಛಕ್ತಿ ಒದಗಿಸುತ್ತಿದೆ. ವಿಶ್ವದ 3ನೇ ಅತಿದೊಡ್ಡ ಸೌರಶಕ್ತಿ ಉತ್ಪಾದಕ ರಾಷ್ಟ್ರವಾಗಿರುವ ಭಾರತ 2030ರ ಗುರಿಗೂ 5 ವರ್ಷ ಮುನ್ನೇ ಪಳೆಯುಳಿಕೆ ಇಂಧನಗಳಿಗೆ ಹೊರತಾದ ಮೂಲಗಳಿಂದ ಶೇ.50ರಷ್ಟು ಇಂಧನ ಸಾಮರ್ಥ್ಯ ಹೊಂದಿದೆ. ಭಾರತ ಪ್ರಸ್ತುತ 1.08 ಲಕ್ಷ ಗಿಗಾವಾಟ್‌ಗಿಂತಲೂ ಹೆಚ್ಚು ಸೌರ ವಿದ್ಯುತ್ ಉತ್ಪಾದಿಸುತ್ತಿದೆ. ಸೌರಶಕ್ತಿ ಯೋಜನೆಗಳು 4 ಲಕ್ಷ ಕೋಟಿ ರು. ಮೌಲ್ಯದ ಪಳೆಯುಳಿಕೆ ಆಧರಿಸಿದ ಇಂಧನಗಳ ಆಮದನ್ನು ತಪ್ಪಿಸಿವೆ ಎಂದು ಸಚಿವ ಪ್ರಹ್ಲಾದ್ ಜೋಶಿ ಅವರು ವಿದೇಶಿ ಪ್ರತಿನಿಧಿಗಳಿಗೆ ವಿವರಿಸಿದರು. ಇದರಿಂದ ಪ್ರಭಾವಿತರಾದ 50 ದೇಶಗಳ ಪ್ರತಿನಿಧಿಗಳು ಗ್ರಾಮೀಣ ಪ್ರದೇಶ ಮತ್ತು ಕೃಷಿ ಕ್ಷೇತ್ರಕ್ಕೆ ಬೆಳಕು ಮತ್ತು ಮೋಟಾರ್ ಶಕ್ತಿಯನ್ನು ಒದಗಿಸಿರುವ ಸೂರ್ಯಘರ್ ಮತ್ತು ಪಿಎಂ ಕುಸುಮ್ ಯೋಜನೆಗಳನ್ನು ತಮ್ಮ ರಾಷ್ಟ್ರಗಳಲ್ಲೂ ಅಳವಡಿಸಿಕೊಳ್ಳಲು ನೆರವಾಗುವಂತೆ ಮನವಿ ಮಾಡಿದರು.

ಜಬಲ್‌ಪುರ: ಆರೆಸ್ಸೆಸ್ ಕಾರ್ಯಕಾರಿಣಿ

ಮೂರು ದಿನಗಳ ಕಾರ್ಯಕಾರಿ ಮಂಡಳಿ ಸಭೆ ಆರಂಭ

ಜಬಲಪುರ ಆರ್‌ಎಸ್‌ಎಸ್ ಕಾರ್ಯಕಾರಿಣಿಯಲ್ಲಿ ಸರಸಂಘಚಾಲಕ್ ಮೋಹನ್ ಭಾಗವತ್ ಮತ್ತು ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ನೇತೃತ್ವ.

ಜಬಲ್‌ಪುರ: ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಾರ್ಷಿಕ ರಾಷ್ಟ್ರೀಯ ಕಾರ್ಯಕಾರಿ ಸಭೆ ಜಬಲ್‌ಪುರದಲ್ಲಿ ಗುರುವಾರ ಆರಂಭವಾಗಿದೆ.

ವಿಜಯ ನಗರದ ಕಚ್ನಾರ್ ನಗರದಲ್ಲಿ ನಡೆಯುತ್ತಿರುವ ಸಭೆಯಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕ್ ಡಾ.ಮೋಹನ್ ಭಾಗವತ್ ಮತ್ತು ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ನೇತೃತ್ವ ವಹಿಸಿದ್ದಾರೆ.

3 ದಿನಗಳ ಕಾಲ ನಡೆಯಲಿರುವ ಸಭೆಯಲ್ಲಿ ಸಂಘಚಾಲಕರು, ಕಾರ್ಯವಾಹರು', ಪ್ರಚಾರಕರು' ಮತ್ತು ಸಮಾನ ಮನಸ್ಕ ಸಂಘಟನೆಗಳ ಪ್ರತಿನಿಧಿಗಳು ಸೇರಿದಂತೆ ದೇಶದ ವಿವಿಧೆಡೆಯ 407 ಪ್ರತಿನಿಧಿಗಳು ಭಾಗವಹಿಸಿದ್ದಾರೆ. ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ ಅವರೂ ಭಾಗವಹಿಸುವ ನಿರೀಕ್ಷೆಯಿದೆ.

ಆರ್‌ಎಸ್‌ಎಸ್ ಶತಮಾನೋತ್ಸವ ವರ್ಷ ಆಚರಣೆ ಹಿನ್ನೆಲೆ ದೇಶಾದ್ಯಂತ ಹಿಂದೂ ಸಮ್ಮೇಳನಗಳನ್ನು ಆಯೋಜಿಸುವ ಕುರಿತು ಸಭೆಯಲ್ಲಿ ಗುರುವಾರ ಚರ್ಚಿಸಲಾಗಿದೆ. ದೇಶಾದ್ಯಂತ 1 ಲಕ್ಷಕ್ಕೂ ಹೆಚ್ಚು ಹಿಂದೂ ಸಮ್ಮೇಳನಗಳನ್ನು ನಡೆಸುವ ಗುರಿ ಇಟ್ಟುಕೊಳ್ಳಲಾಗಿದೆ. ಅಲ್ಲದೇ ಶ್ರೀ ಗುರು ತೇಜ್ ಬಹದ್ದೂರ್ ಅವರ 350ನೇ ಹುತಾತ್ಮ ವಾರ್ಷಿಕೋತ್ಸವ ಮತ್ತು ಬಿರ್ಸಾ ಮುಂಡಾ ಅವರ 150ನೇ ಜನ್ಮ ವಾರ್ಷಿಕೋತ್ಸವ ಆಚರಣೆ ಸೇರಿದಂತೆ ಪ್ರಮುಖ ವಿಷಯಗಳನ್ನು ಚರ್ಚಿಸಲಾಗುತ್ತದೆ.

ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ಮತ್ತು ಬಾಲಿವುಡ್ ನಟ ಅಸ್ರಾನಿ ಸೇರಿದಂತೆ ಇತ್ತೀಚೆಗೆ ಅಗಲಿದ ವ್ಯಕ್ತಿಗಳಿಗೆ ಮತ್ತು ಪ್ರಕೃತಿ ವಿಕೋಪಗಳಲ್ಲಿ ಸಾವಿಗೀಡಾದವರಿಗೆ ಗುರುವಾರದ ಸಭೆ ಆರಂಭದಲ್ಲಿ ಅಂತಿಮ ನಮನ ಸಲ್ಲಿಸಲಾಯಿತು.

ಕೇಂದ್ರ ಸರಕಾರ 2021ರಲ್ಲಿ ನ.15ರಂದು ಬಿರ್ಸಾ ಮುಂಡಾ ಜನ್ಮದಿನವನ್ನು ಜಂಜಾಟಿಯ ಗೌರವ್ ದಿವಸ್ ಎಂದು ಘೋಷಿಸಿದೆ.

ಒತ್ತೆಯಾಳು ಮಕ್ಕಳ ರಕ್ಷಣೆ: ಆರೋಪಿ ಗುಂಡೇಟಿಗೆ ಬಲಿ

ಮುಂಬೈ: ಮುಂಬೈನ ಪೊವೈ ಪ್ರದೇಶದಲ್ಲಿ ಗುರುವಾರ ಭಾರೀ ಆತಂಕಕ್ಕೆ ಕಾರಣವಾಗಿದ್ದ 17 ಮಕ್ಕಳ ಒತ್ತೆಯಾಳು ಪ್ರಕರಣದಲ್ಲಿ ಪೊಲೀಸರು ಸಿನಿಮೀಯ ರೀತಿ ಮಿಂಚಿನ ಕಾರ್ಯಾಚರಣೆ ನಡೆಸಿ ಮಕ್ಕಳನ್ನು ರಕ್ಷಿಸಿದ್ದಾರೆ. ಸ್ಟುಡಿಯೊ ಒಳಕ್ಕೆ ಕ್ಷಿಪ್ರವಾಗಿ ಪ್ರವೇಶಿಸಿದ ಪೊಲೀಸರು ಏರ್‌ಗನ್ ಹಿಡಿದಿದ್ದ ಆರೋಪಿಗೆ ಗುಂಡಿಕ್ಕಿದ್ದಾರೆ. ಬಳಿಕ ಆರೋಪಿ ಹತನಾಗಿದ್ದಾನೆ.



ಪೊವೈ ಪ್ರದೇಶದಲ್ಲಿರುವ ಬಹುಮಹಡಿ ಕಟ್ಟಡದಲ್ಲಿ ನೆಲ ಮಹಡಿಯಲ್ಲಿನ 'ಆರ್‌ಎ ಸ್ಟುಡಿಯೋ'ಗೆ ವೆಬ್ ಸರಣಿಯ ಆಡಿಷನ್‌ಗೆಂದು 17 ಮಕ್ಕಳು ಬಂದಿದ್ದರು. ಜತೆಗೆ ಇಬ್ಬರು ಪೋಷಕರು ಇದ್ದರು. ಅವರೆಲ್ಲರನ್ನು ರೋಹಿತ್ ಆರ್ಯ ಎಂಬಾತ ಏರ್‌ಗನ್ ಮತ್ತು ಕೆಲವು ರಾಸಾಯನಿಕಗಳನ್ನು ತೋರಿಸಿ ಹೆದರಿಸಿ ಒತ್ತೆಯಾಳಾಗಿಸಿಕೊಂಡಿದ್ದ. ಒತ್ತೆಯಾಳು ಸುದ್ದಿ ತಿಳಿದ ಪೊಲೀಸ್ ತಂಡ ತ್ವರಿತ ಕಾರ್ಯಾಚರಣೆ ನಡೆಸಿತು. ರೋಹಿತ್‌ಗೆ ಗುಂಡಿಕ್ಕಿ, ಮಕ್ಕಳು ಮತ್ತು ಪೋಷಕರನ್ನು ರಕ್ಷಿಸಿತು. ಸ್ಥಳದಲ್ಲಿದ್ದ ಏರ್‌ಗನ್ ಮತ್ತು ಕೆಲ ರಾಸಾಯನಿಕಗಳನ್ನು ವಶಪಡಿಸಿಕೊಂಡಿದೆ.

'ಭಯೋತ್ಪಾದಕನಲ್ಲ. ಒತ್ತೆ ಹಣವನ್ನೂ ಕೇಳುತ್ತಿಲ್ಲ, ಆತ್ಮಹತ್ಯೆ ಮಾಡಿಕೊಳ್ಳುವ ಬದಲು ಹೀಗೆ ಮಾಡಿದ್ದೇನೆ. ಕೆಲ ಜನರ ಜತೆ ಮಾತನಾಡಬೇಕಿದೆ. ಅದನ್ನು ಕಾರ್ಯರೂಪಕ್ಕೆ ತರಲು ಮಕ್ಕಳನ್ನು ಒತ್ತೆಯಾಳಾಗಿಸಿದ್ದೇನೆ' ಎಂದು ರೋಹಿತ್ ಮೊದಲಿಗೆ ವಿಡಿಯೊ ಸಂದೇಶ ಕಳುಹಿಸಿದ್ದ. ಪ್ರಚೋದಿಸಿದರೆ ಸ್ಟುಡಿಯೊಗೆ ಬೆಂಕಿ ಹಚ್ಚುವುದಾಗಿಯೂ ಹೆದರಿಸಿದ್ದ.

ನಮಗೆ ಜಂಗಲ್‌ರಾಜ್ ಬೇಡ: ಬಿಹಾರ ಮತದಾರ

ಪಟನಾ: ಬಿಹಾರ ವಿಧಾನಸಭಾ ಚುನಾವಣೆಯಲ್ಲಿನ ಮೊದಲ ಹಂತದ ಮತದಾನಕ್ಕೆ (ನ.6) ಕೆಲವೇ ದಿನಗಳು ಬಾಕಿ ಇವೆ. ಬಿಹಾರದಲ್ಲಿ ಈಗ ರಾಜಕೀಯ ಜ್ವರದ ತಾಪ ಹೆಚ್ಚುತ್ತಿದೆ. ಮತದಾರರೂ ತಮ್ಮ ಮನದ ಮಾತು ಹೊರಹಾಕುತ್ತಿದ್ದಾರೆ.

ಗುರುವಾರ ಸುದ್ದಿಸಂಸ್ಥೆಯೊಂದಕ್ಕೆ ಭಾವೋದ್ವೇಗದಿಂದ ಪ್ರತಿಕ್ರಿಯೆ ನೀಡಿದ ಯುವ ಮತದಾರರೊಬ್ಬರು, 'ನಮಗೆ ಜಂಗಲ್ ರಾಜ್ ಬೇಡ, ಮಂಗಲ್ ರಾಜ್ಯ ಬೇಕಿದೆ. ಅಂತಹ ಆಡಳಿತ ನೀಡುವುದಕ್ಕೆ ಬಿಜೆಪಿ ಮತ್ತು ಜೆಡಿಯು ನೇತೃತ್ವದ ಸರಕಾರಕ್ಕೆ ಮಾತ್ರ ಸಾಧ್ಯ. ಸಿಎಂ ನಿತೀಶ್ ಕುಮಾರ್ ಅವರಿಗಷ್ಟೇ ಅದು ತಿಳಿದಿದೆ. ಆರ್‌ಜೆಡಿ ಪಕ್ಷದ ಆಡಳಿತ ಕಾಲದ ಜಂಗಲ್‌ರಾಜ್‌ನಿಂದ ನಮಗೆ ಸಾಕುಸಾಕಾಗಿತ್ತು' ಎಂದಿದ್ದಾರೆ.

'ಈ ಬಾರಿ ಯಾವ ಪಕ್ಷ ಅಧಿಕಾರಕ್ಕೆ ಬರಲಿದೆ' ಎಂಬ ಮಾಧ್ಯಮದ ಪ್ರಶ್ನೆಗೆ, 'ಆ ಬಗ್ಗೆ ಯಾವ ಗೊಂದಲವೂ ಇಲ್ಲ. ಈ ಬಾರಿಯೂ ಮತ್ತೆ ನಿತೀಶ್ ಕುಮಾರ್ ನೇತೃತ್ವದ ಸರಕಾರವೇ ರಚನೆಯಾಗುವುದು ಖಚಿತ. ನಮಗೆ ಈ ವಿಚಾರದಲ್ಲಿ ಯಾವುದೇ ಅನುಮಾನವಿಲ್ಲ' ಎಂದು ಮತ್ತೊಬ್ಬ ಮತದಾರರು ಪ್ರತಿಕ್ರಿಯೆ ನೀಡಿದ್ದಾರೆ.

ಆರ್‌ಜೆಡಿ ಮತ್ತು ಕಾಂಗ್ರೆಸ್ ನೇತೃತ್ವದ 'ಮಹಾಘಟಬಂಧನ್' ಒಕ್ಕೂಟ ಮತ್ತು ಬಿಜೆಪಿ ಮತ್ತು ಜೆಡಿಯು ನೇತೃತ್ವದ 'ಎನ್‌ಡಿಎ' ಮೈತ್ರಿಕೂಟ, ಇನ್ನೊಂದೆಡೆ, ಜನ್ ಸುರಾಜ್ ಪಕ್ಷದ ನಾಯಕರು ಬಿರುಸಿನ ಚುನಾವಣಾ ಪ್ರಚಾರ ನಡೆಸಿದ್ದಾರೆ. ಬುಧವಾರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಬಿಜೆಪಿ ನಾಯಕ ಅಮಿತ್ ಶಾ ಚುನಾವಣಾ ಪ್ರಚಾರ ನಡೆಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಗುರುವಾರ ಚುನಾವಣಾ ಪ್ರಚಾರ ಕೈಗೊಂಡಿದ್ದಾರೆ.

1 ತಿಂಗಳು ಡಿಜಿ ಅರೆಸ್ಟ್: ₹1.20 ಕೋಟಿ ಲೂಟಿ

ಪುಣೆಯ 83 ವರ್ಷದ ನಿವೃತ್ತ ಸರಕಾರಿ ನೌಕರನಿಗೆ ಹೃದಯಾಘಾತ-ಸಾವು

ಪುಣೆ: ಭಾರತದಲ್ಲಿ ಸೈಬರ್ ಕ್ರೈಂ ದಿನೇ ದಿನೇ ಹೆಚ್ಚುತ್ತಲೇ ಇದೆ. ಸೈಬರ್ ವಂಚಕರು, ಹಣವಂತ ಹಿರಿಯ ಜೀವಗಳನ್ನೇ ಗುರಿಯಾಗಿಸಿಕೊಂಡು 'ಡಿಜಿಟಲ್ ಅರೆಸ್ಟ್' ಹೆಸರಲ್ಲಿ ಕೋಟಿಗಟ್ಟಲೆ ಹಣ ಲೂಟಿ ಮಾಡುತ್ತಿದ್ದಾರೆ. ಅಂತಹುದೇ ಮತ್ತೊಂದು ಪ್ರಕರಣ ಮಹಾರಾಷ್ಟ್ರದ ಪುಣೆಯಲ್ಲಿ ನಡೆದಿದೆ.

ಎಐ ಸೃಷ್ಟಿಯ ಚಿತ್ರ.

ನಿವೃತ್ತ ಸರಕಾರಿ ನೌಕರ, 83 ವರ್ಷದ ಹಿರಿಯ ಜೀವವನ್ನು ತಿಂಗಳಿಗೂ ಹೆಚ್ಚು ಕಾಲ ಡಿಜಿಟಲ್ ಅರೆಸ್ಟ್ ಮಾಡಿದ್ದ ಸೈಬರ್ ವಂಚಕರು, ವೃದ್ಧನ ವಿವಿಧ ಬ್ಯಾಂಕ್ ಖಾತೆಗಳಿಂದ ಹಂತ ಹಂತವಾಗಿ 1.20 ಕೋಟಿ ರು.ಗಳನ್ನು ತಮ್ಮ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದಾರೆ.

33 ದಿನಗಳ ಕಾಲ ಡಿಜಿಟಲ್ ಅರೆಸ್ಟ್ ಜಾಲಕ್ಕೆ ಸಿಲುಕಿ ಭಾರೀ ಒತ್ತಡಕ್ಕೆ ಒಳಗಾಗಿದ್ದ ಹಿರಿಯ ಜೀವ ಬಹಳವಾಗಿ ಪರಿತಪಿಸಿದ್ದರು. ಅದರ ಜತೆಗೆ ಜೀವಮಾನದ ಗಳಿಕೆಯಲ್ಲಿ ಉಳಿಸಿಟ್ಟಿದ್ದ 1.20 ಕೋಟಿ ರು.ಗಳು ನಷ್ಟವಾದ ಸಂಕಟ, ಆಘಾತ ತಡೆದುಕೊಳ್ಳಲಾಗಿಲ್ಲ. ಅದೇ ಕೊರಗಿನಲ್ಲಿ ಹೃದಯಾಘಾತವಾಗಿ ಜೀವ ಬಿಟ್ಟಿದ್ದಾರೆ.

ನಡೆದಿದ್ದು: ಕೊಲಾಬಾ ಠಾಣೆ ಪೊಲೀಸ್ ಅಧಿಕಾರಿ ಎಂದು ಹೇಳಿಕೊಂಡು ವಿಡಿಯೊ ಕರೆ ಮಾಡಿದ ಸೈಬರ್ ವಂಚಕ ವೃದ್ಧ ದಂಪತಿಯನ್ನು ಹೆದರಿಸಿದ್ದಾನೆ. ನರೇಶ್ ಗೋಯಲ್ ಭಾಗಿಯಾಗಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನಿಮ್ಮ ಹೆಸರೂ ಕಾಣಿಸಿದೆ ಎಂದು ನಿವೃತ್ತ ಸರಕಾರಿ ಅಧಿಕಾರಿಯಾಗಿದ್ದ ವೃದ್ಧರನ್ನು ಹೆದರಿಸಿದ್ದಾನೆ. ನಿವೃತ್ತ ಅಧಿಕಾರಿ ಮೊದಲಿಗೇ ಆರೋಪ ನಿರಾಕರಿಸಿದ್ದಾರೆ. ಬಳಿಕ ವಿಡಿಯೊ ಕರೆಯಲ್ಲಿ ಐಪಿಎಸ್ ಅಧಿಕಾರಿ ವಿಜಯ್ ಖನ್ನಾ ಮತ್ತು ಸಿಬಿಐ ಅಧಿಕಾರಿ ದಯಾ ನಾಯಕ್ ಹೆಸರಲ್ಲಿ ಕಾಣಿಸಿಕೊಂಡ ಇಬ್ಬರು ವಂಚಕರು, ವೃದ್ಧ ದಂಪತಿಗೆ ತಕ್ಷಣವೇ ಬಂಧಿಸುವುದಾಗಿ ಹೆದರಿಸಿ ತಮ್ಮ ಬಲೆಗೆ ಬೀಳಿಸಿಕೊಂಡಿದ್ದಾರೆ.

ಬಳಿಕ ದಂಪತಿಯ ಮೊಬೈಲ್‌ಫೋನ್ ಕ್ಯಾಮೆರಾಗಳನ್ನು ಆನ್‌ನಲ್ಲಿರಿಸಿ 33 ದಿನ ಬಿಟ್ಟೂಬಿಡದೆ ಕಾಡಿದ್ದಾರೆ. ದಂಪತಿ ಮನೆಯಾಚೆ ಹೋಗದಂತೆ, ಯಾರನ್ನೂ ಸಂಪರ್ಕಿಸದಂತೆ 'ಡಿಜಿಟಲ್ ಅರೆಸ್ಟ್' ಹೆಸರಲ್ಲಿ ತಡೆದಿದ್ದಾರೆ. ದಂಪತಿಯ ಬ್ಯಾಂಕ್ ಖಾತೆ ವಿವರ, ಆಧಾರ್ ಸಂಖ್ಯೆ, ಒಟಿಪಿ ಪಡೆದು ಹಲವಾರು ಬಾರಿ ಹಣ ವರ್ಗಾಯಿಸಿಕೊಂಡಿದ್ದಾರೆ. ಇದೇ ನೋವಿನಲ್ಲಿ ವೃದ್ಧರು ಕಳೆದ ವಾರ ಹೃದಯಾಘಾತಕ್ಕೆ ಬಲಿಯಾಗಿದ್ದಾರೆ. ಆ ಬಳಿಕ ವಿದೇಶದಲ್ಲಿದ್ದ ಪುತ್ರಿ ಪುಣೆಗೆ ಬಂದು ತಾಯಿ ಜತೆ ಸೈಬರ್ ಠಾಣೆಗೆ ದೂರು ದಾಖಲಿಸಿದ್ದಾರೆ ಎಂದು ಪುಣೆಯ ಸೈಬರ್ ಪೊಲೀಸ್ ಠಾಣೆ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ಗುರುವಾರ ತಿಳಿಸಿದ್ದಾರೆ.

ಅಮೆಜಾನ್ ಇಂಡಿಯ ಕಂಪನಿಯ ಸಾವಿರ ಕಾರ್ಪೊರೇಟ್ ಉದ್ಯೋಗಿಗಳು ಮನೆಗೆ

ಚೆನ್ನೈ: 'ಅಮೆಜಾನ್ ಇಂಡಿಯ' ಕಂಪನಿ ಜಾಗತಿಕ ಮಟ್ಟದಲ್ಲಿ 14,000 ಕಾರ್ಪೊರೇಟ್ ಹುದ್ದೆಗಳನ್ನು ಕಡಿತಗೊಳಿಸುತ್ತಿದೆ. ಭಾರತದಲ್ಲಿಯೂ 1,000 ಕಾರ್ಪೊರೇಟ್ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ಸಿದ್ಧತೆ ಮಾಡಿಕೊಂಡಿದೆ. ವಿಕಸಿತ ವ್ಯವಹಾರ ಆದ್ಯತೆಗಳಿಗೆ ತಕ್ಕಂತೆ ತಂಡಗಳನ್ನು ಮರುಜೋಡಿಸುವ ಗುರಿ ಇಟ್ಟುಕೊಂಡಿರುವ ಸಂಸ್ಥೆ ಸಿಬ್ಬಂದಿ ಪುನಾರಚನೆ ಭಾಗವಾಗಿ ಉದ್ಯೋಗಿಗಳ ವಜಾ ಕ್ರಮ ಕೈಗೊಳ್ಳುತ್ತಿದೆ ಎಂದು ತಿಳಿದುಬಂದಿದೆ. ವಜಾಗೊಳ್ಳುವ ಉದ್ಯೋಗಿಗೆ 90 ದಿನಗಳವರೆಗಿನ ಪೂರ್ಣ ವೇತನ, ಜತೆಗೆ ವಜಾ ಪ್ಯಾಕೇಜ್ ಸಿಗಲಿದೆ. ಅಲ್ಲದೇ, ಕಂಪನಿಗೆ ಅಗತ್ಯವೆನಿಸಿದಲ್ಲಿ ಮರು ನಿಯೋಜನೆ ಅವಕಾಶ ಇರುತ್ತದೆ ಪಡೆಯುತ್ತಾರೆ ಎಂದು ಕಂಪನಿಯ ಮೂಲಗಳು ತಿಳಿಸಿವೆ. ಅಮೆಜಾನ್ ಇಂಡಿಯದ ಬೆಂಗಳೂರು, ಹೈದರಾಬಾದ್ ಮತ್ತು ಗುರುಗ್ರಾಮ್‌ನಲ್ಲಿ ತಂತ್ರಜ್ಞಾನ, ಉತ್ಪನ್ನ ಮತ್ತು ಕಾರ್ಪೊರೇಟ್ ಕಚೇರಿ ಹೊಂದಿದೆ.

ಸ್ಟಾರ್‌ಲಿಂಕ್ ಸೇವೆ ಪರೀಕ್ಷಾರ್ಥ ಪ್ರಯೋಗ

ಮುಂಬೈ: ವಿಶ್ವದ ನಂ.1 ಸಿರಿವಂತ ಉದ್ಯಮಿ ಎಲಾನ್ ಮಸ್ಕ್ ಒಡೆತನದಲ್ಲಿನ ದೂರಸಂಪರ್ಕ ಕ್ಷೇತ್ರದ ಕಂಪನಿ 'ಸ್ಟಾರ್

ಲಿಂಕ್' ಭಾರತ ಪ್ರವೇಶಿಸಲು ಸಜ್ಜಾಗುತ್ತಿದೆ. ಭಾರತದಲ್ಲಿ ಉಪಗ್ರಹ ಆಧರಿಸಿದ ಬ್ರಾಡ್ ಬ್ಯಾಂಡ್ ಸೇವೆಗಳನ್ನು ಒದಗಿಸುವುದಕ್ಕೆ ಸಿದ್ಧತೆ ಮಾಡಿಕೊಂಡಿರುವ ಸ್ಟಾರ್‌ಲಿಂಕ್, ಮೊದಲಿಗೆ ಗುರುವಾರ-ಶುಕ್ರವಾರ ಮುಂಬೈನಲ್ಲಿ ಪರೀಕ್ಷಾರ್ಥ ಪ್ರಯೋಗ ನಡೆಸುತ್ತಿದೆ. ಈ ಸಂದರ್ಭ ಕೇಂದ್ರ ಸರಕಾರದ ಕಾನೂನು ಜಾರಿ ಪ್ರಾಧಿಕಾರದ ಹಿರಿಯ ಅಧಿಕಾರಿಗಳು ನಿಗಾ ಇರಿಸಲಿದ್ದಾರೆ ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ಕನ್ನಡ ಸಿರಿ ಪ್ರಶಸ್ತಿ ಪ್ರದಾನ ನಾಳೆ

ಬೆಂಗಳೂರು: 70ನೇ ಕನ್ನಡ ರಾಜ್ಯೋತ್ಸವ ಹಿನ್ನೆಲೆ ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆ ಪಿಂಚಣಿದಾರರ ಸಂಘದ ವತಿಯಿಂದ ಕನ್ನಡ ಸಿರಿ ಪ್ರಶಸ್ತಿ, ಪ್ರತಿಭಾ ಶ್ರೀ ಪ್ರಶಸ್ತಿ ಹಾಗೂ ಸಂಘದ ಹಿರಿಯ ಚೇತನರ ಸನ್ಮಾನ ಸಮಾರಂಭವನ್ನು ನ.1ರಂದು ಬೆ.10.30ಕ್ಕೆ ಆಯೋಜಿಸಲಾಗಿದೆ. ಈ ವೇಳೆ ಬಿ.ಆರ್. ಲಕ್ಷ್ಮಣರಾವ್ ಕನ್ನಡ ಸಿರಿ ಪ್ರಶಸ್ತಿ ಹಾಗೂ ಡಾ.ಎಂ.ಎನ್. ವೆಂಕಟಸುಬ್ಬರಾವ್, ಎಚ್.ಎನ್.ಗೋಪಾಲಗೆ ಪ್ರತಿಭಾ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಸಿ.ವಿ.ಶ್ರೀಧರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ಕೆ.ಸಿ.ದೊರೆಸ್ವಾಮಿ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬಿಜೆಪಿ ಮುಖಂಡನ ಪುತ್ರನಿಂದ ಹಲ್ಲೆ



ವಿಜಯಪುರ: ಟೋಲ್ ಹಣ ಪಾವತಿಸಲು ಕೇಳಿದ್ದಕ್ಕೆ ಸಿಬ್ಬಂದಿ ಮೇಲೆ ಬಿಜೆಪಿ ಮುಖಂಡ ವಿಜೂಗೌಡ ಪಾಟೀಲ್ ಪುತ್ರ ಹಲ್ಲೆ ನಡೆಸಿರುವ ಘಟನೆ ವಿಜಯಪುರ-ಕಲಬುರಗಿ ಟೋಲ್‌ನಲ್ಲಿ ನಡೆದಿದೆ. ಬಿಜೆಪಿ ಮುಖಂಡ ವಿಜೂಗೌಡ ಪಾಟೀಲ್ ಅವರ ಪುತ್ರ ಸಮರ್ಥಗೌಡ ಪಾಟೀಲ್ ಹಾಗೂ ಸ್ನೇಹಿತರು ವಿಜಯಪುರದಿಂದ ಕಪ್ಪು ಬಣ್ಣದ ಥಾರ್‌ನಲ್ಲಿ ಸಿಂದಗಿ ಕಡೆ ಹೊರಟಿದ್ದರು. ಈ ವೇಳೆ ಜಿಲ್ಲೆಯ ಕನ್ನೊಳ್ಳಿ ಗ್ರಾಮದ ಬಳಿಯಿರುವ ಟೋಲ್‌ನಲ್ಲಿ ಹಣ ಪಾವತಿಸಲು ಕೇಳಿದ್ದಾರೆ. ಆಗ ಸಮರ್ಥಗೌಡ ನಾನು ವಿಜೂಗೌಡ ಪಾಟೀಲ್ ಪುತ್ರ ಎಂದು ಹೇಳಿದ್ದಾನೆ. ಆಗ ಟೋಲ್ ಸಿಬ್ಬಂದಿ ಯಾವ ವಿಜೂಗೌಡ ಎಂದು ಕೇಳಿದ್ದಾರೆ. ಇದರಿಂದ ಕೋಪಗೊಂಡ ಸಮರ್ಥಗೌಡ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾನೆ. ಸಮರ್ಥಗೌಡ ಮಾತ್ರವಲ್ಲದೇ ಆತನ ಸ್ನೇಹಿತರು ಕೂಡ ಹಲ್ಲೆ ನಡೆಸಿದ್ದಾರೆ. ಇದರಿಂದ ಟೋಲ್ ಸಿಬ್ಬಂದಿ ಹಣ ತೆಗೆದುಕೊಳ್ಳದೇ ಹಾಗಾಯೇ ಅವರನ್ನು ಬಿಟ್ಟು ಕಳುಹಿಸಿದ್ದಾರೆ. ಹಲ್ಲೆ ನಡೆಸಿದ ದೃಶ್ಯಗಳು ಅಲ್ಲಿಯೇ ಇದ್ದ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಸದ್ಯ ಗಾಯಾಳು ಸಂಗಪ್ಪ ಸಿಂದಗಿ ತಾಲೂಕಾಸ್ಪತ್ರೆಗೆ ದಾಖಲಾಗಿದ್ದು, ಟೋಲ್ ಸಿಬ್ಬಂದಿ ದೂರು ದಾಖಲಿಸಲು ಮುಂದಾಗಿದ್ದಾರೆ.

ವಿರಾಮ
ಪ್ರತಿ ಭಾನುವಾರ

2028ರ ಸ್ಪರ್ಧೆಗೆ ಸಿಎಂ ಸಿದ್ದರಾಮಯ್ಯ ಒಲವು, ಆಪ್ತ ಸಚಿವರ, ಶಾಸಕರ ಬೆಂಬಲ

ಕಾಂಗ್ರೆಸ್‌ನಲ್ಲಿ ಸಿದ್ದು ಹೇಳಿಕೆ ತಂದ ಸದ್ದಿಲ್ಲದ ಸಂಚಲನ

ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ಬಹು ಚರ್ಚಿತ 'ನವೆಂಬರ್ ಕ್ರಾಂತಿ' ವಿಚಾರ ನಿಧಾನವಾಗಿ ತಣ್ಣಗಾಗುತ್ತಿದ್ದು ಅನೇಕ ಸಚಿವರು, ಶಾಸಕರ ವಲಯದಲ್ಲಿ ತುಸು ಉತ್ಸಾಹ ಕಾಣಲಾರಂಭಿಸಿದೆ. ರಾಜಕೀಯ ನಿವೃತ್ತಿ ಎನ್ನುತ್ತಿದ್ದ ಸಿದ್ದರಾಮಯ್ಯ ಅವರು ಈಗ ಮುಂದಿನ ಚುನಾವಣೆಯಲ್ಲೂ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದು, ಇದು ಕಾಂಗ್ರೆಸ್‌ನಲ್ಲಿ ಸದ್ದಿಲ್ಲದೆ ರಾಜಕೀಯ ಸಂಚಲನ ಮೂಡಿಸಿದೆ. ಅಷ್ಟೇ ಅಲ್ಲ, ಇಷ್ಟು ದಿನ ರಾಜಕೀಯ ಕ್ರಾಂತಿ ಬಗ್ಗೆ ಚಿಂತಿಸುತ್ತಿದ್ದ ಸಚಿವರು, ಶಾಸಕರು ಇದೀಗ ಮುಂಬರುವ 2028 ಚುನಾವಣೆಯನ್ನು ಗುರಿಯಾಗಿಸಿ ರಾಜಕಾರಣದಲ್ಲಿ ತೊಡಗಿದ್ದಾರೆ. ಸಿದ್ದರಾಮಯ್ಯ ಅವರು ರಾಜಕೀಯ ನಿವೃತ್ತಿಯಾಗಲಿದ್ದು, ಮುಂದಿನ ಚುನಾವಣೆ ವೇಳೆಗೆ ಪಕ್ಷದ ಟಿಕೆಟ್ ಹೋರಾಟ ಮತ್ತು ಟಿಕೆಟ್ ಸಿಕ್ಕರೆ ಗೆಲ್ಲುವುದು ಹೇಗೆ ಎಂದೆಲ್ಲಾ ಯೋಚಿಸುತ್ತಿದ್ದ ಕೆಲವು ಸಚಿವರು, ಶಾಸಕರಲ್ಲಿ ಈಗ ಒಂದು ರೀತಿ ಹುರುಪು ಕಾಣಿಸಿಕೊಂಡಿದೆ. ಆಪ್ತ ಮೂಲಗಳ ಪ್ರಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದು, ಅವರು ಸಕ್ರಿಯ ರಾಜಕಾರಣದಲ್ಲಿ ಇರುತ್ತಾರೆ ಎನ್ನುವುದು ಬಹುತೇಕ ಖಚಿತವಾಗಿದೆ.

ಇದರೊಂದಿಗೆ ಮುಂದಿನ ರಾಜಕೀಯ ಚಿತ್ರಣ ಹೇಗಿರಬಹುದು ಎಂದು ಎಣಿಸಿದ್ದ ಬಹುತೇಕ ರಾಜಕಾರಣಿಗಳ ಲೆಕ್ಕಾಚಾರವೆಲ್ಲಾ ತಲೆಕೆಳಗಾಗುವ ಸಾಧ್ಯತೆ ಇದೆ. ಈ ಬೆಳವಣಿಗೆಯಿಂದ ಸಂಪುಟ ಪುನಾರಚನೆಯಿಂದ ಸಚಿವ ಸ್ಥಾನ ಕೈ ತಪ್ಪುತ್ತದೆ ಎಂದುಕೊಂಡಿದ್ದವರೂ ಮಂತ್ರಿಗಿರಿ ಹೋದರೂ ಪರವಾಗಿಲ್ಲ ಎನ್ನುತ್ತಿದ್ದಾರೆ. ಈ ಸಚಿವರು ಮತ್ತು ಸುಮಾರು 70ಕ್ಕೂ ಹೆಚ್ಚು ಶಾಸಕರಲ್ಲಿ 'ನವೆಂಬರ್ ಕ್ರಾಂತಿ'ಯಾದರೆ ತಮ್ಮ ಗತಿ ಏನು ಎನ್ನುವ ಆತಂಕ ಇತ್ತು, ಜತೆಗೆ ಮುಂದಿನ ಚುನಾವಣೆಯಲ್ಲಿ ತಮ್ಮ ಪರ ಹೋರಾಟಕ್ಕೆ ಸಿದ್ದರಾಮಯ್ಯ ಬರುವರೇ ಎನ್ನುವ ಭೀತಿಯೂ ಇತ್ತು.

ಆದರೆ ಈಗ ಕೆಲವು ಸಚಿವರು, ಹೊಸಬರಿಗೆ ಮತ್ತು ಕೆಲವು ಹಿರಿಯರಿಗೆ ಅವಕಾಶ ಕೊಡುವುದಾದರೆ ಸಚಿವ ಸ್ಥಾನ ತ್ಯಾಗಕ್ಕೂ ಸಿದ್ಧವಾಗಿದ್ದಾರೆ. ಇನ್ನು ಅಚ್ಚರಿ ಎಂದರೆ ಮುಂದಿನ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ಸ್ಪರ್ಧಿಸುವುದಾದರೆ ಎಲ್ಲಾ ರೀತಿಯ ಸಹಕಾರ ನೀಡುವುದಕ್ಕೂ ಸಿದ್ಧ ಎನ್ನುವ ವಾಗ್ದಾನಗಳನ್ನೂ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹೀಗಾಗಿ ರಾಜ್ಯ ಕಾಂಗ್ರೆಸ್‌ನಲ್ಲಿ ಈಗ ನವೆಂಬರ್ ಕ್ರಾಂತಿಗಿಂತ ಮುಂಬರುವ 2028ರ ಚುನಾವಣಾ ರಾಜಕಾರಣದ ಚರ್ಚೆ ಹೆಚ್ಚು ಮಹತ್ವ ಪಡೆದುಕೊಂಡಿದೆ.

ಸಿದ್ದು ಸ್ಪರ್ಧೆ ಇವರಿಗೆ ಏಕೆ ಅನಿವಾರ್ಯ?

ಹೈಕಮಾಂಡ್ ಒಪ್ಪಿದರೆ ನಾನೇ ಮುಖ್ಯಮಂತ್ರಿಯಾಗಿರುತ್ತೇನೆ ಎಂಬ ಹೇಳಿಕೆ ನೀಡಿದ್ದರು. ಇದರಿಂದ ಇನ್ನಷ್ಟು ಗಾಬರಿಗೊಂಡ ಕೆಲವು ಹಿರಿಯ ಸಚಿವರು, ಶಾಸಕರು ಹಾಗೂ ಆಪ್ತ ಮುಖಂಡರು ಸಿದ್ದರಾಮಯ್ಯ ಅವರನ್ನು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಒತ್ತಾಯಿಸಿದ್ದಾರೆ. ಅಷ್ಟೇ ಅಲ್ಲ, ಈ ಬಗ್ಗೆ ಬಹಿರಂಗ ಹೇಳಿಕೆ ನೀಡುವಂತೆ ಕೂಡ ಪೀಡಿಸಿದ್ದಾರೆ ಎನ್ನಲಾಗಿದೆ. ನಾಲ್ಕು ಜಿಲ್ಲೆಗಳನ್ನು ಬಿಟ್ಟರೆ ಮಧ್ಯ ಕರ್ನಾಟಕ ಮತ್ತು ಉತ್ತರದ ಅನೇಕ ಜಿಲ್ಲೆಗಳಲ್ಲಿ ಅನೇಕ ಸಚಿವರು, ಶಾಸಕರಿಗೆ ಹಿಂದುಳಿದವರ್ಗದ ಮತಗಳು ನಿರ್ಣಾಯಕ. ಇವುಗಳು ಲಭಿಸಬೇಕಾದರೆ ಸಿದ್ದರಾಮಯ್ಯ ಸಕ್ರಿಯವಾಗಿರಬೇಕು. ಚುನಾವಣಾ ಪ್ರಚಾರಕ್ಕೆ ಬರಬೇಕು. ಇವರು ಬರುವುದರಿಂದ ಸಚಿವರಾದ ಎಚ್.ಸಿ.ಮಹಾದೇವಪ್ಪ, ಡಾ. ಪರಮೇಶ್ವರ್, ಮುನಿಯಪ್ಪ ಹಾಗೂ ತಿಮ್ಮಾಪುರ ಅವರ ಪ್ರಚಾರಕ್ಕೆ ಬರುತ್ತಾರೆ. ಆಗ ದಲಿತ ಮತಗಳು ಸುಲಭವಾಗಿ ಲಭಿಸಿ, ಗೆಲುವು ಸುಲಭವಾಗುತ್ತದೆ. ಅಲ್ಪಸಂಖ್ಯಾತ ಮುಖಂಡರೂ ಕೈ ಜೋಡಿಸುವುದರಿಂದ ಅವರ ಮತಗಳಿಂದಲೂ ಅನುಕೂಲವಾಗುತ್ತದೆ ಎನ್ನುವುದು ಬಹುತೇಕ ಶಾಸಕರ ಲೆಕ್ಕಾಚಾರ. ಹೀಗಾಗಿ ಕೆಲವು ಸಚಿವರು, ಶಾಸಕರ ಒತ್ತಾಯದ ಮೇಲೆ ಸಿದ್ದರಾಮಯ್ಯ ಅವರು ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸುವ ಇರಾದೆ ವ್ಯಕ್ತಪಡಿಸಿದ್ದಾರೆ ಎಂದು ಆಪ್ತ ಮೂಲಗಳು ಹೇಳಿವೆ.

ಬದಲಾವಣೆ ಮುಂದೆ ಹೀಗಾಗಬಹುದು

ಬಿಹಾರ ಚುನಾವಣೆ ನಂತರ ರಾಜ್ಯ ರಾಜಕಾಣರದಲ್ಲಿ ಸಾಕಷ್ಟು ಬದಲಾವಣೆಗಳು ನಡೆಯುವ ಸಾಧ್ಯತೆಗಳು ದಟ್ಟವಾಗಿದ್ದು ಅದರ ಸ್ವರೂಪ ಹೇಗಿರುತ್ತದೆ ಎನ್ನುವುದನ್ನು ಪಕ್ಷದ ವರಿಷ್ಠರಾದ ರಾಹುಲ್ ಗಾಂಧಿ ಅವರೇ ನಿರ್ಧರಿಸಲಿದ್ದಾರೆ ಎಂದು ಪಕ್ಷದ ಹಿರಿಯರು ತಿಳಿಸಿದ್ದಾರೆ. ಮುಂದೆ ನಡೆಯಬಹುದಾದ ಬದಲಾವಣೆಗಳು ಬಿಹಾರ ರಾಜಕೀಯ ಫಲಿತಾಂಶವನ್ನು ಅವಲಂಬಿಸುತ್ತದೆ ಎನ್ನುವುದಕ್ಕಿಂತ ರಾಜ್ಯದಲ್ಲಿ ಗ್ಯಾರಂಟಿಗಳನ್ನು ಬಳಸಿಕೊಂಡು ಮತ್ತೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕೆನ್ನುವ ಮತ್ತು ಅದಕ್ಕೆ ಪೂರಕ ನಾಯಕತ್ವಗಳನ್ನು ಅವಲಂಬಿಸಿರುತ್ತದೆ ಎಂದು ಎಐಸಿಸಿ ಮೂಲಗಳು ತಿಳಿಸಿವೆ. ಈ ಮಧ್ಯೆ ನ.15ರಂದು ಸಿದ್ದರಾಮಯ್ಯ ಅವರು ಕಲಬುರ್ಗಿಗೆ ಭೇಟಿ ನೀಡಲಿದ್ದು, ಅಲ್ಲಿಂದ ದೆಹಲಿಗೆ ತೆರಳಲಿದ್ದಾರೆ. ಅಲ್ಲಿ ನಡೆಯುವ ಚರ್ಚೆಯ ನಂತರವಷ್ಟೇ ಮುಂದಿನ ರಾಜಕೀಯ ಚಿತ್ರಣ ಸ್ಪಷ್ಟವಾಗಲಿದೆ ಎಂದು ಮುಖ್ಯಮಂತ್ರಿ ಅವರ ಆಪ್ತ ಮೂಲಗಳು ತಿಳಿಸಿವೆ.

ನ್ಯಾಯಾಂಗ ತನಿಖೆ ನಡೆಸಲಿ; ಭ್ರಷ್ಟಾಚಾರ ಆರೋಪಕ್ಕೆ ಸ್ಪಷ್ಟನೆ ಕೊಡಲು ಒತ್ತಾಯ

ಖಾದರ್ ರಾಜೀನಾಮೆಗೆ ಮಂಜುನಾಥ್ ಆಗ್ರಹ

ಶಾಸಕರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶಾಸಕ ಸಿಮೆಂಟ್ ಮಂಜುನಾಥ್ ಸೇರಿದಂತೆ ಬಿಜೆಪಿ ನಾಯಕರು ಮಾತನಾಡಿದರು.

ಬೆಂಗಳೂರು: ವಿಧಾನಸೌಧದ ಸ್ಮಾರ್ಟ್‌ಲಾಕ್ ಅಳವಡಿಕೆ ವಿಚಾರದಲ್ಲಿ ಭ್ರಷ್ಟಾಚಾರ ನಡೆದಿದ್ದು, ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಮಾತ್ರವಲ್ಲದೇ ಸ್ಪೀಕರ್ ಯು.ಟಿ.ಖಾದರ್ ಕೂಡಲೇ ರಾಜೀನಾಮೆ ಕೊಡಬೇಕೆಂದು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಅಧ್ಯಕ್ಷ ಸಿಮೆಂಟ್ ಮಂಜುನಾಥ್ ಒತ್ತಾಯಿಸಿದ್ದಾರೆ.

ಶಾಸಕರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಪೀಕರ್ ಯು.ಟಿ.ಖಾದರ್ ತಮ್ಮ ಕಚೇರಿ ಮೂಲಕ ಶಾಸಕರ ಭವನದ 224 ಕೊಠಡಿಗಳಿಗೆ ಸ್ಮಾರ್ಟ್‌ಲಾಕ್ (ಡೋರ್‌ಲಾಕ್) ಅಳವಡಿಸಿದ್ದಾರೆ. ಶಾಸಕರು ಇದನ್ನು ಕೇಳದಿದ್ದರೂ ಹಾಕಿದ್ದು, ಲಾಕ್ ವೆಚ್ಚ ಮತ್ತು ಬಿಲ್ ಖರ್ಚಿಗೂ ಅಜಗಜಾಂತರ ವ್ಯತ್ಯಾಸವಿದೆ. ಒಂದು ಬೀಗ ಖರೀದಿ ವೆಚ್ಚದಲ್ಲಿ 3 ಲಾಕ್ ಖರೀದಿಸಬಹುದಾದಷ್ಟು ವೆಚ್ಚ ತೋರಿಸಿದ್ದಾರೆ ಎಂದು ಆರೋಪಿಸಿದರು.

ಉತ್ತಮ ಗುಣಮಟ್ಟದ ಸ್ಮಾರ್ಟ್ ಲಾಕ್ ಬೆಲೆ 11,744 ರೂ. ಎಂದು ಅವರು ಮಾರುಕಟ್ಟೆ ದರದ ಕುರಿತು ವಿವರ ಪ್ರದರ್ಶಿಸಿದರು. ಇದಕ್ಕೆ ಇವರು 49,300 ರು. ದರ ವಿಧಿಸಿದ್ದಾರೆ. ಟೆಂಡರ್ ಪ್ರಕ್ರಿಯೆ ಸರಿಯಾಗಿ ನಡೆದಿಲ್ಲ. ಉದ್ದೇಶಪೂರ್ವಕವಾಗಿ ತಮ್ಮ ಜಿಲ್ಲೆಯ ಆತ್ಮೀಯರಿಗೆ ಟೆಂಡರ್ ಕೊಡಿಸಿದ್ದು, ಸುಮಾರು 37,500 ರು. ಹೆಚ್ಚು ಬಿಲ್ ಆಗಿದೆ. ಸಾರ್ವಜನಿಕರ ತೆರಿಗೆ ಹಣ ಅನವಶ್ಯಕವಾಗಿ ದುಂದು ವೆಚ್ಚ ಮಾಡಿ ಅವರ ಕಚೇರಿ ವತಿಯಿಂದ ದೊಡ್ಡ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದರು.

> ಎಲ್ಲ ರೋಗಕ್ಕೂ ಮದ್ದಿದೆ. ಆದರೆ, ಅಸೂಯೆಗೆ ಮದ್ದಿಲ್ಲ. ವಿಧಾನಸಭಾ ಕಾರ್ಯಾಲಯದ ಮೂಲಕ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಬಗ್ಗೆ ಯಾರಿಗಾದರೂ ಸಂಶಯವಿದ್ದರೆ, ಮಾಹಿತಿ ಕೇಳುವುದಿದ್ದರೆ, ಏನಾದರೂ ಹೇಳುವುದಿದ್ದರೆ ನಾಳೆ ಕಚೇರಿಗೆ ಬಂದು ಲಿಖಿತವಾಗಿ ದೂರು ಸಲ್ಲಿಸಲಿ. ಭ್ರಷ್ಟಾಚಾರವಾಗಿರುವುದಕ್ಕೆ ದಾಖಲೆ ಸಲ್ಲಿಸಲಿ.
>
> - ಯು.ಟಿ. ಖಾದರ್
> ವಿಧಾನಸಭಾಧ್ಯಕ್ಷ

ಲಕ್ಷಾಂತರ ರುಪಾಯಿ ಭ್ರಷ್ಟಾಚಾರ ಆಗಿದ್ದು, ಯು.ಟಿ. ಖಾದರ್ ಈ ಕುರಿತು ಸ್ಪಷ್ಟನೆ ಕೊಡಬೇಕಿದೆ. ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರಲ್ಲದೆ, ವಿಧಾನಸಭೆ ಒಳಗಡೆಯೂ ಹಲವು ರೀತಿಯ ದುಂದುವೆಚ್ಚ ಆಗಿದೆ. ಸ್ಮಾರ್ಟ್ ಲಾಕ್‌ಗೆ ಲೀಥಿಯಂ ಬ್ಯಾಟರಿ ಎಂದು ತೋರಿಸಿದ್ದು, ಮಾಮೂಲಿ ಬ್ಯಾಟರಿ ಅಳವಡಿಸುವ ಲಾಕ್ ಹಾಕಿದ್ದು ಸ್ಮಾರ್ಟ್‌ಲಾಕ್ ಅನ್ನು ಪ್ರದರ್ಶಿಸಿದರು.

ಎಸ್‌ಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಕೌತಾಳ ಮಾತನಾಡಿ, ಶಾಸಕ ಪ್ರಿಯಾಂಕ್ ಖರ್ಗೆ ಅವರು ಭೀಮ್ ಆರ್ಮಿ ಎಂಬ ಸಂಘಟನೆ ಹುಟ್ಟುಹಾಕಿ ಚಿತ್ತಾಪುರದಲ್ಲಿ ಆರೆಸ್ಸೆಸ್ ಪಥಸಂಚಲನದ ವಿಷಯದಲ್ಲಿ ಅಡ್ಡಿ ಮಾಡುತ್ತಿದ್ದಾರೆ. ಭೀಮ್ ಆರ್ಮಿ ಎಂಬುದು ಡಾ.ಬಾಬಾಸಾಹೇಬ ಅಂಬೇಡ್ಕರರ ಹೆಸರನ್ನು ಹಾಳು ಮಾಡುವ ಕೆಲಸ ಮಾಡುತ್ತಿದೆ. ಅದರಲ್ಲಿ ದಲಿತ ಸಮುದಾಯ-ಜನಾಂಗದ ಪ್ರತಿನಿಧಿಗಳು ಇಲ್ಲ. ಬೆಂಗಳೂರಿನಲ್ಲಿ ನಿಷೇಧಿತ ಪಿಎಫ್‌ಐ ಸಂಘಟನೆಯ ಮುಖ್ಯಸ್ಥರೇ ಮುಂದೆ ನಿಂತು ಹೋರಾಟ ಮಾಡಿದ್ದಾರೆ. ಚಿತ್ತಾಪುರದಲ್ಲೂ ಅದೇ ಸಂಘಟನೆಯವರು ಹೋರಾಟ ಮಾಡುತ್ತಿದ್ದಾರೆ. ಭೀಮ್ ಆರ್ಮಿ ಹೆಸರನ್ನು ಬದಲಿಸಿ ಅಲ್ಪಸಂಖ್ಯಾತರ ಆರ್ಮಿ ಅಥವಾ ಧರ್ಮಗುರುಗಳ ಹೆಸರನ್ನು ಇಡುವಂತೆ ಎಂದು ಪ್ರಿಯಾಂಕ್ ಖರ್ಗೆಯವರಿಗೆ ತಿಳಿಸಲು ಬಯಸುವುದಾಗಿ ಹೇಳಿದರು.

ಶಾಸಕ ಚಂದ್ರು ಲಮಾಣಿ, ಎಸ್‌ಸಿ ಮೋರ್ಚಾದ ಪ್ರಶಾಂತ್ ಕುಮಾರ್ ಉಪಸ್ಥಿತರಿದ್ದರು.

ಮುಂಬೈ ಮಹಾನಗರ ಪಾಲಿಕೆ ಚುನಾವಣಾ ವೆಚ್ಚ ಮಿತಿ 15 ಲಕ್ಷ ರುಪಾಯಿಗೆ ಏರಿಕೆ

ಮುಂಬೈ: ಸ್ಥಳೀಯ ಸಂಸ್ಥೆ ಚುನಾವಣಾ ವೆಚ್ಚ ಪರಿಷ್ಕರಣೆ

ಮುಂಬೈ: ಮಹಾರಾಷ್ಟ್ರ ರಾಜ್ಯ ಚುನಾವಣಾ ಆಯೋಗವು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಅಭ್ಯರ್ಥಿಗಳ ವೆಚ್ಚದ ಮಿತಿಯನ್ನು ಪರಿಷ್ಕರಿಸಿದೆ. ಎಂಟು ವರ್ಷಗಳ ಅಂತರದ ನಂತರ ಚುನಾವಣಾ ವೆಚ್ಚ ಮಿತಿ ಪರಿಷ್ಕರಣೆ ಮಾಡಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ರಾಜ್ಯದ ಮೂರು ಎ ವರ್ಗದ ಮಹಾನಗರ ಪಾಲಿಕೆಗಳಾದ ಮುಂಬೈ, ಪುಣೆ ಮತ್ತು ನಾಗ್ಪುರಕ್ಕೆ ಪ್ರತಿ ಅಭ್ಯರ್ಥಿಗೆ 15 ಲಕ್ಷ ರು.ಮತ್ತು ಬಿ ವರ್ಗದ ನಗರ ಪಾಲಿಕೆಗಳಾದ ಪಿಂಪ್ರಿ ಚಿಂಚ್‌ವಾಡ್, ನಾಸಿಕ್ ಮತ್ತು ಥಾಣೆಯಲ್ಲಿ ಅಭ್ಯರ್ಥಿಗಳ ವೆಚ್ಚವನ್ನು ತಲಾ 13 ಲಕ್ಷ ರು. ಹೆಚ್ಚಿಸಲಾಗಿದೆ ಎಂದು ಚುನಾವಣಾ ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ.

ಕಲ್ಯಾಣ್ ಡೊಂಬಿವಲಿ, ನವಿ ಮುಂಬೈ, ಛತ್ರಪತಿ ಸಂಭಾಜಿನಗರ ಮತ್ತು ವಸಾಯಿ ವಿರಾರ್‌ನಂತಹ ಸಿ ವರ್ಗದ ನಗರ ಪಾಲಿಕೆಗಳಿಗೆ 11 ಲಕ್ಷ ರು. ಮತ್ತು ಉಳಿದ ಡಿ ವರ್ಗದ 19 ಪುರಸಭೆಗಳಿಗೆ 9 ಲಕ್ಷ ರು. ಮಿತಿಗೊಳಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕೌನ್ಸಿಲ್ ಅಧ್ಯಕ್ಷರ ನೇರ ಚುನಾವಣೆಗೆ ಎ ಕ್ಲಾಸ್ ನಗರ ಪರಿಷತ್‌ಗಳಿಗೆ 15 ಲಕ್ಷ ರು. ಮತ್ತು ಸದಸ್ಯರಿಗೆ 5 ಲಕ್ಷ ರು. ವೆಚ್ಚದ ಮಿತಿ ಇರುತ್ತದೆ. ಬಿ ಕ್ಲಾಸ್ ನಗರ ಪರಿಷತ್‌ಗಳಿಗೆ, ಕೌನ್ಸಿಲ್ ಅಧ್ಯಕ್ಷರ ಚುನಾವಣೆಗೆ 11.25 ಲಕ್ಷ ರು. ಮತ್ತು ಸದಸ್ಯರಿಗೆ 3.5 ಲಕ್ಷ ರು. ವೆಚ್ಚದ ಮಿತಿ ಇರುತ್ತದೆ. ಪರಿಷತ್ತಿನ ಅಧ್ಯಕ್ಷರ ನೇರ ಚುನಾವಣೆಗೆ 7.5 ಲಕ್ಷ ರು. ಮತ್ತು ಸಿ ಕ್ಲಾಸ್ ನಗರ ಪರಿಷತ್‌ಗಳಲ್ಲಿ ಸದಸ್ಯರಿಗೆ 2.5 ಲಕ್ಷ ರು. ವೆಚ್ಚದ ಮಿತಿ ಇರುತ್ತದೆ ಎಂದು ಆಯೋಗ ತಿಳಿಸಿದೆ.

ದೊಡ್ಡ ಮಟ್ಟಕ್ಕೆ ಸಾಮ್ರಾಟ್ ಚೌಧರಿ: ಶಾ

ನಿತೀಶ್ ಕುಮಾರ್ ಸಿಎಂ ಆಗಲ್ಲ ಎಂಬುದು ಅಮಿತ್ ಶಾ ಮಾತಿನರ್ಥವೇ?

ಪಟನಾ: ಸದ್ಯ ಉಪ ಮುಖ್ಯಮಂತ್ರಿಯಾಗಿರುವ ಬಿಜೆಪಿಯ ಮಾಜಿ ರಾಜ್ಯಾಧ್ಯಕ್ಷ ಸಾಮ್ರಾಟ್ ಚೌಧರಿ ಅವರನ್ನು ಬಿಹಾರ ವಿಧಾನಸಭಾ ಚುನಾವಣೆ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ದೊಡ್ಡ ವ್ಯಕ್ತಿಯಾಗಿಸಲಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಹೇಳಿದ್ದಾರೆ. ಆ ಮೂಲಕ ಹಾಲಿ ಸಿಎಂ, ಆರ್‌ಜೆಡಿ ನಾಯಕ ನಿತೀಶ್ ಕುಮಾರ್ ಅವರು ಮತ್ತೊಂದು ಅವಧಿಗೆ ಸಿಎಂ ಆಗುವುದಿಲ್ಲ ಎಂಬ ಸುಳಿವು ನೀಡಿದ್ದಾರೆ.

ಮುಂಗೇರ್ ಜಿಲ್ಲೆಯ ತಾರಾಪುರ ವಿಧಾನಸಭಾ ಕ್ಷೇತ್ರದಲ್ಲಿ ಸಾಮ್ರಾಟ್ ಚೌಧರಿ ಅಭ್ಯರ್ಥಿಯಾಗಿದ್ದು, ಅಲ್ಲಿ ಗುರುವಾರ ಆಯೋಜಿತವಾಗಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಅಮಿತ್ ಶಾ ಮಾತನಾಡಿದರು. ಸಾಮ್ರಾಟ್ ಚೌಧರಿ ಇಲ್ಲಿಯೇ ಜನಿಸಿದವರು. ಈ ಕ್ಷೇತ್ರವನ್ನು ಸಾಮ್ರಾಟ್ ಚೌಧರಿ ಅವರಿಗೆ ಬಿಟ್ಟುಕೊಡುವಂತೆ ಜೆಡಿಯು ಹಾಲಿ ಶಾಸಕ ರಾಜೀವ್ ಸಿಂಗ್ ಅವರಿಗೆ ಮನವೊಲಿಸಿದ್ದೆವು. ತಮ್ಮ ಕ್ಷೇತ್ರದ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ತಾರಾಪುರ ಮತ್ತಿತರ ಕಡೆಗಳ ಜನರು ಮನವಿ ಮಾಡಿದ್ದಾರೆ ಎಂದು ಅಮಿತ್ ಶಾ ಹೇಳಿದರು.

ನಿಮ್ಮದೇ ಕ್ಷೇತ್ರದಲ್ಲಿ ಜನಿಸಿದ ಸಾಮ್ರಾಟ್ ಅವರಿಗೆ ಮತ ನೀಡಿ, ಗೆಲ್ಲಿಸಿದರೆ ಮುಂದೆ ಅವರನ್ನು ಪ್ರಧಾನಿ ನರೇಂದ್ರ ಮೋದಿ ಬಲು ದೊಡ್ಡ ವ್ಯಕ್ತಿಯನ್ನಾಗಿಸುತ್ತಾರೆ ಎಂದು ಅಮಿತ್ ಶಾ ಮತದಾರರ ಗಮನ ಸೆಳೆದರು. ಅಮಿತ್ ಶಾ ಅವರ ಈ ಹೇಳಿಕೆ ಬಹಳ ಕುತೂಹಲಕ್ಕೆ, ಬಗೆ ಬಗೆ ಲೆಕ್ಕಾಚಾರಗಳಿಗೆ ಕಾರಣವಾಗಿದೆ.

ಮೊದಲಿಗೆ ರಾಷ್ಟ್ರೀಯ ಜನತಾ ದಳದಲ್ಲಿದ್ದ ಸಾಮ್ರಾಟ್ ಚೌಧರಿ ಅವರು ದಶಕದ ಹಿಂದೆ ಬಿಜೆಪಿಗೆ ಸೇರಿಕೊಂಡರು. ಆಗಿನಿಂದ ಬಿಜೆಪಿ ಬಿಹಾರದಲ್ಲಿ ಗಣನೀಯ ಪ್ರಮಾಣದಲ್ಲಿ ಮತ ಬ್ಯಾಂಕ್ ಪಡೆದುಕೊಂಡು ಪ್ರಬಲವಾಗಿ ಬೆಳೆಯಲು ಸಾಧ್ಯವಾಯಿತು.

ಬಿಜೆಪಿಗೆ ಈ ಬಾರಿ ಸಿಎಂ ಅವಕಾಶ

ಹಿಂದಿ ಭಾಷೆ ಪ್ರಭಾವದ ಬಿಹಾರ ರಾಜ್ಯದಲ್ಲಿ ಈವರೆಗೂ ಬಿಜೆಪಿ ನಾಯಕರು ಯಾರೂ ಸಿಎಂ ಆಗಲು ಸಾಧ್ಯವಾ ಗಿಲ್ಲ. ಈ ಹಿಂದೆ ಜೆಡಿಯು ಜತೆಗೆ ಸರಕಾರ ರಚಿಸಿದಾಗ ಉಪ ಮುಖ್ಯಮಂತ್ರಿ ಹುದ್ದೆಯಷ್ಟೇ ಬಿಜೆಪಿ ಪಾಲಿಗೆ ಸಿಕ್ಕಿದೆ. ಈ ಬಾರಿ ಆ ಕೊರತೆ ನೀಗುವ ಸಾಧ್ಯತೆ ಇದೆ ಎಂದು ರಾಜಕೀಯ ಪಂಡಿತರು ವಿಶ್ಲೇಷಣೆ ಮಾಡಿದ್ದಾರೆ.

ಭಾರತ-ಚೀನಾ ಗಡಿಯಲ್ಲಿ ದುರ್ಗಮ ರಸ್ತೆ ನಿರ್ಮಾಣ

ದೆಹಲಿ: ಭಾರತ-ಚೀನಾ ಗಡಿಯಲ್ಲಿ ರಸ್ತೆ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿರುವ 'ಗಡಿ ರಸ್ತೆ ನಿರ್ಮಾಣ ಸಂಸ್ಥೆ'(ಬಾರ್ಡರ್ ರೋಡ್ ಆರ್ಗನೈಸೇಷನ್-ಬಿಆರ್‌ಒ) ಮೊದಲ ಹಂತದ ಕಾರ್ಯಯೋಜನೆ ಪೂರ್ಣಗೊಳಿಸಿದೆ.

ಚಮೋಲಿ ಜಿಲ್ಲೆಯ ಸುಮ್ನಾ-ಲ್ಯಾಪ್ತಾಲ್ ಗಡಿ ಭಾಗದಿಂದ ಟೋಪಿದುಂಗಾವರೆಗೆ, 69.69 ಕಿ.ಮೀ. ಉದ್ದದ ರಸ್ತೆಯ ನಿರ್ಮಾಣ ಯೋಜನೆಯಲ್ಲಿ ಪರ್ವತಗಳನ್ನು ಕಡಿದು ಮಣ್ಣು ಸಮತಟ್ಟುಗೊಳಿಸುವ ಮೊದಲ ಹಂತದ ಕಾರ್ಯ ಸದ್ಯ ಮುಗಿದಿದೆ. ಆ ಬಳಿಕ ಜಲ್ಲಿಕಲ್ಲುಗಳ ದಪ್ಪ ಹಾಸುವಿಕೆ ನಡೆಯಲಿದೆ. ಬಳಿಕ ಡಾಂಬರು ಕಾಮಗಾರಿ ನಡೆಸಲಾಗುವುದು ಎಂದು 'ಬಿಆರ್‌ಒ' ಅಧಿಕಾರಿಗಳು ಹೇಳಿದ್ದಾರೆ.

ಅಂದುಕೊಂಡ ಅವಧಿಯಲ್ಲೇ ಉತ್ತಮ ಗುಣಮಟ್ಟದಲ್ಲಿ ರಸ್ತೆಯನ್ನು ಪೂರ್ಣಗೊಳಿಸಲಾಗುವುದು. ರಸ್ತೆ ಕಾಮಗಾರಿಯಲ್ಲಿ 2ನೇ ಹಂತದಲ್ಲಿ ಜಲ್ಲಿ ಕಲ್ಲು ಹಾಕಿದ ಬಳಿಕ ಕಣಿವೆಗೆ ವಾಹನಗಳ ಪ್ರವೇಶಕ್ಕೆ ಅವಕಾಶವಾಗಲಿದೆ ಎಂದು 'ಬಿಆರ್‌ಒ'ದ ಕಮಾಂಡರ್ ಆಗಿರುವ ಕರ್ನಲ್ ಅಂಕುರ್ ಮಹಾಜನ್ ಗುರುವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

4 ವರ್ಷಗಳ ಪರಿಶ್ರಮ: 4 ವರ್ಷಗಳಿಂದ ರಸ್ತೆ ನಿರ್ಮಾಣ ಕೆಲಸ ನಡೆದು ನಂತರ, ಡಾಂಬರೀಕರಣವಾಗಿದೆ. ಭದ್ರತೆಗೆ ಸಂಬಂಧಿಸಿದ ಕೆಲಸಗಳು ಈಗ ಆರಂಭವಾಗಿವೆ. ಈ ರಸ್ತೆ ಸ್ಥಳೀಯ ನಿವಾಸಿಗಳು ಮತ್ತು ಭದ್ರತಾ ಪಡೆಗಳಿಗೆ ಜೀವನಾಡಿಯಾಗಿದೆ. ಕಾರ್ಯತಂತ್ರ ವಿಚಾರದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಹೊಂದಿದೆ ಎಂದರು.

ಜೆಸಿಬಿಗಳನ್ನು ಬಳಸಿ ಪರ್ವತವನ್ನು ಕಡಿದು ಮೊದಲ ಹಂತದಲ್ಲಿ ಕಚ್ಚಾ ರಸ್ತೆ ನಿರ್ಮಿಸಲಾಗಿದೆ.

ಜ್ಯೋತಿರ್ಮಠ-ಮಲಾರಿ-ನೀತಿ ಹೆದ್ದಾರಿಯಿಂದ ಸುಮ್ನಾಗೆ ರಸ್ತೆ ಮೊದಲೇ ಇತ್ತು. ಆದರೆ ಲ್ಯಾಪ್ತಾಲ್ ಮತ್ತು ಟೋಪಿದುಂಗಾ ಪ್ರದೇಶದವರೆಗೂ ರಸ್ತೆ ನಿರ್ಮಾಣವಾಗಿರಲಿಲ್ಲ. ಹಾಗಾಗಿ, ಈ ದುರ್ಗಮ ಪ್ರದೇಶವನ್ನು ನಡಿಗೆಯಲ್ಲಷ್ಟೇ ಕ್ರಮಿಸಬೇಕಾಗಿತ್ತು. ಈ ಭಾಗದಲ್ಲಿಯೂ ಉತ್ತಮ ರಸ್ತೆ ನಿರ್ಮಾಣ ಕಾರ್ಯ ಆರಂಭಿಸಿದ 'ಬಿಆರ್‌ಒ' ಕಾಮಗಾರಿ ನಿಗದಿತ ವೇಳೆಗೆ ಪೂರ್ಣಗೊಳಿಸಿ ವಾಹನಗಳು ಟೋಪಿದುಂಗಾವರೆಗೂ ಸಾಗಲು ಅನುವು ಮಾಡಿಕೊಡಲಿದೆ.

ರಸ್ತೆ ಸಂಪರ್ಕದ ಮಹತ್ವ

ಲ್ಯಾಪ್ತಾಲ್ ಕಣಿವೆ ಪ್ರದೇಶ ಚೀನಾ ಗಡಿಗೆ ಹೊಂದಿಕೊಂಡಿದೆ. ಚೀನಾ ಸೈನ್ಯದಿಂದ ಹಲವು ಬಾರಿ ಅತಿಕ್ರಮಣಗಳಿಗೆ ಸಾಕ್ಷಿಯಾ ಗಿದೆ. ಈ ಹಿಂದೆ ಪ್ರದೇಶದಲ್ಲಿ ಕುರಿಗಾಹಿಗಳು ಹಾಕಿಕೊಂಡಿರುತ್ತಿದ್ದ ಡೇರೆಗಳನ್ನು ಸಹ ಚೀನಾ ಸೈನಿಕರು ಕಿತ್ತು ಹಾಕಿದ್ದರು. ಆದ್ದರಿಂದ, ಈ ಕಣಿವೆಗೆ ರಸ್ತೆ ಮಾರ್ಗವು ಭಾರತದ ಭದ್ರತಾ ಪಡೆಗಳ ಸಂಚಾರ ದೃಷ್ಟಿಯಿಂದ ಬಹಳ ಮಹತ್ವದ್ದಾಗಿತ್ತು.

2022ರಲ್ಲಿ ದೇಣಿಗೆ ಸಂಗ್ರಹ ಕಾರ್ಯ ಆರಂಭ | ಇಲ್ಲಿಯವರೆಗೆ ಸುಮಾರು 1,500 ಕೋಟಿ ರು. ಖರ್ಚು

ರಾಮಮಂದಿರ ನಿರ್ಮಾಣ ಸಂಗ್ರಹ ದೇಣಿಗೆ 3000 ಕೋಟಿ

ಅಯೋಧ್ಯಾ: ರಾಮ ಮಂದಿರ ನಿರ್ಮಾಣಕ್ಕಾಗಿ ದೇಶ-ವಿದೇಶಗಳಿಂದ ಜನರು 3,000 ಕೋಟಿ ರು.ಗಳಿಗೂ ಹೆಚ್ಚು ದೇಣಿಗೆ ನೀಡಿದ್ದಾರೆ. ಯೋಜನೆಯ ಉಳಿದಿರುವ ಕಾಮಗಾರಿಗಳ ಒಟ್ಟು ವೆಚ್ಚ ಸುಮಾರು 1,800 ಕೋಟಿ ರು.ಎಂದು ಅಂದಾಜಿಸಲಾಗಿದೆ. ಇಲ್ಲಿಯವರೆಗೆ ಸುಮಾರು 1,500 ಕೋಟಿ ರು.ಗಳ ಬಿಲ್ಲಿಂಗ್ ಕಾರ್ಯಗಳು ಪೂರ್ಣಗೊಂಡಿದೆ ಎಂದು ರಾಮ ಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ತಿಳಿಸಿದ್ದಾರೆ.

- ನ.25ರಂದು ಶಿಖರದ ಮೇಲಿನ ಧ್ವಜಾರೋಹಣ
- ಸಮಾರಂಭದಲ್ಲಿ ಮೋದಿ ಮುಖ್ಯ ಅತಿಥಿ
- ಸಮಾರಂಭಕ್ಕೆ ಎಲ್ಲಾ ದಾನಿಗಳಿಗೂ ಆಹ್ವಾನ

ಅಯೋಧ್ಯೆ ರಾಮ ಮಂದಿರ ನಿರ್ಮಾಣಕ್ಕಾಗಿ 2022ರಲ್ಲಿ ದೇಣಿಗೆ ಸಂಗ್ರಹ ಕಾರ್ಯವನ್ನು ಆರಂಭಿಸಲಾಗಿತ್ತು. ಈ ಹಣಕಾಸು ಅಭಿಯಾನವನ್ನು ಪ್ರಾರಂಭಿಸಿದಾಗಿನಿಂದ ದೇಶಾದ್ಯಂತ ಜನರು ಉದಾರವಾಗಿ ಹಣವನ್ನು ದಾನವಾಗಿ ನೀಡಿದ್ದಾರೆ ಎಂದು ಅವರು ತಿಳಿಸಿದರು. ದೇವಾಲಯದ ನಿರ್ಮಾಣಕ್ಕೆ ಇಲ್ಲಿಯವರೆಗೆ ಸುಮಾರು 1,500 ಕೋಟಿ ರು.ಗಳನ್ನು ಖರ್ಚು ಮಾಡಲಾಗಿದೆ. ದೇವಾಲಯ ಸಂಕೀರ್ಣದಾದ್ಯಂತ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲು 1,800 ಕೋಟಿ ರು.ಗಳಷ್ಟು ಅಂದಾಜು ವೆಚ್ಚವಾಗಲಿದೆ ಎಂದು ಅವರು ಹೇಳಿದರು.

ರಾಮ ಮಂದಿರದ ಆವರಣದಲ್ಲಿ ನವೆಂಬರ್ 25ರಂದು ದೇವಾಲಯದ ಶಿಖರದ ಮೇಲಿನ ಧ್ವಜಾರೋಹಣ ಸಮಾರಂಭ ನಡೆಯಲಿದೆ. ಈ ಸಮಾರಂಭಕ್ಕೆ ಎಲ್ಲಾ ದಾನಿಗಳನ್ನು ಆಹ್ವಾನಿಸಲಾಗುವುದು ಎಂದು ನೃಪೇಂದ್ರ ಮಿಶ್ರಾ ಹೇಳಿದರು. ಧ್ವಜಾರೋಹಣ ಸಮಾರಂಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು 70 ಎಕರೆ ವಿಸ್ತೀರ್ಣದ ದೇವಾಲಯ ಸಂಕೀರ್ಣದಲ್ಲಿರುವ ಶೇಷಾವತಾರ ದೇವಾಲಯ, ಕುಬೇರ ತಿಲ ಮತ್ತು ಸಪ್ತ ಮಂಟಪಕ್ಕೂ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದರು.

2024ರ ಜನವರಿ 22ರಂದು ರಾಮ ದೇವಾಲಯದಲ್ಲಿ ಶ್ರೀರಾಮನ ವಿಗ್ರಹದ ಪ್ರಾಣ ಪ್ರತಿಷ್ಠೆ ಮಾಡಲಾಗಿತ್ತು. ಈ ವೇಳೆ ಪ್ರಧಾನಿ ನರೇಂದ್ರ ಮೋದಿ ಉಪಸ್ಥಿತರಿದ್ದರು. ಮುಂದಿನ ನಡೀಲಿರ್ವ ಧ್ವಜಾರೋಹಣಕ್ಕೆ ಪೂರ್ವಭಾವಿಯಾಗಿ ಬುಧವಾರ ಧ್ವಜಾರೋಹಣ ಪರೀಕ್ಷೆ ನಡೆಸಲಾಗಿದೆ. ದೇವಾಲಯದ ಒಳಗೆ ಏಕಕಾಲದಲ್ಲಿ 5,000ರಿಂದ 8,000 ಭಕ್ತರಿಗೆ ಅವಕಾಶ ಕಲ್ಪಿಸಬಹುದು ಎಂದು ಮಿಶ್ರಾ ಅವರು ತಿಳಿಸಿದ್ದಾರೆ.

ದಕ್ಷಿಣ ನಿರ್ಗಮನಕ್ಕೆ ದರ್ಶನ ಮಾರ್ಗವು ಸುಮಾರು 20 ನಿಮಿಷಗಳನ್ನು ತೆಗೆದುಕೊಳ್ಳುತ್ತದೆ. ಆದರೆ ಸುಗ್ರೀವ್ ಕಿಲಾವರೆಗಿನ ಪೂರ್ಣ ಮಾರ್ಗವು ಸುಮಾರು 40 ನಿಮಿಷಗಳನ್ನು ತೆಗೆದುಕೊಳ್ಳುತ್ತದೆ. 8,000ಕ್ಕೂ ಹೆಚ್ಚು ಜನರನ್ನು ಧ್ವಜಾರೋಹಣ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ರಾಮ ಮಂದಿರಕ್ಕೆ ಭಕ್ತರ ಭೇಟಿಗೆ ಸುಲಭವಾಗುವಂತೆ ಪಾರ್ಕೋಟಾದ ಬಳಿ ಶೂ ಮತ್ತು ಚಪ್ಪಲಿಗಳನ್ನು ಇಡಲು ಮೂರು ಗೊತ್ತುಪಡಿಸಿದ ಸ್ಥಳಗಳನ್ನು ಸ್ಥಾಪಿಸಲಾಗಿದ್ದು, ನವೆಂಬರ್ 5ರೊಳಗೆ ಪಾರ್ಕೋಟಾ ನಿರ್ಮಾಣವನ್ನು ಪೂರ್ಣಗೊಳಿಸಲು ನಿರ್ಧರಿಸಲಾಗಿದೆ ಎಂದು ಅವರು ಹೇಳಿದರು.

ಸನ್ಮಾನ-ಗೌರವ

ನವೆಂಬರ್ 25ರಂದು ನಡೆಯುವ ರಾಮ ದೇವಾಲಯದ ಶಿಖರದ ಮೇಲಿನ ಧ್ವಜಾರೋಹಣ ಸಮಾರಂಭಕ್ಕೆ ಎಲ್ಲಾ ದಾನಿಗಳನ್ನು ಆಹ್ವಾನಿಸಲಾಗುತ್ತಿದೆ. ಧ್ವಜಾರೋಹಣ ಸಮಾರಂಭದ ಅನಂತರ ದೇವಾಲಯ ಸಂಕೀರ್ಣದಲ್ಲಿ ನಡೆಯುವ ಅದ್ದೂರಿ ಕಾರ್ಯಕ್ರಮದಲ್ಲಿ ಯೋಜನೆಗೆ ಸಂಬಂಧಿಸಿದ ಕಂಪೆನಿಗಳು, ಪೂರೈಕೆದಾರರು ಮತ್ತು ಕಾರ್ಮಿಕರನ್ನು ಸನ್ಮಾನಿಸಿ, ಅವರಿಗೆ ಪ್ರಶಂಸನಾ ಪತ್ರಗಳನ್ನು ನೀಡಿ ಗೌರವಿಸಲಾಗುವುದು ಎಂದು ನೃಪೇಂದ್ರ ಮಿಶ್ರಾ ಹೇಳಿದ್ದಾರೆ.

ತ್ರಿಶೂಲ್ ಮಿಲಿಟರಿ ಸಮರಾಭ್ಯಾಸ

ಭಾರತ-ಪಾಕಿಸ್ತಾನ ಗಡಿಯಲ್ಲಿ ಒಟ್ಟು ಹನ್ನೆರಡು ದಿನಗಳ ಕಾಲ ಭಾರತದ ರಕ್ಷಣಾ ಸಾಮರ್ಥ್ಯದ ಪ್ರದರ್ಶನ

ಹೊಸದಿಲ್ಲಿ: ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ಬಳಿಕ ಇದೇ ಮೊದಲ ಬಾರಿಗೆ, ಭಾರತವು ತನ್ನ ರಕ್ಷಣಾ ಪಡೆಗಳ ತ್ರಿ-ಸೇವಾ ಮಿಲಿಟರಿ ವ್ಯಾಯಾಮವನ್ನು ಹಮ್ಮಿಕೊಂಡಿದೆ. ಪಾಕಿಸ್ತಾನ ಗಡಿಯಲ್ಲಿ ಒಟ್ಟು 12 ದಿನಗಳ ಕಾಲ ನಡೆಯಲಿರುವ ತ್ರಿಶೂಲ್ ಮಿಲಿಟರಿ ವ್ಯಾಯಾಮ, ಭಾರತದ ರಕ್ಷಣಾ ಸಾಮರ್ಥ್ಯದ ಪ್ರದರ್ಶನ ಆರಂಭವಾಗಿದೆ.

ಗುರುವಾರ ತ್ರಿಶೂಲ್ ಮಿಲಿಟರಿ ವ್ಯಾಯಾಮ ಆರಂಭವಾಗಿದ್ದು, ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆ ಒಟ್ಟಾಗಿ ಈ ಕವಾಯತಿನಲ್ಲಿ ಭಾಗವಹಿಸಿವೆ. ಇದು ಭಾರತದ ಸಶಸ್ತ್ರ ಪಡೆಗಳ ನಡುವಿನ ಪರಸ್ಪರ ಸಹಕಾರದ ಉದ್ದೇಶವನ್ನು ಈಡೇರಿಸಲಿದೆ, ಅಲ್ಲದೇ ಈ ವ್ಯಾಯಾಮವು ಸಶಸ್ತ್ರ ಪಡೆಗಳ ಯುದ್ಧ ಸನ್ನದ್ಧತೆಯನ್ನು ಪರೀಕ್ಷಿಸುವ ಉದ್ದೇಶವನ್ನೂ ಹೊಂದಿದೆ. ತ್ರಿಶೂಲ್ ಮಿಲಿಟರಿ ವ್ಯಾಯಾಮದಲ್ಲಿ ವಿಶೇಷ ಪಡೆಗಳ ಕಮಾಂಡೋಗಳು, ಕ್ಷಿಪಣಿ ಬ್ಯಾಟರಿಗಳು, ಯುದ್ಧನೌಕೆಗಳು, ಯುದ್ಧ ಟ್ಯಾಂಕ್‌ಗಳು ಮತ್ತು ರಫೇಲ್ ಮತ್ತು ಸುಖೋಯ್ ಸು -30 ಯುದ್ಧ ವಿಮಾನಗಳು ಭಾಗವಹಿಸಲಿವೆ ಎಂದು ರಕ್ಷಣಾ ಇಲಾಖೆ ಮಾಹಿತಿ ನೀಡಿದೆ. ಗುಜರಾತ್ ಮತ್ತು ರಾಜಸ್ಥಾನ ಗಡಿ ಬಳಿ ತ್ರಿಶೂಲ್ ಮಿಲಿಟರಿ ವ್ಯಾಯಾಮ ನಡೆಯಲಿದ್ದು, ಈ ಪ್ರದೇಶವು ಪಾಕಿಸ್ತಾನದ ಗಡಿಗೆ ಹೊಂದಿಕೊಂಡಿರುವುದು ವಿಶೇಷ.

ಗುಜರಾತ್‌ನ ಕಚ್ ಪ್ರದೇಶದ ಬಳಿ ತ್ರಿಶೂಲ್ ಮಿಲಿಟರಿ ವ್ಯಾಯಾಮವು ಹೆಚ್ಚು ಕೇಂದ್ರೀಕೃತವಾಗಿದ್ದು, ಪಾಕಿಸ್ತಾನವು ಭಾರತದ ಈ ಮೆಗಾ ಮಿಲಿಟರಿ ವ್ಯಾಯಾಮದಿಂದ ಅಕ್ಷರಶಃ ಕಂಗಾಲಾಗಿದೆ. ಭಾರತ ಹೇಳುತ್ತಿರುವ ಆಪರೇಷನ್ ಸಿಂಧೂರ 2.0 ಸೇನಾ ಕಾರ್ಯಾಚರಣೆ ಬಗ್ಗೆ ಪಾಕಿಸ್ತಾನ ಈಗ ಗಂಭೀರವಾಗಿ ಯೋಚಿಸುತ್ತಿದೆ.

ಸಮಾಚಾರ ಸಣ್ಣದಲ್ಲ

ಸಮೀಕ್ಷೆ: ಆನ್‌ಲೈನ್ ಸ್ವಯಂ ಘೋಷಣೆ ಅವಧಿ ವಿಸ್ತರಣೆ

ಬೆಂಗಳೂರು: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ರಾಜ್ಯದಲ್ಲಿ ಎಲ್ಲಾ ಜನರ ಹಿಂದುಳಿದ ವರ್ಗಗಳು, ಇತರೆ ಜಾತಿಗಳು, ಅನುಸೂಚಿತ ಜಾತಿ ಮತ್ತು ಪಂಗಡಗಳು ಸೇರಿದಂತೆ ಕೈಗೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು 2025 ರ ಅಕ್ಟೋಬರ್ 31 ರಂದು ಮುಕ್ತಾಯಗೊಳ್ಳಲಿದೆ. ವಿವಿಧ ಕಾರಣಗಳಿಂದಾಗಿ ಸಮೀಕ್ಷೆಯಲ್ಲಿ ಭಾಗವಹಿಸಲು ಸಾಧ್ಯವಾಗದೇ ಇರುವವರಿಗೆ ಅವಕಾಶ ನೀಡುವ ಹಿನ್ನೆಲೆಯಲ್ಲಿ ಆನ್‌ಲೈನ್ https://kscbcselfdeclaration.karnataka.gov.in ಲಿಂಕ್ ಮೂಲಕ ಸಮೀಕ್ಷೆಯಲ್ಲಿ ಸ್ವಯಂ ಪಾಲ್ಗೊಳ್ಳುವ ಅವಧಿಯನ್ನು ನ.10 ರ ವರೆಗೆ ಅಂತಿಮವಾಗಿ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗೆ 8050770004 ನ್ನು ಸಂಪರ್ಕಿಸಿ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿಶ್ವವಾಣಿ ಕ್ಲಬ್ ಹೌಸ್
31.10.2025
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ಶ್ರೀ ಪಿ. ಕೆ ನಂದೀಶ್
ವಿಷಯ
ಶ್ರೀ ಅರಬಿಂದೋ "ಸಾವಿತ್ರಿ"
vishwavani.news

ಮುಜಫರಪುರದಲ್ಲಿ ಜನಸುರಾಜ್‌ನ ಡಾ.ಎ.ಕೆ.ದಾಸ್, ಕಾಂಗ್ರೆಸ್‌ನ ವಿಜಯೇಂದ್ರ ಚೌಧುರಿ, ಬಿಜೆಪಿಯ ರಂಜನ್ ಕುಮಾರ್ ಸ್ಪರ್ಧೆ

ಜಾರ್ಜ್ ಕರ್ಮಭೂಮಿಯಲ್ಲಿ ಡಾಕ್ಟರ್ Vs ಪೇಶೆಂಟ್..!

ಕೇಂದ್ರ ಮಂತ್ರಿ, ಜನಪ್ರಿಯ ನಾಯಕ, ಕರ್ನಾಟಕ ಮೂಲದ ದಿವಂಗತ ಜಾರ್ಜ್ ಫರ್ನಾಂಡೀಸ್ ಅವರ ಕರ್ಮಭೂಮಿ ಬಿಹಾರದ ಮುಜಫರಪುರ. ಈ ನಗರದ ಚಕ್ವಾಸು ಲೇನ್ ನಲ್ಲಿರುವ ಚ್ಯಾಪ್ಮನ್ ಸ್ಕೂಲ್ ಎದುರು ಶ್ರೀಹಾಸ್ಪಿಟಲ್ ಆ್ಯಂಡ್ ಮೆಟರ್ನಿಟಿ ಸೆಂಟರ್ ಎಂಬ ದೊಡ್ಡದಾದ ಖಾಸಗಿ ಆಸ್ಪತ್ರೆ ಇಂದಿದ್ದು, ಡಾ.ಎ.ಕೆ. ದಾಸ್ ಅವರು ಆಸ್ಪತ್ರೆಯ ಮಾಲೀಕ ಮತ್ತು ಆಡಳಿತ ನಿರ್ದೇಶಕರಾಗಿದ್ದಾರೆ. ಡಾ. ದಾಸ್ ಮುಜಫರಪುರದ ಪ್ರಸಿದ್ಧ ವೈದ್ಯರಾಗಿದ್ದು, ಮನೆಮಾತಾಗಿದ್ದಾರೆ. ಜಿಲ್ಲೆಯ ಗಣ್ಯ ವ್ಯಕ್ತಿಗಳು, ರಾಜಕಾರಣಿಗಳು, ಜನಪ್ರತಿನಿಧಿಗಳು ಕೂಡ ಚಿಕಿತ್ಸೆಗಾಗಿ ಡಾ.ಎ.ಕೆ. ದಾಸ್ ಬಳಿಯೇ ಬರುತ್ತಾರೆ.

ಇಂಥವರಲ್ಲಿ ಮುಜಫರಪುರ ವಿಧಾನಸಭೆ ಶಾಸಕ, ಇಂಡಿ ಒಕ್ಕೂಟದ ಅಭ್ಯರ್ಥಿ, ಕಾಂಗ್ರೆಸ್ಸಿನ ವಿಜಯೇಂದ್ರ ಚೌಧುರಿ ಕೂಡ ಒಬ್ಬರು. ಅವರು ಮುಜಫರಪುರ ವಿಧಾನಸಭೆಯಲ್ಲಿ 1995, 2000, 2005 ಮತ್ತು 2020ರಲ್ಲಿ ಸ್ಪರ್ಧಿಸಿ ಶಾಸಕರಾದವರು. ಜನತಾದಳ, ಆರ್.ಜೆ.ಡಿ., ಪಕ್ಷೇತರರಾಗಿ ಹಾಗೂ ನಂತರ ಕಾಂಗ್ರೆಸ್ ಸೇರಿ ಈಗ ಪಕ್ಷದ ಪ್ರಮುಖ ಮುಖಂಡರಾಗಿದ್ದಾರೆ. ಡಾ.ಎ.ಕೆ. ದಾಸ್ ಮತ್ತು ವಿಜಯೇಂದ್ರ ಚೌಧುರಿ ಮಧ್ಯೆ ವೈದ್ಯ-ರೋಗಿ ಸಂಬಂಧವಿದೆ. ಆದರೆ ಬಿಹಾರ ಚುನಾವಣಾ ಅಖಾಡದಲ್ಲಿ ಪ್ರಶಾಂತ್ ಕಿಶೋರ್ (ಪಿ.ಕೆ) ಪ್ರವೇಶವಾದ ಪರಿಣಾಮ ಮುಜಫರಪುರದಲ್ಲಿ ಡಾಕ್ಟರ್ ಮತ್ತು ಪೇಶೆಂಟ್ ಮಧ್ಯೆಯೇ ಚುನಾವಣಾ ಕದನ ಏರ್ಪಟ್ಟಿದೆ.

ಸೂಕ್ತ ಅಭ್ಯರ್ಥಿಗಳಿಗಾಗಿ ಶೋಧ ನಡೆಸುತ್ತಿದ್ದ ಜನ ಸುರಾಜ್ ತಂಡ ಡಾ. ದಾಸ್ ಅವರನ್ನು ಸಂಪರ್ಕಿಸಿ, ಪಕ್ಷದಿಂದ ಟಿಕೆಟ್ ನೀಡಿದೆ. ರಾಜಕಾರಣಕ್ಕೆ ಬರುವ ಉದ್ದೇಶವಿರದಿದ್ದರೂ, ಪ್ರಶಾಂತ್ ಕಿಶೋರ್ ತಂಡ ಸಂಪರ್ಕಿಸಿ, ಆಹ್ವಾನ ನೀಡಿದ್ದರಿಂದ ಹೊಸ ಸಾಹಸಕ್ಕೆ ಡಾಕ್ಟರ್ ಕೈ ಹಾಕಿದ್ದಾರೆ. ಚಿಕಿತ್ಸೆ ಕೊಡುವ ವೈದ್ಯರು ಮತ್ತು ಚಿಕಿತ್ಸೆ ಪಡೆಯುವ ರೋಗಿ ಇಬ್ಬರೂ ಕಣದಲ್ಲಿರುವುದರಿಂದ ಇಬ್ಬರೂ ವೃತ್ತಿ ಘನತೆ ಉಳಿಸಿಕೊಂಡೇ ಪ್ರಚಾರಭಿಯಾನಗಳನ್ನು ನಡೆಸುತ್ತಿದ್ದು, ಜನಸಂಬಂಧಿ ವಿಚಾರಗಳನ್ನು ಮುಂದಿಟ್ಟು ಮತ ಕೇಳುತ್ತಿದ್ದಾರೆ. ಯಾರ ಬಗ್ಗೆಯೂ ವೈಯಕ್ತಿಕವಾಗಿ ಮಾತನಾಡುವುದು ನಮ್ಮ ಉದ್ದೇಶವೇ ಅಲ್ಲ, ಮತದಾರರ ಜಾತಿ ಮುಖ್ಯವಲ್ಲ, ನಾನು ಚಿಕಿತ್ಸೆ ನೀಡುವಾಗ ಮುಸ್ಲಿಂ, ಹಿಂದು, ಕ್ರಿಶ್ಚಿಯನ್ ಅಥವಾ ಬೇರೆ ಬೇರೆ ಜಾತಿಗಳನ್ನು ನೋಡುವುದಿಲ್ಲ. ಹೀಗಾಗಿ ಮತ ಹಾಕುವಾಗ ನನ್ನ ಜಾತಿ ಯಾವುದು ಎಂಬುದು ಏಕೆ ಮುಖ್ಯವಾಗುತ್ತದೆ ಎಂದು ಡಾ. ದಾಸ್ 'ವಿಶ್ವವಾಣಿ' ಜತೆ ಅನಿಸಿಕೆ ಹಂಚಿಕೊಂಡರು.

ಮುಜಫರಪುರದ ಹಳೆ ತಲೆಮಾರು ಜಾರ್ಜ್ ಫರ್ನಾಂಡೀಸ್‌ರನ್ನು ಈಗಲೂ ಸ್ಮರಿಸುತ್ತದೆ ಮತ್ತು ಅಂತಹ ಮಹಾನ್ ನಾಯಕ ಮತ್ತೆ ಬರಲೇ ಇಲ್ಲ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸುತ್ತಾರೆ. ಜಾರ್ಜ್ ರಾಜಕೀಯ ಜೀವನದ ಉತ್ತುಂಗದಲ್ಲಿದ್ದಾಗ ನಾವು ಸಣ್ಣವರಾಗಿದ್ದೆವು, ನನ್ನ ಪ್ರಚಾರದಲ್ಲೂ ಅವರ ಹೆಸರನ್ನು ಬಳಸುತ್ತೇನೆ. ಅವರು ಬದಲಾವಣೆ ಹಾಗೂ ಅಭಿವೃದ್ಧಿಗಾಗಿ ಕೆಲಸ ಮಾಡಿ ಜನಮನ ಗೆದ್ದರು. ನಾನು ಕೂಡ ಅವರಂತೆ ಬದಲಾವಣೆಯನ್ನೇ ಬಯಸುತ್ತಿದ್ದೇನೆ. ಅದನ್ನೇ ಮನದಟ್ಟು ಮಾಡುವ ಯತ್ನ ಮಾಡುತ್ತಿದ್ದೇನೆ ಎನ್ನುತ್ತಾರೆ ಡಾ. ದಾಸ್.

ಜನ ಸುರಾಜ್ ಪಕ್ಷ ಅಥವಾ ಅಭ್ಯರ್ಥಿಗಳು ಜಾತೀಯ ಅಂಕಗಣಿತದಾಚೆ ಯೋಚಿಸಬೇಕು ಎಂದು ವಾದಿಸಿದರೂ, ಜಾತಿಗಣಿತದ ಲೆಕ್ಕಾಚಾರದಲ್ಲೇ ಚುನಾವಣೆ ನಡೆಯುತ್ತದೆ ಎನ್ನುವುದು ವಾಸ್ತವ. ವೈಶ್ಯ ಸಮುದಾಯ ಅತೀ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ವಿಜಯೇಂದ್ರ ಚೌಧುರಿ ರಜಪೂತ ಸಮುದಾಯದವರಾಗಿದ್ದು, ಅವರ ವೈಯಕ್ತಿಕ ವರ್ಚಸ್ಸು ಕೂಡ ಬಿಗಿಯಾಗಿದೆ. ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಸಿಕ್ಕ ಎಳನೀರು ವ್ಯಾಪಾರಿ ದೇವೇಂದ್ರ ಪ್ರಸಾದ್ ಯಾದವ್ ಮತ್ತು ಆತನ ಸ್ನೇಹಿತ ಹರಿ ಸಹಾನಿ ಇಬ್ಬರೂ ಕಾಂಗ್ರೆಸ್ ಅಭ್ಯರ್ಥಿ ಬಗ್ಗೆ ಒಲವು ವ್ಯಕ್ತಪಡಿಸುತ್ತಾರೆ. ಲೋಕಸಭೆ ಚುನಾವಣೆಗೆ ನಾವು ಮೋದಿಯವರ ಜತೆಗಿದ್ದೆವೆ, ಆದರೆ ಈ ಚುನಾವಣೆಯಲ್ಲಿ ಮುಜಫರನಗರಕ್ಕೆ ವಿಜಯೇಂದ್ರ ಸಾಬ್ ಬೇಕು ಎನ್ನುವ ಅವರು, ಬಿಹಾರದಲ್ಲಿ ನಿತೀಶ್ ಸರಕಾರ ಬಂದರೆ ಬೇಸರವಿಲ್ಲ, ನಿತೀಶ್ ಜೀ ಕಾಮ್ ಕಿಯಾ ಹೇ ಎಂದೂ ಹೇಳುತ್ತಾರೆ.

ಕಳೆದ ಬಾರಿ ಬಿಜೆಪಿಯಿಂದ ಭೂಮಿಹಾರ್ ಸಮುದಾಯದ ಸರಕಾರದಲ್ಲಿ ಮಾಜಿ ಸಚಿವರೂ ಆಗಿದ್ದ ಸುರೇಶ್ ಶರ್ಮ ಸ್ಪರ್ಧಿಸಿ, ವಿಜಯೇಂದ್ರ ಚೌಧುರಿ ವಿರುದ್ಧ 6 ಸಾವಿರ ಅಂದಾಜು ಮತಗಳಿಂದ ಸೋತಿದ್ದರು, ಆದರೆ ಈ ಬಾರಿ ಬಿಜೆಪಿಯಿಂದ ರಜಪೂತ ಸಮುದಾಯದ ಮುಜಫರನಗರ ಮಾಜಿ ಜಿಲ್ಲಾಧ್ಯಕ್ಷ ರಂಜನ್ ಕುಮಾರ್‌ಗೆ ಟಿಕೆಟ್ ನೀಡಲಾಗಿದೆ. ಡಾ.ಎ.ಕೆ. ದಾಸ್ ಕಾಯಸ್ಥ (ಲಾಲಾ) ಸಮುದಾಯಕ್ಕೆ ಸೇರಿರುವುದರಿಂದ ಮೂವರೂ ಮೇಲ್ಜಾತಿಯವರು ಎಂಬುದು ಗಮನಾರ್ಹ.

ಬಿಹಾರದ ಮುಜಫರಪುರ ವೃತ್ತ

ಜಾರ್ಜ್ ಇದ್ದ ಮನೆಯಲ್ಲಿ ಚರ್ಚೆ

ಜಾರ್ಜ್ ಫರ್ನಾಂಡೀಸ್ ಸಂಸದರಾಗಿದ್ದಾಗ ಮುಜಫರಪುರದ ಅವರ ಅತ್ಯಾಪ್ತ ಸ್ನೇಹಿತರಾಗಿದ್ದ ಕಮಲೇಶ್ವರ್ ಸಿನ್ಹಾ ಮನೆಯಲ್ಲೇ ವಾಸ್ತವ್ಯವಿರುತ್ತಿದ್ದರು. ಕ್ಷೇತ್ರದಲ್ಲಿ ತಮಗಾಗಿ ಪ್ರತ್ಯೇಕ ಮನೆಯನ್ನೇ ಅವರು ಮಾಡಿಕೊಂಡಿರಲಿಲ್ಲ. ಕ್ಷೇತ್ರದ ಚುನಾವಣೆ ಹಾಗೂ ಜಾತಿ ರಾಜಕಾರಣದ ಬಗ್ಗೆ 'ವಿಶ್ವವಾಣಿ' ಜತೆ ಮಾತನಾಡಿದ ಜಾರ್ಜ್ ವಿಶ್ವಾಸಿಗಳಲ್ಲಿ ಒಬ್ಬರಾಗಿದ್ದ ಧನಂಜಯ್ ಶ್ರೀವಾಸ್ತವ್, ಜನ ಸುರಾಜ್ ಪಕ್ಷದ ಡಾ. ದಾಸ್ ಕಾಯಸ್ಥ ಸಮುದಾಯವರಾಗಿದ್ದರೂ, ಅವರು ಕರ್ಣ ಕಾಯಸ್ಥ ಎಂಬ ಉಪಜಾತಿಗೆ ಸೇರಿದ್ದಾರೆ. ಆ ಉಪಜಾತಿಯ ಸಂಖ್ಯೆ ಇಲ್ಲಿ ಬಹಳ ಕಡಿಮೆ. ಅವರು ವೋಟ್ ಕಟ್ ಮಾಡಬಹುದು, ಆದರೆ ದೊಡ್ಡ ಪರಿಣಾಮ ಬೀರುತ್ತಾರೆ ಎಂದು ಅನಿಸುವುದಿಲ್ಲ. ಎನ್‌ಡಿಎ-ಇಂಡಿ ಮಧ್ಯೆ ಇಲ್ಲಿ ಜಬರ್ದಸ್ತ್ ಫೈಟ್ ಎಂದು ವಿವರಿಸಿದರು.

ಸಿಟಿ ಪಾರ್ಕ್‌ನಲ್ಲಿ ಪ್ರತಿಮೆ

ಮುಜಫರನಗರದ ಸಿಟಿ ಉದ್ಯಾನದಲ್ಲಿ ಜಾರ್ಜ್ ಫರ್ನಾಂಡೀಸ್ ಅವರ ನೆನಪಿಗಾಗಿಯೇ ಅವರ ಪ್ರತಿಮೆಯೊಂದನ್ನು ನಿರ್ಮಾಣ ಮಾಡಲಾಗಿದೆ. 2019ರಲ್ಲಿ ಅಂದಿನ ಉಪ ಮುಖ್ಯಮಂತ್ರಿ, ಬಿಜೆಪಿ ಸುಶೀಲ್ ಕುಮಾರ್ ಮೋದಿ ಪ್ರತಿಮೆ ಲೋಕಾರ್ಪಣೆಗೊಳಿಸಿದ್ದರು. ಈ ಪ್ರತಿಮೆಯ ಎಡಭಾಗದಲ್ಲಿ ಕಾಲೇಜು ಬ್ಯಾಗ್ ಹಾಕಿ ಕೊಂಡಿದ್ದ ಸ್ಥಳೀಯ ಯುವಕ-ಯುವತಿ ಜೋಡಿಯೊಂದು ಆಪ್ತ ಮಾತುಕತೆಯಲ್ಲಿ ತಲ್ಲೀನವಾಗಿತ್ತು. ಪ್ರತಿಮೆ ಎದುರು ನನ್ನೊಂದೊಂದು ಫೋಟೋ ತೆಗೆದ ಆ ಯುವಕನಲ್ಲಿ 'ಇವರು ಯಾರು ಗೊತ್ತಾ?' ಎಂದು ಕೇಳಿದೆ. 'ನಹೀ ಸರ್, ಕೋಯಿ ಫ್ರೀಡಂ ಫೈಟರ್ ಹೇ ಕ್ಯಾ?' ಎಂದು ನನ್ನಲ್ಲೇ ಕೇಳಿದ. 'ಇಲ್ಲಿ ಬರೆದಿದ್ದಾರೆ, ಇಬ್ಬರೂ ಓದಿ..' ಎನ್ನುತ್ತಾ ನಾನು ಮುಂದಕ್ಕೆ ಹೆಜ್ಜೆ ಹಾಕಿದೆ.

ಜನ ಸುರಾಜ್ ಅಭ್ಯರ್ಥಿ ಡಾ.ಎ.ಕೆ.ದಾಸ್

ಜಂಗಲ್‌ರಾಜ್ ಎಲ್ಲಿ ಮುಗಿದಿದೆ? ಇಲ್ಲಿ ಹಾಡಹಗಲು ಈಗಲೂ ಹತ್ಯೆಗಳಾಗುತ್ತಿವೆ. ಬೆಲೆಏರಿಕೆಯಿಂದ ಬಡವ ಹೈರಾಣಾಗಿದ್ದಾನೆ. ಲಾಲೂ ಅಧಿಕಾರದಲ್ಲಿದ್ದಾಗ ಇಷ್ಟೊಂದು ಹಣದುಬ್ಬರ ಇರಲಿಲ್ಲ, ಬಿಹಾರಕ್ಕೆ ತೇಜಸ್ವಿಯೇ ಬೇಕು. ನಾವು ಮೊದಲು, ಈಗ, ನಾಳೆ ಎಂದೆಂದಿಗೂ ಲಾಲ್ಟೇನ್‌ಗೇ (ಆರ್.ಜೆ.ಡಿ.) ವೋಟು ಹಾಕುವವರು.

-ವಿನೋದ್ ಬಾಬಾ ತಿವಾರಿ, ಬಿರೇಂದರ್ ರಾಮ್

ದುಡ್ಡು ಕೇಳುತ್ತಿದ್ದೀರಾ?

'ಡಾಕ್ಟರ್, ನಿಮ್ಮನ್ನು ಭೇಟಿಯಾಗಬೇಕು. ನಾನು ಚುನಾವಣೆ ವರದಿಗಾಗಿ ಬೆಂಗಳೂರಿನಿಂದ ಬಂದಿದ್ದೇನೆ' ಎಂದು ಜನಸುರಾಜ್ ಪಕ್ಷದ ಡಾ.ಎ.ಕೆ. ದಾಸ್ ಅವರಿಗೆ ನಾನು ಫೋನ್ ಮಾಡಿದೆ. 'ಹೌದಾ.. ? ನಾನು ಪ್ರಚಾರದಲ್ಲಿ ಬ್ಯುಸಿಯಾಗಿದ್ದೇನೆ. ಆದರೆ ನೀವು ದುಡ್ಡಿಗಾಗಿ ಇದನ್ನು ಮಾಡುತ್ತಿದ್ದೀರಾ? ನನ್ನಿಂದ ಹಣ ನಿರೀಕ್ಷೆ ಮಾಡುತ್ತಿದ್ದೀರಾ?' ಎಂದು ಡಾಕ್ಟರ್ ಕೇಳಿದ್ದಕ್ಕೆ ಅಚ್ಚರಿಗೊಂಡು, 'ನಾನ್ಯಾಕೆ ದುಡ್ಡಿಗಾಗಿ ಮಾಡಬೇಕು? ಜನರಿಗೆ ಮಾಹಿತಿ ನೀಡಲು, ನಮ್ಮ ಸಂಸ್ಥೆಯಿಂದ ಖರ್ಚು ಮಾಡಿ, ಚುನಾವಣೆ ವರದಿಗಾಗಿ ಬಂದಿದ್ದೇನೆ' ಎಂದು ಉತ್ತರಿಸಿದೆ. 'ಪ್ಲೀಸ್, ತಪ್ಪು ತಿಳಿಯಬೇಡಿ. ಇಲ್ಲಿ ಯೂಟ್ಯೂಬರ್ಸ್, ಟಿವಿ ಮೀಡಿಯಾ, ಕೆಲ ಪತ್ರಿಕೆಯವರು ವರದಿ ಮಾಡುತ್ತೇವೆ ಎನ್ನುತ್ತಾ ನಿತ್ಯವೂ ಹಣ ಕೇಳುತ್ತಿದ್ದಾರೆ. ನಾನು ರೋಸಿ ಹೋಗಿದ್ದೇನೆ. ಹಾಗಾಗಿ ಕೇಳಿದೆಯಷ್ಟೇ' ಎಂದು ರಾತ್ರಿ 8.30ಕ್ಕೆ ಭೇಟಿಗೆ ಸಮಯ ನೀಡಿದರು. ರಾತ್ರಿ 10.30ರ ವೇಳೆಗೆ ಸಿಕ್ಕ ಡಾಕ್ಟರ್, ರಾತ್ರಿ 11.40ಕ್ಕೆ ಮಾತುಕತೆ ಮುಗಿಸಿ, ಇನ್ನೊಂದು ಮೀಟಿಂಗ್ ಇದೆ ಎಂದು ನಗರದ ಲ್ಯಾಂಡ್ ಮಾರ್ಕ್ ಹೊಟೇಲ್‌ನಿಂದ ಹೊರ ನಡೆದರು.

ಬಿಹಾರ ಚುನಾವಣೆ ಕಣದಲ್ಲಿ ಕಾಂಗ್ರೆಸ್ ನಾಯಕ ವಾಗ್ದಾಳಿ

ಇಂದಿರಾ ಗಾಂಧಿಗೆ ಮೋದಿಗಿಂತ ಹೆಚ್ಚು ಧೈರ್ಯವಿತ್ತು: ರಾಹುಲ್

ಪಟನಾ ನಗರದಲ್ಲಿ ಗುರುವಾರ ರೋಡ್ ಷೋ ನಡೆಸಿದ ರಾಹುಲ್ ಗಾಂಧಿ

ನಳಂದಾ: 1971ರಲ್ಲಿ ಬಾಂಗ್ಲಾದೇಶ ವಿಮೋಚನೆ ಯುದ್ಧದ ವೇಳೆ ಭಾರತದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರು ಅಮೆರಿಕಕ್ಕೆ ಹೆದರಿರಲಿಲ್ಲ, ಅದರೆದುರು ತಲೆಬಾಗಲೂ ಇಲ್ಲ. ಆದರೆ ಪ್ರಧಾನಿ ನರೇಂದ್ರ ಮೋದಿ ಹೇಡಿಯಾಗಿದ್ದಾರೆ. ಅವರಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎದುರು ನಿಲ್ಲುವ ಸಾಮರ್ಥ್ಯವೇ ಇಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಾ ಪ್ರಹಾರ ನಡೆಸಿದ್ದಾರೆ.

ನಳಂದಾದಲ್ಲಿ ಮಹಾಘಟಬಂಧನ್ ಪರ ಚುನಾವಣಾ ಪ್ರಚಾರ ನಡೆಸಿದ ರಾಹುಲ್, ಬಾಂಗ್ಲಾ ವಿಮೋಚನಾ ಯುದ್ಧ ಸಂದರ್ಭ ಭಾರತವನ್ನು ಹೆದರಿಸಲು ಅಮೆರಿಕ ವಾಯುಪಡೆ ಮತ್ತು ನೌಕಾಪಡೆಯನ್ನು ಕಳುಹಿಸಿಕೊಟ್ಟಿತ್ತು. ಆದರೆ, ಅಂದು ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ 'ನಿಮ್ಮ ನೌಕಾಪಡೆಗೆ ಭಾರತ ಹೆದರುವುದಿಲ್ಲ, ನೀವು ಏನು ಮಾಡುತ್ತೀರೋ ಮಾಡಿ. ನಾವೇನು ಮಾಡಲಿದ್ದೇವೆ ಅದು ಆಗಿಯೇ ತೀರುತ್ತದೆ ಎಂದಿದ್ದರು ಎಂದು ನೆನಪಿಸಿದರು. ಇಂದಿರಾ ಮಹಿಳೆಯಾಗಿದ್ದರೂ ಅವರಿಗೆ ಹೆಚ್ಚಿನ ಧೈರ್ಯವಿತ್ತು. ಆದರೆ ನರೇಂದ್ರ ಮೋದಿ ಹೇಡಿ, ಅವರಿಗೆ ಅಮೆರಿಕದ ಅಧ್ಯಕ್ಷರನ್ನು ಎದುರಿಸುವ ತಾಕತ್ತು ಇಲ್ಲ. ಟ್ರಂಪ್ 50 ಬಾರಿ ನರೇಂದ್ರ ಮೋದಿ ಅವರನ್ನು ಅವಮಾನಿಸಿದ್ದಾರೆ. ಆಪರೇಷನ್ ಸಿಂದೂರ್ ನಿಲ್ಲಿಸುವಂತೆ ಫೋನ್‌ನಲ್ಲಿ ಮೋದಿಗೆ ಹೇಳಿದ 2 ದಿನದಲ್ಲೇ ಪಾಕ್ ವಿರುದ್ಧ ಯುದ್ಧ ನಿಂತಿದೆ ಎಂದು ಟ್ರಂಪ್ ಹೇಳುತ್ತಾರೆ. ಆದರೆ, ಮೋದಿಗೆ ಧೈರ್ಯವಿದ್ದರೆ ಇಲ್ಲಿನ ಸಭೆಯಲ್ಲೇ 'ಟ್ರಂಪ್ ಹೇಳುವುದು ಸುಳ್ಳು, ಆಪರೇಷನ್ ಸಿಂದೂರ್ ನಿಲ್ಲಿಸಲು ಅವರು ಹೇಳಿರಲಿಲ್ಲ' ಎಂದು ಸ್ಪಷ್ಟವಾಗಿ ಹೇಳಲಿ ಎಂದು ಸವಾಲೆಸೆದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020

ಸಂ.: ಬೆಂಅಪ್ರಾ/ನಯೋಸ/CLU-277/2867/2025-26 ದಿನಾಂಕ: 30.10.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ.ಎಲ್.ಶ್ರೀನಿವಾಸರೆಡ್ಡಿ # 21/1A, ಮನೋಹರ್ ನಿಲಯ, ಲಕ್ಷ್ಮಿ ರಸ್ತೆ, ಶಾಂತಿನಗರ, ಗಣೇಶ ದೇವಸ್ಥಾನದ ಹತ್ತಿರ, ವಿಲ್ಸನ್ ಗಾರ್ಡನ್, ಬೆಂಗಳೂರು-560 027.	ಆನೇಕಲ್	ಸರ್ಜಾಪುರ	ದೊಮ್ಮಸಂದ್ರ	126/1	2-24	ವ್ಯವಸಾಯ ವಲಯ	ವಸತಿ
					141/1	0-32		
					141/2	2-13		
					160/1	1-05		
					161/1	0-17		
					236/1	0-18		
					236/2	3-04		
					ಒಟ್ಟು	10-33		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಾಸದ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಾಸದ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ಜಮೀನಿನಲ್ಲಿ ವಾಸದ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಾಸದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗಿರುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ನೆರೆ ಹಾನಿ: ಕೇಂದ್ರಕ್ಕೆ ಮೊರೆ

← ಮೊದಲಪುಟದಿಂದ

ಕೆಟಿಪಿಪಿ ಮೂಲಕ ಸೇವೆಗಳನ್ನು ಪಡೆಯಲು ಘಟನೋತ್ತರ ಅನುಮೋದನೆ ಹಾಗೂ ವಿಶ್ವಬ್ಯಾಂಕ್ ಜೊತೆ ಯೋಜನೆಯ ಒಪ್ಪಂದಕ್ಕೆ ಸಹಿ ಹಾಕಲು ನಿರ್ಧರಿಸಲಾಗಿದೆ.

ನಾಲ್ಕು ಬಂದರು ಅಭಿವೃದ್ಧಿ: ಕರಾವಳಿಯ ಪ್ರಸ್ತಾವಿತ ಯೋಜನೆಗಳಾಗಿರುವ ರಾಜ್ಯದ ನಾಲ್ಕು ಹಾಲಿ ಬಂದರುಗಳಾದ (1) ಕಾರವಾರ (2) ಹಳೇ ಮಂಗಳೂರು (ಬೇಂಗ್ರೆ ಬದಿ) (3) ಹಳೇ ಮಂಗಳೂರು (ನಗರ ಬದಿಯ) ಮತ್ತು (4) ಮಲ್ಪೆಯ ಬರ್ತ್‌ಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ರಿಪೇರಿ, ಕಾರ್ಯಾಚರಣೆ, ನಿರ್ವಹಣೆ-ವರ್ಗಾವಣೆ ಆಧಾರದಲ್ಲಿ ಅಭಿವೃದ್ಧಿ ಪಡಿಸಿ, ನಿರ್ವಹಿಸಲು ಒಪ್ಪಿಗೆ ಸೂಚಿಸಲಾಗಿದೆ. ಬನಶಂಕರಿಯಲ್ಲಿ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ 30 ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಿವೇಶನ ಹಂಚಿಕೆ ಮಾಡಲು ಅನುಮತಿ, ಮಂಡ್ಯ ಕಾಂಗ್ರೆಸ್ ಭವನಕ್ಕೆ ನಿವೇಶನ, ಕೋಲಾರದಲ್ಲಿ ಹಸಿತ್ಯಾಜ್ಯ ಸಂಸ್ಕರಿಸಲು 9 ಎಕರೆ 38 ಗುಂಟೆ ಜಮೀನು 25 ವರ್ಷದ ಅವಧಿಗೆ ಗುತ್ತಿಗೆ, ಯಾದಗಿರಿ ಜಿಲ್ಲೆ ಶಹಾಪುರ ನಗರಸಭೆಯಲ್ಲಿ ಕನಕ ಭವನ ನಿರ್ಮಾಣಕ್ಕೆ ನಿವೇಶನ, ಮಂಡ್ಯದ ವಿಶ್ವೇಶ್ವರಯ್ಯ ಕಾಲುವೆ ಫಾರ್ಮ್‌ನಲ್ಲಿ ಪ್ರಾರಂಭಿಸಲಾಗಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾಥಮಿಕ ಹಂತಕ್ಕಾಗಿ ರೂ.23.25 ಕೋಟಿ ರು., ಕಾರವಾರದ ಕ್ಯಾನ್ಸರ್ ಕೇರ್ ಘಟಕಕ್ಕೆ ಉಪಕರಣಕ್ಕಾಗಿ 1338.96 ಲಕ್ಷ ಅನುದಾನ ನೀಡಲಾಗಿದೆ.

ಪೊಲೀಸ್ ನೇಮಕಾತಿಗೆ ಪಿಯುಸಿ ಮಾನದಂಡ: ಕೆಎಸ್ ಆರ್‌ಪಿ ಹಾಗೂ ಭಾರತೀಯ ಮೀಸಲು ಪಡೆ (ಐಆರ್‌ಬಿ) ಪೇದೆಗಳ ನೇಮಕಾತಿ ವೇಳೆ ಕನಿಷ್ಠ ವಿದ್ಯಾರ್ಹತೆಯನ್ನು ಎಸ್ ಎಸ್‌ಎಲ್‌ಸಿಯಿಂದ ಪಿಯುಸಿಗೆ ಹೆಚ್ಚಳ ಮಾಡುವುದು ಸೇರಿದಂತೆ ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ ವೃಂದ ಮತ್ತು ನೇಮಕಾತಿ ಕರಡು ನಿಯಮಗಳಿಗೆ ಒಪ್ಪಿಗೆ ನೀಡಲಾಗಿದೆ. ಈ ಕರಡಿಗೆ ಆಕ್ಷೇಪಣೆಗಳನ್ನು ಆಹ್ವಾನಿಸಿ ಮೊದಲು ಪ್ರಕಟಿಸಬೇಕು. ಕರಡು ನಿಯಮಗಳಿಗೆ ಗಂಭೀರ ಆಕ್ಷೇಪಣೆಗಳು ಬಾರದಿದ್ದರೆ ಮತ್ತೊಮ್ಮೆ ಸಂಪುಟಕ್ಕೆ ವಿಷಯವನ್ನು ಮಂಡಿಸದೆ ಅಂತಿಮಗೊಳಿಸಲು ಸಂಪುಟ ಅನುಮೋದಿಸಿದೆ.

ಗ್ರೇಟರ್ ಬೆಂಗಳೂರು ಕ್ರಿಯಾ ಯೋಜನೆಗೆ ಅನುಮೋದನೆ: ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಅನುದಾನದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ 5 ಬೆಂಗಳೂರು ನಗರ ಪಾಲಿಕೆಗಳ ವ್ಯಾಪ್ತಿಯ ವಾರ್ಡ್ ಅಭಿವೃದ್ಧಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗೆ 1055 ಕೋಟಿ ರು. ಹಾಗೂ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆ ಅಡಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ 5 ಬೆಂಗಳೂರು ನಗರ ಪಾಲಿಕೆಗಳಲ್ಲಿನ ಮುಖ್ಯ ಮತ್ತು ಉಪಮುಖ್ಯ ರಸ್ತೆಗಳ ಡಾಂಬರಿಕರಣ ಕಾಮಗಾರಿಗೆ 1241.57 ಕೋಟಿ ರು. ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಭ್ರಷ್ಟ ಯುವರಾಜರಿಬ್ಬರು ಸದ್ಯ ಜಾಮೀನಿನಲ್ಲಿದ್ದಾರೆ: ಮೋದಿ

ಪಟನಾ: ಸದ್ಯ ಬಿಹಾರ ಚುನಾವಣಾ ಕಣದಲ್ಲಿ ಪ್ರಚಾರದಲ್ಲಿ ತೊಡಗಿರುವ ಇಬ್ಬರು ಯುವರಾಜರು ಭ್ರಷ್ಟಾಚಾರದ ರಾಯಭಾರಿಗಳಾಗಿದ್ದಾರೆ. ಸದ್ಯ ಜಾಮೀನಿನ ಮೇಲೆ ಹೊರಗಿದ್ದಾರೆ ಎಂದು ರಾಹುಲ್ ಗಾಂಧಿ ಮತ್ತು ತೇಜಸ್ವಿ ಯಾದವ್‌ರನ್ನು ಗುರಿಯಾಗಿಸಿಕೊಂಡು ಪ್ರಧಾನಿ ನರೇಂದ್ರ ಮೋದಿ ಅಣಕವಾಡಿದ್ದಾರೆ.

ಬಿಹಾರದಲ್ಲಿ ಗುರುವಾರ ಬೃಹತ್ ಚುನಾವಣಾ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಮೋದಿ, ಯುವರಾಜರಿಬ್ಬರೂ ಸುಳ್ಳು ಭರವಸೆಗಳ ಅಂಗಡಿಗಳನ್ನೇ ಈ ಚುನಾವಣೆಗಾಗಿ ತೆರೆದಿಟ್ಟಿದ್ದಾರೆ. ಒಬ್ಬರು ಭಾರತದ ಅತ್ಯಂತ ಭ್ರಷ್ಟ ಕುಟುಂಬದ ಯುವರಾಜನಾದರೆ, ಇನ್ನೊಬ್ಬರು ಬಿಹಾರದ ಕಡುಭ್ರಷ್ಟ ಕುಟುಂಬದ ಯುವರಾಜ. ಇಬ್ಬರೂ ಸಾವಿರಾರು ಕೋಟಿ ರು. ಹಗರಣಗಳಲ್ಲಿ ಜಾಮೀನಿನ ಮೇಲೆ ಹೊರಗೆ ತಿರುಗಾಡಿಕೊಂಡಿದ್ದಾರೆ. ಇಬ್ಬರೂ ನನ್ನ ವಿರುದ್ಧ ಸದಾ ನಿಂದನೆ ಮಾತನಾಡುತ್ತಿದ್ದಾರೆ. ಇಂಥವರಿಂದ ಬೇರೇನು ನಿರೀಕ್ಷಿಸಬಹುದು? ನನ್ನ ಹೆಸರು ಜಪಿಸದಿದ್ದರೆ ಅವರಿಗೆ ಊಟ ಜೀರ್ಣವಾಗದು ಎಂದು ವಾಗ್ದಾಳಿ ನಡೆಸಿದರು. ಮಹಾಘಟಬಂಧನ್ ಪಾಲುದಾರ ಪಕ್ಷಗಳ ನಡುವೆ ಆಳವಾದ ಬಿರುಕುಗಳಿವೆ. ಅಧಿಕಾರದ ದುರಾಸೆಯಿಂದಾಗಿ ಪ್ರಮುಖ ಪಕ್ಷಗಳೆರಡೂ ಒಗ್ಗಟ್ಟಾಗಿ ಇರುವಂತೆ ತೋರಿಸಿಕೊಳ್ಳುತ್ತಿವೆ ಅಷ್ಟೇ. ವಾಸ್ತವದಲ್ಲಿ ಆರ್‌ಜೆಡಿ-ಕಾಂಗ್ರೆಸ್ ಎರಡೂ ಪಕ್ಷಗಳು ನೀರು ಮತ್ತು ಎಣ್ಣೆಯಂತೆ ಎಂದು ವ್ಯಂಗ್ಯವಾಡಿದರು. ಎರಡೂ ಪಕ್ಷಗಳು, ಅಪವಿತ್ರ ಮೈತ್ರಿ ಮಾಡಿಕೊಂಡಿವೆ ಎಂದು ಟೀಕಿಸಿದರು.

ಅಧಿವೇಶನಕ್ಕೂ ಮುನ್ನವೇ ಸಂಪುಟ ಸರ್ಜರಿಗೆ ಪಟ್ಟು

← ಮೊದಲಪುಟದಿಂದ

ಪುನಾರಚನೆ ಯಾದರೆ, ಮುಂದಿನ ಕೆಲ ತಿಂಗಳ ಕಾಲ ನಾಯಕತ್ವ ಬದಲಾವಣೆಯ ಚರ್ಚೆಗೆ ಬ್ರೇಕ್ ಬೀಳಲಿದೆ. ಬಳಿಕ ಬಜೆಟ್ ಮಂಡನೆ ಎನ್ನುವ ಕಾರಣಕ್ಕೆ ಮೇವರೆಗೆ 'ನಾಯಕತ್ವ ಬದಲಾವಣೆ' ಎನ್ನುವ ಚರ್ಚೆಗೆ ಬ್ರೇಕ್ ಹಾಕಬಹುದು ಎನ್ನುವುದು ನಾಯಕರ ಲೆಕ್ಕಾಚಾರವಾಗಿದೆ.

ಹಿಗ್ಗುತ್ತಿರುವ ಸಿಎಂ ಆಪ್ತ ಬಳಗ: ಬುಧವಾರದ ಮಿಡ್ ನೈಟ್ ಸಭೆಯಲ್ಲಿನ ಮಹತ್ವದ ಬೆಳವಣಿಗೆ ಎಂದರೆ, ಈ ಹಿಂದಿನ ಡಿನ್ನರ್ ಸಭೆಯಲ್ಲಿ ಡಾ.ಜಿ. ಪರಮೇಶ್ವರ, ಸತೀಶ್ ಜಾರಕಿಹೊಳಿ ಹಾಗೂ ಎಚ್.ಸಿ. ಮಹದೇವಪ್ಪ ಅವರಿಗೆ ಸೀಮಿತವಾಗಿತ್ತು. ಆದರೆ ಈ ಬಾರಿ ಈ ಸಭೆಯಲ್ಲಿ ಹೆಚ್ಚುವರಿ ಇಬ್ಬರು ಸಚಿವರು ಸೇರಿಕೊಂಡಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಅದರಲ್ಲಿಯೂ ಲಿಂಗಾಯತ ಸಮುದಾಯದ ಎಂ.ಬಿ. ಪಾಟೀಲ್ ಹಾಗೂ ನಿಕಟಪೂರ್ವ ಕೆಪಿಸಿಸಿ ಅಧ್ಯಕ್ಷರಾಗಿರುವ ದಿನೇಶ್ ಗುಂಡೂರಾವ್ ಡಿನ್ನರ್ ಮೀಟಿಂಗ್‌ನಲ್ಲಿ ಭಾಗವಹಿಸಿರುವುದು ಸಿದ್ದರಾಮಯ್ಯ ಆಪ್ತ ಸಚಿವರ ಬಳಗವನ್ನು ಹಿಗ್ಗಿಸುವ ಮೂಲಕ ಬಲ ಪ್ರದರ್ಶನ ಮಾಡುತ್ತಿರುವುದು ಸ್ಪಷ್ಟ. ಹಾಗೇ ನೋಡಿದರೆ, ಸಚಿವ ಎಂ.ಬಿ. ಪಾಟೀಲ್ ಮೊದಲಿನಿಂದಲೂ ಸಿದ್ದರಾಮಯ್ಯ ಅವರ ಬಣದೊಂದಿಗೆ ಗುರುತಿಸಿಕೊಂಡಿದ್ದರು. ಆದರೆ ತಟಸ್ಥರಾಗಿದ್ದ ದಿನೇಶ್ ಗುಂಡೂರಾವ್ ಇದೀಗ ಸಿದ್ದರಾಮಯ್ಯ ಬಣದಲ್ಲಿ ಕಾಣಿಸಿಕೊಂಡಿರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಡಿ.ಕೆ.ಶಿವಕುಮಾರ್ ದೆಹಲಿ ಪ್ರವಾಸದಿಂದ ವಾಪಸಾದ ಬಳಿಕ ಈ ಬೆಳವಣಿಗೆ ನಡೆದಿರುವುದು ರಾಜಕೀಯ ವಲಯದಲ್ಲಿ ಹಲವು ರೀತಿಯ ವ್ಯಾಖ್ಯಾನಕ್ಕೆ ಕಾರಣವಾಗಿದೆ.

ಮಹಾಮೌನದ ಹಿಂದಿನ ರಹಸ್ಯವೇನು?

ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಸಚಿವ ಸಂಪುಟ ಸಹೋದ್ಯೋಗಿಗಳ ದಂಡು ಈ ಪ್ರಮಾಣದಲ್ಲಿ ಬ್ಯಾಟ್ ಬೀಸುತ್ತಿದ್ದರೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತ್ರ ಮಹಾಮೌನಕ್ಕೆ ಜಾರಿದ್ದಾರೆ. ಈ ಬಗ್ಗೆ ಯಾರೇ ಪ್ರಶ್ನಿಸಿದರೂ, 'ಮೌನ'ವೊಂದೇ ಉತ್ತರ ಎನ್ನುವ ರೀತಿಯಲ್ಲಿದ್ದಾರೆ. ಕೇವಲ ತಾವಷ್ಟೇ ಅಲ್ಲದೇ, ತಮ್ಮ ಆಪ್ತರಿಗೂ ಮಾತನಾಡಲು ಅವಕಾಶ ನೀಡದಿರುವುದು ಹಲವು ರೀತಿಯ ಚರ್ಚೆಗೆ ಗ್ರಾಸವಾಗಿದೆ. ಆದರೆ ಈ ಮಹಾಮೌನವೂ ಡಿ.ಕೆ.ಶಿವಕುಮಾರ್ ಅವರ ತಂತ್ರಗಾರಿಕೆಯ ಭಾಗ ಎನ್ನುವ ವಿಶ್ಲೇಷಣೆಗಳು ಕೇಳಿಬರುತ್ತಿದೆ. ಸಿದ್ದರಾಮಯ್ಯ ಆಪ್ತರು ಡಿಕೆ ಪ್ರತಿಕ್ರಿಯಿಸಲಿ ಎನ್ನುವ ಕಾರಣಕ್ಕೆ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಆದ್ದರಿಂದ ಈಗ ಪ್ರತಿಕ್ರಿಯಿಸಿದರೆ ಸಮಸ್ಯೆಯಾಗುತ್ತದೆ ಎನ್ನುವ ಸ್ಪಷ್ಟನೆ ಡಿಕೆಗಿದೆ. ಈ ಕಾರಣಕ್ಕಾಗಿಯೇ ಯಾವುದೇ ಪ್ರತಿಕ್ರಿಯೆ ನೀಡದೇ ಮೌನವಾಗಿರಲು ತೀರ್ಮಾನಿಸಿದ್ದಾರೆ. ಇದರೊಂದಿಗೆ ದೆಹಲಿ ನಾಯಕರು ನೀಡಿರುವ 'ಆಶ್ವಾಸನೆ'ಯ ಮೇಲೆ ನಂಬಿಕೆಯಿರುವುದರಿಂದ ಏನಾಗಲಿದೆ ಎನ್ನುವುದನ್ನು ಕಾದು ನೋಡೋಣ ಎನ್ನುವ ವಿಶ್ವಾಸದಲ್ಲಿದ್ದಾರೆ. ಆದ್ದರಿಂದ ಯಾವುದೇ ರೀತಿಯ ಪ್ರತಿಕ್ರಿಯೆ ನೀಡದಿರಲು ತೀರ್ಮಾನಿಸಿದ್ದಾರೆ ಎಂದು ತಿಳಿದುಬಂದಿದೆ.

ಸಂಪುಟದಲ್ಲಿ ಅನುದಾನ ಸಮರ

← ಮೊದಲಪುಟದಿಂದ

ಅಲ್ಲದೆ, ಬಡವರ ಅಭಿವೃದ್ಧಿಗೆ ಎಂದು ನಮ್ಮ ಸರಕಾರವಿರುವುದು. ಆದರೆ, ಬೋರ್‌ವೆಲ್ ಹಾಕಿ ವರ್ಷವಾದರೂ ಸಂಪರ್ಕ ನೀಡಿಲ್ಲ. ನಿಮ್ಮ ಇಲಾಖೆ ಸಬೂಬು ಹೇಳ್ತಿದೆ. ನಮಗೆ ಸಾಕಷ್ಟು ದೂರುಗಳು ಬರುತ್ತಿದೆ ಎಂದು ಮಹದೇವಪ್ಪ ಬೇಸರ ವ್ಯಕ್ತಪಡಿಸಿದರಲ್ಲದೆ, ಜನಸಾಮಾನ್ಯರು ನಮ್ಮನ್ನು ಸುಮ್ಮನೆ ಬಿಡುತ್ತಾರಾ? ಮೊದಲು ವಿದ್ಯುತ್ ಸಂಪರ್ಕ ನೀಡಿ ಎಂದು ಗರಂ ಆಗಿ, ಏರು ದನಿಯಲ್ಲೇ ಮಾತನಾಡಿದ್ದರು ಎನ್ನಲಾಗಿದೆ. ಈ ವೇಳೆ ಇಂಧನ ಸಚಿವ ಕೆ.ಜೆ.ಜಾರ್ಜ್ ಈ ವಿಚಾರ ಸಂಬಂಧ ತಾಂತ್ರಿಕ ಕಾರಣ ನೀಡುತ್ತಿದ್ದರು. ಆದರೆ ಸಚಿವ ಜಾರ್ಜ್ ಮಾತಿಗೆ ಒಪ್ಪದ ಮಹದೇವಪ್ಪ ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ಈ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ನಂತರ ಸಿಎಂ ಸಿದ್ದರಾಮಯ್ಯ ಸಮಾಧಾನ ಮಾಡಲು ಯತ್ನಿಸಿದಾಗಲೂ ಮಹದೇವಪ್ಪ ಅವರ ಕೋಪ ತಣ್ಣಗಾದಂತೆ ಕಂಡು ಬಂದಿಲ್ಲ. ನಂತರ ಈ ವಿಚಾರವಾಗಿ ಸಚಿವರಿಬ್ಬರ ಜೊತೆ ಪ್ರತ್ಯೇಕವಾಗಿ ಸಿಎಂ ಮಾತುಕತೆ ನಡೆಸಲು ಸಿದ್ಧತೆ ನಡೆಸಿದ್ದಾರೆ ಎನ್ನಲಾಗಿದೆ.

ಒಳಮೀಸಲಾತಿ ಚರ್ಚೆ ಮುಂದಕ್ಕೆ

ಒಳಮೀಸಲಾತಿ ಬಗ್ಗೆ ಮುಖ್ಯಮಂತ್ರಿ ಸೇರಿದಂತೆ ಸಮಾಜ ಕಲ್ಯಾಣ ಸಚಿವರು, ಕಾನೂನು ಸಚಿವರು ಹಾಗೂ ಕಾರ್ಯದರ್ಶಿಗಳು ಸೇರಿದಂತೆ ಚರ್ಚೆ ನಡೆಸಿ, ಮಸೂದೆ ರೂಪಿಸಲು ಸಾಧ್ಯವಾದರೆ ಸಂಪುಟ ಸಭೆಯಲ್ಲಿ ಮಂಡಿಸಲು ಸೂಚಿಸಲಾಗಿತ್ತು. ಬುಧವಾರ ಸಭೆ ನಡೆಸಲು ಸಾಧ್ಯವಾಗದ ಕಾರಣ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿಲ್ಲ. ಮುಂದಿನ ಸಂಪುಟ ಸಭೆಯಲ್ಲಿ ಈ ಸಂಬಂಧ ಚರ್ಚೆ ನಡೆಸಲು ಉದ್ದೇಶಿಸಲಾಗಿದೆ.

ಗಂಗಾ ಕಲ್ಯಾಣ:ಉಸ್ತುವಾರಿ ಸಚಿವರಿಗೆ ಹೊಣೆ

ಗಂಗಾ ಕಲ್ಯಾಣ ಯೋಜನೆಯಡಿ ಆಯ್ಕೆಯಾದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಫಲಾನುಭವಿ ಗಳಿಗೆ ಕೊಳವೆಬಾವಿ ಕೊರೆಯಲು ಮತ್ತು ಪಂಪ್‌ಸೆಟ್‌ಗಳನ್ನು ಸರಬರಾಜು ಮಾಡಲು 2022-23ನೇ ಸಾಲಿನಲ್ಲಿ ನೊಂದಾಯಿಸಿ ಕೊಂಡಿರುವ ಗುತ್ತಿಗೆದಾರರ ಅವಧಿಯನ್ನು ಮುಂದಿನ ಎರಡು ವರ್ಷಗಳಿಗೆ (2024-25 ಮತ್ತು 2025-26 ಸಾಲಿನ ಗುರಿಗಳಿಗೆ) ಸೀಮಿತಗೊಳಿಸಿ, 2027ನೇ ಜೂನ್ ತಿಂಗಳವರೆಗೆ ವಿಸ್ತರಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅಲ್ಲದೆ ಗಂಗಾಕಲ್ಯಾಣ ಯೋಜನೆ ಮತ್ತು ಇತರ ಸ್ವಯಂ ಉದ್ಯೋಗ ಯೋಜನೆಗಳಡಿ ಫಲಾನುಭವಿಗಳನ್ನು ಆಯಾ ವರ್ಷದ ಅಕ್ಟೋಬರ್ 31ರೊಳಗೆ ಸಂಬಂಧಪಟ್ಟ ಆಯಾ ಕ್ಷೇತ್ರದ ಶಾಸಕರು ಆಯ್ಕೆ ಮಾಡದೇ ಇದ್ದಲ್ಲಿ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಲು ಆಯಾ ಜಿಲ್ಲಾ ಉಸ್ತುವಾರಿ ಸಚಿವರಿಗೆ ವಹಿಸಲು (2025-26ನೇ ಸಾಲಿನ ಗುರಿಗಳನ್ನು ಹೊರತುಪಡಿಸಿ) ಸಚಿವ ಸಂಪುಟ ನಿರ್ಣಯಿಸಿದೆ.

ಬಿಲ ಹುಡುಕುತ್ತಿರುವ ಬುರುಡೆ ಗ್ಯಾಂಗ್

← ಮೊದಲಪುಟದಿಂದ

ತಾವೇ ಕೊಟ್ಟ ಮೂಲ ಪ್ರಕರಣವನ್ನು ರದ್ದುಗೊಳಿಸುವಂತೆ ಬುರುಡೆ ಗ್ಯಾಂಗ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ''ನೂರಾರು ಶವಗಳು, ಬಾಲಕಿಯರ ಶವಗಳು, ಅತ್ಯಾಚಾರ ಗೊಂಡ ಮಹಿಳೆಯರ ಶವಗಳನ್ನು ಚಿನ್ನಯ್ಯ ಹೂತಿದ್ದಾನೆ. ಧರ್ಮಸ್ಥಳ ದೇವಸ್ಥಾನದ ಪ್ರಮುಖರ ಸೂಚನೆ ಮೇರೆ ಚಿನ್ನಯ್ಯ ಮಾಡಿದ್ದಾನೆ'' ಎಂದು ಇದೇ ಬುರುಡೆ ಗ್ಯಾಂಗ್ ದೂರು ದಾಖಲಿಸಿತ್ತು. ಇದೀಗ ಬುರುಡೆ ಗ್ಯಾಂಗ್ ತಮ್ಮ ಈ ಮೂಲ ದೂರನ್ನು ರದ್ದುಗೊಳಿಸುವಂತೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಈ ಮೂಲಕ ಬುರುಡೆ ಗ್ಯಾಂಗ್ ಬಂಧನದಿಂದ ತಪ್ಪಿಸಿಕೊಳ್ಳಲು ಕೊನೆಯ ಪ್ರಯತ್ನವನ್ನು ನಡೆಸುತ್ತಿದೆ. ಶವ ಹೂತ ಪ್ರಕರಣ ಸಂಬಂಧ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದ ನೀಡಿದ್ದ ದೂರನ್ನು ವಜಾಗೊಳಿಸಿ ಎಂದು ಬುರುಡೆ ಗ್ಯಾಂಗ್ ಹೈಕೋರ್ಟ್‌ಗೆ ಮನವಿ ಮಾಡಿದೆ. ಇವರು ಹೈಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ, ಎಸ್‌ಐಟಿ ತನಿಖೆ ಕುರಿತು ಅಸಮಾಧಾನ ವ್ಯಕ್ತಪಡಿಸಿದೆ. ಆರಂಭಿಕ ಹಂತದಲ್ಲಿ ಎಸ್‌ಐಟಿ ತನಿಖೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದ ಇದೇ ಬುರುಡೆ ಗ್ಯಾಂಗ್ ಇದೀಗ ಎಫ್‌ಐಆರ್ ರದ್ದು ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿದೆ.

ನ್ಯಾ. ಸೂರ್ಯಕಾಂತ್ ನೇಮಕಕ್ಕೆ ಆದೇಶ

ದೆಹಲಿ: ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ಭಾರತದ 53ನೇ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆದೇಶ ಹೊರಡಿಸಿದ್ದಾರೆ. 2025ರ ನವೆಂಬರ್ 23ರಂದು ನಿವೃತ್ತಿಯಾಗುವ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿಆರ್ ಗವಾಯಿ ಅವರ ಸ್ಥಾನಕ್ಕೆ ಸೂರ್ಯಕಾಂತ್ ಅವರನ್ನು ನೇಮಿಸಿ ನವೆಂಬರ್ 24ರಿಂದ ಜಾರಿಗೆ ಬರುವಂತೆ ಆದೇಶಿಸಿದ್ದಾರೆ. ಸೂರ್ಯಕಾಂತ್ ಅವರ ಹೆಸರನ್ನು ಸಿಜೆಐ ಬಿ.ಆರ್. ಗವಾಯಿಯವರು ಶಿಫಾರಸು ಮಾಡಿದ್ದರು. ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು, ನ್ಯಾಯ ಮೂರ್ತಿ ಸೂರ್ಯಕಾಂತ್ ಅವರ ನೇಮಕ ವಿಚಾರವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ಕನ್ನಡಮ್ಮನ ದೇವಾಲಯ ಕಂಡೆ ನನ್ನಯ ಕಂಗಳಲಿ...

● ಸುರೇಂದ್ರ ಪೈ, ಭಟ್ಕಳ

ನವೆಂಬರ್ 1 ಬಂತು. ಎಲ್ಲೆಲ್ಲೂ ಕನ್ನಡ ರಾಜ್ಯೋತ್ಸವದ ಕಲರವ. ಈ ಹಬ್ಬವನ್ನು ಆಚರಿಸುವ ಕನ್ನಡಿಗರ ಪಾಲಿಗೆ ಭಾರತಮಾತೆಯ ಹೆಮ್ಮೆಯ ಪುತ್ರಿ ತಾಯಿ ಭುವನೇಶ್ವರಿ ದೇವಿ ಆರಾಧ್ಯ ದೈವ. ಆಕೆ ನೆಲೆಸಿರುವ ಕರ್ನಾಟಕದ ಏಕೈಕ ಕ್ಷೇತ್ರವೇ 'ಭುವನಗಿರಿ ಬೆಟ್ಟ'.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನಲ್ಲಿ ಪಶ್ಚಿಮ ಘಟ್ಟಗಳ ಮಧ್ಯೆ ಇರುವ ಪಾವನ ಕ್ಷೇತ್ರವಿದು. ಈ ದೇವಾಲಯವು ಸಿದ್ದಾಪುರದಿಂದ ಕುಮಟಾಕ್ಕೆ ಹೋಗುವ ಮಾರ್ಗದಲ್ಲಿ ಸುಮಾರು ಎಂಟು ಕಿಲೋಮೀಟರ್ ದೂರದಲ್ಲಿದೆ. 300 ಅಡಿ ಎತ್ತರದ ಭುವನಗಿರಿ ಬೆಟ್ಟದಲ್ಲಿ ನೆಲೆಸಿರುವ ತಾಯಿ ಭುವನೇಶ್ವರಿಯು ಪ್ರತಿದಿನ ತ್ರಿಕಾಲ ಪೂಜಿತಳು. ತಲೆಮಾರುಗಳಿಂದ ಈ ದೇವಿಗೆ ಸೇವೆ ಸಲ್ಲಿಸುತ್ತಿರುವ ಮುತ್ತಿಗೆ ಕುಟುಂಬದ ಅರ್ಚಕರು ದೇವಾಲಯದ ದೈನಂದಿನ ಆಚರಣೆಗಳನ್ನು ನಿರ್ವಹಿಸುತ್ತಾರೆ. ಬೆಟ್ಟದ ತಪ್ಪಲಿನಲ್ಲಿರುವ ಪುಷ್ಕರಣಿಯಿಂದ 250 ಮೆಟ್ಟಿಲುಗಳನ್ನು ಏರುವ ಮೂಲಕ ಹಾಗೂ ಮುಖ್ಯ ಪ್ರವೇಶದ್ವಾರದ ಮೂಲಕ ದೇವಸ್ಥಾನವನ್ನು ತಲುಪಬಹುದು. ಇದು ಕರ್ನಾಟಕದ ಏಕೈಕ ಕನ್ನಡಮ್ಮನ ದೇವಾಲಯವಾಗಿದೆ.

ಗರ್ಭಗುಡಿಯಲ್ಲಿ ದೇವಿಯ ಸ್ವಯಂ-ವ್ಯಕ್ತ (ಉದ್ಭವ) ವಿಗ್ರಹವಿದೆ. ಒಂದೇ ಬಂಡೆಯಿಂದ ಕೆತ್ತಿದ ಕಲ್ಲಿನ ಗರ್ಭಗುಡಿ ಮತ್ತು ದೇವಾಲಯದ ಮುಂದಿರುವ ಏಕಶಿಲೆಯ ಧ್ವಜಸ್ತಂಭ ಇವು ದೇವಾಲಯದ ಪ್ರಾಚೀನತೆಗೆ ಸಾಕ್ಷಿಯಾಗಿವೆ. ಇವುಗಳ ಮೂಲ ರಚನೆಯು ವಿಜಯನಗರ ವಾಸ್ತುಶಿಲ್ಪ ಶೈಲಿಯನ್ನು ಹೊಂದಿದ್ದರೂ, ಸುತ್ತಮುತ್ತಲಿನ ಸಭಾಂಗಣಗಳು ಮತ್ತು ಪ್ರವೇಶದ್ವಾರಗಳನ್ನು ಕಾಲಾನಂತರದಲ್ಲಿ ನವೀಕರಿಸಲಾಗಿದೆ. ಬೆಟ್ಟದ ತಪ್ಪಲಿನಲ್ಲಿರುವ ಪುಷ್ಕರಣಿಯು ಎರಡು ಎಕರೆಗಳಷ್ಟು ವಿಸ್ತೀರ್ಣದಲ್ಲಿದೆ. ದೇವಾಲಯದ ಆಚರಣೆಗಳಿಗೆ ಮಾತ್ರ ಪುಷ್ಕರಣಿಯ ನೀರನ್ನು ಬಳಸಲಾಗುತ್ತದೆ. ಮಾಘಮಾಸದಲ್ಲಿ ಅದ್ದೂರಿಯಾಗಿ ನಡೆಯುವ ರಥೋತ್ಸವ, ಕಾರ್ತಿಕ ಮಾಸದಲ್ಲಿ ಜರುಗುವ ತೆಪ್ಪೋತ್ಸವದ ವೈಭವವನ್ನು ಕಣ್ತುಂಬಿಸಿಕೊಳ್ಳಲು ಎರಡು ಕಣ್ಣು ಸಾಲದು.

ದೇವಿಯು ಭುವನಗಿರಿ ಬೆಟ್ಟದಲ್ಲಿ ನೆಲೆಸಿರುವುದರ ಹಿಂದೆಯೂ ದಂತಕಥೆಯಿವೆ. ಭುವನಾಸುರನೆಂಬ ರಾಕ್ಷಸನನ್ನು ಕೊಂದ ನಂತರ ದೇವಿಯು ಭುವನಗಿರಿಯನ್ನು ತನ್ನ ವಾಸಸ್ಥಾನವನ್ನಾಗಿ ಆರಿಸಿಕೊಂಡಳು. ಈ ದೇವಾಲಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆದರೆ ಹದಿನೇಳನೆಯ ಶತಮಾನದವರೆಗಿನ ದಾಖಲೆಗಳು ಲಭ್ಯವಿಲ್ಲ. ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದ ದಾಖಲೆಯ ಕಡತಗಳು ನಾಪತ್ತೆಯಾಗಿರುವ ಹಿನ್ನೆಲೆಯಲ್ಲಿ ಕ್ರಿ.ಶ. 1600ರ ನಂತರದ ಇತಿಹಾಸವಿದೆ ಎನ್ನಲಾಗಿದೆ.

ಬನವಾಸಿಯಿಂದ ಆಳ್ವಿಕೆ ನಡೆಸಿದ ಕದಂಬ ರಾಜವಂಶದ ಆಡಳಿತಗಾರರು ನಾಲ್ಕನೇ ಶತಮಾನದಷ್ಟು ಹಿಂದೆಯೇ ಭುವನೇಶ್ವರಿ ದೇವಿಯನ್ನು ತಮ್ಮ ನಾಡದೇವತೆಯಾಗಿ ಪೂಜಿಸುತ್ತಿದ್ದರು ಎಂದು ಐತಿಹಾಸಿಕ ಉಲ್ಲೇಖಗಳು ಸೂಚಿಸುತ್ತವೆ. ಅವರಿಗೆ ಮೂಲತಃ ದೇವಿಗಾಗಿ ದೇವಾಲಯವನ್ನು ನಿರ್ಮಿಸುವ ಕಲ್ಪನೆ ಇತ್ತು ಎಂದು ನಂಬಲಾಗಿದೆ, ಆದರೆ ಅದನ್ನು ಕೈಗೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ನಂತರ, ದೇವಿಯನ್ನು ಪೂಜಿಸುತ್ತಿದ್ದ ವಿಜಯನಗರದ ಆಡಳಿತಗಾರರು ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಒಂದು ವಿಗ್ರಹವನ್ನು ಸ್ಥಾಪಿಸಿದರು. ವಿಜಯನಗರದ ನಿಷ್ಠಾವಂತ ಸಾಮಂತರು ಮತ್ತು ಕನ್ನಡದ ಕಟ್ಟಾ ಪೋಷಕರಾದ ಬಿಳಗಿ ಕೊನೆಯ ಅರಸ ಬಸವೇಂದ್ರ, 1692ರಲ್ಲಿ ಈ ದೇವಾಲಯವನ್ನು ನಿರ್ಮಿಸಿದರು.

ಮನಸ್ಸುಗಳನ್ನು ಜೋಡಿಸುವ ಅಂಚೆ ಎಂಬ ಸೇತುವೆ

ಇದು ಹೃದಯಗಳ ವಿಷಯಾ

● ಇಂದಿರಾ ಮೋಟೆಬೆನ್ನೂರ ಬೆಳಗಾವಿ

"ಅಂಚೆಯ ಅಣ್ಣ ಬಂದಿಹ ಚಿಣ್ಣ ಅಂಚೆಯ ಹಂಚಲು ಮನೆಮನೆಗೆ, ಸಾವಿರ ಸುದ್ದಿ ಬೀರುತ ಬರುವನು, ತುಂಬಿದ ಚೀಲವು ಹೆಗಲೊಳಗೆ" - ಶಾಲಾ ದಿನಗಳಲ್ಲಿ ಈ ಕವನವನ್ನು ಗುನುಗುನಿಸದಿರುವ ಮನಸ್ಸುಗಳೇ ಇಲ್ಲ ಎಂದರೆ ತಪ್ಪಾಗಲಾರದು. ನಾವು ಚಿಕ್ಕವರಿದ್ದಾಗ, ಅಂಚೆ ಅಣ್ಣನ ಸೈಕಲ್‌ನ 'ಟ್ರಿಣ್ ಟ್ರಿಣ್' ಸಪ್ಪಳ ಕಿವಿಗೆ ಬಿದ್ದರೆ ಸಾಕು, ಎಲ್ಲಿದ್ದರೂ ಓಡೋಡಿ ಬಂದು, "ನಂಗ ಯಾವ್ದರ ಕಾಗದ ಬಂದದೇನು ಕೊಡ್ರೀ" ಅಂತ ಅವನೆದುರು ನಿಲ್ಲುತ್ತಿದ್ದ ಚಿತ್ರ ಮನದಲ್ಲಿ ಇಂದಿಗೂ ಹಸಿರಾಗಿದೆ.

ಕಾಯುವಲ್ಲಿನ ಸುಖ

ಪತ್ರಗಳಿಗಾಗಿ ಕಾಯುವ ಪ್ರತಿ ಗಳಿಗೆಯೂ ಆಪ್ಯಾಯಮಾನವಾಗಿತ್ತು ಆಗ. ನಮ್ಮೂರಿಗೆ ಬಂದವರು ಕೆಲ ಕಾಲ ನಮ್ಮ ಜತೆಗಿದ್ದು, ನಂತರ ತಮ್ಮೂರಿಗೆ ಹೊರಡಲು ಉದ್ಯುಕ್ತರಾದಾಗ, "ಊರು ಮುಟ್ಟಿದ ಕೂಡ್ಲೇ ಕಾಗದಾ ಹಾಕು" ಅಂತ ಹೇಳೋದು ವಾಡಿಕೆಯಾಗಿತ್ತು. ಕೆಲವೊಮ್ಮೆಯಂತೂ, ಬರೋ ನೆಂಟರೂ ಬೀಗರೂ ಬಿಜ್ಜರೂ ನಮ್ಮೂರಿಗೆ ಬಂದು ವಾಪಸ್ ತಮ್ಮೂರಿಗೆ ಹೋದ ಮೇಲೆ, 'ನಿಮ್ಮೂರಿಗೆ ಬರ್ತೀವಿ' ಅಂತ ಅವರು ಹಿಂದೆ ಬರೆದಿದ್ದ ಪತ್ರ ನಮಗೆ ಮುಟ್ಟುತ್ತಿದ್ದುದು ನಗುವನ್ನು ತರಿಸುತ್ತಿತ್ತು!

ಮೊದಲ ಪ್ರೇಮಪತ್ರವೇ...

'ನಾ ಮೆಚ್ಚಿದ ಹುಡುಗ' ಚಿತ್ರದ ಗೀತೆಯೊಂದನ್ನು ಅನುಕರಿಸಿ 'ಪದಗಳು ತುಂಬಿದ ಪತ್ರವಿದಲ್ಲ, ಹೃದಯವೆ ಅಡಗಿದೆ ಇದರಲಿ' ಎಂಬುದಾಗಿ ನನ್ನವರು ನನಗೆ ಬರೆದ 'ಕಾವ್ಯಮಯ' ಮೊದಲ ಪ್ರೇಮಪತ್ರವು ನನ್ನ 'ಹೃದಯಸಂದೂಕ'ದಲ್ಲಿ ಒಲವಿನ ನಗವನ್ನು ಕಾಪಿಟ್ಟಿರುವಂತೆಯೇ, ನನ್ನ ಕಪಾಟಿನ ಪುಟ್ಟ ಪೆಟ್ಟಿಗೆಯಲ್ಲೂ ಭದ್ರವಾಗಿ ಕುಳಿತಿದೆ. ಕಾಳಿದಾಸನ ಮೇಘಸಂದೇಶದಂತೆ 'ಪ್ರೇಮ ಸಂದೇಶ'ವನ್ನು ಹೊತ್ತು ತರುತ್ತಿದ್ದ ಆ ಪತ್ರಗಳನ್ನು ಮತ್ತೆ ಮತ್ತೆ ಓದಿದಾಗ ಜೀವನೋತ್ಸಾಹ ನೂರ್ಮಡಿಯಾಗುತ್ತದೆ.

ಪತ್ರ ಎಂಬ ಮೇಘದೂತ

ಆಗಿನ್ನೂ ಮೊಬೈಲ್ ಫೋನುಗಳು ದಾಂಗುಡಿ ಇಟ್ಟಿರಲಿಲ್ಲ, ಏನಿದ್ದರೂ ಲ್ಯಾಂಡ್‌ಲೈನ್ ಮಾತ್ರ. ಆದರೆ, ಕರೆಗಳನ್ನು ಹಗಲು ಹೊತ್ತಿನಲ್ಲಿ ಮಾಡಿದರೆ ಬಹಳ ತುಟ್ಟಿಯಾಗುತ್ತಿತ್ತು. ಹೀಗಾಗಿ ರಾತ್ರಿ 11.30ರ ಮೇಲೆ ಟ್ರಂಕ್‌ಕಾಲ್ ಬುಕ್ ಮಾಡಿ, ಹೆತ್ತವರ ಮತ್ತು ಆತ್ಮೀಯರ ಜತೆಗಿನ ಮಾತಿಗಾಗಿ ಹಾತೊರೆಯುತ್ತಿದ್ದೆವು. ಮದುವೆಯಾದ ಹೊಸತರಲ್ಲಿ ಗಂಡನ ಮನೆ ಸೇರಿದ ನಂತರ, ತವರಿನ 'ಕರುಳುಬಳ್ಳಿ'ಗಳೊಂದಿಗೆ ಎಷ್ಟು ಮಾತಾಡಿದರೂ ಸಾಕೆನಿಸುತ್ತಿರಲಿಲ್ಲ. ಹಾಗಂತ, ಎಲ್ಲವನ್ನೂ ಫೋನ್ ಮುಖಾಂತರ ಹೇಳಲೂ ಆಗುತ್ತಿರಲಿಲ್ಲ. ಆಗ ಆಪ್ತಮಿತ್ರನಾಗುತ್ತಿದ್ದುದು 'ಪತ್ರ'. ಬಾಕಿ ಉಳಿದಿರುವ ವಿಷಯಗಳನ್ನು ಪತ್ರದ ಮೂಲಕ ಬರೆದು ಕೆಂಪು ಬಣ್ಣದ ಅಂಚೆ ಡಬ್ಬಿಗೆ ಹಾಕಿದ ನಂತರವೇ ನನ್ನ ಮನಸ್ಸಿಗೆ ಸಮಾಧಾನವಾಗುತ್ತಿದ್ದುದು. ಸಂಭ್ರಮ ಅಷ್ಟಕ್ಕೇ ನಿಲ್ಲುತ್ತಿರಲಿಲ್ಲ, ಆ ಪತ್ರಕ್ಕೆ ಉತ್ತರ ರೂಪದಲ್ಲಿ ಬರುವ ತವರಿನ ಪತ್ರಗಳನ್ನು ನಿತ್ಯ ಕಾಯುವ ಸಡಗರದ ಸನ್ನಿವೇಶ ಅಪ್ರಯತ್ನವಾಗಿ ರೂಪುಗೊಂಡುಬಿಡುತ್ತಿತ್ತು...

ಕಾರ್ಡಿನಲ್ಲಿ ವಿಶ್ವರೂಪ

ಬರೋಡಾದಲ್ಲಿರುವಾಗ ನಾನು ಅಲ್ಲಿನ 'ಕನ್ನಡ ಮಹಿಳಾ ಸಮಾಜ'ದ ಕಾರ್ಯದರ್ಶಿಯಾಗಿ, ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದ್ದುಂಟು. ಆಗೆಲ್ಲಾ, ಸಮಾಜದ ತಿಂಗಳ ಕಾರ್ಯಕ್ರಮಗಳ ವಿವರವನ್ನು ಆ 15 ಪೈಸೆಯ ಹೊಂಬಣ್ಣದ ಪೋಸ್ಟ್ ಕಾರ್ಡ್‌ನಲ್ಲಿ ಮೈತುಂಬಿಸುವಾಗ ನನಗಾಗುತ್ತಿದ್ದ ಮಧುರಾನುಭೂತಿಯನ್ನೂ ಈಗಲೂ ನೆನೆದು ಚಪ್ಪರಿಸುವುದುಂಟು. ಸುಮಾರು 50 ಕಾರ್ಡುಗಳನ್ನು ಹೀಗೆ ಬರೆದು ಅಂಚೆ ಡಬ್ಬಿಗೆ ಹಾಕುವಾಗ ಅದೇನೋ ಒಂಥರಾ ಹಿಗ್ಗು ಮನಸ್ಸನ್ನು ಆವರಿಸಿಬಿಡುತ್ತಿತ್ತು. ಕನ್ನಡದ ಅಕ್ಷರಗಳ ಸೆಳೆತ ಅಂದ್ರೆ ಸುಮ್ನೇನಾ...?!

ಮೊದಲೆಲ್ಲಾ 'ಟೆಲಿಗ್ರಾಂ' ಬಂತೆಂದರೆ, 'ವಕ್ಕರಿಸಿಕೊಳ್ಳು ಏನೋ ಅಶುಭ ಸುದ್ದಿ' ಎಂದು ಮನೆಮಂದಿಯೆಲ್ಲರೂ ಹೆದರುತ್ತಿದ್ದ ಕಾಲವೂ ಇತ್ತು. ಆದರೆ ಕಾಲಕ್ರಮೇಣ, ಟೆಲಿಗ್ರಾಂ ಮೂಲಕ ಶುಭಸಂದೇಶಗಳನ್ನೂ ಕಳುಹಿಸಬಹುದೆಂಬ ತಿಳಿವಳಿಕೆ ಬಂದು ಎಲ್ಲರಿಗೂ ಕೊಂಚ ಸಮಾಧಾನವಾಯಿತು ಎನ್ನಿ. ಈಗ ಬಿಡಿ, ಟೆಲಿಗ್ರಾಂ ಸೇವೆಯನ್ನೇ ಸ್ಥಗಿತಗೊಳಿಸಲಾಗಿದೆ. ಅಂಚೆ ಚೀಟಿಯ ಸಂಗ್ರಹದ ಹವ್ಯಾಸವನ್ನು ನನ್ನಲ್ಲಿ ಹುಟ್ಟುಹಾಕಿದ್ದು ಕೂಡ, ಅಂಚೆಯಣ್ಣ ತರುತ್ತಿದ್ದ ಲಕೋಟೆಗಳ ಮೇಲೆ ಅಂಟಿಸಲಾಗಿರುತ್ತಿದ್ದ ತರಹೇವಾರಿ ಅಂಚೆ ಚೀಟಿಗಳೇ. ಈ ಹವ್ಯಾಸಕ್ಕೆ ಅನೇಕರು ನೀರೆರೆದು ಪೋಷಿಸಿ, ಅದನ್ನು ಹೆಮ್ಮರವಾಗಿಸಿದ್ದನ್ನು ನಾನು ಮರೆಯಲಾರೆ.

ಪತ್ರವೆಂಬ ಸೂಚನಾಫಲಕ

ಇನ್ನು, ಲಕೋಟೆಯ ನಾಲ್ಕೂ ಮೂಲೆಗಳಲ್ಲಿ ಅರಿಶಿಣ/ಕುಂಕುಮ ಹಚ್ಚಿದ್ದರಂತೂ, ಅದು ಏನಾದರೂ ಶುಭಸುದ್ದಿಯನ್ನು ಹೊತ್ತು ತಂದಿದೆ ಎಂಬ ಸೂಚನೆಯು ಆ ಲಕೋಟೆಯನ್ನು ತೆರೆಯುವುದಕ್ಕೂ ಮೊದಲೇ ದಕ್ಕಿಬಿಡುತ್ತಿತ್ತು. ನಾನು ಮದುವೆಯಾಗಿ ದೂರದ ಗುಜರಾತಿನ ಬರೋಡಾಕ್ಕೆ ಹೋದ ಮೇಲಂತೂ, ವಾತ್ಸಲ್ಯಭರಿತ ಭಾವನೆಗಳನ್ನು ಒಳಗೊಂಡಿರುವ ತವರಿನ ಪತ್ರಗಳನ್ನು ಸ್ವೀಕರಿಸುವುದೇ ಒಂದು ಸಂಭ್ರಮವಾಗಿಬಿಡುತ್ತಿತ್ತು. ಹಾಗೆ ಪತ್ರವನ್ನು ತಂದು ತಲುಪಿಸುತ್ತಿದ್ದ ಅಂಚೆಯ ಅಣ್ಣ ನನ್ನ ಪಾಲಿಗಂತೂ ಆಪ್ತ ಅಣ್ಣನೇ ಆಗಿಬಿಟ್ಟಿದ್ದ. ಹೀಗೆ ಬಂದ ಪತ್ರಗಳಲ್ಲಿ ಅಪ್ಪಾಜಿ ಬರೆದ ನೀಲಿ ಬಣ್ಣದ ಇನ್‌ಲ್ಯಾಂಡ್ ಪತ್ರ ನನ್ನ ಪಾಲಿಗೆ ಅತ್ಯಮೂಲ್ಯವಾಗಿದೆ; ಪ್ರೀತಿ-ಕಾಳಜಿ-ವಾತ್ಸಲ್ಯಗಳು ಭರಪೂರ ತುಂಬಿರುವ ಅಪ್ಪನ ಅಂತರಂಗವನ್ನೇ ತೆರೆದಿಟ್ಟ ಪತ್ರವದು. ಕರುಳಿನ ಕುಡಿಗಾಗಿ ಅಪ್ಪ ಬರೆದ ಇಂಥ ಹಲವು ಪತ್ರಗಳನ್ನು ನಾನು ಇಂದಿಗೂ ಕಾಪಿಟ್ಟುಕೊಂಡಿರುವೆ.



ಸಂಚರಿಸುವ ಸಂತ

ನೋವು-ನಲಿವು, ಸುಖ-ದುಃಖಗಳ ಸಮ್ಮಿಶ್ರಣದ ಪತ್ರಗಳನ್ನು ಹೊತ್ತು ತಂದು, ಬದುಕಿನ ಸಂತೆಯಲ್ಲಿ ವಿತರಿಸುತ್ತಿದ್ದ 'ಅಂಚೆ ಅಣ್ಣ' ಸೈಕಲ್ ಮೇಲೆ ಸಂಚರಿಸುವ 'ಅಕ್ಷರ ಸಂತ'ನಂತೆ ಕಾಣುತ್ತಿದ್ದ. ಕಾರಣ, ಓದು ಬರಹ ಬಾರದವರ ಪಾಲಿಗೆ ಈತ ಪತ್ರಗಳನ್ನು ಓದಿಹೇಳುವ ದೇವದೂತನೂ ಆಗಿದ್ದ; ಜತೆಗೆ ಅಂಥವರ ಭಾವನೆಗಳಿಗೆ ಅಕ್ಷರ ರೂಪ ನೀಡಿ, ಸ್ವತಃ ಪತ್ರ ಬರೆದುಕೊಟ್ಟು, ಅವು ಅವರ ಆತ್ಮೀಯರಿಗೆ ರವಾನೆಯಾಗುವಂತೆ ನೋಡಿಕೊಳ್ಳುತ್ತಿದ್ದ ಆ ಮೇಘದೂತ. ಎಸ್‌ಎಂಎಸ್, ವಾಟ್ಸ್ಯಾಪ್, ಇ-ಮೇಲ್‌ಗಳ ಸುಳಿಯಲ್ಲಿ ಸಿಲುಕಿರುವ ಈಗಿನವರಿಗೆ ಪತ್ರಗಳು ಹೀಗೆ ಉಂಟುಮಾಡುತ್ತಿದ್ದ ಪುಳಕಗಳ ಅರಿವು ಇಲ್ಲದಿರಬಹುದು. ಆದರೆ ನಮ್ಮಂಥವರಿಗೆ ಅದರ ಅನುಭವವಿದೆ. ಆ ಸವಿನೆನಪುಗಳನ್ನು ಮೊಗೆದಷ್ಟೂ ಸಿಹಿ, ನೆನೆದಷ್ಟೂ ಸವಿ ಎಂಬುದಂತೂ ಖರೆ! ಅಂಚೆ ಅಣ್ಣನ ಪತ್ರಗಳ ಜಮಾನಾಕ್ಕೆ ಸೇರಿದ ಓದುಗರಲ್ಲಿ ಅನೇಕರಿಗೆ ಇಂಥ ಮಧುರ ಅನುಭವವಾಗಿರುತ್ತದೆ ಎಂಬುದನ್ನು ನಾನು ಬಲ್ಲೆ. ಆ ನೆನಪಿನ ದೋಣಿಯಲ್ಲಿ ವಿಹರಿಸುವುದೇ ಒಂಥರಾ ಮಜಾ.. ಏನಂತೀರಿ?!

ಕಲ್ಲಮ್ಮಜ್ಜಿಯ ಕಾಗದ ಕೈಂಕರ್ಯ

ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಕಲ್ಲಮ್ಮಜ್ಜಿ ಪ್ರತಿವಾರ ಒಂದು ಪೋಸ್ಟ್ ಕಾರ್ಡ್ ತಂದು ನನಗಿತ್ತು, "ಇಂದವ್ವಾ, ಮಗೀಗ ಒಂದೀಟ ಕಾಗದ ಬರದ ಹಾಕ್ರವ್ವಾ" ಅಂತಿದ್ಲು. ನಾನು "ಹೇಳಬೇ, ಏನ ಬರೀಲಿ" ಅಂದಾಗ, ತನ್ನ ಬೊಚ್ಚುಬಾಯಲ್ಲಿ ನಗುತ್ತಾ, "ಗಂಗವ್ವಾ, ನಾ ಇಲ್ಲೇ ಆರಾಮ ಅದೀನಿ, ನನ್ನ ಚಿಂತಿ ಮಾಡಬ್ಯಾಡ. ನೀವೂ ಆರಾಮ ಆಗಿ ಇರ್ರಿ. ಜರಾ, ಹಬ್ಬ-ಹುಣವಿಗೆ ಹುಡಗ್ರನ್ನ ಕರಕೊಂಡ ಊರಿಗೆ ಬಂದು ಹೋಗಿ ಮಾಡಕೋತಾ, ಮಕಾ ತೋರಿಸ್ಕಂತಾ ಇರ್ರಿ" ಅಂತ ಉಕ್ತಲೇಖನ ಹೇಳುತ್ತಿದ್ದಳು ಕಲ್ಲಮ್ಮಜ್ಜಿ!

ದೇವರ ಮೇಲಿನ ಹೂ ತಪ್ಪಿದರೂ, ವಾರಕ್ಕೊಮ್ಮೆಯ 'ಕಲ್ಲಮ್ಮಜ್ಜಿಯ ಕಾಗದ ಕೈಂಕರ್ಯ' ತಪ್ಪುತ್ತಿರಲಿಲ್ಲ. ಆದರೆ, ಇವೇ ನಾಲ್ಕು ಸಾಲುಗಳ ಹೊರತಾಗಿ ಆಕೆ ಬೇರೇನನ್ನೂ ಬರೆಸುತ್ತಿರಲಿಲ್ಲ. ಅದನ್ನು ಕಂಡು ಅಚ್ಚರಿಗೊಂಡ ನಾನು, "ಅಲ್ಲಬೇ, ವಾರಾ ವಾರಾ ಹಾಡಿದ್ದ ಹಾಡ ಅನ್ನೂ ಹಾಂಗ, ಹಗಲೆಲ್ಲಾ ಬರೀ ಅದ್ನಾ ಬರಸ್ತೀಯಲ್ಲ, ಬ್ಯಾರೆ ಏನೂ ಇರಂಗಿಲ್ವಾ?" ಅಂತ ಕೇಳಿದರೆ, "ಚಿಕ್ಕವ್ವಾರ, ನಿಮಗ ಈಗ ತಿಳಿಯಂಗಿಲ್ಲ. ನಾಳಿ ಲಗ್ನಾ ಮಾಡ್ಕಂಡು ಗಂಡನ ಮನಿಗೆ ಹೊಕ್ಕೀರಲ್ಲಾ, ಆವಾಗ ಗೊತ್ತಾಗ್ತೈತಿ" ಅಂತಿದ್ಲು ಕಲ್ಲಮ್ಮಜ್ಜಿ. ಇದು ಅಕ್ಷರಶಃ ಸತ್ಯವಾಗಿಬಿಟ್ಟಿತು. ನಾನು ಮದುವೆಯಾಗಿ ಗುಜರಾತಿನ ಬರೋಡಾಕ್ಕೆ ಹೋದ ಮೇಲೆ, ಅಪ್ಪ-ಅವ್ವನ ಪತ್ರದ ದಾರಿಯನ್ನೇ ಕಾಯುವಂತಾಗುತ್ತಿತ್ತು. ಆಗೆಲ್ಲಾ ಕಲ್ಲಮ್ಮಜ್ಜಿಯ ಕಾಳಜಿ, ಅಂತರಾಳದ ತುಡಿತ ಅರಿವಾಗುತ್ತಿತ್ತು.

ಮೂರನೇ ಇಯತ್ತೆ ಕಲಿಯುತ್ತಿದ್ದ ತನ್ನ ಮೊಮ್ಮಗಳು ತನ್ನ ಸೊಟ್ಟ ಸೊಟ್ಟ ಅಕ್ಷರದಲ್ಲಿ, "ನಾ ಆರಾಮ ಅದೇನಿ... ನೀನೂ ಆರಾಮ ಇರು" ಅಂತ ಬರೆದ ಪೋಸ್ಟ್ ಕಾರ್ಡನ್ನು ತನ್ನ ಸೀರೆ ಸೆರಗಿನಿಂದ ಹೊರತೆಗೆಯುತ್ತಿದ್ದ ಕಲ್ಲಮ್ಮಜ್ಜಿ, "ಅವ್ವಾರ, ಮೊಮ್ಮಗಳ ಪತ್ರ ಬಂದೇತಿ. ಇಕಾ, ಜರಾ ಓದಿ ಹೇಳ್ರೀ" ಅನ್ನುತ್ತಿದ್ದಳು. ಅದನ್ನು ನಾನು ಓದಿ ಹೇಳಿದಾಗ, ಕಲ್ಲಮ್ಮಜ್ಜಿಯ ಮುಖವು ಖುಷಿಯಿಂದ ಗಂಗಾಳದಂತೆ ಅಗಲ ಆಗ್ತಿತ್ತು. ಜತೆಗೆ ಬೊಚ್ಚುಬಾಯಿಯ ತುಂಬಾ ಸಕ್ಕರೆನಗು. ಇದಕ್ಕೆ ಕಾರಣ, ತನಗೆ ಬಂದ ಆ ಪತ್ರ. ಈ ದೃಶ್ಯ ಪ್ರತಿ ವಾರವೂ ಪುನರಾವರ್ತನೆಯಾಗುತ್ತಿತ್ತು...

ಭವ ಬಂಧನದ ಸೆಲೆ

● ಸುಮನಾ ರಮಾನಂದ, ಕೊಯ್ಮತ್ತೂರು

ಬಾಳಿನ ಬಂಧನಕಿದೆ
ಸವಿಪ್ರೀತಿಯೆಂಬ ಬೆಸುಗೆ,
ಭಾವದ ಬಂಧನಕುಂಟು
ಸದ್ಭಾವನೆಯೆಂಬ ಸಲುಗೆ.

ಭವದ ಬಂಧನಕೆ ಉಂಟು
ಶತ ಆಯುಷ್ಯದ ಕೊಡುಗೆ,
ದೈವ ಬಂಧನಕೆ ಮುಡಿಪು
ಕಡುಭಕ್ತಿಯಲಿ ನಮಿಸಿದ ಗಳಿಗೆ.

ಸುಸ್ಥಿರ ಬಂಧನದಲೆಂದಿಗೂ
ಜೀವನದಿ ವಿಸ್ತಾರದ ಸಂಚಲನೆ,
ಅಸ್ಥಿರ ಬಂಧನದಲೂ
ಜಟಿಲ ನೋವಿಗೆ ವಿಮೋಚನೆ.

ಚಿರಬಂಧನವದು ಬಾಳಲಿ
ನಿತ್ಯನೂತನ ಮನದ ಚೇತನ,
ಜನ್ಮಾಂತರದ ಬಂಧನದಲಿ
ಒಲವೊಂದೇ ಅಮಿತ ಸಾಧನ.

ಸಹಾಯಹಸ್ತ ಚಾಚುವ ಸದಾಶಯವಿರಲಿ

● ಬಸವರಾಜ ಶಿವಪ್ಪ ಗಿರಗಾಂವಿ

'ಸಹಾಯಹಸ್ತ' ಎಂಬುದು ಮಹಾಮಾನವತಾವಾದದ ತಳಹದಿಯಾಗಿದೆ. ಕೊನೆಯೆಂಬುದಿಲ್ಲದ ಇದು ನಿತ್ಯನಿರಂತರವಾಗಿರುತ್ತದೆ. 'ನೆರವು' ಎಂಬುದು ಪ್ರತಿಯೊಬ್ಬರ ಬದುಕಿನಲ್ಲೂ ಅನುಭವಕ್ಕೆ ಬಂದಿರುವಂಥದ್ದೇ ಆಗಿರುತ್ತದೆ. ಆದರೆ, ಮೇಲ್ನೋಟಕ್ಕೆ ಪರೋಪಕಾರದಂತೆ ತೋರಿದ್ದರ ಹಿನ್ನೆಲೆಯಲ್ಲೂ ಕೆಲವೊಮ್ಮೆ 'ಸ್ವಾರ್ಥ'ವು ಅಡಗಿರುವುದನ್ನು ಅಲ್ಲಗಳೆಯಲಾಗದು. ನಾವು ಮಾಡುವ ಸಹಾಯವೇ ಆಗಲಿ, ನೀಡುವ ದಾನವೇ ಆಗಲಿ ಅದರ ನೇಪಥ್ಯದಲ್ಲಿ ಪ್ರತಿಫಲಾಪೇಕ್ಷೆಯಾಗಲಿ ಸ್ವಾರ್ಥವಾಗಲಿ ಇರಬಾರದು.

ಪರರಿಗೆ ನಾವು ಮಾಡುವ ಸಹಾಯವು ನೈತಿಕವಾಗಿರಬೇಕು, ಗೌರವಪೂರ್ಣವಾಗಿರಬೇಕು ಹಾಗೂ ಮತ್ತೊಬ್ಬರ ಪ್ರಗತಿಗೆ ಪೂರಕವಾಗಿರಬೇಕು. ನಿಸ್ವಾರ್ಥ ಭಾವದ ನೆರವು ಮಾತ್ರವೇ ಬದುಕಿಗೆ ಮೆರುಗನ್ನೂ ನೈಜತೆಯನ್ನೂ ಕೊಡುತ್ತದೆ. ಯಾರಿಗೂ 'ಮತ್ತೊಬ್ಬರ ಸಹಾಯವಿಲ್ಲದೆ ಬದುಕುವೆ' ಎಂಬ ಭರವಸೆಯಿಲ್ಲ; ಎಷ್ಟೇ ಮಹಾನ್ ವ್ಯಕ್ತಿಗಳಾದರೂ ಏನಾದರೊಂದು ಕಾರಣಕ್ಕೆ ಪರರ ನೆರವನ್ನು ಪಡೆಯಲೇಬೇಕಾಗುತ್ತದೆ.

'ಮಾಡಿದೆನೆಂಬುದು ಮನದಲ್ಲಿ ಹೊಳೆದೊಡೆ, ಏಡಿಸಿ ಕಾಡಿತ್ತು ಶಿವನ ಡಂಗುರ' ಎಂದಿದ್ದಾರೆ ಶರಣರು. ಅಂದರೆ, ವ್ಯಕ್ತಿಯೊಬ್ಬನು ತಾನು ಪರರಿಗೆ ಸಹಾಯ ಮಾಡಿದ್ದನ್ನು ಬಹಿರಂಗವಾಗಿ ಹೇಳುವುದು ಒತ್ತಟ್ಟಿಗಿರಲಿ, ಕೇವಲ ಅದನ್ನು ಮನಸ್ಸಿನೊಳಗೆ ಅಂದುಕೊಂಡರೂ ಅದು ಅಹಂಕಾರವಾಗುತ್ತದೆ. ಇದನ್ನು ಪರಮಾತ್ಮನೂ ಮೆಚ್ಚುವುದಿಲ್ಲ. ಸಹಾಯಗಳು ಗುಪ್ತವಾಗಿದ್ದಲ್ಲಿ ಮಾತ್ರವೇ ಅದನ್ನು ಮಾಡಿದವರಿಗೆ ಪುಣ್ಯವು ಪ್ರಾಪ್ತವಾಗುತ್ತದೆ. ಸಹಾಯವೆಂಬುದು ಬಹುತೇಕವಾಗಿ ಭಗವಂತನು ನಮಗೆ ಹೆಚ್ಚುವರಿಯಾಗಿ ದಯಪಾಲಿಸಿರುವ ಸಂಪತ್ತು ಅಥವಾ ಜ್ಞಾನವನ್ನು ಮತ್ತೊಬ್ಬರಿಗೆ ಹಂಚುವುದೇ ಆಗಿರುತ್ತದೆ. ಸಹಾಯ ಮಾಡುವುದರಿಂದ ವ್ಯಕ್ತಿಯೊಬ್ಬನಿಗೆ ದಕ್ಕುವ ಆನಂದ ಮತ್ತು ತೃಪ್ತಿಯು, ಬದುಕಿನ ಮತ್ತಾವ ಮಹಾನ್ ಕಾರ್ಯಗಳಿಂದಲೂ ದೊರೆಯುವುದಿಲ್ಲ. ಆದರೆ, ಪಾಪದ ದುಡ್ಡಿನಿಂದ ಮಾಡಿದ ನೆರವು 'ಪ್ರಾಯಶ್ಚಿತ್ತ'ವಾಗುತ್ತದೆಯೇ ವಿನಾ, ಅದರಿಂದ ಪುಣ್ಯಪ್ರಾಪ್ತಿ ಆಗುವುದಿಲ್ಲ.

ಕಷ್ಟದಲ್ಲಿದ್ದವರಿಗೆ ಮಾಡಿದ ಸಹಾಯವು ಕೋಟಿಗಟ್ಟಲೆ ಹಣಕ್ಕಿಂತಲೂ ಮೌಲ್ಯಯುತವಾದುದು, ಆದರೆ ಹಾಗೆ ಸಹಾಯ ಮಾಡಿದ್ದನ್ನು ಡಂಗುರ ಸಾರುತ್ತಾ ಹೋದರೆ ಅದು ತೃಣಕ್ಕೆ ಸಮಾನವಾಗುತ್ತದೆ. ಆದ್ದರಿಂದ, ಪರರಿಗೆ ನಾವು ಮಾಡಿದ ಸಹಾಯವನ್ನು ಆ ಕ್ಷಣದಲ್ಲಿಯೇ ಮರೆಯಬೇಕು; ಅದುವೇ ನೈಜ ಸಹಾಯ ಮತ್ತು ಮಾನವೀಯತೆಯ ಮೂಲಲಕ್ಷಣವಾಗುತ್ತದೆ.

ಮತ್ತೊಂದೆಡೆ, ಸಹಾಯ ಪಡೆದವನು ಚಿರಋಣಿಯಗಿರಬೇಕು, ಬದುಕಿನ ಅವಶ್ಯಕ ಹಂತದಲ್ಲಿ ಪಡೆದ ಸಹಾಯವನ್ನು ಆತ ಮರೆಯಬಾರದು. ಏಕೆಂದರೆ ಆತನಿಗೆ ಆ ಸಹಾಯದಿಂದಲೇ ನಿರ್ದಿಷ್ಟ ಸಮಸ್ಯೆಯ ಪರಿಹಾರವಾಗಿರುತ್ತದೆ ಅಥವಾ ಬದುಕಿನ ನಿರ್ಣಾಯಕ ಘಟ್ಟವನ್ನು ತಲುಪಲು ಸಾಧ್ಯವಾಗಿರುತ್ತದೆ. ಒಂದೊಮ್ಮೆ ಆತ ಆ ಸಹಾಯವನ್ನು ಮರೆತರೆ ಅದು ಅನಾಗರಿಕತೆಯ ಪರಮಾವಧಿಯಾಗುತ್ತದೆ. ಅವಶ್ಯಕತೆ ಇರುವಷ್ಟು ಮಾತ್ರವೇ ಸಹಾಯವನ್ನು ಪಡೆಯಬೇಕು, ಹೆಚ್ಚಿನ ಪ್ರಮಾಣದ ಸಹಾಯದಿಂದಾಗಿ ಅದನ್ನು ಪಡೆದವನು ಸೋಮಾರಿಯಾಗುತ್ತಾನೆ. ಸಹಾಯ ಪಡೆದಾತನು ಅದನ್ನು ಕೃತಜ್ಞತಾಪೂರ್ವಕವಾಗಿ ಬಳಸಿಕೊಂಡು ಸ್ಥಿತಿವಂತನಾಗಿ, ಮುಂದೆ ಕಷ್ಟದಲ್ಲಿರುವ ಮತ್ತೊಬ್ಬರಿಗೆ ನೆರವಾಗುವಷ್ಟು ಶಕ್ತಿವಂತನಾಗಬೇಕು.

ಮಾನವನು ಸಂಘಜೀವಿಯಾಗಿರುವುದರಿಂದ, ನೆರವಾಗುವುದು ಮತ್ತು ನೆರವನ್ನು ಪಡೆಯುವುದು ಬದುಕಿನಲ್ಲಿ ಅನಿವಾರ್ಯವಾಗಬಹುದು. ಆದರೆ, ನೆರವಿನ ಅಗತ್ಯ ಇದ್ದವರನ್ನು ಮಾತ್ರ ಗುರುತಿಸಿ, ಅವಶ್ಯಕತೆ ಇರುವಷ್ಟೇ ಸಹಾಯ ಮಾಡಬೇಕು. ಇದು ಕಷ್ಟಸಾಧ್ಯವಾದ ಕೆಲಸವಾದರೂ ಕಡ್ಡಾಯವಾಗಿ ಮಾಡಬೇಕು. ತೊಂದರೆಗೊಳಗಾದವರನ್ನು ಕಂಡಾಕ್ಷಣ ನಿಸ್ವಾರ್ಥ ಮತ್ತು ಸೇವಾ ಮನೋಭಾವದಿಂದ ನೆರವಾಗಬೇಕು, ತೊಂದರೆಗೊಳಗಾದವರು ಬೇಡುವ ಮತ್ತು ಕಾಡುವ ಪೂರ್ವದಲ್ಲಿಯೇ ನೆರವಾಗಬೇಕು. ಹೀಗೆ ಮಾಡುವ ಸಹಾಯವು ದುರುಪಯೋಗವಾಗದಂತೆ ನೋಡಿಕೊಳ್ಳಬೇಕು. ಒಟ್ಟಾರೆ ಹೇಳುವುದಾದರೆ, ಹಾಗೆ ಮಾಡಿದ ಸಹಾಯವು ಅದನ್ನು ಪಡೆದಾತನ ಪರಿಸ್ಥಿತಿಯನ್ನು ಸಕಾರಾತ್ಮಕವಾಗಿ ಬದಲಿಸುವಂತಿರಬೇಕು. ಆದರೆ, 'ಮುಂದೆ ಇವರಿಂದ ನೆರವಾಗುತ್ತದೆ' ಎಂಬ ಗ್ರಹಿಕೆಯಲ್ಲಿ ಸಹಾಯ ಮಾಡುವುದು ಸ್ವಾರ್ಥ ಎನಿಸಿಕೊಳ್ಳುತ್ತದೆ. ನೆರವಿನ ಅಗತ್ಯವಿರುವವರು, ಮತ್ತೊಬ್ಬರು ಸಹಾಯ ಮಾಡುವರೆಂದು ಕಾಯಬಾರದು ಅಥವಾ ಅದಕ್ಕಾಗಿ ಅವರ ಮೇಲೆ ಒತ್ತಡದ ತಂತ್ರಗಳನ್ನು ಪ್ರಯೋಗಿಸಬಾರದು. 'ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು' ಎಂಬ ಹಿರಿಯರ ಮಾತಿನಂತೆ ನಡೆದುಕೊಳ್ಳಬೇಕೇ ವಿನಾ, ಮತ್ತೊಬ್ಬರಿಂದ ಸಹಾಯದ ನಿರೀಕ್ಷೆಗಳನ್ನು ಇಟ್ಟುಕೊಳ್ಳಬಾರದು.

ಪ್ರಸಕ್ತ ದಿನಮಾನಗಳಲ್ಲಿ, ಪರರ ತೊಂದರೆ ಕಂಡರೂ ಕಾಣಿಸದಂತೆ ನಟಿಸುವ ಅಥವಾ ಪರರಿಗೆ ಸಹಾಯ ಮಾಡುವಷ್ಟು ಶಕ್ತಿಯನ್ನು ಭಗವಂತನು ಕೊಟ್ಟಿದ್ದರೂ ಅಗತ್ಯವಿರುವವರಿಗೆ ಅದನ್ನು ವಿನಿಯೋಗಿಸದ ಜನರು ಸಾಕಷ್ಟಿದ್ದಾರೆ. ಈ ಧೋರಣೆ ತರವಲ್ಲ. ಪರರಿಗೆ ನೆರವಾಗುವುದರಿಂದ ಪುಣ್ಯವು ದಕ್ಕುತ್ತದೆ ಎಂಬುದನ್ನು ಇಂಥವರು ಮರೆಯಬಾರದು. ಏಕೆಂದರೆ, ಪುಣ್ಯವನ್ನು ಪಡೆಯುವುದು ಸುಲಭವಲ್ಲ, ವ್ಯಕ್ತಿಯು ಮತ್ತೊಬ್ಬರ ಕಷ್ಟಗಳಲ್ಲಿ ನಿಷ್ಕಲ್ಮಶ ಭಾವದಿಂದ ಭಾಗಿಯಾಗುವುದರಿಂದ ಪುಣ್ಯವು ಆತನಿಗೆ ದೊರೆಯುತ್ತದೆ. ಆದ್ದರಿಂದ, ಸಹಾಯಮಾಡಿ, ಆದರೆ ಅದರ ಕುರಿತು ಜಂಭ ಕೊಚ್ಚಿಕೊಳ್ಳಬೇಡಿ ಅಥವಾ ಅದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಡಿ ಹಾಗೂ ಪರರಿಂದ ದಕ್ಕಿದ ಸಹಾಯವನ್ನು ಮರೆಯಬೇಡಿ...

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2		■	■	3		4
■	■		■	5			■	
6			■		■	7	8	
	■	■	9			■		■
10	11		■	■	■	12		13
■		■	14	15		■	■	
16		17	■		■	18		
	■	19			■		■	■
20			■	■	21			

ಎಡದಿಂದ ಬಲಕ್ಕೆ

1. ಬಲ ಹಾಕಿ ಮಾಡಿದ ಒತ್ತಾಯ (4)
3. ಮರದ ಕೆಲಸ ಮಾಡುವವನು (3)
5. ಲಯವಾಗದಂತಿದೆ ವಾಸದ ಸ್ಥಳ (3)
6. ವೈದ್ಯರು ನೀಡಿದ ಮಾತ್ರೆ (3)
7. ತಿರುಗಿ ಬಂದಿರುವ ಸಂಪಾದನೆ (3)
9. ರಾತ್ರಿಯಲ್ಲ, ಸೂರ್ಯ ಇರುವ ಸಮಯ (3)
10. ವಸ್ತುವೊಂದರ ಮಾರಾಟ (3)
12. ವಾಹನ ಅಥವಾ ಪ್ರಾಣಿಯ ಮೇಲೆ ಕುಳಿತು ಮಾಡುವ ಪ್ರಯಾಣ (3)
14. ಮನಸು ತೋರಿಸಿದ ಸಿಟ್ಟು (3)
16. ಭಾರವಿಲ್ಲದ್ದು (3)
18. ಉತ್ಸಾಹಕ್ಕೆ ಮತ್ತೊಂದು ಹೆಸರು (3)
19. ಶ್ರೀರಾಮನ ಪಾದುಕೆಯನ್ನಿಟ್ಟು ರಾಜ್ಯಭಾರ ಮಾಡಿದ ಸಹೋದರ (3)
20. ಮೋಸವಿಲ್ಲದ ಒಂದು ಕರಿದ ತಿಂಡಿ (3)
21. ಕಬ್ಬಿನಲ್ಲಿ ಕಾಣುವ ಒರೆಕೋರೆ (4)

ಮೇಲಿಂದ ಕೆಳಕ್ಕೆ

2. ಹಬ್ಬದ ಸಲುವಾಗಿ ಕೊಟ್ಟ ಚಂದಾ ಹಣ (3)
3. ಆಸೆಗೆ ಮತ್ತೊಂದು ಹೆಸರಿದು (3)
4. ಆಗಸದಲ್ಲಿ ಕಂಡಿತು ಡೇಗೆ (3)
5. ಒಂದು ನಿಗದಿತ ಕೆಲಸಕ್ಕಾಗಿ ನೇಮಿಸಿದ ಸಮಿತಿ (3)
6. ಪ್ರೀತಿಯನ್ನು ವ್ಯಕ್ತಪಡಿಸಲು ಸಾಮಾನ್ಯವಾಗಿ ಬಳಸುವ ಹೂವು (3)
8. ತುಂಬಾ ಮಾತನಾಡುವವನು ತಲೆಕೆಳಗಾಗಿದ್ದಾನೆ (3)
11. ನೀರಾಗು ಅಥವಾ ಮರುಕಗೊಳ್ಳು ಎಂದರ್ಥ (3)
13. ಕುದುರೆಯನ್ನು ಹತ್ತಲು ಜೀನಿಗೆ ಅಳವಡಿಸಿರುವ ಬಳೆ (3)
15. ವಿಷಯವೊಂದರಲ್ಲಿ ಪಾರಂಗತ ಎಂದರ್ಥ (3)
16. ಒಳ್ಳೆಯ ಆಸಕ್ತಿ (3)
17. ವೇಗಕ್ಕೆ ಹೀಗೆಯೂ ಹೇಳಬಹುದು (3)
18. ದೋಷವನ್ನು ಹೀಗೆ ಹೇಳಬಹುದು (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: [illegible]

ಮೇಲಿಂದ ಕೆಳಕ್ಕೆ: [illegible]

ಉದ್ಧವನಿಗೆ ಜೀವನದ ಪಾಠವನ್ನು ಹೇಳಿದ ಕೃಷ್ಣ

ಅದು ಕೃಷ್ಣಾವತಾರದ ಕೊನೆಯ ಗಳಿಗೆ. ತನ್ನ ಜತೆಯಲ್ಲಿದ್ದ ಉದ್ಧವನಿಗೆ, 'ಏನಾದರೂ ಕೇಳು' ಎಂದು ಹೇಳುತ್ತಾನೆ ಕೃಷ್ಣ. ಆಗ ಉದ್ಧವ, "ನನಗೆ ನಿನ್ನ ಸ್ನೇಹವೇ ದೊಡ್ಡ ಸೌಭಾಗ್ಯ; ಆದರೂ ಕೆಲವು ಅನುಮಾನಗಳಿವೆ, ಅವನ್ನು ಪರಿಹರಿಸು" ಎಂದು ಕೇಳಿಕೊಳ್ಳುತ್ತಾನೆ. "ಅದೇನು?" ಎಂದು ಕೃಷ್ಣ ಕೇಳಿದಾಗ ಉದ್ಧವ, "ಪಾಂಡವರು ನಿನಗೆ ಪರಮಾಪ್ತರಾದರೂ ಅದೇಕೆ ಅಷ್ಟೊಂದು ಕಷ್ಟಪಟ್ಟರು? ನೀನೇಕೆ ಅವರನ್ನು ಜೂಜಿನಾಟದಲ್ಲಿ ಕಾಪಾಡಲಿಲ್ಲ? ಅಕ್ಷಯಾಂಬರವಿತ್ತು ದ್ರೌಪದಿಯನ್ನು ಕಾಪಾಡಲು ಕೊನೆಯ ಕ್ಷಣದವರೆಗೆ ಏಕೆ ಕಾದೆ? ಇವೆಲ್ಲವೂ ನನಗೆ ಸೋಜಿಗ" ಎಂದನು. ಆಗ ಕೃಷ್ಣನು ಮುಗುಳ್ನಗುತ್ತಾ, "ಇಂದು ನಿನಗೆ ಉದ್ಧವ ಗೀತೆಯನ್ನು ಬೋಧಿಸುತ್ತೇನೆ ಕೇಳು" ಎಂದು ಹೇಳಿ, "ನೋಡು ಉದ್ಧವ, ಕಷ್ಟದಲ್ಲಿದ್ದಾಗ ನನ್ನನ್ನು ಯಾರು ಸ್ಮರಿಸುತ್ತಾರೋ ಅವರನ್ನು ಕಾಪಾಡಲು ಸದಾಕಾಲ ಬದ್ಧನಾಗಿರುತ್ತೇನೆ. ಅನಿರೀಕ್ಷಿತವಾಗಿ ಕಷ್ಟಗಳು ಬಂದಾಗ ನನ್ನನ್ನು ಸ್ಮರಿಸಿದರೆ ಸಾಕು ನಾನು ಅವರನ್ನು ಕಾಪಾಡುವೆ. ಪಾಂಡವರಲ್ಲಿ ಯುಧಿಷ್ಠಿರ 'ನನಗೆ ಪಗಡೆ ಆಟ ಚೆನ್ನಾಗಿ ಆಡಲು ಬರುತ್ತದೆ, ನನಗೆ ಯಾರ ಜತೆಯೂ ಬೇಡ' ಎಂಬ ಅಹಂನಿಂದ ಆಡಲು ಕುಳಿತನು. ಆದೇ ದುರ್ಯೋಧನನಿಗೆ ಪಗಡೆ ಆಡುವ ಅನುಭವ ಇಲ್ಲದಿದ್ದರೂ ಅವನು ಅಪಾರ ಸಂಪತ್ತನ್ನು ಹೊಂದಿದ್ದ. ಆ ಸಂಪತ್ತಿಗೆ ತಕ್ಕಂತೆ ಅವನು ಆಟದಲ್ಲಿ ಪಣ ಕಟ್ಟುತ್ತಿದ್ದ. ಆತ, ಸ್ವತಃ ಆಟವಾಡದೆ ತಾನು ನಂಬಿದ ಸೋದರಮಾವ ಶಕುನಿ ಕೈಯಲ್ಲಿ ದಾಳಗಳನ್ನು ಆಡಿಸಿದ, ಅವನ್ನು ತನ್ನ ಕೈಯಿಂದ ಮುಟ್ಟಲೂ ಇಲ್ಲ. ಆದರೆ ಯುಧಿಷ್ಠಿರ ಆ ಸಮಯದಲ್ಲಿ ನನ್ನನ್ನು ಸ್ಮರಿಸಲಿಲ್ಲ, ಸಹಾಯ ಕೇಳಲಿಲ್ಲ. ಒಂದು ವೇಳೆ ಶಕುನಿಯ ಜತೆ ನಾನು ಸೇರಿ ಆಡಿದ್ದರೆ ಶಕುನಿ ಗೆಲ್ಲಲು ಆಗುತ್ತಿರಲಿಲ್ಲ. ಯುಧಿಷ್ಠಿರ ತನ್ನದೇ ಕರ್ಮಫಲದಿಂದಾಗಿ ಈ ಆಟದಲ್ಲಿ ಭಾಗಿಯಾಗಬೇಕಾಗಿದೆ ಎಂದುಕೊಂಡ, ಆದರೆ ನನ್ನನ್ನು ವಿಚಾರಿಸಲಿಲ್ಲ. ಅಲ್ಲದೆ ಯಾವುದೇ ಕಾರಣಕ್ಕೂ ಕೃಷ್ಣನಿಗೆ ವಿಷಯ ತಿಳಿಯಬಾರದು ಮತ್ತು ಈ ಕಡೆ ಕೃಷ್ಣ ತಲೆಹಾಕಬಾರದು ಎಂದು ಮನದಲ್ಲಿ ಪ್ರಾರ್ಥಿಸಿದ್ದ. ಇದರ ಕುರಿತಾಗಿ ನನ್ನಲ್ಲಿ ಸಲಹೆಯನ್ನೂ ಕೇಳಲಿಲ್ಲ. ಇನ್ನು ಭೀಮ-ಅರ್ಜುನ-ನಕುಲ-ಸಹದೇವ ಇವರೆಲ್ಲ ದಾಳ ಆಡಿ ಕಳೆದುಕೊಳ್ಳುತ್ತಿರುವುದು ತಮ್ಮ ಕರ್ಮಫಲ ಎಂದುಕೊಂಡರೇ ಹೊರತು, ಒಂದು ಕ್ಷಣವೂ ನನ್ನ ಸಹಾಯ ಕೇಳಲು ಅವರು ಮನಸ್ಸು ಮಾಡಲಿಲ್ಲ. ಹಾಗೆಯೇ, ಏನೋ ಅವಘಡ ಸಂಭವಿಸುತ್ತಿದೆ ಎಂಬುದು ದ್ರೌಪದಿಯ ಅರಿವಿಗೆ ಬಂದಿದ್ದರೂ, ಅವಳೂ ನನ್ನನ್ನು ಸ್ಮರಿಸಲಿಲ್ಲ, ಕರೆಯಲಿಲ್ಲ. ದುಶ್ಶಾಸನ ಬಂದು ಅವಳನ್ನು ಎಳೆದುಕೊಂಡು ಸಭೆ ಮಧ್ಯೆ ಹೋದಾಗ ಅಲ್ಲಿರುವ ಹಿರಿಯರನ್ನೆಲ್ಲ ಪ್ರಾರ್ಥಿಸಿದಳೇ ಹೊರತು ನನ್ನನ್ನು ಕರೆಯಲಿಲ್ಲ. ಅವರ್‍ಯಾರೂ ಇವಳ ಸಹಾಯಕ್ಕೆ ಬಾರದಿದ್ದಾಗ, ಹತಾಶಳಾಗಿ ದುಃಖದಿಂದ 'ಕೃಷ್ಣ ಕಾಪಾಡು' ಎಂದು ಕೂಗಿದಳು. ನಾನು ಕಡೆಯ ಕ್ಷಣದವರೆಗೂ, ಅವರು ನನ್ನನ್ನು ಕರೆಯುತ್ತಾರೆ ಎಂಬ ನಿರೀಕ್ಷೆಯಲ್ಲಿದ್ದೆ. ದ್ರೌಪದಿ ಕೂಗಿದ ಒಂದೇ ಕೂಗಿಗೆ ಹೋಗಿ ಅವಳಿಗೆ ಸಹಾಯ ಮಾಡಿದೆ. ಈಗ ಹೇಳು ಇದರಲ್ಲಿ ನನ್ನ ತಪ್ಪೇನಿದೆ?" ಎಂದು ಕೇಳಿದ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಉದ್ಧವ ಪಟ್ಟು ಬಿಡದೆ, "ನಮ್ಮಂಥ ಸಾಮಾನ್ಯ ಮನುಷ್ಯರು ಕಷ್ಟದಲ್ಲಿದ್ದಾಗ ನಿನ್ನನ್ನು ಕರೆಯಲು ನಮ್ಮ ಸ್ಮರಣೆಗೆ ಬರದೇ ಇರಬಹುದು ಅಥವಾ ನಾವು ಗಾಬರಿಯಿಂದ ಮರೆಯಬಹುದು. ಆಗ ನೀನು ಸಹಾಯಮಾಡಲು ಬರುವುದಿಲ್ಲವೇ? ಗೊತ್ತಿದ್ದೋ ಗೊತ್ತಿಲ್ಲದೆಯೋ ಕೆಟ್ಟ ಕೆಲಸ ಮಾಡುತ್ತಿದ್ದರೆ ನೀನು ಅದನ್ನು ನೋಡಿಕೊಂಡು ಸುಮ್ಮನಿರುವೆಯಾ? ಹುಲುಮಾನವರಾದ ನಮ್ಮಂಥವರನ್ನು ನೀನು ತಡೆಯುವುದಿಲ್ಲವೇ? ನಿನ್ನದು ಇದೆಂಥ ಧರ್ಮ?" ಎಂದು ಕೇಳಿದ.

ಆಗ ಕೃಷ್ಣ, "ನೀನು ಸರಿಯಾಗಿ ಗಮನಿಸಿ ನೋಡು, ಭಗವಂತ ನಿನ್ನೊಳಗೇ ಇದ್ದಾನೆ, ನಿನ್ನನ್ನು ನೋಡುತ್ತಿದ್ದಾನೆ ಎಂದು ನೀನು ಭಾವಿಸಿದರೆ ಸಾಕು, ತಪ್ಪು ಮಾಡಲು ಸಾಧ್ಯವೇ ಇಲ್ಲ. ಅಹಂಕಾರದಿಂದ ಅವಿವೇಕದಿಂದ ಮನುಷ್ಯ ನನ್ನನ್ನು ಮರೆತರೆ ತಪ್ಪು ಮಾಡುತ್ತಾನೆ, ಅಡ್ಡದಾರಿ ಹಿಡಿಯುತ್ತಾನೆ. ಅಲ್ಲದೆ ಭಗವಂತ ನಮ್ಮ ಆತ್ಮದೊಳಗೆ ಇದ್ದಾನೆ ಎಂಬುದನ್ನು ಗಮನಿಸದೆ ಅವಿವೇಕದಿಂದ ವರ್ತಿಸಿದರೆ ನಾನೂ ಸಹಾಯಮಾಡಲು ಸಾಧ್ಯವಿಲ್ಲ" ಎಂದನು.

ಪರಮಾತ್ಮನ ಬಗೆಗೆ ಸಮರ್ಪಣಾಭಾವ ಇದ್ದಾಗ, ಅವನಲ್ಲಿ ಸಂಪೂರ್ಣ ನಂಬಿಕೆ ಇದ್ದಾಗ ಮಾತ್ರ ಅವನ ಕೃಪೆಗೆ ನಾವು ಪಾತ್ರರಾಗಲು ಸಾಧ್ಯ. ಅಹಂಕಾರವಿದ್ದಲ್ಲಿ ಅವನಿರುವುದಿಲ್ಲ. ಕೃಷ್ಣನ ಈ ಮಾತುಗಳು ನಮ್ಮ ನಿಮ್ಮೆಲ್ಲರಿಗೂ ಪಾಠವಾಗಲಿ.

ನೀವೂ ಬರೆಯಬಹುದು | ನಮ್ಮ ವಿಳಾಸ | ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಕೆಕೆಆರ್‌ಗೆ ನಾಯರ್ ನೂತನ ಹೆಡ್ ಕೋಚ್

ದೆಹಲಿ: ಮುಂಬರುವ ಐಪಿಎಲ್ ಟೂರ್ನಿಯ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ ನೂತನ ಹೆಡ್ ಕೋಚ್ ಆಗಿ ಅಭಿಷೇಕ್ ನಾಯರ್ ನೇಮಕಗೊಂಡಿದ್ದು, ಚಂದ್ರಕಾಂತ್ ಪಂಡಿತ್ ಅವರ ಸ್ಥಾನವನ್ನು ಅಲಂಕರಿಸಿದ್ದಾರೆ. ಅಭಿಷೇಕ್ ನಾಯರ್ ಹಲವು ವರ್ಷಗಳ ಕಾಲ ಕೋಲ್ಕತ್ತಾ ಫ್ರಾಂಚೈಸಿಯಲ್ಲಿ ಸಹಾಯಕ ಕೋಚ್ ಸೇರಿದಂತೆ ಹಲವು ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಇತ್ತೀಚೆಗೆ ಅಭಿಷೇಕ್ ನಾಯರ್ ಅವರು ಭಾರತ ತಂಡದ ಸಹಾಯಕ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದರು. ತಮ್ಮ ಕ್ರಿಕೆಟ್ ವೃತ್ತಿ ಜೀವನಕ್ಕೆ ವಿದಾಯ ಹೇಳಿದ ಬಳಿಕ ಅವರು ಕೋಚಿಂಗ್ ಹುದ್ದೆಯನ್ನು ನಿರ್ವಹಿಸುತ್ತಿದ್ದು ರಿಂಕು ಸಿಂಗ್, ಹರ್ಷಿತ್ ರಾಣಾ ಸೇರಿದಂತೆ ಹಲವು ಯುವ ಪ್ರತಿಭೆಗಳಿಗೆ ಕೋಚ್ ಆಗಿಯೂ ಕಾರ್ಯ ನಿರ್ವಹಿಸಿದ್ದಾರೆ. 2024ರಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ ಮೂರನೇ ಬಾರಿ ಕಪ್ ಗೆದ್ದಾಗ ಹೆಡ್ ಕೋಚ್ ಗೌತಮ್ ಗಂಭೀರ್‌ಗೆ ಅಭಿಷೇಕ್ ನಾಯರ್ ಸಹಾಯಕ ಕೋಚ್ ಆಗಿದ್ದರು. ಕಳೆದ ಆವೃತ್ತಿಯ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಯು.ಪಿ ವಾರಿಯರ್ಸ್ ತಂಡಕ್ಕೆ ಹೆಡ್ ಕೋಚ್ ಆಗಿಯೂ ಕಾರ್ಯ ನಿರ್ವಹಿ ಸಿದ್ದಾರೆ. ಇದೀಗ ಅವರು ಮತ್ತೆ ಕೋಲ್ಕತ್ತಾ ನೈಟ್ ರೈಡರ್ಸ್ ದೊಡ್ಡ ಹುದ್ದೆಯ ಮೂಲಕ ಮರಳಿದ್ದಾರೆ.

ಆಸೀಸ್ ಯುವ ಕ್ರಿಕೆಟಿಗ ಸಾವು

ಸಿಡ್ನಿ: ಕ್ರಿಕೆಟ್ ಅಭ್ಯಾಸದ ವೇಳೆ ಚೆಂಡು ತಲೆಗೆ ತಗಲಿ ಯುವ ಕ್ರಿಕೆಟಿಗನೊಬ್ಬ ಮೃತಪಟ್ಟ ದಾರುಣ ಘಟನೆ ಆಸ್ಟ್ರೇಲಿಯಾದಲ್ಲಿ ನಡೆದಿದೆ.



ಸ್ಥಳೀಯ ಫೆರ್ನ್‌ಟ್ರೀ ಗಲ್ಲಿ ಕ್ರಿಕೆಟ್ ಕ್ಲಬ್‌ನಲ್ಲಿ ತಾಲೀಮು ನಡೆಸುತ್ತಿದ್ದ 17 ವರ್ಷದ ಬೆನ್ ಆಸ್ಟಿನ್ ಮೃತಪಟ್ಟ ಕ್ರಿಕೆಟಿಗ. ನೆಟ್ಸ್‌ನಲ್ಲಿ ಅಭ್ಯಾಸ ಮಾಡುತ್ತಿದ್ದ ಸಮಯದಲ್ಲಿ ಬೆನ್ ಆಸ್ಟಿನ್ ಕುತ್ತಿಗೆಗೆ ಚೆಂಡು ಬಲವಾಗಿ ತಗುಲಿತು. ಗಾಯ ತೀವ್ರವಾಗಿದ್ದರಿಂದ, ಅವರನ್ನು ತಕ್ಷಣವೇ ಹತ್ತಿರದ ವೈದ್ಯಕೀಯ ಕೇಂದ್ರಕ್ಕೆ ಕರೆದೊಯ್ಯಲಾಯಿತು, ಆದರೆ ಚಿಕಿತ್ಸೆ ಫಲಕಾರಿಯಾದೆ ಸಾವನಪ್ಪಿದ್ದಾರೆ. ಅಭ್ಯಾಸದ ಸಮಯದಲ್ಲಿ ಅವರು ಹೆಲ್ಮೆಟ್ ಧರಿಸಿದ್ದರು, ಆದರೆ ಕುತ್ತಿಗೆ ರಕ್ಷಣೆಯನ್ನು ಹೊಂದಿರಲಿಲ್ಲ. 1998ರಲ್ಲಿ ಬಾಂಗ್ಲಾದೇಶದ ಢಾಕಾದಲ್ಲಿ ಫೀಲ್ಡಿಂಗ್ ಮಾಡುತ್ತಿದ್ದ ವೇಳೆ ಭಾರತದ ಕ್ರಿಕೆಟರ್ ರಮಣ್ ಲಾಂಬಾ ಅವರು ಚೆಂಡು ತಲೆಗೆ ಬಡಿದು ಮೃತಪಟ್ಟಿದ್ದರು. ಕಳೆದ ವರ್ಷ ಮೇ ತಿಂಗಳಿನಲ್ಲಿ ಚೆಂಡು ಮರ್ಮಾಂಗಕ್ಕೆ ಬಿದ್ದು ಬಾಲಕನೊಬ್ಬ ಮೃತಪಟ್ಟಿದ್ದ ಘಟನೆ ಪುಣೆಯಲ್ಲಿ ವರದಿಯಾಗಿತ್ತು.

ವಿರಾಮ
ಪ್ರತಿ ಭಾನುವಾರ

ಮಹಿಳಾ ಏಕದಿನ ವಿಶ್ವಕಪ್ | ಜೆಮಿಮಾ ರೊಡ್ರಿಗಸ್ ಭರ್ಜರಿ ಶತಕ | ಸೆಮಿ ಫೈನಲ್‌ನಲ್ಲಿ ಆಸ್ಟ್ರೇಲಿಯಾಗೆ ಸೋಲು

ಕಾಂಗರೂ ಗರ್ವಭಂಗ: ಭಾರತ ಫೈನಲ್‌ಗೆ

ಮುಂಬೈ: ಜೆಮಿಮಾ ರೊಡ್ರಿಗಸ್ ಅವರ ಅಜೇಯ ಭರ್ಜರಿ ಶತಕ ಹಾಗೂ ಹರ್ಮನ್‌ಪ್ರೀತ್ ಕೌರ್ ಅವರ ಅರ್ಧಶತಕದ ಬಲದಿಂದ ಭಾರತ ತಂಡವು ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಬಲಿಷ್ಠ ಆಸ್ಟ್ರೇಲಿಯಾ ವಿರುದ್ಧ 5 ವಿಕೆಟ್‌ಗಳ ರೋಚಕ ಗೆಲುವು ಸಾಧಿಸಿತು. ಇದರೊಂದಿಗೆ ಲೀಗ್ ಹಂತದಲ್ಲಿನ ಆಸೀಸ್ ವಿರುದ್ಧದ ಸೋಲಿನ ಸೇಡನ್ನು ಭಾರತೀಯ ವನಿತೆಯರು ಗುರುವಾರ ತೀರಿಸಿಕೊಂಡರು. ಫೋಬೆ ಲಿಚ್‌ಫೀಲ್ಡ್ ಶತಕದ ಹೊರತಾಗಿಯೂ ಸೋತು ಆಸೀಸ್‌ನ ಎಂಟನೇ ವಿಶ್ವಕಪ್ ಗೆಲ್ಲುವ ಕನಸು ಭಗ್ನವಾಯಿತು.

ಇಲ್ಲಿನ ಡಿ.ವೈ ಪಾಟೀಲ್ ಕ್ರಿಕೆಟ್ ಅಕಾಡೆಮಿ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ನೀಡಿದ್ದ 339 ರನ್‌ಗಳ ಕಠಿಣ ಗುರಿಯನ್ನು ಬೆಂಬತ್ತಿದ ಭಾರತ ತಂಡ ಎರಡು ವಿಕೆಟ್‌ಗಳನ್ನು ಕಳೆದುಕೊಂಡು ಆರಂಭಿಕ ಆಘಾತಕ್ಕೆ ಸಿಲುಕಿತ್ತು. ಆದರೆ ಜೆಮಿಮಾ ರೊಡ್ರಿಗಸ್ ಹಾಗೂ ಹರ್ಮನ್‌ಪ್ರೀತ್ ಕೌರ್ ಅವರ 167 ರನ್‌ಗಳ ಜತೆಯಾಟದ ಬಲದಿಂದ 48.3 ಓವರ್‌ಗಳಿಗೆ 4 ವಿಕೆಟ್ ನಷ್ಟಕ್ಕೆ 341 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಈ ಗೆಲುವಿನ ಮೂಲಕ ಭಾರತ ಮಹಿಳಾ ತಂಡದ ಚೊಚ್ಚಲ ಮಹಿಳಾ ಏಕದಿನ ವಿಶ್ವಕಪ್ ಗೆಲ್ಲುವ ಕನಸು ಜೀವಂತವಾಗಿ ಉಳಿದುಕೊಂಡಿದೆ. ನವೆಂಬರ್ 2ರಂದು ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ಮಹಿಳಾ ತಂಡವು ಫೈನಲ್‌ನಲ್ಲಿ ಕಾದಾಟ ನಡೆಸಲಿದೆ.

ಜೆಮಿಮಾ ಭರ್ಜರಿ ಶತಕ: ಆಸೀಸ್ ನೀಡಿದ ಗುರಿ ಹಿಂಬಾಲಿಸಿದ ಭಾರತ ತಂಡ, 13 ರನ್ ಇದ್ದಾಗ ಶಫಾಲಿ ವರ್ಮಾ ಹಾಗೂ 59 ರನ್‌ಗೆ ಸ್ಮೃತಿ ಮಂಧಾನಾ ಅವರ ವಿಕೆಟ್‌ಗಳನ್ನು ಕಳೆದುಕೊಂಡು ಆರಂಭಿಕ ಆಘಾತ ಅನುಭವಿಸಿತ್ತು. ಆದರೆ ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದು ಕೊನೆಯವರೆಗೂ ಅಜೇಯರಾಗಿ ಬ್ಯಾಟ್ ಮಾಡಿದ ಜೆಮಿಮಾ ರೊಡ್ರಿಗಸ್ 134 ಎಸೆತಗಳಲ್ಲಿ 14 ಬೌಂಡರಿಗಳೊಂದಿಗೆ 127 ರನ್ (ಅಜೇಯ) ಗಳಿಸಿ ಭಾರತ ತಂಡವನ್ನು ಗೆಲ್ಲಿಸಿದರು. ನಾಯಕಿ ಹರ್ಮನ್‌ಪ್ರೀತ್ ಕೌರ್ (89) ಜತೆ 167 ರನ್‌ಗಳ ನಿರ್ಣಾಯಕ ಜತೆಯಾಟವನ್ನು ಆಡಿದರು. ಅಮೋಘ ಪ್ರದರ್ಶನ ನೀಡಿದ ಜೆಮಿಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ದೀಪ್ತಿ ಶರ್ಮಾ 24 ಹಾಗೂ ರಿಚಾ ಘೋಷ್ 26 ಅವರು ಭಾರತಕ್ಕೆ ಉಪಯುಕ್ತ ಕಾಣಿಕೆ ನೀಡಿದರು.

ಭಾರತದ ದಾಖಲೆ

ಗುರುವಾರ ಭಾರತವು ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಅತಿಹೆಚ್ಚು ಮೊತ್ತ ಚೇಸ್ ಮಾಡಿ ವಿಶ್ವದಾಖಲೆ ಬರೆದಿದೆ. ಮಹಿಳಾ ವಿಶ್ವಕಪ್ ಇತಿಹಾಸದಲ್ಲಿ ಆಸ್ಟ್ರೇಲಿಯಾ ಸಿಡಿಸಿದ 338 ರನ್ 2ನೇ ಅತಿ ಹೆಚ್ಚು ಮೊತ್ತವಾಗಿತ್ತು. ಕೇವಲ ವಿಶ್ವಕಪ್‌ನಲ್ಲಿ ಮಾತ್ರವಲ್ಲ ಮಹಿಳಾ ಏಕದಿನ ವಿಶ್ವಕಪ್ ಇತಿಹಾಸದಲ್ಲಿ ಭಾರತ ಆ ಗುರಿಯನ್ನು ದಾಟಿ ಅತ್ಯಂತ ಗರಿಷ್ಠ ಚೇಸ್ ಮಾಡಿ ತನ್ನ ಗೆಲುವನ್ನು ಪಡೆದುಕೊಂಡಿದೆ.

338 ರನ್ ಕಲೆ ಹಾಕಿದ್ದ ಆಸ್ಟ್ರೇಲಿಯಾ: ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದ್ದ ಆಸೀಸ್ ತಂಡದ ನಾಯಕಿ ಅಲಿಸಾ ಹೀಲಿ (5) ಬಹುಬೇಗ ವಿಕೆಟ್ ಒಪ್ಪಿಸಿದರು. ಫೋಬೆ ಲಿಚ್‌ಫೀಲ್ಡ್ ಶತಕ (119 ರನ್) ಮತ್ತು ಎಲಿಸ್ ಪೆರಿ (77) ಹಾಗೂ ಆಶ್ಲೆ ಗಾರ್ಡ್ನರ್ (63) ಅವರ ಅರ್ಧಶತಕಗಳ ಬಲದಿಂದ 49.5 ಓವರ್‌ಗಳಿಗೆ 338 ರನ್ ಕಲೆ ಹಾಕಿತು.

ಫೋಬೆ ಲಿಚ್‌ಫೀಲ್ಡ್ ಶತಕ: ಒಂದು ತುದಿಯಲ್ಲಿ ಕ್ರೀಸ್‌ನಲ್ಲಿ ತಳವೂರಿ ಬ್ಯಾಟ್ ಮಾಡಿದ ಲಿಚ್‌ಫೀಲ್ಡ್, ಭಾರತೀಯ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಎರಡನೇ ವಿಕೆಟ್‌ಗೆ ಎಲಿಸ್ ಪೆರ್ರಿ ಮತ್ತು ಫೋಬೆ ಲಿಚ್‌ಫೀಲ್ಡ್ ಅವರು 155 ರನ್‌ಗಳ ಜತೆಯಾಟವನ್ನು ಆಡಿದರು. ಆ ಮೂಲಕ ತಂಡದ ಮೊತ್ತವನ್ನು 200ರ ಗಡಿ ದಾಟಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಒಂದು ತುದಿಯಲ್ಲಿ ಅದ್ಭುತವಾಗಿ ಬ್ಯಾಟ್ ಮಾಡಿದ ಎಲಿಸ್ ಪೆರಿ 88 ಎಸೆತಗಳಲ್ಲಿ ಎರಡು ಸಿಕ್ಸರ್ ಹಾಗೂ 6 ಬೌಂಡರಿಗಳೊಂದಿಗೆ 77 ರನ್ ಗಳಿಸಿ ರಾಧಾ ಯಾದವ್‌ಗೆ ಕ್ಲೀನ್ ಬೌಲ್ಡ್ ಆದರು. ಆಶ್ಲೆ ಗಾರ್ಡ್ನರ್ ಕೂಡ ಅದ್ಭುತ ಇನ್ನಿಂಗ್ಸ್ ಆಡಿದರು. 45 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 4 ಬೌಂಡರಿಗಳೊಂದಿಗೆ 63 ರನ್ ಕಲೆ ಹಾಕಿದರು. ಆ ಮೂಲಕ ತಂಡದ ಮೊತ್ತ 330ರ ಗಡಿ ದಾಟಲು ಪ್ರಮುಖ ಪಾತ್ರವನ್ನು ವಹಿಸಿದರು.

ಶ್ರೀಚರಣಿ ಅದ್ಭುತವಾಗಿ ಬೌಲ್ ಮಾಡಿ ಎರಡು ವಿಕೆಟ್ ಪಡೆದರೆ, ದೀಪ್ತಿ ಶರ್ಮಾ ಸ್ವಲ್ಪ ದುಬಾರಿಯಾದರೂ ಎರಡು ವಿಕೆಟ್ ಪಡೆದರು.

8 ವರ್ಷ ಬಳಿಕ ಫೈನಲ್ ಪ್ರವೇಶಿಸಿದ ಭಾರತ

2017ರ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಭಾರತ-ಆಸೀಸ್ ತಂಡಗಳು ಮುಖಾಮುಖಿಯಾಗಿದ್ದವು. ಆ ಪಂದ್ಯದಲ್ಲಿ ಟೀಮ್ ಇಂಡಿಯಾ ಜಯಭೇರಿ ಬಾರಿಸಿ ಅಂತಿಮ ಸುತ್ತಿಗೆ ಲಗ್ಗೆ ಇಟ್ಟಿತ್ತು. ಹರ್ಮನ್ ಪ್ರೀತ್ ಕೌರ್ ಆ ಪಂದ್ಯದಲ್ಲಿ ಅಜೇಯ 171 ರನ್ ಗಳಿಸಿ ಜಯ ತಂದುಕೊಟ್ಟಿದ್ದರು.

ಭಾರತ-ಆಸ್ಟ್ರೇಲಿಯಾ ರೋಚಕ ಹಣಾಹಣಿ ಸಾಧ್ಯತೆ

ಇಂದು 2ನೇ ಟಿ20 ಪಂದ್ಯ

ಮೆಲ್ಬೋರ್ನ್: ಮೊದಲನೇ ಟಿ20 ಪಂದ್ಯ ಮಳೆಗೆ ಬಲಿಯಾದ ಬಳಿಕ ಇದೀಗ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳು ಎರಡನೇ ಪಂದ್ಯಕ್ಕೆ ಸಜ್ಜಾಗುತ್ತಿವೆ. ಉಭಯ ತಂಡಗಳ ನಡುವಣ ಎರಡನೇ ಹಣಾಹಣಿ ಶುಕ್ರವಾರ ಇಲ್ಲಿನ ಮೆಲ್ಬೋರ್ನ್ ಕ್ರಿಕೆಟ್ ಗ್ರೌಂಡ್‌ನಲ್ಲಿ ನಡೆಯಲಿದೆ. ಈ ಪಂದ್ಯವನ್ನು ಗೆದ್ದು 5 ಪಂದ್ಯಗಳ ಟಿ20 ಸರಣಿಯಲ್ಲಿ ಮುನ್ನಡೆ ಗಳಿಸಲು ಎರಡೂ ತಂಡಗಳು ಎದುರು ನೋಡುತ್ತಿವೆ. ಏಕದಿನ ಸರಣಿಯನ್ನು ಸೋತಿರುವ ಭಾರತ ತಂಡ, ಇದೀಗ ಟಿ20 ಸರಣಿಯನ್ನು ಗೆದ್ದು ಆತಿಥೇಯರಿಗೆ ತಿರುಗೇಟು ನೀಡಲು ಕಾತರವಾಗಿದೆ.

ಕ್ಯಾನ್‌ಬೆರಾದ ಮನುಕಾ ಓವಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದಿದ್ದ ಪಂದ್ಯ ಫಲಿತಾಂಶವಿಲ್ಲದೆ ರದ್ದಾಗಿತ್ತು. ಆ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡುವಂತಾಗಿದ್ದ ಭಾರತ ತಂಡ, ಬಹುಬೇಗ ಅಭಿಲಾಷ್ ಶರ್ಮಾ ಅವರ ವಿಕೆಟ್ ಅನ್ನು ಕಳೆದುಕೊಂಡಿದ್ದರೂ ಶುಭಮನ್ ಗಿಲ್ ಹಾಗೂ ನಾಯಕ ಸೂರ್ಯಕುಮಾರ್ ಯಾದವ್ ಅವರ ಭರ್ಜರಿ ಬ್ಯಾಟಿಂಗ್ ಬಲದಿಂದ ಉತ್ತಮ ಮೊತ್ತವನ್ನು ಕಲೆ ಹಾಕಿತ್ತು. ಹಾಗಾಗಿ ಎರಡನೇ ಪಂದ್ಯದಲ್ಲಿಯೂ ಕೂಡ ಭಾರತ ತಂಡ ಅದೇ ತಂಡವನ್ನು ಮುಂದುವರಿಸ ಬಹುದು. ಆಸ್ಟ್ರೇಲಿಯಾ ತಂಡ ಕೂಡ ಅದೇ ಆಡುವ ಬಳಗವನ್ನೇ ಕಣಕ್ಕಿಳಿಸಬಹುದು. ಇನ್ನೂ ನಾಲ್ಕು ಪಂದ್ಯಗಳು ಬಾಕಿ ಇರುವ ಕಾರಣ ಶುಕ್ರವಾರ ನಡೆಯುವ ಪಂದ್ಯದಲ್ಲಿ ಕಠಿಣ ಪೈಪೋಟಿ ಏರ್ಪಡಲಿದೆ.

ಪಿಚ್ ರಿಪೋರ್ಟ್: ಎರಡನೇ ಟಿ20 ಪಂದ್ಯ ನಡೆಯುವ ಮೆಲ್ಬೋರ್ನ್ ಕ್ರಿಕೆಟ್ ಗ್ರೌಂಡ್ ಪಿಚ್ ಸಮತೋಲನದಿಂದ ಕೂಡಿದೆ. ವೇಗ ಮತ್ತು ಬೌನ್ಸ್‌ನಿಂದಾಗಿ ಬ್ಯಾಟ್ಸ್‌ಮನ್‌ಗಳಿಗೆ ನೆರವಾಗುತ್ತಿತ್ತು. ಇನ್ನು ಬೌಲರ್‌ಗಳು ಸರಿಯಾದ ಜಾಗದಲ್ಲಿ ಪಿಚ್ ಮಾಡಿದರೆ, ಅವರಿಗೆ ನೆರವು ನೀಡಬಹುದು.

ಸಂಭಾವ್ಯ ಭಾರತ ತಂಡ: ಅಭಿಷೇಕ್ ಶರ್ಮಾ, ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್ (ನಾಯಕ), ತಿಲಕ್ ವರ್ಮಾ, ಸಂಜು ಸ್ಯಾಮ್ಸನ್ (ಕೀಪರ್), ಶಿವಂ ದುಬೆ, ಅಕ್ಷರ್ ಪಟೇಲ್, ಹರ್ಷಿತ್ ರಾಣಾ, ಕುಲ್ದೀಪ್ ಯಾದವ್, ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬುಮ್ರಾ

ಸಂಭಾವ್ಯ ಆಸೀಸ್ ತಂಡ: ಮಿಚೆಲ್ ಮಾರ್ಷ್ (ನಾಯಕ), ಟ್ರಾವಿಸ್ ಹೆಡ್, ಜಾಶ್ ಇಂಗ್ಲಿಸ್ (ಕೀಪರ್), ಟಿಮ್ ಡೇವಿಡ್, ಮಿಚೆಲ್ ಓವೆನ್, ಮಾರ್ಕಸ್ ಸ್ಟೋಯ್ನಿಸ್, ಜಾಶ್ ಫಿಲಿಪ್, ಕ್ಸೇವಿಯರ್ ಬಾರ್ಟ್ಲೆಟ್, ನೇಥನ್ ಎಲ್ಲಿಸ್, ಮ್ಯಾಥ್ಯೂ ಕುಹ್ನೇಮನ್, ಜಾಶ್ ಹೇಜಲ್‌ವುಡ್.

ಪ್ರತೀ ಎರಡು ವರ್ಷಗಳಿಗೊಮ್ಮೆ ನಡೆಯುವ ಪಂದ್ಯಾವಳಿ

ಇಂದಿನಿಂದ ಪಣಜಿಯಲ್ಲಿ ಫಿಡೆ ಚೆಸ್ ವಿಶ್ವಕಪ್

ಪಣಜಿ: ಬಹುನಿರೀಕ್ಷಿತ ಫಿಡೆ ಚೆಸ್ ವಿಶ್ವಕಪ್ ಪಂದ್ಯಾವಳಿಗೆ ವೇದಿಕೆ ಸಜ್ಜಾಗಿದೆ. ಶುಕ್ರವಾರದಂದು ಕ್ರೀಡಾಕೂಟಕ್ಕೆ ಗೋವಾದಲ್ಲಿ ಚಾಲನೆ ಸಿಗಲಿದ್ದು, ನವೆಂಬರ್ 27ರ ವರೆಗೆ ಪಂದ್ಯಾವಳಿ ನಡೆಯಲಿದೆ. 2ನೇ ಬಾರಿಗೆ ಭಾರತವು ಟೂರ್ನಿಗೆ ಆತಿಥ್ಯ ವಹಿಸುತ್ತಿದೆ. 2002ರಲ್ಲಿ ಕೊನೆಯ ಬಾರಿ ಚೆಸ್ ವಿಶ್ವಕಪ್‌ನ ಆತಿಥ್ಯ ವಹಿಸಿದ್ದಾಗ ಹೈದರಾಬಾದ್‌ನಲ್ಲಿ ಟೂರ್ನಿ ನಡೆದಿತ್ತು. ವಿಶ್ವನಾಥನ್ ಆನಂದ್ ಆ ವರ್ಷ ಪ್ರಶಸ್ತಿ ಗೆದ್ದುಕೊಂಡಿದ್ದರು.

24 ಭಾರತೀಯರು ಸೇರಿದಂತೆ ಈ ಟೂರ್ನಿಯಲ್ಲಿ 206 ಆಟಗಾರರು ಭಾಗವಹಿಸುತ್ತಿದ್ದು, ಪ್ರಶಸ್ತಿಯ ಜೊತೆಗೆ ಮೊದಲ ಮೂರು ಸ್ಥಾನ ಪಡೆದವರು 2026ರ ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯಲಿದ್ದಾರೆ. ವರ್ಷದ ಅತೀದೊಡ್ಡ ಚೆಸ್ ಪಂದ್ಯಾವಳಿಗಳಲ್ಲಿ ಫಿಡೆ ಚೆಸ್ ವಿಶ್ವಕಪ್ ಪ್ರತೀ ಎರಡು ವರ್ಷಗಳಿಗೊಮ್ಮೆ ನಡೆಯುತ್ತದೆ.

ಅಗ್ರ ಶ್ರೇಯಾಂಕದ ಡಿ.ಗುಕೇಶ್ ಎಲ್ಲಾ ಹಂತಗಳಲ್ಲಿಯೂ ಅತ್ಯಂತ ನೆಚ್ಚಿನ ಆಟಗಾರರಲ್ಲಿ ಒಬ್ಬರಾಗಲಿದ್ದಾರೆ, ಅರ್ಜುನ್ ಎರಿಗೈಸಿ, ಆರ್ ಪ್ರಜ್ಞಾನಂದ, ಅನೀಶ್ ಗಿರಿ, ವೆಸ್ಲಿ ಸೋ ಮತ್ತು ವಿನ್ಸೆಂಟ್ ಕೀಮರ್ ಮಧ್ಯೆ ಈ ಟೂರ್ನಿಯಲ್ಲಿ ತೀವ್ರ ಪೈಪೋಟಿ ಏರ್ಪಡುವ ಸಾಧ್ಯತೆ ಇದೆ

ಪ್ರೊ ಕಬಡ್ಡಿ ಲೀಗ್ | ರಾಷ್ಟ್ರ ರಾಜಧಾನಿ ತಂಡಕ್ಕೆ ಗೆಲ್ಲುವ ಆತ್ಮವಿಶ್ವಾಸ

ಡೆಲ್ಲಿ ದಬಾಂಗ್ ಚಿತ್ತ ಪ್ರಶಸ್ತಿ ಗೆಲ್ಲುವತ್ತ

ದೆಹಲಿ: ದಬಾಂಗ್ ಡೆಲ್ಲಿ ಕೆ.ಸಿ ತಂಡ ಹನ್ನೆರಡನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್ ಫೈನಲ್‌ಗೆ ಪ್ರವೇಶ ಮಾಡಿದ್ದು, ಪ್ರಬಲ ತಂಡಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ರಾಷ್ಟ್ರ ರಾಜಧಾನಿಯ ಈ ಫ್ರಾಂಚೈಸಿ ಈ ಸಲದ ಆವೃತ್ತಿಯನ್ನು ಸ್ಫೋಟಕ ರೀತಿಯಲ್ಲಿ ಆರಂಭಿಸಿ ಮೊದಲ ಆರು ಪಂದ್ಯಗಳನ್ನು ಗೆದ್ದುಕೊಂಡಿತ್ತು. ಪಟ್ನಾ ಪೈರೇಟ್ಸ್ ವಿರುದ್ಧ (33-30) ಸಣ್ಣ ಅಂತರದ ಸೋಲು ಕಂಡರೂ, ಅದು ತಂಡದ ಹೋರಾಟದ ಮನೋಭಾವವನ್ನು ಮತ್ತಷ್ಟು ಬಲಪಡಿಸಿತು. ಐದು ಸತತ ಜಯಗಳನ್ನು ದಾಖಲಿಸಿ, ಪ್ಲೇಆಫ್‌ಗೆ ಅರ್ಹತೆ ಪಡೆದ ಮೊದಲ ತಂಡವಾಯಿತು.

ದಬಾಂಗ್ ಡೆಲ್ಲಿ ಕೆ.ಸಿ ತಮ್ಮ ಅಂತಿಮ ಹಂತದ ಪಂದ್ಯಗಳಲ್ಲಿ ಬದಲಿ ಆಟಗಾರರಿಗೆ ಅವಕಾಶ ನೀಡಿತು. ಕ್ವಾಲಿಫೈಯರ್ ಒಂದರಲ್ಲಿ ಪುಣೇರಿ ಪಲ್ಟಾನ್ ವಿರುದ್ಧದ ಪೈಪೋಟಿ ನಡೆಸಿ ಎರಡೂ ತಂಡಗಳ ನಡುವೆ ಮೂರನೇ ಡ್ರಾ ಆಗುವಂತೆಯೂ ಪ್ರಯತ್ನಿಸಿತು.

ಟೈಬ್ರೇಕರ್‌ನಲ್ಲಿ ಡೆಲ್ಲಿ ದಬಾಂಗ್ ಕೆ.ಸಿ ತಂಡ ತಮ್ಮ ಸಮತೋಲನ ಕಾಪಾಡಿ 6-4 ಅಂತರದಲ್ಲಿ ಗೆದ್ದು ಫೈನಲ್‌ಗೆ ಮೊದಲ ತಂಡವಾಗಿ ಅರ್ಹತೆ ಪಡೆದಿತ್ತು. ಗೆಲುವಿನ ಬಳಿಕ ಮಾತನಾಡಿದ ದಬಾಂಗ್ ಡೆಲ್ಲಿ ಕೆ.ಸಿಯ ಮುಖ್ಯ ಕೋಚ್ ಜೋಗಿಂದರ್ ನರವಾಲ್, 'ಈ ಆವೃತ್ತಿಯಲ್ಲಿ ನಮ್ಮ ತಂಡ ನಿರಂತರ ಹೋರಾಟ ನಡೆಸಿದ್ದು, ಪ್ರತಿಯೊಬ್ಬ ಆಟಗಾರನೂ ಅಗತ್ಯ ಸಮಯದಲ್ಲಿ ಹೊಣೆ ಹೊತ್ತಿದ್ದಾರೆ. ಪುಣೇರಿ ಪಲ್ಟಾನ್ ನಮ್ಮ ಪೈಪೋಟಿ ತಂಡವಾಗಿದ್ದು, ಫೈನಲ್‌ನಲ್ಲಿ ನಾವು ಶೇಕಡಾ 100 ಪ್ರಯತ್ನ ತೋರಿಸುತ್ತೇವೆ' ಎಂದು ಹೇಳಿದ್ದಾರೆ.

ಬ್ರ್ಯಾಟ್‌ನಲ್ಲಿ ಬೆಟ್ಟಿಂಗ್ ಕಥೆ

ಕೌಸಲ್ಯಾ ಸುಪ್ರಜಾ ರಾಮ ಚಿತ್ರದ ನಂತರನಿರ್ದೇಶಕ ಶಶಾಂಕ್ ಹಾಗೂ ಡಾರ್ಲಿಂಗ್ ಕೃಷ್ಣ ಮತ್ತೆ ಒಂದಾಗಿದ್ದು, ಬ್ರ್ಯಾಟ್ ಕಥೆ ಹೇಳಲು ಬರುತ್ತಿದ್ದಾರೆ. ಈ ಬಾರಿಯು ಲವ್ ಸ್ಟೋರಿಯ ಜತೆಗೆ ಥ್ರಿಲ್ಲರ್ ಸ್ಟೋರಿಯನ್ನು ತೆರೆಗೆ ತರುತ್ತಿದ್ದಾರೆ. ಈಗಾಗಲೇ ಚಿತ್ರದ ಹಾಡುಗಳು ಸಖತ್ ಸದ್ದು ಮಾಡುತ್ತಿವೆ.

ಬ್ರ್ಯಾಟ್ ಅಂತ ಶೀರ್ಷಿಕೆ ಕೇಳಿದಾಕ್ಷಣ ವಿಭಿನ್ನ ಎನ್ನಿಸುತ್ತದೆ. ಅಂತೆಯೇ ಸ್ಟೋರಿಯೂ ಥ್ರಿಲ್ಲಿಂಗ್ ಆಗಿದೆ. ಈ ಹಿಂದಿನ ಸಿನಿಮಾಗಳಿಗಿಂತ ಈ ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣ, ವಿಭಿನ್ನ ಪಾತ್ರದಲ್ಲಿ ಮಿಂಚಿದ್ದಾರೆ. ಲವ್ವರ್ ಬಾಯ್ ಆಗಿಯೂ ಕಂಗೊಳಿಸಿದ್ದಾರೆ.

ಟೈಟಲ್ ಹೈಲೈಟ್: ನಿರ್ದೇಶಕರು ಮೊದಲು ಬಂದು ಕಥೆ ಹೇಳಿದಾಗ ಮನಸಿಗೆ ಹಿಡಿಸಿತು. ಅದರಲ್ಲಿಯೂ ಟೈಟಲ್ ಪಂಚಿಂಗ್ ಆಗಿತ್ತು. ಅದರಲ್ಲಿ ಸೌಂಡಿಂಗ್ ಕೂಡ ಇದೆ. ಹಾಗಾಗಿ ತುಂಬಾ ಖುಷಿಯಾಯಿತು. ಬ್ರ್ಯಾಟ್ ಕಥೆಗೆ ಹೇಳಿ ಮಾಡಿಸಿದ ಶೀರ್ಷಿಕೆ ಎನ್ನುತ್ತಾರೆ ಡಾರ್ಲಿಂಕ್ ಕೃಷ್ಣ.

ಬೆಟ್ಟಿಂಗ್ ಸದ್ದು: ಬ್ರ್ಯಾಡ್‌ನಲ್ಲಿ ಆಫ್‌ಲೈನ್ ಬೆಟ್ಟಿಂಗ್ ಕಥೆಯೂ ಇದೆ. ಇಂದು ಅಲ್ಲಲ್ಲಿ ಸದ್ದು ಮಾಡುತ್ತಿರುವ ಬೆಟ್ಟಿಂಗ್ ಸುತ್ತ ಕಥೆ ಸಾಗುತ್ತದೆ. ಬೆಟ್ಟಿಂಗ್ ಹೇಗೆ ನಡೆಯತ್ತಿದೆ, ಅದರ ಕಬಂದಬಾಹುಗಳು ಹೇಗೆ ಚಾಚಿವೆ ಎಂಬುದನ್ನು ಇಂಟರೆಸ್ಟಿಂಗ್ ಆಗಿ ಕಟ್ಟಿಕೊಡಲಾಗಿದೆ. ಜತೆಗೆ ಇಲ್ಲಿ ನನ್ನ ಪಾತ್ರ ಹಾಗೂ ಲುಕ್ ಕೂಡ ಈ ಹಿಂದಿನ ಸಿನಿಮಾಗಳಿಗಿಂತ ಸ್ಪೆಷಲ್ ಆಗಿದೆ. ನನ್ನ ಜತೆಗೆ ಮನಿಶಾ ಕಂದಕೂರು ನಾಯಕಿಯಾಗಿ ಬಣ್ಣಹಚ್ಚಿದ್ದು, ಖಳನಾಗಿ ಡ್ರ್ಯಾಗನ್ ಮಂಜು ಅಬ್ಬರಿಸಿದ್ದಾರೆ. ಅಚ್ಯುತ್ ಕುಮಾರ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಚಿತ್ರದ ಹಾಡುಗಳು ಬಿಡುಗಡೆಗೂ ಮುನ್ನವೇ ಸದ್ದು ಮಾಡಿದ್ದು ಖುಷಿಕೊಟ್ಟಿದೆ ಎಂದು ಕೃಷ್ಣ ಸಂತದಿಂದ ನುಡಿಯುತ್ತಾರೆ.

ಕೋಣನ ಹಿಂದೆ ಕೋಮಲ್

ವಿಭಿನ್ನ ಪಾತ್ರಗಳ ಮೂಲಕ ಪ್ರೇಕ್ಷಕರಿಗೆ ಹತ್ತಿರವಾದ ನಟ ಕೋಮಲ್ ರಾಜಪುತಿರನ್ ಚಿತ್ರದ ಮೂಲಕ ಕಾಲಿವುಡ್‌ಗೂ ಎಂಟ್ರಿ ಕೊಟ್ಟಿದ್ದರು. ಈಗ ಕೋಣನ ಹಿಂದೆ ಬಿದ್ದಿರುವ ಕೋಮಲ್ ಎಲ್ಲರನ್ನು ನಗಿಸುತ್ತಿದ್ದಾರೆ. ಹರಿಕೃಷ್ಣ ನಿರ್ದೇಶನದ ಕೋಣ ಸಿನಿಮಾದಲ್ಲಿ ಕೋಮಲ್ ಮಿಂಚುತ್ತಿದ್ದಾರೆ. ತಮ್ಮ ಚಿತ್ರದ ಕುರಿತಂತೆ ವಿ. ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ಕೋಣ ಶಿರ್ಷಿಕೆಯೇ ವಿಭಿನ್ನವಾಗಿದೆಯಲ್ಲ?

ಕೋಮಲ್: ಶೀರ್ಷಿಕೆಯಂತೆಯೇ ಕಥೆಯೂ ಕೂಡ ವಿಭಿನ್ನವಾಗಿದೆ. ಕೋಣದಲ್ಲಿ ಕಾಮಿಡಿ, ಥ್ರಿಲ್ಲರ್, ಸಸ್ಪೆನ್ಸ್ ಎಲ್ಲವೂ ಬೆರೆತಿದೆ. ಇದರಲ್ಲಿ ನನ್ನ ಅಭಿನಯ ಖಂಡಿತಾ ಜನರಿಗೆ ಇಷ್ಟವಾಗಲಿದೆ. ಇಷ್ಟು ವರ್ಷದಲ್ಲಿ ಈ ರೀತಿಯ ಪಾತ್ರ ಮಾಡಿಲ್ಲ. ಕಳೆದ ಮೂವತ್ತು ವರ್ಷಗಳಿಂದ ಚಿತ್ರರಂಗದಲ್ಲಿದ್ದೇನೆ. ಏಳು, ಬೀಳುಗಳನ್ನು ಕಂಡಿದ್ದೇನೆ. ಈ ಚಿತ್ರದಲ್ಲಿನ ನಟನೆ ನೋಡಿ ನನಗೇ ರೋಮಾಂಚನ ಆಗಿದ್ದಿದೆ. ಈ ಚಿತ್ರ ಅದ್ಭುತವಾಗಿದೆ. ನನ್ನ ಅಣ್ಣ ಜಗ್ಗೇಶ್ ಕೂಡ ಸಿನಿಮಾ ನೋಡಿ ಆಶ್ಚರ್ಯಗೊಂಡರು. ಮೆಚ್ಚಿ ಕೊಂಡಾಡಿದರು.

ಇಲ್ಲಿ ಬ್ಲಾಕ್‌ಮ್ಯಾಜಿಕ್ ಕಥೆಯೂ ಇದೆಯೆ?

ಕೋಮಲ್ : ಹೌದು, ಥ್ರಿಲ್ಲಿಂಗ್ ಆಗಿ ಸಿನಿಮಾ ಮೂಡಿಬಂದಿದೆ. ಹಾರರ್ ಸಿನಿಮಾ ಮಾಡುವಾಗ ಅತಿಮಾನುಷ ಅನುಭವಗಳಾಗಿರುವ ಬಗ್ಗೆ ಹಲವು ಸಿನಿಮಾ ಮಂದಿ ಹೇಳಿಕೊಂಡಿರುವ ಉದಾಹರಣೆಗಳಿವೆ. ಆದರೆ, ನನಗೆ ಅಂತಹ ಯಾವ ಅನುಭವವೂ ಆಗಿಲ್ಲ. ಎಲ್ಲ ಕಡೆ ದುಷ್ಟ ಶಕ್ತಿ, ಒಳ್ಳೆಯ ಶಕ್ತಿ ಇರುತ್ತದೆ. ನಾನು ವಾರಾಣಸಿಗೆ ಹೋದಾಗ ಅಘೋರಿಗಳನ್ನೂ ನೋಡಿದ್ದೇನೆ. ಅವರು ಮಾಟ ಮಂತ್ರಗಳಲ್ಲಿ ಬಳಸುವ ಹಲವು ಮುದ್ರೆಗಳನ್ನು ನನಗೆ ಗೊತ್ತಿಲ್ಲದಂತೆ ಈ ಚಿತ್ರದಲ್ಲಿ ಮಾಡಿದ್ದೇನೆ. ನನಗೆ ಆಧ್ಯಾತ್ಮದಲ್ಲಿ ಅಪಾರ ನಂಬಿಕೆಯಿದೆ. ಹಾಗಾಗಿ ನನ್ನ ಜೀವನದಲ್ಲಿ ಹಲವು ಪವಾಡಗಳು ನಡೆದಿವೆ.

ನಿಮ್ಮ ಮುಂದಿನ ಸಿನಿಮಾಗಳು?

ಕೋಮಲ್: ಕೋಣ ಖಂಡಿತಾ ಸದ್ದು ಮಾಡಲಿದೆ. ಮುಂದೆ ಕಾಲಾಯನಮ: ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್, ಕುಟೀರ, ರೋಲೆಕ್ಸ್ ಎಲ್ಲವೂ ವಿಭಿನ್ನ ಜಾನರ್ ಚಿತ್ರಗಳು ಇವುಗಳ ಜತೆಗೆ ಮತ್ತೊಂದು ಹೊಸ ಚಿತ್ರದಲ್ಲಿ ನಟಿಸುತ್ತಿದ್ದೇನೆ.